ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 4
ಸಂಚಿಕೆ 2
ಏಪ್ರಿಲ್ - ಜೂನ್ 1975

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 4 No. 2, April–June 1975

Chief Editor: **Dr. G. S. Sivarudrappa**

ವಾರ್ಷಿಕ ಚಂದಾ : ರೂ. 6–00
ರೂ. 4–00 (ವಿದ್ಯಾರ್ಥಿಗಳಿಗೆ)

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಕರು :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560056

ಪರಿವಿಡಿ

ವಾಸನೆ

ಜಯಸುದರ್ಶನ

ಹುಟ್ಟಿ ಆಗಬಾರದ್ದು ಒಲ್ಲೆನೆನ್ನುವ ಮೊದಲೆ
ಆಗಿಹೋದಂತೆ, ಇದ್ದರೂ ಇದ್ದಿರದ ಹಾಗೆ ಸದ್ದಿರದೆ
ಅಡಗಿರುವ ನೈಚ್ಚ ಪ್ರವೃತ್ತಿಗಳು, ವ್ಯಕ್ತಿಗತ ನಿವೃತ್ತಿಗಳು
ರಕ್ತ – ಮಾಂಸದ ದೇಹ ಮತ್ತು ಇಲ್ಲೆ ಬದನಿಕೆಯಾದ
ಮನೋವೃತ್ತಿ ಬೆಳೆಸುವ ಬಿಡುವಿರದ ಸಂಕೀರ್ಣ ವೃತ್ತಿಪರತೆ.
ಸುತ್ತು ಬಳಸಿದರೂ ಅಷ್ಟೇ – ಮುಟ್ಟಿದರೆ ಸ್ಪರ್ಶಕ್ಕೆ
ಕಣ್ಣ ವರದಿಯೇ ಗತಿ – ಸಮತಟ್ಟಾದ ಚಿತ್ರಪಟದ
ಸ್ಥಿರಸೃಷ್ಟಿ – ಇಂದ್ರಿಯಗಳ ಪ್ರಮಾಣ ನಂಬುವುದು
ಬಿಡುವುದು ಚಿತ್ತವೃತ್ತಿಗೆ ಬಿಟ್ಟಿದ್ದು, ಇದಕ್ಕೂ ನಿಲುಕದ್ದು
ಬೆರಳ ತುದಿಯಾಚೀಚೆ ಸಿಗದೆ ಕಿಕ್ಕಿರಿದ ಸಮಷ್ಟಿ.
ಹುಟ್ಟಿದ್ದಕ್ಕೆ ಹಕ್ಕು ಸಾಯುವುದು ; ಒಮ್ಮೆ ಚಲಾಯಿಸಿದರೆ
ಮತ್ತೆ ಮರಳಿಬಾರದ ಅಪೂರ್ವ ನಿಷ್ಕ್ರಮಣ ; ಸಾವಿನ
ಅರ್ಥ ದಕ್ಕಲು ಒಂದೇ ಹುಟ್ಟು ಸಾಕೇ ? ನದಿ ಹರಿದರೂ ಹೊಸ
ಹೊಸತು, ದಂಡೆಗಳ ಸುತ್ತ ಕವಿದ ಅವಿದ್ಯೆಯ ಸ್ಥಿರ ದಿಗಂತ.
ಮೂಗಿರುವತನಕ ದೇಹಕ್ಕೆ ಮನಸ್ಸಿನ, ಇವೆರಡಕ್ಕೆ ನೆಲದ
ಸಂಬಂಧ ತಪ್ಪಿದ್ದಲ್ಲ : ಮೂಗಿರುವುದು ವಾಸನೆಗಳ ಪತ್ತೆ
ಮಾಡಲಿಕ್ಕಷ್ಟೆ ಅಲ್ಲ, ಆಗಾಗ್ಗೆ ಅಗತ್ಯಕ್ಕೆ ತಕ್ಕ ಹಾಗೆ ಹೊಸ,
ಹಳೆಯ ವಾಸನೆಗಳ ತಂದು ಕಸಿ ಮಾಡಿ, ಹೊಸ ತಳಿಗಳ
ಬೆಳೆಸಿ, ಬಳಸಿಕೊಳ್ಳುವುದಕ್ಕೂ ಹೌದು.

ಹೀಗಿದ್ದರೂ, ದೇಹದ ಬಲ್ಲ ವಾಸನೆಗಳು ಅಥವ ವಾಸನ ಮೂಲ
ಬಿಟ್ಟುಕೊಡದ ನಿರಿಂದ್ರಿಯೇಚ್ಛೆಗಳು ಮೂಗಿಗೆ ಹಿತವಾಗುವುದು ಅಪರೂಪ.
ಬೆತ್ತಲನ್ನು ಏಕಾಂತದಲ್ಲಿ ಮೆಚ್ಚಿಕೊಂಡರೆ, ಕನ್ನಡಿಯ ತಿರುಗು –
ಮುರುಗು ಚೇಷ್ಟೆ ಆಗಾಗ್ಗೆ ಇಷ್ಟವಾದೀತು ಅಣಕು ತೃಪ್ತಿಗೆ.
ತುರಿಕೆಯೆದ್ದಾಗ ಕೆರೆಯುವುದು ವಿಹಿತ ಚರ್ಮ ದಾಹಕ್ಕೆ,
ರುಚಿ ಕಣ್ಣು ಬಯಸುವ ರಂಗುಗಳಿಗೂ ನಾಲಗೆ ನೀಡುವುದು ;

ಅಂಗಾಂಗಗಳೆಲ್ಲ ಹಿತದ ಮರ್ಯಾದೆಯಲ್ಲಿದ್ದರೆ ಅಹಂಕಾರಕ್ಕೆ ಕಿಮ್ಮತ್ತು :
ಜಗತ್ತು ಸ್ವಂತದ ಸ್ವತ್ತು ಬಳಸಿಕೊಳ್ಳುವ ಶೀಟೆ ದೇಹದಲ್ಲುಂಡಾಡಿ
ಅಲೆಯುತ್ತ, ತೃಪ್ತಿಯಸ್ತಿವಾರಕ್ಕೆ ಅತೃಪ್ತಿ ಮಹಲ ಕಟ್ಟುತ್ತಿರುವವರೆಗೆ.

ಹೇಳಿದೆನಲ್ಲ, ಆದರೂ ವಾಸನೆಯದೇ ಕಷ್ಟ, ಹೀಗೆಂದು ಹೇಳಬಾರದ ರೀತಿ.
ಬೇಡವೆಂದರೂ, ಮೂಗು ಸ್ವಕೀಯ ಅಸಹ್ಯಗಳಲ್ಲಿ ತನ್ನನದ್ದಿ ಕೊಂಡು
ಗುಣವಿಮರ್ಶೆ ಮಾಡುವುದನ್ನು ಬಿಡುವುದಿಲ್ಲ; ಮೂಗಿನ ಜಾಯಮಾನಕ್ಕೆ
ಕಲಿತದ್ದು ಬಿಡುವ ಮಾತೇ ಇಲ್ಲ, ಮರೆವು ಕೇವಲ ಹುಟ್ಟು ಸಾವುಗಳ ಪರದೆ.
ಚರ್ಮದ ನಿರ್ಮಾಲ್ಯ ವಾಸನೆ, ಮಲ ಮೂತ್ರಗಳ ಹೇಸಿಗೆಯ ವಾಸನೆ,
ಕಂಕುಳ ಹಿತ ಬೆವರಿನ, ಕಾಲ ಹೊಲಸು ಬೆವರಿನ ವಾಸನೆಗಳು, ಹಲ್ಲಿನ
ಪೆಡಸು ಹಸಿರಿನ ವಾಸನೆ, ಎಂಜಲಿನ ಧಿಮಾಕು ದಾಹದ ವಾಸನೆ, ತೇಗಿನ,
ಅಪಾನದ,
ರಕ್ತದ ಸ್ವಂತಕ್ಕೆ ಸೈರಿಸಿಕೊಳ್ಳಲು ಕಷ್ಟವಾಗದ ಗುಪ್ತ ಹಿತದ ವಾಸನೆಗಳು,
ಧಾತುವಿನ ಇಷ್ಟದೇವತೆಯ ಸ್ವಯಮೇವ ವೈಶಿಷ್ಟ್ಯದ ವಾಸನೆ,
ಕಣ್ಣೀರಿನ ಉಂಡ ಉಪ್ಪಿನ ಅಪರೂಪದ ನಿರೋಗಸೂಚಕ ವಾಸನೆ—
ಹೀಗೆ ಮೂಗಿನ ಗಮನಕ್ಕೆ ಬಾರದ್ದು ದೇಹದ ಒಳಗೆ ಮತ್ತು ಹೊರಗೆ
ಇಲ್ಲವೇ ಇಲ್ಲವೆಂದರು ಸರಿಯೆ, ಮೂಗು ಸೇಂದ್ರಿಯದ ಮನಃಸಾಕ್ಷಿ.
ಕೊನೆಗೆ, ಮುತ್ತಿಡುವಾಗ ಎರಡು ಬಾಯಿಗಳ ಬೇರೆ ವಾಸನೆಗಳು ಬೆರೆತು
ಮೂರನೆ ವಾಸನೆ ಹುಟ್ಟುವುದಕ್ಕೂ ಮೂಗು ದಾದಿಯಾಗಿ ನೆರವಾಗುತ್ತದೆ.
ಕಾಮಕ್ರೀಡೆಯ ಪುರಾತನ ಪ್ರವೃತ್ತಿಯಲ್ಲಿ ಮಾತ್ರ ಈ ಭಂಡ ಮುಂಡೇದು
ಎಗ್ಗಿರದೆ ತನ್ನ ಚಿಕಿತ್ಸಕತನವ ಬದಿಗಿರಿಸಿ, ಎಲ್ಲ ವಾಸನೆಗಳಿಗೂ ಗಂಡಾಗಿ ಕೆರಳಿ,
ಒಂದಂಕವಾಗೆದ್ದು, ಮತ್ತೆ ಹೆಣ್ಣಿನ ಸೀಳಿದರ್ಧಾಂಗವಾಗಿ ಅರಳಿ ಕಂಪಿಸು
ತ್ತದೆ.

ವಾಸನೆಗಳಿರುವವೆಂದು ಅರಿವು ಹುಟ್ಟಿದ ಪ್ರಾರಂಭದಿಂದ
ಹೀಗೆ ನನಗೆ ಮೂಗಿನ ಸರ್ವಜ್ಞತ್ವದ ಬಗ್ಗೆ ಬಹಳ ನಂಬಿಕೆ.
ಅದಕ್ಕೇ, ನೆಗಡಿಯಾದಾಗಲೆಲ್ಲ ಮೂಗು ಮೂಲ–
ದೇವರನ್ನೇ ಅಲುಗಾಡಿಸುತ್ತೆ : ನಿಮಗೂ ತಿಳಿದ ಹಾಗೆ ಮೂಗಿನ
ವ್ಯಾಧಿಗೆ ಕಾಲ ಕಳೆಯುವ ಹೊರತು ಬೇರೆ ಮದ್ದೇ ಇಲ್ಲ.
ತ್ರಸ್ತವಾದರೆ ಈ ಮುಖ್ಯಪ್ರಾಣ, ಅಂಗಾಂಗಗಳ ಅನುಭವವೆಲ್ಲ
ಸುಳ್ಳಾಗಿ, ನಿಜದವಕಾಶದಲ್ಲೆ ಸ್ವಪ್ನವಾಗಿ ವಾಸ್ತವದ ಹೆಣ
ತೇಲುತ್ತದೆ; ಗೊಣಗುತ್ತ ಮೂಗು ಆಗ ಬದುಕ ಮನ್ನಿಸಿ,
ಮತ್ತೆ ಗೆಲುವಾಗುತ್ತದೆ, ಹಳೆ ಜಾಡು ಹಿಡಿಯುತ್ತದೆ.

ಉತ್ತಮಾಂಗದ ಈ ಮಹೋಪಾಂಗ ಸರೀಕರ ಜತೆ ಇದ್ದಾಗ ಅವರ
ವಾಸನೆಗಳ ಜೆನ್ನಟ್ಟುವುದನ್ನು ತಪ್ಪಿಸುವುದಿಲ್ಲ–ಕೇವಲ ಪರಿಚಯ ಲಾಭಕ್ಕೆ.
ಮೊನ್ನೆ ನನ್ನ ಹೆಸರಿನ ಇವನ ಕಂಡೆನಲ್ಲ–ನಂಬಲಾಗದ ಘೋಳೆ
ಸತ್ಯ–ಮೂಗು ಇವನ ಪರಟಿನ, ಹಲ್ಲಿನ, ಹಣೆಯ,
ಚರ್ಮದ ವಾಸನೆಗಳಿಗೆ ಬೆರಗಾಯಿತು.
ಮಲಗಿದರೆ ಇವನ ಹಾಸಿಗೆಯಲ್ಲಿ ಒಬ್ಬಂಟಿ ಪರೀಕ್ಷೆಗೆ,
ಅಲ್ಲಿ ಕರೆಗಟ್ಟಿದ್ದ ಇವನ ಹಳೇ ಲೋಲುಪ್ತಿಗೂ ಮಿದ್ದು
ನನ್ನ ತಾಜ ಧಾತುವಿನ ವಾಸನೆ ; ಇವನ ಖಾಸಗಿ ಕಕ್ಕಸಿನಲ್ಲು
ನನ್ನ ಮಲ ಮೂತ್ರಗಳ ಪರಿಚಿತವಾದ ನೆಲದ ಸೊಗಡು.
ಮೂಗಿನ ಕಿವಿಮಾತಿಗೆ ಬೆಚ್ಚಿ ನಿಂತರೆ ನಾನು, ಈತ ಕೂಡ
ದಿಕ್ಕೆಟ್ಟು ಅಂದ–ಉಭಯ ಸಂಕಷ್ಟಗಳ ಪರಿಹಾರಕ್ಕೆ, ಭೂತದ
ಹಠಾತ್ ತೃಪ್ತಿಯುಂತ್ಯಕ್ಕೆ ನಮ್ಮ ಮೂಗುಗಳ ಒಟ್ಟಿಗೆ
ಕತ್ತರಿಸಿಕೊಳ್ಳುವುದೊಂದೇ ದಾರಿ.

ವ್ಯಾವಹಾರಿಕವಾಗಿ ಇದೇ ಸೂಕ್ತ ಮಾರ್ಗವೆಂದು ಒಪ್ಪಿದೆ ;
ಆದರೆ ಜೇರೆ ವಾಸನೆಗಳ ಹುಡುಕುವುದು ಹೇಗೆಂದು ಲೌಕಿಕಕ್ಕೆ ಮರುಗಿ,
ಹಾಗೇ ನಿಂತೆ ; ನಿಂತರೆ–ಬೀಸುವ ಗಾಳಿಗೆ, ನಿಶ್ಚಲ ನಿಂತ ಹಗಲ ಬೆಳಕಿನ
ಕುರುಡಿಗೆ, ಇರುಳ ಕತ್ತಲಿನೆಚ್ಚರದ ದೂರದೃಷ್ಟಿಗೆ, ಚಲಿಸುವ ತೊಗಲಿರದ
ನೆರಳುಗಳಿಗೆ ಕೂಡ ನಮ್ಮದೆ ವಾಸನೆ ; ಗತಿಗೆಟ್ಟಂತೆ ಈತ ಹತ್ತಿರ ಬಂದು
ನನ್ನ ಮೈಯ ಕಾಲ್ತುದಿಯಿಂದ ತಲೆಗೂದಲವರೆಗೆ ಮೂಸುತ್ತ,
ಮೂಸುತ್ತ, ನೋಡನೋಡುತ್ತಿದ್ದಂತೆ ಮರುಗುತ್ತ,
ಮರುಗುತ್ತ, ಜೇಡವೆನ್ನಿಸದೆ ನನ್ನ ನುಂಗುತ್ತ, ಹೇಳಹೆಸರಿಲ್ಲವಾದ.
ಉತ್ತರಕ್ಕೆ ಪಣತೊಟ್ಟು, ನನ್ನ ಬದುಕಿನಾಶ್ಚರ್ಯ ಚಿಹ್ನೆಯ
ಮುಂದೆ ಸದಾ ಪ್ರಶ್ನೆಗಡಿಯಾಗುಳಿದ.

ಒಪ್ಪುತ್ತೇನೆ—ಈಗ ನನ್ನ ಮೂಗು ಮೊದಲಿಗಿಂತ
ಹೆಚ್ಚು ಚುರುಕಾಗಿದೆ, ಪ್ರತಿಸ್ಪರ್ಧಿಯ ಕಾಟ ಮುಗಿದದ್ದೆ
ಕಾರಣವಿರಬೇಕು ಪ್ರಾಯಶಃ ; ಹಿತವಾಗಿ ಒಪ್ಪವಷ್ಟರಲ್ಲಿ,
ಮೂಸುತ್ತ ಉಸಿರಿಗಂಟಿಕೊಂಡಿರುವಾಗ ಒಮ್ಮೊಮ್ಮೆ ಸತ್ಯಕ್ಕೆ
ಸಂಶಯದ ತುಕ್ಕುಹಿಡಿಯುತ್ತೆ ; ನಮ್ಮಿಬ್ಬರಲ್ಲಿ ನಿಜವಾಗಿ
ಕಣ್ಮರೆಯಾದವನು ಯಾರು ?
ಗಾಳಿ ಬೆಳಕುಗಳ ಅಂಟಿದರೂ ಅಂಟದ ಅವಕಾಶದಲಿ ಮೆಲ್ಲನೆ

ಕರಗುವುದು ಲೋಪದ ಸಹಜ ಘನತೆ ; ತುಕ್ಕು ಹತ್ತಿಸಿಕೊಂಡು
ಒಳಗೊಳಗೆ ಬಿಡುಗಡೆಯ ಸಿರ್ವಾತಕ್ಕೆ ಕಾಯುವುದು ವಾಸನೆಯ
ಮೂಲ ಭೌತಿಕ ಕೊರತೆ.

ಈ ಕಾರಣ, ನೆಗಡಿ ಬಂದಾಗಲೆಲ್ಲ ಆಹ್ವಾನಕ್ಕೆ, ಇವನ ನೆನಪಿನ
ಸಲುವಾಗಿ ನಾನು ಇದ್ದು ಇಲ್ಲವೆನ್ನಿಸಿಕೊಳ್ಳುತ್ತೇನೆ ; ಅಕಾಲ
ವೈರಾಗ್ಯಕ್ಕೆ ಬದಲು ವಾಸನೆಯ ಅರ್ಜಿತಾವಶೇಷಗಳಿಗೆ ತಲೆಬಾಗಿ,
ಸ್ಮಾರಕವಾಗಿ, ಸಾರುವ ನೆರಳು ನೆಲಕ್ಕೆ ಶರಣಾಗುತ್ತೇನೆ ; ಸತ್ತವನ
ಕರ್ಮಗಳು ಪೂರೈಸುವವರೆಗೆ ವಾಸನೆಗಳಿಗೆ ತಿಥಿಯನ್ನದ ಶುಷ್ಕ
ರುಚಿಯೂ ಸೊಗಸು ; ದಿನನಿತ್ಯ ಕಾಲಕಾಂಡ ಪಾರಾಯಣಕ್ಕೆ
ಸವೆಸುತ್ತ ದೇಹದೊಳಗೆ ಜೇರಿಳಿಸಿರುವ ಪೂರ್ವಾಪರೇಷಗಳ ;
ಪ್ರಾಯೋಪವೇಶಕ್ಕೆ ಯಜ್ಞಕುಂಡದಲಿ ಕಣ್ಬೆಳಕಿನಲ್ಲೇ ಅಗ್ನಿ
ಮೂಡಿಸುವ ; ನೆಲದಲ್ಲಲೆವ ವಾಸನೆಗಳಿಗೆಲ್ಲ ದಿಗ್ಬಂಧನವ ಹಾಕಿ,
ನಿಶ್ಶೇಷವಾಗಿ ಅವುಗಳ ಬಲಿಗೊಡುವ, ಫಲಬಯಸದ ಪೂರ್ಣಕಾಮಾವಸ್ಥೆ–
ತೆವಳುವ ಹುಳ ಮೆಲ್ಲನೆ ನಿಂತು, ದೇಹ ವಾಸನೆಗಳ ನುಂಗುವ,
ಕೋಶವ ಬೆಳಸುವ ಚಿಟ್ಟೆಯ ಪರಕಾಯ ವಿಶ್ವಾಮಿತ್ರ ಸೃಷ್ಟಿಯೆಸಗಿ,
ಅದನ್ನೇ ಪ್ರವೇಶಿಸುವ–ಜನ್ಮಾಂತರ ಪಿಶಾಚಕಾಟಗಳ ನುಂಗುವ ಸಧ್ಯ
ಸನ್ನದ್ಧ ಅವಕಾಶ ಮೂಡುವ ಮುಂಚೆ.........

ಮರ್‍ಯಾದಾಪುರುಷನಿಗೂ ಪುರುಷೋತ್ತಮಿಕೆಯಲಭ್ಯಕ್ಕೆ
ಮಾನುಷಾರಿಷಡ್ವರ್ಗಗಳ, ಕಪಿಸಂಧಿಯುತ್ಕ್ರಾಂತಿಯಪವಾದಗಳ,
ರಾಕ್ಷಸ ಹಿನ್ನೆಗೆತದ ನಾಗರಿಕತೆಗಳ ಸಂಗ ಬೆಳೆಸುವ, ಬಳಸಿ ಕೊಲ್ಲುವ,
ತ್ಯಜಿಸಿ ನಿಲ್ಲುವ ಧರ್ಮಕಾಂಡಗಳ ಸೋಲಿನ ಹಾದಿಯಲಿ
ನಿಲ್ಲದೆ ಅಲೆವ ನಿಷ್ಕಾಮಗಳ ತುಡಿತ ತಪ್ಪಲಿಲ್ಲ ;

.........ನಿಜಕ್ಕೆ ಇದ್ದರೆ ಕಾಲ, ಸಧ್ಯಕ್ಕಂತು
ಮೂಸುತ್ತಲೇ ಮೂಗ ಕರಗಿಸುವ ಭೂತಪ್ರಾಪ್ತ
ನಿಷ್ಕ್ರಿಯೆಗಳ ಸರಿತ–ಒಪ್ಪಿದರು, ಬೇಡವೆಂದರು–ತಪ್ಪದೋ,
ತಪ್ಪದು ; ಇಲ್ಲಿ ಬಾಗಿದರೆ ನಾಗರಿಕ, ಸಂಕುಲದ ಭಾರ ಹೊರುವುದು
ಸುಲಭ ; ಇಲ್ಲದಿದ್ದರೆ ಸೆಟೆದೇ, ಬಾಗಿ ಬಿಲ್ಲಾಗುವ ಧನುರ್ವಾತ ಶಿಕ್ಷೆಗೆ
ಮಾತ್ರ ಮಣಿವ ಪ್ರಾಣಿ ಛಲ ತಪ್ಪುವುದಿಲ್ಲ.
ರಾಮಚರಿತ್ರೆಯಲ್ಲಿ ಬೆನ್ನುಹತ್ತುವ ಲಕ್ಷ್ಮಣ ಯಾತ್ರೆ
ಶುದ್ಧಾಂಗ ಕೇವಲ.

ಪ್ರಜ್ಞೆ

ವಿ. ಕೃ. ಗೋಕಾಕ್

ಪ್ರಜ್ಞೆಗೆ ಅನೇಕ ವಿಶೇಷಣಗಳು ಸೇರಿಕೊಂಡು ಇದ್ದ ಅದರ ಅರ್ಥವೇ ಸಂದಿಗ್ಧವಾಗುವ ಹಾಗಾಗಿದೆ. ಪ್ರಾಚೀನ, ಅರ್ವಾಚೀನ, ಆಧುನಿಕ, ನವ್ಯ, ಸರ್ವಕಾಲೀನ, ಸಮಕಾಲೀನ, ವೈದಿಕ, ಶೂದ್ರ : ಹೀಗೆ ನಾಮಪದ ಒಂದೇ ಇದ್ದರೂ ವಿಶೇಷಣಗಳ ಯುದ್ಧ ನಡೆದಿದೆ.

ಪ್ರಕರ್ಷಣೆಯುಳ್ಳ ಜ್ಞಾನವನ್ನು ಪಡೆಯುವ ಸಾಧನವೇ ಪ್ರಜ್ಞೆ. 'ಜ್ಞಾ' ಎಂಬ ಧಾತುವೂ ಇಂಗ್ಲಿಷ 'know' ಎಂಬ ರೂಪವೂ ಒಂದೇ ಇಂಡೋ-ಆರ್ಯನ್ ಮೂಲದಿಂದ ಬಂದಿವೆ. 'know' ದಲ್ಲಿಯ ಕ ಮೊದಲು ಕೇಳಿಸುತ್ತಿತ್ತು.

'ಪ್ರಜ್ಞೆ' ಅಂದರೆ consciousness, Con ಅಂದರೆ 'ಸೇರಿಸಿಕೊಂಡು', 'scire' ಅಂದರೆ 'ತಿಳಿ', ಒಟ್ಟಿಗೆ ಇಲ್ಲವೆ ಸಮಗ್ರವಾಗಿ ತಿಳಿಯುವದೇ ಪ್ರಜ್ಞೆಯ ರೀತಿ. ಈ ಸಮಗ್ರ ಜ್ಞಾನ ಬರುವದು ಹೇಗೆ ?

ಸೃಷ್ಟಿ-ದೃಷ್ಟಿಗಳ ಸಮ್ಮಿಲನದಿಂದ ದೃಷ್ಟಿಯಲ್ಲಿ ಪಂಚೇಂದ್ರಿಯಗಳಿಂದ ಬಂದ ಜ್ಞಾನ ಸೇರಿರುತ್ತದೆ. ಈ ಚಿತ್ರಗಳು ಮನಸ್ಸಿಗೆ ಮುಟ್ಟಿ ಮನಸ್ಸು ಮಾಡಿಕೊಂಡ ಅಭಿಪ್ರಾಯವೂ ಅದರಲ್ಲಿರುತ್ತದೆ. ಬುದ್ಧಿಯ ವಿಚಾರಗಳನ್ನೂ ಮನಸ್ಸು ಇರಿಸಿಕೊಂಡಿರುತ್ತದೆ. ಅಲ್ಲದೆ ಸ್ಮರಣ ಶಕ್ತಿ, ನಿರ್ಣಾಯಕ ಬುದ್ಧಿ, ಕಲ್ಪಕತೆ, ಬುದ್ಧಿ, ಹೃದಯ ಹಾಗು ಕ್ರತು ಶಕ್ತಿಗಳ ಜಂಟಿ ಕ್ರಿಯೆಯಿಂದ ಒಂದು ಸಮಗ್ರ ಜ್ಞಾನ ಉಂಟಾಗುತ್ತದೆ. ಈ ಜ್ಞಾನ ಸಮಗ್ರ, ಸಮ್ಯಕ್ ಇಲ್ಲವೆ ಪೂರ್ಣವಾಗ ಬೇಕಾದರೆ ಅಂತಃಕರಣದ ಇನ್ನೂ ಒಂದು ಮುಖ್ಯ ಅಂಶ ಬೇಕಾಗುತ್ತದೆ. ಅದೇ ಅಂತಃಸ್ಫುರಣ ಇಲ್ಲವೆ ಆತ್ಮಾನುಭವ. ಅದಿಲ್ಲದೆ ಜ್ಞಾನ ಅಪೂರ್ಣವಾಗಿಯೇ ಉಳಿಯುತ್ತದೆ. ಕೋಲರಿಜ್, ಟಿ.ಎಸ್. ಎಲ್ಯಟ್, ಯೇಟ್ಸ್‌ರಂತಹ ಪಾಶ್ಚಾತ್ಯರೂ ಭಾರತದ ದ್ರಷ್ಟಾರರೂ ಇದನ್ನು ಗಣನೆಯಲ್ಲಿ ತಂದುಕೊಂಡು ತಮ್ಮ ತಾತ್ವಿಕ ವೇದಿಕೆಯನ್ನು ರೂಪಿಸಿದ್ದಾರೆ. 'I Think, Therefore I am' ಎಂಬುದಕ್ಕಿಂತ 'I am Therefore, I think' ಎಂಬ ವಿಚಾರವೇ ಯೋಗ್ಯವಾಗುತ್ತದೆ.

ಪ್ರಜ್ಞೆಯೆಂದರೆ ಒಂದು ವಸ್ತು ಇಲ್ಲವೆ ವ್ಯಕ್ತಿಯನ್ನು ನೋಡಿ ಕೇಳಿ ತಿಳಿಯುವದಲ್ಲದೆ ಬುದ್ಧಿಯಿಂದ ಅವನನ್ನು ತೂಗಿ ನೋಡಬೇಕಾಗುತ್ತದೆ. ಅವನಿಂದ

ಪ್ರಚೋದಿತವಾದ ಭಾವನೆಗಳನ್ನು ಪರೀಕ್ಷಿಸಬೇಕಾಗುತ್ತದೆ. ಅವನ ಕೃತಿಗಳನ್ನು ವಿಮರ್ಶಿಸಬೇಕಾಗುತ್ತದೆ. ಅಂತರ್‌ದೃಷ್ಟಿಯಿಂದ ಅವನ ವ್ಯಕ್ತಿತ್ವದ ತಿರುಳನ್ನು ಗ್ರಹಿಸಬೇಕಾಗುತ್ತದೆ. ಎಲ್ಲ ಸ್ತರಗಳಲ್ಲಿಯು ಗ್ರಹಣ ಶಕ್ತಿ ಕ್ರಿಯಾಶೀಲವಾಗ ಬೇಕಾಗುತ್ತದೆ.

ಪ್ರಜ್ಞೆ ಸರಿಯಾಗಿ ಕ್ರಿಯಾಶೀಲವಾದರೆ ವ್ಯಕ್ತಿ ಪರಿಸರದ ಮೇಲೆ ತನ್ನ ಪ್ರಭಾವ ವನ್ನು ಬೀರುತ್ತಾನೆ. ಒಂದು ವ್ಯಕ್ತಿಸಮುದಾಯವೂ ಹಾಗೆಯೇ. ಪ್ರಜ್ಞೆಯೇ ದೋಷಯುಕ್ತವಿದ್ದರೆ ವ್ಯಕ್ತಿ ಪರಿಸರದ ದಾಸನಾಗುತ್ತಾನೆ. ವ್ಯಕ್ತಿ ಸಮುದಾಯವೂ ಹಾಗೆಯೇ. ಒಂದು ದೇಶದ ಇತಿಹಾಸದ ಉನ್ನತಿ ಹಾಗೂ ಅವನತಿಯ ಕಾಲಾವಧಿ ಗಳನ್ನು ಈ ದೃಷ್ಟಿಯಿಂದ ನಾವು ನೋಡಬಹುದು.

ಪ್ರಜ್ಞೆಯಲ್ಲಿ ವಿವಿಧ ಸ್ತರಗಳೂ ಇರುತ್ತವೆ. ಐಂದ್ರಿಯಕ, ಬೌದ್ಧಿಕ, ದಾರ್ಶನಿಕ ಎಂದು ಅವುಗಳನ್ನು ವಿಂಗಡಿಸಬಹುದು.

ಇನ್ನು ವಿಶೇಷಣಗಳ ಕಡೆಗೆ ತಿರುಗಬಹುದು. "ಸರ್ವಕಾಲೀನ" ಎಂದರೆ ಶಾಶ್ವತ ಮೌಲ್ಯಗಳ ಪರಿಗಣನೆಯುಳ್ಳ ಪ್ರಜ್ಞೆ. 'ಸಮಕಾಲೀನ' ಎಂದರೆ ಯುಗ ಧರ್ಮದ ರೂಢಿ–ಆವಶ್ಯಕತೆಗಳ ಅರಿವಿದ್ದ ಪ್ರಜ್ಞೆ. 'ಆಧುನಿಕ' ಪ್ರಜ್ಞೆ ಎಂದರೆ ಆಧುನಿಕ ಕಾಲದ (೧೯೨೦–೫೦) ಸಾಹಿತಿಗಳಲ್ಲಿ ಜಾಗೃತವಾಗಿದ್ದ ಪ್ರಜ್ಞೆ. ಅನುಭಾವ, ಮಾನವತಾವಾದ, ಸಮತಾವಾದ, – ಇವೆಲ್ಲ ಇಲ್ಲಿ ಸಮಾವಿಷ್ಟವಾಗುತ್ತವೆ. 'ನವ್ಯ' ಪ್ರಜ್ಞೆಯಲ್ಲಿ ಇವೂ ಸೇರಿಕೊಳ್ಳುತ್ತವೆ. ಆದರೆ ಇವುಗಳ ಜೊತೆಗೆ ನಿರಾಶೆ ಹಾಗು ಭ್ರಮನಿರಸನ ಬರುವಂತೆ, ಅನುಭವವನ್ನು ಸ್ವಲ್ಪವೂ ಹೆಚ್ಚು ಕಡಿಮೆಯಿಲ್ಲದೆ ನಿರೂಪಿಸುವ ಅಭಿಲಾಷೆಯೂ ಹುಟ್ಟುತ್ತದೆ. ಆದರೆ ಆ ಅನುಭವದ ಕಿಮ್ಮತ್ತೇ ನೆಂಬುದರ ಕಡೆಗೆ ಅಷ್ಟು ಲಕ್ಷ್ಯವಿರುವುದಿಲ್ಲ.

'ವೈದಿಕ' ಪ್ರಜ್ಞೆಯೆಂದರೇನು ? ಅನುಭಾವಿಗಳು ಹೇಳುವಂತೆ ಸ್ವಾರಾಜ್ಯ ಹಾಗು ಸಾಮ್ರಾಜ್ಯದ ಮೌಲ್ಯಗಳಲ್ಲದೆ ಅಗ್ನಿ, ವಾಯು, ಇಂದ್ರ, ಸೂರ್ಯ, ಸೋಮ—ಹೀಗೆ ಐದು ಮೆಟ್ಟಲುಗಳ ಆಧ್ಯಾತ್ಮಿಕ ಸಿದ್ಧಿ ಅದು. ಇನ್ನೊಂದರ್ಥದಲ್ಲಿ ವೇದವೆಂದರೆ ಬರಿ ಕರ್ಮಕಾಂಡ. ಇದು ಇಂದಿಗೆ ಸ್ವೀಕೃತವಾಗುವುದು ಬರಿ ಕರ್ಮ ಠರಿಗೆ ಮಾತ್ರ. ಮೂರನೆಯ ಅರ್ಥವೆಂದರೆ ಗುಪ್ತರ ಆಳಿಕೆಯಲ್ಲಿ ಪ್ರಚಲಿತವಾದ ಹಿಂದೂಧರ್ಮವೆಂಬ ಸಮನ್ವಯ. ಈ ಧರ್ಮ ವೇದಗಳನ್ನು ಭಗವದ್ವಾಣಿ ಯೆಂದು ಮನ್ನಿಸುತ್ತದೆ. ಇದು ಧಾರ್ಮಿಕ ಅರ್ಥ. ೨ ಹಾಗು ೩ನೆಯ ಅರ್ಥದ ವಿರುದ್ಧ ಕೆಲವು ವಿಚಾರಶೀಲರು ಬಂಡೆಬ್ಬಿಸುತ್ತಾರೆ. ಒಂದನೆಯ ಅರ್ಥ ಅಷ್ಟೊಂದು ಪ್ರಚಲಿತವಿಲ್ಲ.

'ಶೂದ್ರ' ಪ್ರಜ್ಞೆಯೆಂದರೇನು ? ಬಸವಣ್ಣನವರು ಒಂದು ವಚನದಲ್ಲಿ ಹೇಳಿದ ಕೇತಯ್ಯ, ಬೊಮ್ಮಯ್ಯ ಮೊದಲಾದ ನೂರೆಂಟು ದೇವರುಗಳ ಆರಾಧನೆ ಇಂದು ಸಲ್ಲದ ನಂಬಿಕೆಗಳ ಭಾಗವಾಗುತ್ತದೆ. ಎರಡನೆಯ ಅರ್ಥವೆಂದರೆ "ಶೂದ್ರ" ವೆನಿಸಿಕೊಂಡ ಸಮಾಜ ಜೀವನದ ಚಿತ್ರಣ. ಬ್ರಾಹ್ಮಣ, ಒಕ್ಕಲಿಗ, ವೀರಶೈವ, ಜೈನ ಮೊದಲಾದ ಸಮಾಜಗಳ ಜೀವನ ಚಿತ್ರಣವು ಆಧುನಿಕ–ನವ್ಯ ಸಾಹಿತ್ಯಗಳಲ್ಲಿ ಬಂದಿದೆ. ಶೂದ್ರ ಸಮಾಜದ ಚಿತ್ರಣಕ್ಕೂ ಕಾಲ ಸನ್ನಿಹಿತವಾಗಿದೆ. ಆ ಸಮಾಜದಿಂದ ಬಂದ ಲೇಖಕರು ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ ಇಂತಹ ಚಿತ್ರಣ ಪ್ರಜ್ಞೆಗಿಂತ ಪರಿಸರಕ್ಕೆ ಸಂಬಂಧಿಸಿದ ವಿಷಯವಾಗಿದೆ. ಅಲ್ಲದೆ ಈ ಚಿತ್ರಣದಲ್ಲಿ ವೈದಿಕ ಪ್ರಜ್ಞೆಯ 'ಪೌರಾಣಿಕ' ಮೊದಲಾದ ಅವಶೇಷಗಳು ಕಾಣಿಸಿಕೊಳ್ಳುತ್ತಿವೆ.

ಶೂದ್ರ ಪ್ರಜ್ಞೆಯ ಮೊದಲನೆ ಕೇಳಿಕೆಯೆಂದರೆ ವೈದಿಕ ಪರಿಭಾಷೆಯನ್ನೇ ತಳ್ಳಿ ಹಾಕುವುದು. ಮೋಕ್ಷ, ಕರ್ಮ, ಧರ್ಮ, ಭಗವಂತ ಮೊದಲಾದ ಶಬ್ದಗಳಿಗೆ ಗುಡ್‌ಬೈ ಹೇಳುವುದು. ಆದರೆ ಯಾವುದಾದರೊಂದು ಪರಿಭಾಷೆ ಬೇಕಲ್ಲ ? ಯಾವ ತತ್ವವನ್ನು ಶೂದ್ರ ಪ್ರಜ್ಞಾವಾದಿಗಳು ಸಮರ್ಥಿಸುತ್ತಾರೆ ? ಮಾನವತಾವಾದವನ್ನೆ ? ಅಸ್ತಿತ್ವವಾದವನ್ನೆ ? ಬುದ್ಧಿಯ ಸರ್ವಶ್ರೇಷ್ಠತ್ವದ ವಾದವನ್ನೆ ? ಅನುಭಾವವನ್ನೆ ? ಯಾವ ತತ್ವವನ್ನು ಅವರು ಸ್ವೀಕರಿಸುತ್ತಾರೋ ಆ ತತ್ವದ ಪರಿಭಾಷೆಯನ್ನು ಅವರು ಸ್ವೀಕರಿಸುತ್ತಾರೆ. ಐಂದ್ರಿಯಕ ಇಲ್ಲವೆ ಚಾರ್ವಾಕ, ಮಾನವಿಕ ಇಲ್ಲವೆ ಬರ್ಟ್ರಂಡ್ ರಸಲ್ ಮೊದಲಾದವರ ರೀತಿ, ಸಾರ್ತ್ರ ಮೊದಲಾದವರ existentialist ರೀತಿ.–ಹೀಗೆ ಯಾವ ತತ್ವವನ್ನು ಇದರ ಪುರಸ್ಕರ್ತರು ಸ್ವೀಕರಿಸುತ್ತಾರೋ ಅವರದು ಆ ತತ್ವಕ್ಕೆ ಹೊಂದಿಕೊಂಡ ಪ್ರಜ್ಞೆಯಾಗುತ್ತದೆಯೇ ವಿನಾ ಅದು ಶೂದ್ರ ಪ್ರಜ್ಞೆಯಾಗುವುದಿಲ್ಲ.

ಇನ್ನು 'ಪ್ರಜ್ಞೆ' ಎಂಬ ಶಬ್ದವನ್ನು 'ಅಭಿಪ್ರಾಯ' ಎಂಬರ್ಥದಲ್ಲಿ ಉಪಯೋಗಿಸಿದರೆ ಅದೊಂದು ರಾಜಕೀಯ ಸಮಸ್ಯೆಯಾಗುತ್ತದೆ. ಶೂದ್ರರೆನಿಸಿಕೊಂಡ ಸಮಾಜ ಹಾಗು ವೈದಿಕರೆನಿಸಿಕೊಂಡ ಸಮಾಜವೆಂದು ಎರಡು ಪಂಗಡಗಳನ್ನು ಕಟ್ಟಿದಹಾಗಾಗುತ್ತದೆ. ಆಗ ವೈದಿಕವೆಂಬ ಸಮಾಜದಲ್ಲಿ ಸ್ಥೂಲವಾಗಿ ವೈದಿಕ ಧರ್ಮವನ್ನು ಒಪ್ಪಿಕೊಂಡವರು ಸೇರಬಹುದು. ವೈದಿಕ ಧರ್ಮವನ್ನು ಒಪ್ಪಿಕೊಳ್ಳದವರು ಶೂದ್ರಸಮಾಜದಲ್ಲಿ ಸೇರುತ್ತಾರೆ. ಇವೆರಡಲ್ಲದೆ ಒಂದೊಂದು ಧರ್ಮದ ಪ್ರಕಾರ ಒಂದೊಂದು ಸಮಾಜ ಇಲ್ಲವೆ ಪಂಗಡಕ್ಕೂ ಸ್ಥಾನವನ್ನು ಕಲ್ಪಿಸಬೇಕಾಗುತ್ತದೆ. ಈ ಸ್ಥಿತಿಯಲ್ಲಿ ಮನಃಶಾಸ್ತ್ರ ಹಾಗು ಸಾಹಿತ್ಯವನ್ನು ಬಿಟ್ಟು ನಾವು ದೂರ ಹೋಗುತ್ತೇವೆ. 'ಶೂದ್ರ ಪ್ರಜ್ಞೆ' ಎಂಬ ವಾದ ಸಾಮಾಜಿಕ ಹಾಗು ರಾಜಕೀಯ ಪ್ರಶ್ನೆಯಾಗುತ್ತದೆ.

'ವೈದಿಕ' ಹಾಗು 'ಶೂದ್ರ' ಎಂಬ ಪ್ರಜ್ಞೆಗಳಿಗೆ ಎರಡು ವಿಶಾಲಾರ್ಥಗಳನ್ನು ಕಲ್ಪಿಸಬಹುದು. 'ವೈದಿಕ'ವೆಂದರೆ ಸಂಸ್ಥಾಪಿತವಾದ ಒಂದು ಮಾರ್ಗಪ್ರಿಯವೆನಿಸಿ ಕೊಂಡಿರುವ ಪ್ರಜ್ಞೆ. ಡಾಂಟೇನ ಕ್ಯಾಥೊಲಿಕ್ ನಂಬಿಗೆ, ಟಿ. ಎಸ್. ಎಲ್ಯಟ್‌ನ ಆ್ಯಂಗ್ಲೊಕ್ಯಾಥಲಿಕ್ ನಂಬಿಗೆ, ಜಾರ್ಜ್ ಹರ್ಬರ್ಟನ ಆ್ಯಂಗ್ಲಿಕನ್ ನಂಬಿಗೆ, ಕಾಲಿದಾಸನ ಶೈವ ಸಿದ್ಧಾಂತ, ಮಿಲ್ಟನ್ನನ ಪ್ಯುರಿಟನ್ ದೃಷ್ಟಿ, ಜಯದೇವನ ಕೃಷ್ಣಭಕ್ತಿ, ಪಂಪನ ತೀರ್ಥಂಕರ ಪೂಜೆ,—ಹೀಗೆ 'ವೈದಿಕ' ಪ್ರಜ್ಞೆಯೆಂದರೆ ಇದ್ದ ಆಸ್ತಿಕಮಾರ್ಗಗಳಲ್ಲಿ ಒಂದನ್ನು ಸ್ವೀಕರಿಸಿ ಅದರಂತೆ ನಡೆಯುವವನ ಜೀವಂತ ಪ್ರಜ್ಞೆ ಯಾಗುತ್ತದೆ. ಇದೂ ಒಂದು ಜೀವಂತ ಪ್ರಜ್ಞೆಯೆಂಬುದನ್ನು ಮರೆಯಬಾರದು. ಕಾಲಿದಾಸ, ಡಾಂಟೆ, ಇಲ್ಯಟ್‌ರಂಥವರು ಪಡೆದ ಅನುಭೂತಿ ಸುಳ್ಳು ಅನುಭೂತಿ ಯಲ್ಲ. ಇನ್ನೊಂದರಷ್ಟೇ ಅದರಲ್ಲಿ ನೈಜತೆಯಿದೆ. ಮಾರ್ಗವು ಸಿದ್ಧಗೊಳಿಸಿದ್ದಾದರೂ ನಾವು ನಡೆಯುವದು ಸುಳ್ಳಲ್ಲ.

ವೈದಿಕ ಪ್ರಜ್ಞೆಯೆಂದರೆ ಮಾರ್ಗೀಯ ಪ್ರಜ್ಞೆ. 'ಶೂದ್ರ' ಪ್ರಜ್ಞೆಯೆಂದರೆ ಪ್ರಾಯೋಗಿಕ ಇಲ್ಲವೆ 'ಸ್ವತಂತ್ರ'ಪ್ರಜ್ಞೆ. ನಿರೀಶ್ವರವಾದಿಯಾಗಿ ವಿದ್ಯಾರ್ಥಿದೆಸೆ ಯನ್ನು ಮುಗಿಸಿದ ಷೆಲ್ಲಿ ಕ್ರಮೇಣ ಪ್ರೇಮ ಹಾಗು ಸೌಂದರ್ಯವೆಂಬ ಶಕ್ತಿಗಳ ದಿವ್ಯತ್ವವನ್ನು ಅನುಭವಿಸಿದ. ಐಂದ್ರಿಯಕ ಸೌಂದರ್ಯದಿಂದ ಪ್ರಾರಂಭಿಸಿ ಕೀಟ್ಸ್ ಆಧ್ಯಾತ್ಮಿಕ ಸೌಂದರ್ಯದ ಯಾತ್ರಿಕನಾದ. ಯೇಟ್ಸ್ ಕವಿ ಅನೇಕ ತತ್ವಗಳನ್ನು ಮಥಿಸಿ 'A Vision' ಎಂಬ ಕೃತಿಯಲ್ಲಿ ತನ್ನದೇ ಆದ ತತ್ವವನ್ನು ಸಂಗ್ರಹಿಸಿದ. ಈ ಜಿಜ್ಞಾಸುಗಳು ತಮ್ಮ ಮಾರ್ಗವನ್ನೇ ತಾವು ಸೃಜಿಸಿಕೊಂಡರು.

ಕೆಲವರಲ್ಲಿ ಈ ಎರಡೂ ಧೋರಣೆಗಳು ಬೆರೆತಿರುತ್ತವೆ. ಮಾರ್ಗೀಯ ಪ್ರಜ್ಞೆ ಯಿದ್ದ ಬ್ಲೇಕ್ ತನ್ನ ದರ್ಶನಕ್ಕಾಗಿ ಪ್ರಾಯೋಗಿಕ ಪ್ರತೀಕಗಳನ್ನು ಬಳಸಿದ. ಮಾರ್ಗೀಯ ಪ್ರಜ್ಞೆಯಿಂದ ಪ್ರಾರಂಭಿಸಿದ ಟಾಗೋರರು ಪ್ರಾಯೋಗಿಕ ಪ್ರಜ್ಞೆಯ ಪ್ರಭಾವದಲ್ಲಿ ತಮ್ಮ ಜೀವನವನ್ನು ಮುಗಿಸಿದರು.

ಪ್ರಜ್ಞೆಯ ಬಗ್ಗೆ ನಾವು ಮಾತನಾಡುವದಾದರೆ 'ವೈದಿಕ' ಹಾಗು 'ಶೂದ್ರ' ಎಂಬ ಶಬ್ದಗಳ ಬದಲಾಗಿ 'ಮಾರ್ಗೀಯ' ಹಾಗು 'ಪ್ರಾಯೋಗಿಕ' ಎಂಬವುಗಳನ್ನು ಬಳಸುವದು ಉಚಿತವಾದೀತು.

ಪ್ರತಿಭಾಶಾಲಿ ಮಕ್ಕಳ ಗುಣಲಕ್ಷಣಗಳು

ಬಿ. ಶಶಿಧರ

ಪ್ರತಿ ವರ್ಷವೂ ಸಾವಿರಾರು ಮಕ್ಕಳು ಶಾಲೆಯನ್ನು ಸೇರುತ್ತಾರೆ. ಇದು ಸಾಮಾನ್ಯವಾಗಿ ಕಂಡುಬರುವ ವಿಷಯ. ಈ ಮಕ್ಕಳು ಬೇರೆ ಬೇರೆ ಪರಿಸರಗಳಿಗೆ ಸೇರಿದವರು. ಅಂತೆಯೇ ಇವರ ಅಂತಃಶಕ್ತಿ, ಆಸಕ್ತಿ, ಹವ್ಯಾಸ, ಆಶೋತ್ತರಗಳು ಭಿನ್ನ ಭಿನ್ನವಾಗಿರುತ್ತವೆ. ಈ ರೀತಿಯ ಭಿನ್ನತೆಯಲ್ಲಿನ ವ್ಯತ್ಯಾಸ ಓದಿನಮೇಲೆ ತೀವ್ರ ಪರಿಣಾಮವನ್ನುಂಟುಮಾಡುತ್ತದೆ.

ಶಾಲೆಯಲ್ಲಿನ ವಿದ್ಯಾರ್ಥಿಗಳನ್ನು ಅವರವರ ಬುದ್ಧಿ ಶಕ್ತಿಗೆ ಸಂಬಂಧಿಸಿದಂತೆ ಶ್ರೇಣಿಗಳಾಗಿ ವಿಂಗಡಿಸಬಹುದು. ಇಂತಹ ಶ್ರೇಣಿಯಲ್ಲಿ ಅಗ್ರಗಣ್ಯರಾದವರದು ಪ್ರತಿಭಾಶಾಲಿಗಳ ಗುಂಪು. ಪ್ರತಿಭಾಶಾಲಿಗಳು ಶಾಲೆಯಲ್ಲಿ ಮಾತ್ರವಲ್ಲದೆ ಸಮಾಜದ ಇತರ ಆಗುಹೋಗುಗಳ ಮೇಲೂ ಪರಿಣಾಮ ಬೀರಬಲ್ಲರು. ಇಂದು ಮಾನವನು ಮಾಡಿರುವ ಅನ್ವೇಷಣೆಗಳು, ಪರಿಶೋಧನೆಗಳು ಎಲ್ಲವೂ ಪ್ರತಿಭಾವಂತರ ಕೊಡುಗೆಗಳೇ ಆಗಿರುವುದನ್ನು ಗಮನಿಸಿದರೆ ಇವರ ಅರ್ಥ ಸ್ಪಷ್ಟವಾಗುತ್ತದೆ.

ಮಾನವ ಸಮಾಜದ ಆಗುಹೋಗು ಪ್ರತಿಭೆಯ ಮೇಲೆ ಅವಲಂಬಿತವಾಗಿರುವಾಗ, ಪ್ರತಿಭೆಯನ್ನು ಗುರುತಿಸಿ, ಅದು ತನ್ನ ಪರಿಪೂರ್ಣತೆಯನ್ನು ಪಡೆಯುವಂತೆ ಮಾಡಬೇಕಾದದ್ದು ಎಲ್ಲರ ಕರ್ತವ್ಯವಾಗಿದೆ. ಟೇಲರ್,[1] ರಾಮಮೂರ್ತಿ[2] ಮುಂತಾದವರು ಅಭಿಪ್ರಾಯಪಡುವಂತೆ ಪ್ರತಿಯೊಂದು ಪೀಳಿಗೆಯಲ್ಲೂ ಉತ್ತಮವಾಗಿ ಕಲಿಯುವ ಹಾಗೂ ಕಲಿತದ್ದನ್ನು ಉಳಿಸಿಕೊಳ್ಳುವ ಶಕ್ತಿಯನ್ನು ಪಡೆದವರ ಸಂಖ್ಯೆ ಅತ್ಯಲ್ಪ ; ಇಂತಹವರು ವಿರಳವಾದರೂ ತಮ್ಮ ಪ್ರತಿಭೆ ವಿಕಾಸಗೊಳ್ಳಲು ಸಾಧ್ಯವಾದ ವಾತಾವರಣ, ಅನುಕೂಲ ಹಾಗೂ ಅವಕಾಶಗಳನ್ನು ಪಡೆದವರು ಕೇವಲ ಕೆಲವೇ ಮಂದಿ. ಇದು ದುರದೃಷ್ಟಕರ. ದೇಶದಲ್ಲಿನ ಎಲ್ಲ ಮಕ್ಕಳಿಗೂ ಒಂದೇ ತೆರನಾದ ಅವಕಾಶಗಳನ್ನು ಕಲ್ಪಿಸಿಕೊಡುವುದು ಕಷ್ಟಸಾಧ್ಯದ ಮಾತು. ಇದು ಪ್ರಪಂಚದ ಎಲ್ಲ ರಾಷ್ಟ್ರಗಳಿಗೂ ಅನ್ವಯಿಸುತ್ತದೆ. ಪ್ರತಿಭೆಗೆ ತಕ್ಕ ಅವಕಾಶ

[1] Taylor, Calvin. W, *widening Horizons in creativity*—John Wiley and Sons Inc. New York, 1964 p. 3

[2] Ramamoorthy B, Talent and Superior performance *Educational India*, vol. 35 (8) Feb. 1969. p. 271

ಗಳನ್ನು ಕಲ್ಪಿಸಿಕೊಡಬೇಕಾದುದು ನ್ಯಾಯವಾದುದು. ಆದರೆ, ತಲೆಗೆಲ್ಲಾ ಒಂದೇ ಮಂತ್ರ ಎಂದು, ಪ್ರತಿಭಾನ್ವಿತರಿಗೂ, ಪ್ರತಿಭೆಯಿಲ್ಲದವರಿಗೂ ಒಂದೇ ಅವಕಾಶವನ್ನು ಕೊಡುವ ವಿಷಯ ಅವೈಜ್ಞಾನಿಕವೂ ಅಪ್ರಯೋಜಕವೂ ಆಗುತ್ತದೆ. ಭೀಮನಿಗೂ, ನಕುಲನಿಗೂ ಒಂದೇ ತೂಕದ ಆಹಾರವನ್ನು ಕೊಡುವ ಸಾಹಸ ಮಾಡಬಾರದು.

ವಿಶೇಷ ಮಟ್ಟದ ವಿದ್ಯಾರ್ಥಿಗಳು ಸಾಧಾರಣ ರೀತಿಯ ಮಕ್ಕಳಿಗೆಂದು ಉದ್ದೇಶಿಸಲಾದ ಶಾಲೆಗಳನ್ನು ಸೇರಿದಾಗ ಅವರು ಅನುಭವಿಸುವ ತೊಂದರೆಗಳು ಒಂದೆರಡಲ್ಲ. ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಭಿನ್ನರಾದ ಈ ಮಕ್ಕಳನ್ನು ಕಂಡಾಗ ಸಿಡಿಮಿಡಿಗೊಳ್ಳುವ ಅಧ್ಯಾಪಕರೂ ಇದ್ದಾರೆ. ಈ ಪ್ರತಿಭಾನ್ವಿತರ ಅನಿಸಿಕೆಗಳನ್ನು ಗಮನಕ್ಕೆ ತಂದುಕೊಳ್ಳದೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ, ಈ ಬಗೆಯ ಮಕ್ಕಳ ಶಾಲಾ ಶಿಕ್ಷಣಕ್ಕೆ ತಿಲಾಂಜಲಿಯನ್ನು ಕೊಡಿಸುವವರೂ ಇವರಲ್ಲುಂಟು. ಎಡಿಸನ್ ಮುಂತಾದವರ ಶಾಲಾನುಭವಗಳು ಎಲ್ಲರಿಗೂ ತಿಳಿದ ಅಂಶವೇ ಆಗಿದೆ.

ಈ ವಿಶಿಷ್ಟ ಗುಂಪಿಗೆ ಸೇರಿದ ಮಕ್ಕಳನ್ನು ಸರಿಯಾಗಿ ಬೆಳೆಸುವುದೂ ಕಷ್ಟ ಸಾಧ್ಯದ ಸಂಗತಿ. ಕಾರಣ ವಿಶಿಷ್ಟ ರೀತಿಯ ವಿದ್ಯಾರ್ಥಿಗಳಿಗೆ ವಿಶಿಷ್ಟ ರೀತಿಯ ಅಧ್ಯಾಪಕರೇ ಬೇಕು. ಅವರನ್ನು ಪ್ರಚೋದಿಸಬಲ್ಲ ವಾತಾವರಣಬೇಕು. ಈ ಬಗೆಯ ಸಂಬಂಧ ಇಲ್ಲವಾದರೆ ಪ್ರತಿಭೆಯ ನಾಶ ಆಗುವುದರಲ್ಲಿ ಸಂದೇಹವಿಲ್ಲ.

ಇದಷ್ಟೇ ಅಲ್ಲದೆ ಶಾಲೆಗಳು ಪ್ರತಿಭಾನ್ವಿತರ ಬಗ್ಗೆ ಹೊರಬೇಕಾದ ವಿಶೇಷ ಹೊಣೆಯೊಂದಿದೆ. ಟರ್ಮನ್‌ನ[3] ಪ್ರಕಾರ ಎಷ್ಟೋ ಕುಟುಂಬಗಳಲ್ಲಿ ತಂದೆತಾಯಿ ಯರಿಗೆ ಪ್ರತಿಭೆಯನ್ನು ಗುರುತಿಸುವುದೇ ಗೊತ್ತಿರುವುದಿಲ್ಲ. ಹೆಚ್ಚು ಜನ ತಂದೆ ತಾಯಿಯರಿಗೆ, ಅವರ ಸ್ವಂತ ವಾತಾವರಣದಲ್ಲಿದ್ದ ಕುಂದು ಕೊರತೆಗಳು, ಮಕ್ಕಳಿಗೆ ಮಾರ್ಗದರ್ಶನ ಮಾಡುವುದರಲ್ಲಿ ಕಂಟಕಪ್ರಾಯವಾಗುತ್ತವೆ. ಆದುದರಿಂದ ಪ್ರತಿಭಾ ವಂತ ಮಕ್ಕಳ ತಂದೆ ತಾಯಿಯರಿಗೆ ಅವರ ಹೊಣೆ ಗೊತ್ತಿರಲಿ, ಗೊತ್ತಿಲ್ಲದಿರಲಿ ಪ್ರತಿಭಾವಂತ ಮಕ್ಕಳನ್ನು ಗುರುತಿಸುವ, ಅವರಿಗೆ ಸೂಕ್ತ ವಿದ್ಯಾಭ್ಯಾಸವನ್ನು ಒದಗಿಸುವ, ಸೂಕ್ತ ಮಾರ್ಗದರ್ಶನ ಮಾಡುವ ಹೊಣೆ ಶಾಲೆಗಳದ್ದಾಗುತ್ತದೆ.

ಉನ್ನತ ಮಟ್ಟದ ಬುದ್ಧಿಶಕ್ತಿಯ ವಿಕಾಸಕ್ಕೆ ಅನೇಕ ಅಂಶಗಳು ಪೂರಕವಾಗು ತ್ತವೆ ; ವ್ಯಕ್ತಿಯ ವೈಯಕ್ತಿಕ ಗುಣಗಳು, ವಿದ್ಯಾಭ್ಯಾಸದ ಕ್ರಮ ; ಆತನ ಮಾನಸಿಕ ಪ್ರಪಂಚ, ಹಾಗೂ ಆತನ ಪರಿಸರ, ಪರಿಸರದಲ್ಲಿ ವ್ಯಕ್ತವಾಗುವ ಮೌಲ್ಯಗಳು ಹೀಗೆ ಅನೇಕ ಅಂಶಗಳನ್ನು ಗುರುತಿಸಬಹುದು. ಇವುಗಳ ಕೊರತೆಯು ವ್ಯಕ್ತಿಯ ಪ್ರಗತಿಗೆ ಮಾರಕವೂ ಆಗಬಲ್ಲದು.

---

[3] Terman, quoted in *The Education Digest* 'Terman and the gifted' by Seagve, M. V. Sept. 1972 pp. 52-53

ಪ್ರತಿಭಾನ್ವಿತ ಮಕ್ಕಳಿಗೆ ಬೇಕಾದ ಸೌಲಭ್ಯಗಳೇನು ? ಯಾರಲ್ಲೂ ಕಂಡು ಬರದ ಗುಣಗಳು ಇವರಲ್ಲೇನಿವೆ ? ಹೇಗೆ ಇವರು ಇತರ ಮಕ್ಕಳ ಗುಂಪಿಗಿಂತ ವಿಭಿನ್ನರು ? ಎಂಬ ಅಸಂಖ್ಯಾತ ಪ್ರಶ್ನೆಗಳ ಕಡೆಗೆ ಸಂಶೋಧಕರ ಗಮನ ಬಹಳ ಕಾಲದವರೆಗೆ ಹರಿದಿರಲಿಲ್ಲ.[4] ಪಾಶ್ಚಾತ್ಯದೇಶಗಳಲ್ಲಿ ದ್ವಿತೀಯ ಮಹಾಯುದ್ಧ ದಿಂದೀಚೆಗೆ ಈ ದಿಕ್ಕಿನಲ್ಲಿ ಗಣನೀಯ ಕಾರ್ಯ ನಡೆದಿದೆ. ಈ ಸಂಶೋಧನೆಗಳು ಸಂಖ್ಯಾ ಗಾತ್ರದ ದೃಷ್ಟಿಯಿಂದ ಮೇಲ್ನೋಟಕ್ಕೆ ಹೆಚ್ಚೆಂದು ತೋರಿ ಬರುತ್ತವೆ. ಆದರೆ ವಾಸ್ತವವಾಗಿ ಆಗಬೇಕಾದದ್ದು ಇನ್ನೂ ಬಹಳಷ್ಟಿದೆ. ನಮ್ಮ ದೇಶದಲ್ಲಂತೂ ಇದಿನ್ನೂ ಮೊಳಕೆಯ ಹಂತದಲ್ಲೇ ಇದೆ.

ಪ್ರತಿಭೆ ಎಂದರೇನು ? ಇದನ್ನು ನಿಖರವಾಗಿ, 'ಇದಮಿತ್ಥಂ' ಎಂದು ಹೇಳಲು ಸಾಧ್ಯವಾಗಿಲ್ಲ. ಇದು ಸಾಮಾನ್ಯವಾಗಿ ಎಲ್ಲ ಸಮಾಜವಿಜ್ಞಾನಗಳಲ್ಲಿ ವಿಷಯ ಜನ್ಯವಾಗಿ ಕಂಡುಬರುವ ಕೊರತೆಯಾಗಿದೆ. ಪ್ರಸ್ತುತ ಸಂದರ್ಭದಲ್ಲೂ ಸಂಕುಚಿತವೂ, ಸರಳವೂ ಆದ ವಿವರಣೆಗಳನ್ನೂ, ಹಾಗೆಯೇ ಕ್ಲಿಷ್ಟವೂ ವಿಸ್ತೃತವೂ ಸಂಕೀರ್ಣವೂ ಆದ ವಿವರಣೆಗಳನ್ನೂ ಕಾಣಬಹುದು. ಈ ವೈವಿಧ್ಯಕ್ಕೆ ಮುಖ್ಯವಾಗಿ ದಿನದಿನವೂ ಹಿಗ್ಗುತ್ತಲೇ ನಡೆದಿರುವ ಜ್ಞಾನ ಭಂಡಾರ ಕಾರಣವಾಗಿದೆ. ಮೇಲಾಗಿ, ಮನಃಶಾಸ್ತ್ರಜ್ಞರು ಉಪಯೋಗಿಸುವ ಅಳತೆಗೋಲುಗಳ ಬಗ್ಗೆಯೂ ಜ್ಞಾನ ನಿಖರವಾಗುತ್ತ ನಡೆದಿದೆ. ಜೊತೆಗೆ, ಅಂತರ ವಿಷಯಗಳನ್ನು ಒಳಗೊಂಡ ಸಂಶೋಧನೆಗಳು ಹೆಚ್ಚು ಅರ್ಥಗರ್ಭಿತವೂ, ವಾಸ್ತವವೂ ಆದ ಫಲಿತಾಂಶಗಳನ್ನು ತರುತ್ತಿವೆ.

ಪ್ರತಿಭಾಶಾಲಿಗಳನ್ನು ಅನೇಕ ಗ್ರಂಥಕರ್ತರು ಹಾಗೂ ಸಂಶೋಧಕರು ಅನೇಕ ರೀತಿಯಲ್ಲಿ ವರ್ಣಿಸಿದ್ದಾರೆ. ಶಿಕ್ಷಣದ ಶಬ್ದ ಕೋಶದಲ್ಲಿ[5] ಪ್ರತಿಭಾಶಾಲಿ ಮಗು ಎಂಬ ಪದಕ್ಕೆ 1. ಬುದ್ಧಿ ಶಕ್ತಿಯ ಪರೀಕ್ಷೆಗಳು ಸೂಚಿಸುವಂತೆ, ಜನಸಂಖ್ಯೆ ಯಲ್ಲಿ ಮೇಲಿನ ಶೇಕಡಾ 2 ರಿಂದ 3 ರ ಶ್ರೇಣಿಗೆ ಸೇರುವ ಶಕ್ತಿ ಪಡೆದ ಮಗು, 2. ಯಾವುದಾದರೊಂದು ಕ್ಷೇತ್ರದಲ್ಲಿ ಅಸಾಧಾರಣ ಸಾಮರ್ಥ್ಯವುಳ್ಳ ಮಗು, ಎಂಬ ಅರ್ಥವುಂಟಾಗುತ್ತದೆ.

ಟರ್ಮನ್ ಮುಂತಾದವರು ಪ್ರಸರಾವರ್ತಿಸಲಾದ ಬಿನೆ–ಸೈಮನ್ ಬುದ್ಧಿ ಪರೀಕ್ಷೆಗಳಲ್ಲಿ 130 ಕ್ಕಿಂತ ಹೆಚ್ಚು ಬುದ್ಧಿ ಸೂಚ್ಯಂಕಗಳನ್ನು ಪಡೆದವರನ್ನು ಪ್ರತಿಭಾವಂತರೆಂದು ಕರೆದರು. ಆದರೆ ಗೂಡ್ಯಾರ್ಡ್ ಬುದ್ಧಿಶಕ್ತಿಯಲ್ಲಿ ಮಿಗಿಲಾದ

---

[4] Hildreth, Gertrude H., *Introduction to the Gifted*, Mcgraw Hill Book Co. Inc. New York, 1966, P. 3

[5] Good Charter V. (ed) *Dictionary of Education*, Mcgraw Hill Book Co., New York, 1945. P. 68

ವರೆಗೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲು 120 ಬುದ್ಧಿ ಸೂಚ್ಯಂಕಗಳಿಗೆ ಕಡಿಮೆ ಇಲ್ಲದವರನ್ನೇ ಆರಿಸಿದನು.[6] ಹಾಗೆಯೇ ಡೇನಿಯಲ್‌ಸನ್ 125 ಬುದ್ಧಿ ಸೂಚ್ಯಂಕಗಳನ್ನು ಆಧಾರವನ್ನಾಗಿ ಉಪಯೋಗಿಸಿದನು. ಹೀಗೆ ಬುದ್ಧಿ ಸೂಚ್ಯಂಕಗಳನ್ನು ಉಪಯೋಗಿಸಿ ಪ್ರತಿಭಾಶಾಲಿ ಮಕ್ಕಳನ್ನು ಗುರುತಿಸುವ ವಿಧಾನದಲ್ಲಿ ಯಾವುದೇ ಒಂದು ಸರ್ವಸಮ್ಮತವಾದ ನಡವಳಿಕೆ ಕಂಡು ಬಂದಿಲ್ಲ. ಆದರೂ ಈ ಬಗೆಯ ವಿವರಣೆಗಳು ಮೊಟ್ಟಮೊದಲಿನವೂ, ನಿಷ್ಪಕ್ಷಪಾತವಾದ ಮಾರ್ಗವನ್ನು ಅವಲಂಬಿಸಿದವೂ ಆದುವೆಂಬ ಕಾರಣದಿಂದಾಗಿ ಪ್ರಶಂಸಾರ್ಹವೆನಿಸಿವೆ. ಆದರೆ ಈ ಬಗೆಯ ವಿವರಣೆಗಳು ಸಂಕುಚಿತವಾದ ಅರ್ಥವನ್ನು ಹೊಂದಿರುವಂತಹವು. ಆದರೆ ಇಂದು ಕೇವಲ ಒಂದೆರಡು ಬಗೆಯ ಮಾನಸಿಕ ಹಾಗೂ ಬೌದ್ಧಿಕ ವರ್ತನೆಗಳನ್ನಷ್ಟೇ ಅಳೆಯುವುದರಲ್ಲಿ ಸಮಾಧಾನರಾಗದೆ, ಪ್ರತಿಭೆಯ ಇನ್ನುಳಿದ ಮುಖಗಳನ್ನು ಅಳೆಯುವುದರಲ್ಲೂ ಸಂಶೋಧಕರು ಆಸಕ್ತರಾಗಿದ್ದಾರೆ. ತತ್ಫಲವಾಗಿ ಅನೇಕ ಬಗೆಯ ನಡವಳಿಕೆಗಳನ್ನು ವ್ಯಕ್ತಗೊಳಿಸುವ ವಿಶಾಲವಾದ ವ್ಯಾಖ್ಯೆಗಳನ್ನು ಕಾಣಬಹುದು.

ಈ ಬಗೆಯ ವ್ಯಾಖ್ಯೆಗಳನ್ನು ಡನ್[7] ತನ್ನ ಪುಸ್ತಕದಲ್ಲಿ ಆರು ಗುಂಪುಗಳನ್ನಾಗಿ ವಿಭಾಗಿಸುತ್ತಾನೆ. ಅವುಗಳು ಯಾವುವೆಂದರೆ :

1. ಗತಿಸಿದ ಘಟನೆಗಳನ್ನಾಧರಿಸಿದ ವ್ಯಾಖ್ಯೆಗಳು
   (Ex post facto definitions)
2. ಬುದ್ಧಿ ಸೂಚ್ಯಕಾಂಕಗಳನ್ನು ಆಧರಿಸಿದ ವ್ಯಾಖ್ಯೆಗಳು
   (I Q definitions)
3. ಸಮಾಜದ ಹಿತವನ್ನು ಲಕ್ಷಿಸುವ ವ್ಯಾಖ್ಯೆಗಳು
   (Social definitions)
4. ಶೇಕಡಾ ಪ್ರಮಾಣವನ್ನು ಆಧರಿಸಿದ ವ್ಯಾಖ್ಯೆಗಳು
   (Percentage definitions)
5. ಕಲ್ಪನಾಶಕ್ತಿ (ಸೃಜನ ಶೀಲತೆ)ಯನ್ನು ಆಧರಿಸಿದ ವ್ಯಾಖ್ಯೆಗಳು
   (Creativity definitions)
6. ಉತ್ಪಾದಕ–ಮೌಲ್ಯಮಾಪಕ–ಆಲೋಚನಾ ವ್ಯಾಖ್ಯೆಗಳು
   (Productive—Evaluative-Thinking definitions)

---

[6] Carrol H. A. and Martens, Elise H. *Encyclopaedia of Educational Research*, P. 505

[7] Dunn, L. M. *Exceptional Children in the Schools*, Holt Rinechart and Winston Inc. New York—1963 p p. 182-184

ಕೇವಲ ವಿವರಣೆಗಳಿಂದಲೇ ಪ್ರತಿಭಾಶಾಲಿಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಹಾಗಾದರೆ ಇವರನ್ನು ಪತ್ತೆಹಚ್ಚುವ ಮಾರ್ಗ ಯಾವುದು? ಅನೇಕ ಸಂಶೋಧಕರು ಪ್ರತಿಭಾಶಾಲಿಗಳನ್ನು ಗುರುತಿಸಲು ಅನುಕೂಲವಾಗುವಂತೆ ಅವರ ಗುಣಲಕ್ಷಣಗಳ ಪಟ್ಟಿಗಳನ್ನು ಸಿದ್ಧಪಡಿಸಿದ್ದಾರೆ. ಹಿಲ್ಡ್ರೆಥ್[8] ತಮ್ಮ ಪುಸ್ತಕದಲ್ಲಿ ಪ್ರತಿಭಾಶಾಲಿಗಳನ್ನು ಬೇರೆಯವರಿಂದ ಗುರುತಿಸಲು ಕೆಳಕಂಡ ಅಂಶಗಳನ್ನು ಸೂಚಿಸುತ್ತಾರೆ :—

1. ಆತ ತನ್ನ ವಯಸ್ಸಿಗೆ ಸೇರಿದ ಮಕ್ಕಳಿಗಿಂತ ದೈಹಿಕ ಸಾಮರ್ಥ್ಯ ಅಥವಾ ಮಾಂಸಖಂಡಗಳ ಬೆಳವಣಿಗೆಯನ್ನೇ ಅವಲಂಬಿಸಿದ ಇತರ ಗುಣಗಳಲ್ಲಿ ಬೇರೆಯಾಗಿರುತ್ತಾನೆ.

2. ಪ್ರೌಢ ಶಿಕ್ಷಣದ ಮುಂದುವರಿಕೆ ಹಾಗೂ ಅದರಲ್ಲಿನ ಯಶಸ್ಸಿಗೆ ಬೇಕಾದ ಬೌದ್ಧಿಕ ಶಕ್ತಿ ಹಾಗೂ ಗುಣಗಳನ್ನು ಪಡೆದಿರುತ್ತಾನೆ.

3. ಜೀವನದ ಮೊದಲ ಹಂತದಿಂದಲೂ ಬೆಳವಣಿಗೆಯು ಏಕರೂಪವಾಗಿರುತ್ತದೆ.

4. ಆತನ ಅಸಾಮಾನ್ಯ ಗುಣಗಳು ಸಾಮಾನ್ಯರೂಪದ್ದಾಗಿರಬಹುದು ಅಥವಾ ವಿಶೇಷ ರೀತಿಯದ್ದಾಗಿರಬಹುದು. ಹಾಗೆಯೇ ಆ ಗುಣಗಳು ಒಂದು ಅಥವಾ ಅನೇಕವಾಗಿರಬಹುದು.

5. ಆತನ ಹಿರಿಮೆಯನ್ನು ವ್ಯಕ್ತಪಡಿಸುವ ಗುಣಗಳು ಉನ್ನತ ಸಾಮಾಜಿಕ ಮೌಲ್ಯಗಳಲ್ಲಿ ವಿಶೇಷತರದ ಸಾಧನೆ ಹಾಗೂ ಫಲದಾಯಕ ಅಥವಾ ಉತ್ಪನ್ನದಾಯಕ ಕಾರ್ಯಗಳ ಬಗೆಗೆ ಭವಿಷ್ಯ ನುಡಿಯುವಂತಹವಾಗಿರುತ್ತವೆ.

ತಮ್ಮ ತಂದೆ ತಾಯಿಯರು ಅಥವಾ ಸ್ನೇಹಿತರಿಗಿಂತ ಮಿಗಿಲಾದ ಗುಣಗಳನ್ನು ಪ್ರತಿಭಾಶಾಲಿಗಳು ವ್ಯಕ್ತಪಡಿಸುತ್ತಾರೆ ಎಂದು ಅಹೂಜಾರವರು[9] ಅಭಿಪ್ರಾಯಪಟ್ಟು, ವಿಟ್ಟಿರವರು ತಿಳಿಸಿದ ಗುಣಗಳನ್ನು ಸಂಗ್ರಹವಾಗಿ ಈ ರೀತಿ ತಿಳಿಸುತ್ತಾರೆ :—

1. ಚಿಕ್ಕವಯಸ್ಸಿನಲ್ಲೇ ವಿಶಾಲವಾದ ಹಾಗೂ ನಿಖರವಾದ ಶಬ್ದ ಸಂಪತ್ತಿನ ಬಳಕೆ.

2. ಭಾಷಾ ಸಾಮರ್ಥ್ಯ—ಪೂರ್ಣವಾದ ವಾಕ್ಯಗಳನ್ನು ಚಿಕ್ಕವಯಸಿನಲ್ಲೇ ಹೇಳುವ, ಕಥೆಗಳನ್ನು ಹೇಳುವ ಸಾಮರ್ಥ್ಯ.

---

[8] Hildreth, Gertrue dH. Op cit

[9] Ahuja G. C. 'Intellectually Gifted Children' *Educational India* Vol. 37, No. 9, March 1971 pp. 303–306

3. ಚುರುಕಾದ ವೀಕ್ಷಣಾಶಕ್ತಿ ಹಾಗೂ ವೀಕ್ಷಿಸಿದ್ದನ್ನು ಜ್ಞಾಪಕದಲ್ಲಿಟ್ಟು ಕೊಳ್ಳುವ ಸಾಮರ್ಥ್ಯ.

4. ಪುಸ್ತಕಗಳಲ್ಲಿ ಆಸಕ್ತಿ.

5. ಕ್ಯಾಲೆಂಡರುಗಳಲ್ಲಿ (ದಿನ ನೋಡುವುದರಲ್ಲಿ), ಗಡಿಯಾರಗಳಲ್ಲಿ ಹಾಗೂ ಸಮಯವನ್ನು ಹೇಳುವುದರಲ್ಲಿ ಆಸಕ್ತಿ.

6. ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರದೆ ಇರುವ ಚಿತ್ತೈಕಾಗ್ರತೆ.

7. ಸಂಗೀತ, ಚಿತ್ರಕಲೆ ಇತ್ಯಾದಿ ವಿಷಯಗಳಲ್ಲಿ ಪ್ರೌಢಿಮೆಯ ಪ್ರದರ್ಶನ.

8. ಅನ್ವೇಷಕ ಪ್ರವೃತ್ತಿ ಹಾಗೂ ಕಾರಣ ಮತ್ತು ಪರಿಣಾಮಗಳ ಸಂಬಂಧದ, ಪ್ರತಿಶೋಧನೆಯಲ್ಲಿ ಆಸಕ್ತಿ.

9. ಚಿಕ್ಕ ವಯಸ್ಸಿನಲ್ಲೇ ಓದುವ ಶಕ್ತಿಯ ಬೆಳವಣಿಗೆ.

ಡನ್[10]ರವರ ಪ್ರಕಾರ ಅಬ್ರಹಾಂ, ದೀರ್ಹಾ ಮತ್ತಿತರರು ಸಿದ್ಧಪಡಿಸಿದ ಪಟ್ಟಿಗಳು ಮುಖ್ಯವಾದುವು. ಅವರ ಪುಸ್ತಕದಲ್ಲಿ ಕೊಡಲಾಗಿರುವ ಪಟ್ಟಿಯ ಪ್ರಕಾರ ಪ್ರತಿಭಾಶಾಲಿಗಳು :—

1. ಸಾಧಾರಣ ಮಗುವಿಗಿಂತ ಬೇಗ ನಡೆಯಲು ಮತ್ತು ಓಡಾಡಲು ಕಲಿಯುತ್ತಾರೆ.

2. ಅವರ ವಯಸ್ಸಿನ ಇತರ ಮಕ್ಕಳಿಗಿಂತ ಶಾರೀರಿಕ ದಾರ್ಢ್ಯ, ಎತ್ತರ ಹಾಗೂ ತೂಕದಲ್ಲಿ ಮಿಗಿಲಾಗಿರುತ್ತಾರೆ.

3. ಬೇಗ ಕಲಿಯುತ್ತಾರೆ.

4. ಕುರುಡು ಪಾಠಗಳ ಅಥವಾ ಹೆಚ್ಚು ಅಭ್ಯಾಸದ ನೆರವಿಲ್ಲದೆ ಕಲಿತದ್ದನ್ನು ಉಳಿಸಿಕೊಳ್ಳುತ್ತಾರೆ.

5. ತಮ್ಮ ವಯಸ್ಸಿಗೆ ಮೀರಿದ ವಿಶಾಲವಾದ ಹಾಗೂ ಕ್ಲಿಷ್ಟವಾದ ಪದ ಸಂಪತ್ತನ್ನು ಹೊಂದಿರುತ್ತಾರೆ.

6. ಚೆನ್ನಾಗಿ ಆಲೋಚಿಸುತ್ತಾರೆ ಮತ್ತು ಸಂಬಂಧಗಳನ್ನು ಚೆನ್ನಾಗಿ ಗ್ರಹಿಸುತ್ತಾರೆ.

7. ವಿವಿಧ ರೀತಿಯ ಸಂಗತಿಗಳಲ್ಲಿ ತಮ್ಮ ಅಭಿರುಚಿಯನ್ನು ವ್ಯಕ್ತಪಡಿಸುತ್ತಾರೆ.

8. ತಮ್ಮ ತರಗತಿಯದಕ್ಕಿಂತ ಒಂದೆರಡು ವರ್ಷ ಮುಂದುವರೆದ ಶೈಕ್ಷಣಿಕ ಕಾರ್ಯಗಳನ್ನು ಮಾಡುತ್ತಾರೆ.

---

[10] Dunn L. M. op. cit. P. 189

9. ವಿವಿಧ ಬಗೆಯ ಹವ್ಯಾಸಗಳಲ್ಲಿ ತೊಡಗಿರುತ್ತಾರೆ.

ಶೈಕ್ಷಣಿಕ ಸಂಶೋಧನೆಯ ವಿಶ್ವಕೋಶದಲ್ಲೂ[11] ಇದೇ ಬಗೆಯ ಪಟ್ಟಿಯೊಂದನ್ನು ಕಾಣಬಹುದು.

ಈ ಬಗೆಯ ಪಟ್ಟಿಗಳ ಜಾಗರೂಕ ಪರಿಶೀಲನೆ ಅಗತ್ಯ. ಕಾರಣ ಈ ಗುಣಗಳು ಯಾವುದೇ ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಅನ್ವಯವಾಗುವ ಸಂಭವ ಕಡಿಮೆ.

ಪ್ರತಿಭಾಶಾಲಿಗಳು ಇತರ ಬಗೆಯ ಮಕ್ಕಳಿಗಿಂತ, ಗುಂಪಿನಲ್ಲಿ ಸಮಾನವಾದ ಗುಣಗಳನ್ನು ಪಡೆದಿರುತ್ತಾರೆ. ಆದರೆ ಗುಂಪಿನೊಳಗೆ ಪರಸ್ಪರ ವಿಭಿನ್ನರು, ಬೇಲೂರಿನ ಶಿಲಾಬಾಲಿಕೆಯರಂತೆ.

ಸಂಶೋಧಕರು ಪ್ರತಿಭಾಶಾಲಿಗಳನ್ನು ಗುರುತು ಹಚ್ಚಲು ಅನೇಕ ಮಾರ್ಗಗಳನ್ನು ಕಂಡುಹಿಡಿದಿದ್ದಾರೆ. ಈ ಕಾರ್ಯಕ್ಕಾಗಿ ಅನೇಕ ಬಗೆಯ ಅಳತೆಗೋಲುಗಳ ಆವಿಷ್ಕಾರವೂ ಆಗಿದೆ. ಪ್ರತಿಭಾವಂತ ಮಕ್ಕಳ ಬಗೆಗಿನ ಸಂಶೋಧನೆಗಳಲ್ಲಿ ಟರ್ಮನ್‌ನದು ಪ್ರಮುಖಪಾತ್ರ. ಈತ ಪ್ರತಿಭಾವಂತ ಮಕ್ಕಳನ್ನು ಗುರುತಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಬುದ್ಧಿ ಶಕ್ತಿಯ ಪರೀಕ್ಷೆಗಳು ಹಾಗೂ ಅಧ್ಯಾಪಕರ ಆಯ್ಕೆಗಳನ್ನು ತನ್ನ ಸಂಶೋಧನೆಗಳಲ್ಲಿ ಬಳಸಿದ್ದಾನೆ.

ಡನ್‌ನ ಅಭಿಮತದಂತೆ ಅಧ್ಯಾಪಕರ ವೀಕ್ಷಣೆಯ ಪಾತ್ರವೂ ಈ ಕಾರ್ಯದಲ್ಲಿ ಹಿರಿದಾದುದು. ಆದರೆ ಇದು ಬುದ್ಧಿಶಕ್ತಿಯ ಪರೀಕ್ಷೆಗಳು ಹಾಗೂ ಶೈಕ್ಷಣಿಕ ಪರೀಕ್ಷೆಗಳಿಗೆ ಪೂರಕವಾಗಿ ಬಳಸಲ್ಪಡಬೇಕು. ಕೆಲವು ಸಂಶೋಧಕರು ಶಾಲಾ ಅಂಕಗಳನ್ನೂ ಸಹ ಬಳಸುವುದುಂಟು. ಸಂಶೋಧಕರಿಂದ ಪ್ರತಿಭಾಶಾಲಿಗಳನ್ನು ಗುರುತಿಸಲು ಇನ್ನೂ ಹಲವಾರು ಬಗೆಯ ಅಳತೆಗೋಲುಗಳು ಬಳಸಲ್ಪಟ್ಟಿವೆ. (ವಿವರಗಳಿಗೆ ನೋಡಿ :–ಡನ್. ಪು. 186–189)

ಅನೇಕ ಸಂಶೋಧನೆಗಳ ನೆರವಿನಿಂದಾಗಿ ಪ್ರತಿಭಾಶಾಲಿಗಳ ಬಗ್ಗೆ ಅನೇಕ ವಿವರಗಳು ಲಬ್ಧವಾಗಿವೆ.

ಶಾರೀರಿಕ ಗುಣಗಳು

ಪ್ರತಿಭಾಶಾಲಿಗಳು ಇತರರಿಗಿಂತ ಶಾರೀರಿಕವಾಗಿ ಉತ್ತಮರಾಗಿರುತ್ತಾರೆ. ಸದೃಢ ಗಾತ್ರ, ಎತ್ತರದ ನಿಲುವು, ಉತ್ತಮ ತೂಕ, ಆಕರ್ಷಕ ರೂಪ ಇವರದು. ಆರೋಗ್ಯವೂ ಉತ್ತಮವಾಗಿಯೇ ಇರುತ್ತದೆ. ಪ್ರತಿಭಾಶಾಲಿಗಳ ತಾಯಿಯರು

---

[11] Ebel, Robert, L. (ed). *Encyclopaedia of Educational Research*, The Macmillan Co. London–1960

ಉತ್ತಮ ಆರೋಗ್ಯವಂತರಾಗಿರುತ್ತಾರೆಂದು ಅನೇಕ ಸಂಶೋಧನೆಗಳು ತಿಳಿಸುತ್ತವೆ. ಪ್ರತಿಭಾಶಾಲಿಗಳು ಹುಟ್ಟುವಾಗಲೇ ಹೆಚ್ಚು ತೂಕವನ್ನು ಪಡೆದಿರುತ್ತಾರೆ. ಇವರಲ್ಲಿ ಹಲ್ಲುಗಳು ಬೇಗ ಮೊಳೆಯುತ್ತವೆ. ಚಿಕ್ಕ ವಯಸ್ಸಿನಲ್ಲಿ ಕಾಯಿಲೆಗಳು ಕಡಿಮೆ. ದೈಹಿಕವಾದ ನ್ಯೂನತೆಗಳೂ ಸಾಮಾನ್ಯವಾಗಿ ಇವರಲ್ಲಿ ಕಡಿಮೆ ಇರುತ್ತವೆ. ಹೊಲ್ಲಿಂಗ್‌ವರ್ತ್ ಮತ್ತು ಟೇಲರ್‌ರವರು ಮಾಡಿದ ಸಂಶೋಧನೆಗಳಲ್ಲಿ ಬುದ್ಧಿಶಕ್ತಿ ಹಾಗೂ ಎತ್ತರ ಮತ್ತು ತೂಕಗಳಿಗೆ ಸಂಬಂಧವಿರುವುದು ಕಂಡುಬಂದಿತು. ಪ್ರತಿಭಾಶಾಲಿಗಳು ಮಾಂಸಖಂಡಗಳ ಕಾರ್ಯಗಳನ್ನು ಒಳಗೊಂಡ ಓಟ, ಜಿಗಿದಾಟ ಇತ್ಯಾದಿ ಚಟುವಟಿಕೆಗಳಲ್ಲೂ ಪಾಲುಗೊಳ್ಳುತ್ತಾರೆ.

ಸಾಮಾನ್ಯವಾಗಿ ಇಲ್ಲಿ ಮೇಲೆ ತಿಳಿಸಿದ ಗುಣಲಕ್ಷಣಗಳು ಪಾಶ್ಚಾತ್ಯದೇಶಗಳಲ್ಲಿ ನಡೆದಿರುವ ಸಂಶೋಧನೆಗಳಿಂದ ಹೊರಬಿದ್ದಿರುವ ಸಂಗತಿಗಳು. ನಮ್ಮ ದೇಶದಲ್ಲಿ ಶಾಲೆಗಳಲ್ಲಿ ಕಂಡುಬರುವ ಪ್ರತಿಭಾಶಾಲಿಗಳತ್ತ ಗಮನ ಹರಿಸಿದರೆ ಪ್ರಾಯಶಃ ಬೇರೆ ಅಂಶಗಳು ಕಂಡುಬರಬಹುದು. ನರಪೇತಲರೂ ನಿರುತ್ಸಾಹಿಗಳೂ ಯಾವ ದೈಹಿಕ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಪಾಲುಗೊಳ್ಳದಂಥವರೂ ಕಂಡುಬರಬಹುದು. ಆದರೆ ಈ ಬಗ್ಗೆ ಯಾವ ಕ್ರಮಬದ್ಧವೂ, ವೈಜ್ಞಾನಿಕವೂ ಆದ ಸಂಶೋಧನೆಗಳು ಹೆಚ್ಚಾಗಿ ನಮ್ಮ ದೇಶದಲ್ಲಿ ನಡೆದಿಲ್ಲ. ಪ್ರತಿಭಾವಂತರ ಬಗ್ಗೆ ನಡೆದಿರುವ ಸಂಶೋಧನೆಗಳಲ್ಲಿ ಈ ಬಗ್ಗೆ ಯಾವ ಸಂಗತಿಯೂ ಸಿಕ್ಕಿಲ್ಲ.

ಸಾಂಸ್ಕೃತಿಕ ಹಾಗೂ ಕೌಟುಂಬಿಕ ಹಿನ್ನೆಲೆ

ಸಂಶೋಧನೆಗಳ ಪ್ರಕಾರ ಇವರಲ್ಲಿ ಹೆಚ್ಚು ಜನ ಉತ್ತಮ ಪರಿಸರಕ್ಕೆ ಸೇರಿದ ಕುಟುಂಬಗಳಿಂದ ಬಂದವರು. ಅಂದಮಾತ್ರಕ್ಕೆ ಬಡಕುಟುಂಬಗಳಲ್ಲಿ ಪ್ರತಿಭಾವಂತರು ಜನಿಸುವುದಿಲ್ಲ ಎಂದು ಅಭಿಪ್ರಾಯವಲ್ಲ. ಯಾಕೆಂದರೆ ಸರ್. ಎಂ. ವಿಶ್ವೇಶ್ವರಯ್ಯ, ರಾಮಾನುಜನ್ ಮುಂತಾದವರು ಉದಾಹರಣೆಯಾಗಿಲ್ಲವೆ ? ಆದರೆ ಇಂತಹವರಿಗೆ ಪರಿಸರದ ಪ್ರಚೋದನೆಗಿಂತ ಅಂತಃಪ್ರೇರಣೆಯೇ ಮೂಲ ಕಾರಣವಾಗಿದ್ದಿರಬೇಕು. ಫ್ರಿಯರ್‌ಸನ್‌ರ[12] ಸಂಶೋಧನೆಯ ಪ್ರಕಾರ ಉತ್ತಮ ಸಾಮಾಜಿಕ ಮಟ್ಟದಿಂದ ಬಂದ ಪ್ರತಿಭಾವಂತ ಮಕ್ಕಳು ಕೆಳಮಟ್ಟದ ಸಾಮಾಜಿಕ ಮಟ್ಟಕ್ಕೆ ಸೇರಿದ ಪ್ರತಿಭಾವಂತರಿಗಿಂತ ಅನೇಕ ಅಂಶಗಳಲ್ಲಿ ಬೇರೆಯಾಗಿದ್ದರು. ಓದಿನ ಪ್ರಮಾಣ, ಶಾಲೆಯ ಬಗ್ಗೆ ಅವರಿಗಿರುವ ಮನೋಭಾವ, ಆಸಕ್ತಿ, ವ್ಯಕ್ತಿತ್ವ ಅಷ್ಟೇಕೆ ತೂಕ ಇತ್ಯಾದಿ ಅಂಶಗಳಲ್ಲೂ ವ್ಯತ್ಯಾಸ ಕಂಡುಬಂದಿತು.

---

[12] Frierson, "Differences between Gifted Children from Upper and Lower Status Backgrounds." Quoted in *Review of Educational Research*, Vol. 39 (1) Feb. 1969, p. 33

ಪ್ರತಿಭಾಶಾಲಿಗಳ ತಂದೆ ತಾಯಿಯರು, ಇತರರ ತಂದೆ ತಾಯಿಯರಿಗಿಂತ ಉತ್ತಮ ವಿದ್ಯಾವಂತರಾಗಿರುತ್ತಾರೆ. ಮನೆಯ ವಾತಾವರಣವೂ ಅಷ್ಟೇ ಪ್ರಚೋದಕವಾಗಿರುತ್ತದೆ. ನಮ್ಮ ಪರಿಸರದಲ್ಲಿ ಈ ಅಂಶವೂ ಅಷ್ಟೇ ಸಂಶೋಧನಾರ್ಹ.

ಹಾಗೆಯೇ ಟರ್ಮನ್, ಶೆಲ್ಡನ್, ಬಾರ್ಗ್ ಮುಂತಾದವರು ಮಾಡಿದ ಸಂಶೋಧನೆಗಳಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಕೆಲವು ಜನಾಂಗಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪ್ರತಿಭಾವಂತರಿರುವುದು ಕಂಡುಬಂದಿತು. ಅಂದರೆ ಪ್ರತಿಭೆಗೂ ಜನಾಂಗ ಅಥವಾ ಜಾತಿಗೂ ಸಂಬಂಧವಿದೆ ಎಂದು ಅರ್ಥ ಕಲ್ಪಿಸುವ ದುಸ್ಸಾಹಸ ಮಾಡಬಾರದು. ಪ್ರತಿಭೆಯನ್ನೇ ತನ್ನ ಸ್ವತ್ತನ್ನಾಗಿಟ್ಟುಕೊಂಡು ಇತರರ ಮೇಲೆ ತನ್ನ ಸರ್ವಾಧಿಕಾರವನ್ನು ಚಲಾಯಿಸಬಲ್ಲ ಪಕ್ಕ ಈ ರೀತಿಯ ಯಾವ ಗುಂಪಿಗೂ ಇಲ್ಲ.[13] ಪ್ರತಿಭಾ ವಿಕಸನಕ್ಕೆ ಬೇಕಾದ ಅವಕಾಶಗಳು ದೊರೆಯುವಿಕೆಯಲ್ಲಿನ ವ್ಯತ್ಯಾಸ ಇದಕ್ಕೆ ಕಾರಣವಾಗಿರಬಹುದು.

ಸಾಮಾಜಿಕ ಹಾಗೂ ಭಾವನಾತ್ಮಕ ಹೊಂದಾಣಿಕೆ

ಪ್ರತಿಭಾಶಾಲಿಗಳು ಪರಿಸರದೊಡನೆ ಸರಿಯಾಗಿ ಹೊಂದಿಕೊಂಡಿರುವುದಿಲ್ಲ ಎಂದು ಮೊದಲು ಭಾವಿಸಲಾಗಿತ್ತು. ಆದರೆ ಈ ದಿಸೆಯಲ್ಲಿ ನಡೆದಿರುವ ಅನೇಕ ಸಂಶೋಧನೆಗಳು ಈ ತಪ್ಪು ಕಲ್ಪನೆಯನ್ನು ಹೋಗಲಾಡಿಸಿವೆ. ಪ್ರತಿಭಾಶಾಲಿ ಯಾದ ಮಗು ತರಗತಿಯಲ್ಲಿ ಎಲ್ಲರ ಅಚ್ಚುಮೆಚ್ಚಿನ ವ್ಯಕ್ತಿ. ಆಟಪಾಟಗಳ ಕೇಂದ್ರ ಬಿಂದು. ಉತ್ಸಾಹದ ಬುಗ್ಗೆ. ಇವೇ ಗುಣಗಳು ಅವರ ಜೀವನದ ಮುಂದಿನ ಮಜಲಿಗೂ ಪ್ರವೇಶಿಸುತ್ತವೆ. ಅಷ್ಟೇ ಅಲ್ಲ. ಈ ಮಗು ಮಾನಸಿಕ ಚಿತ್ತಸ್ವಾಸ್ಥ್ಯ ದಲ್ಲೂ ಮಿಗಿಲು. ಇವರಲ್ಲಿ ನರಸಂಬಂಧವಾದ ಕಾಯಿಲೆಗಳೂ ಕಡಿಮೆ ಇರುತ್ತವೆ. ನಿಷ್ಪಕ್ಷಪಾತ ಮನೋಭಾವದ ಲಕ್ಷಣಗಳೂ ಇವರಲ್ಲಿ ಕಂಡುಬರುತ್ತವೆ. ಫ್ರೆಂಚ್, ಗೋಲ್ಡ್, ಹಿಲ್ಡ್ರೆತ್, ದೀಹಾನ್ ಮತ್ತು ಹ್ಯಾವಿಗ್‌ಹರ್ಸ್ಟ್, ಕಿರ್ಕ್ ಮುಂತಾದ ವರ ಸಂಶೋಧನೆಗಳು ಇಲ್ಲಿ ಉಲ್ಲೇಖನೀಯ. ಆದರೆ ಒಂದೇ ರೀತಿಯ ಸಾಮಾಜಿಕ ಹಾಗೂ ಆರ್ಥಿಕ ಪರಿಸರಗಳಿಗೆ ಸೇರಿದವರಲ್ಲಿ ಈ ವ್ಯತ್ಯಾಸಗಳು ಗೌಣ.

ಬೌದ್ಧಿಕ ಲಕ್ಷಣಗಳು :–

ಬೇಕರ್, ಜಾನ್‌ಸನ್, ಕ್ರ್ಯುಕ್‌ಷ್ಯಾಂಕ್, ಹಿಲ್ಡ್ರೆತ್ ಮುಂತಾದವರ ಅಭಿ ಮತದಂತೆ ಪ್ರತಿಭಾಶಾಲಿಗಳಲ್ಲಿ ಬುದ್ಧಿಶಕ್ತಿಯ ಮಟ್ಟ ಹೆಚ್ಚು. ಕಟ್ಸ್ ಮತ್ತು ಮೋಸ್ಲೇರವರು ತಿಳಿಸುವಂತೆ ಇವರಲ್ಲಿ ಸೃಜನಶೀಲತೆಯೂ ಉಂಟು, ತೀವ್ರ

13 Dunn. L. M. op. cit. p. 195.

ಆಲೋಚನಾಶಕ್ತಿಯೂ ಉಂಟು. ಇವರು ಇತರರಿಗಿಂತ ವಿಸ್ತಾರವಾದ ಪದಸಂಪತ್ತನ್ನು ಬೆಳಸುತ್ತಾರೆ. ಸಮಸ್ಯೆಗಳನ್ನು ಬಿಡಿಸುವುದರಲ್ಲೂ ಇವರದು ಎತ್ತಿದಕೈ. ಚಿಕ್ಕ ವಯಸ್ಸಿನಲ್ಲೇ ಬೌದ್ಧಿಕ ವಿಷಯಗಳಲ್ಲಿ ಬಾಲಪ್ರೌಢತೆಯನ್ನು ಈ ಮಕ್ಕಳು ಪಡೆದಿರುತ್ತಾರೆ. ಬೌದ್ಧಿಕ ಕಾರ್ಯಗಳ ಬಗ್ಗೆ ಮೊದಲಿನಿಂದಲೂ ತೀವ್ರ ಒಲವು; ಗಹನ ಹಾಗೂ ಕ್ಲಿಷ್ಟವಾದ ವಿಚಾರಗಳಲ್ಲಿ ಆಸಕ್ತಿ; ಕಾಲ, ಹುಟ್ಟು, ಸಾವು, ಜೀವನ, ಅದೃಷ್ಟ ಇತ್ಯಾದಿ ತಾರ್ಕಿಕ ವಿಷಯಗಳಲ್ಲೂ ಕುತೂಹಲವನ್ನು ಇವರು ವ್ಯಕ್ತಪಡಿಸುತ್ತಾರೆ. ಜ್ಞಾಪಕಶಕ್ತಿಯೂ ಅಷ್ಟೇ ಅಸಾಧಾರಣವಾಗಿರುತ್ತದೆ. ತಮ್ಮ ವಯಸ್ಸಿನ ಮಟ್ಟಕ್ಕೂ ಮೀರಿದ ಯೋಜನಾಶಕ್ತಿ, ಕಲ್ಪನಾಲಹರಿ, ಹಾಗೂ ಗ್ರಹಣಶಕ್ತಿಗಳು ಪ್ರತಿಭಾಶಾಲಿ ಮಕ್ಕಳ ವಿಶೇಷ ಲಕ್ಷಣಗಳಾಗಿವೆ.

ಶೈಕ್ಷಣಿಕ ಸಾಧನೆಗಳು ಹಾಗೂ ಶಾಲಾಪ್ರಗತಿ

ಅಧ್ಯಾಪಕರು ಕೊಟ್ಟ ಅಂಕಗಳಲ್ಲಾಗಲೀ, ಸಿದ್ಧಪಡಿಸಿದ ಪರೀಕ್ಷೆಗಳಲ್ಲಾಗಲೀ ಇವರದೇ ಹೆಗ್ಗಳಿಕೆ. ತಮಗಿಂತ ವಯಸ್ಸಾದ ಸಹಪಾಠಿಗಳಿಗಿಂತಲೂ ಹೆಚ್ಚು ಅಂಕಗಳನ್ನು ಗಳಿಸಬಲ್ಲರು. ಆದರೆ ಇವರಲ್ಲಿ ಕಡಿಮೆ ಅಂಕಗಳನ್ನು ಪಡೆಯುವವರೂ ಉಂಟು. ಇದಕ್ಕೆ ಸಾಮಾಜಿಕ, ವೈಯಕ್ತಿಕ ಹಾಗೂ ಆರ್ಥಿಕ ಸಮಸ್ಯೆಗಳು ಕಾರಣ. ಇವುಗಳ ಸೂಕ್ತ ವಿಶ್ಲೇಷಣೆ ಅಗತ್ಯ.

ಆಸಕ್ತಿಗಳು

ಪ್ರತಿಭಾಶಾಲಿಗಳು ತೋರಿಸುವ ಆಸಕ್ತಿಗಳು ವಿವಿಧ ತೆರನಾದುವು. ಇವರಲ್ಲಿ ಕಂಡುಬರುವ ಸಾಮಾನ್ಯ ಹವ್ಯಾಸವೆಂದರೆ ಓದುವಿಕೆ. ಇದರ ಪ್ರಮಾಣ ವಿಷಯಗಳು ಹಾಗೂ ಉದ್ದಗಲಗಳೂ ಅಪಾರವಾದುವು. ಸಾಮಾನ್ಯವಾಗಿ ತನ್ನ ವಯಸ್ಸಿನ ಇತರ ಸಹಪಾಠಿಗಳು ಓದುವುದಕ್ಕಿಂತ ಮೂರರಷ್ಟನ್ನು ಪ್ರತಿಭಾಶಾಲಿ ಮಗು ಓದುತ್ತದೆ! ಅಂಚೆ ಚೀಟಿಗಳು, ಬಗೆ ಬಗೆಯ ಕಲ್ಲುಗಳು, ಚಿತ್ರಗಳು ಇತ್ಯಾದಿಗಳ ಕ್ರಮಬದ್ಧ ಸಂಗ್ರಹಣೆಯಲ್ಲಿ ಇವರದು ಅಪಾರ ಆಸಕ್ತಿ. ತಾವು ಮಾಡುವ ಎಲ್ಲ ಕೆಲಸಗಳಲ್ಲೂ ಅಚ್ಚುಕಟ್ಟಿಗೆ ಹೆಸರಾದವರು ಇವರು. ಗೆಳೆಯರಲ್ಲಿ ಸಾಮಾನ್ಯವಾಗಿ ಕಂಡುಬರುವ ಹವ್ಯಾಸಗಳೂ ಇವರಿಗೆ ವರ್ಜ್ಯವಲ್ಲ.

ಪ್ರತಿಭಾವಂತ ಮಕ್ಕಳಿಗೆ ಮನೆಯ ವಾತಾವರಣ ಪ್ರಚೋದಕವಾಗಿರಬೇಕು. ಆದರೆ ಎಷ್ಟು ಮಂದಿಗೆ ಅಂತಹ ಸೌಭಾಗ್ಯ ದೊರೆತೀತು ? ಆದುದರಿಂದ ಶಾಲೆಗಳು, ಅಧ್ಯಾಪಕರು ಆಸಕ್ತಿ ವಹಿಸಿ, ಚಿಕ್ಕ ವಯಸ್ಸಿನಲ್ಲೇ ಈ ಪ್ರತಿಭಾಶಾಲಿಗಳನ್ನು ಗುರುತಿಸುವ ಶ್ಲಾಘನೀಯ ಕಾರ್ಯ ಮಾಡಬೇಕು. ಇಂತಹ ಸ್ಫೂರ್ತಿಯ ಸೆಲೆಗಳನ್ನು ಸಾಮಾನ್ಯರಂತೆ ಕಂಡು, ಹೀನಾಯವಾಗಿ ನಡೆಸಿಕೊಳ್ಳಬಾರದು. ಇವರಿಗೆ ಕೆಂಪು

ರತ್ನಗಂಬಳಿಯ ವಿಶೇಷ ರಾಜಾತಿಥ್ಯ ಸಿಗಬೇಕು. ಅರ್ಥವಿಲ್ಲದ ಆಚಾರಗಳ ಆಚರಣೆಯಲ್ಲೇ ಹೆಚ್ಚು ಮೈಮರೆಯುವ ಶಾಲೆಗಳಲ್ಲಿ ಈ ಮಕ್ಕಳು ದಿಕ್ಕೆಡುವಂತಾಗಬಾರದು. ಶಾಲೆಗಳನ್ನು ನೆನೆದಾಗ ಈ ಮಕ್ಕಳು ಬೇಸರದಿಂದ ಮುಖ ತಿರುಗಿಸುವಂತಾಗಬಾರದು. ತರಗತಿಗಳಲ್ಲಿ ಗಲಾಟೆ ಮಾಡುವ, ಅಧ್ಯಾಪಕರನ್ನು ಗೋಳು ಗುಟ್ಟಿಸುವ ವಿದ್ಯಾರ್ಥಿಗಳಲ್ಲಿ ಪ್ರತಿಭಾವಂತರದೂ ಒಂದು ಗಣನೀಯ ಪಾಲಿರುತ್ತದೆ ಎಂಬ ಸತ್ಯಾಂಶವನ್ನು ಮರೆಯಬಾರದು. ಅವರಿಗೆ ಬೇಕಾದುದನ್ನು ಕೊಡಲಾಗದ ಅಧ್ಯಾಪಕ, ಗೊತ್ತಿದ್ದನ್ನೇ ತಿರುವಿಹಾಕುವ ನೀರಸವಾದ ಬೋಧನಾವಿಧಾನ, ಕುತೂಹಲವನ್ನು ನೆಲಸಮ ಮಾಡುವ 'ದೀಕ್ಷೆ ತೊಟ್ಟಿರುವ' ಪಠ್ಯಪುಸ್ತಕಗಳು, ಕಾಲಿಗೆ ಸಂಕೋಲೆ ಬಿಗಿಯುವ ಸಾಮಾಜಿಕ ಹಾಗೂ ಆರ್ಥಿಕ ಪರಿಸರ ; ಪ್ರತಿಭೆಯನ್ನು ಗುರುತಿಸದ, ಹಾಗೂ ಪ್ರೋತ್ಸಾಹಿಸದ ಸಾಮಾಜಿಕ ಹಾಗೂ ಶೈಕ್ಷಣಿಕ ವಾತಾವರಣ ಹೀಗೆ ಅನೇಕ ಅಂಶಗಳು ಒಟ್ಟಾಗಿ ಸೇರಿ ಪ್ರತಿಭೆಯನ್ನು ನಾಮಾವಶೇಷ ಮಾಡಲು ಉದ್ಯುಕ್ತವಾಗುತ್ತವೆ. ಆದರೆ ಈ ಬಗೆಯ ಅಂಶಗಳು, ಹಾಗೂ ಅವುಗಳಿಂದುಂಟಾಗುವ ಘೋರ ಪರಿಣಾಮ ಇಡೀ ಮಾನವ ಸಮಾಜದ ಮೇಲಾಗುತ್ತದೆ ಎಂಬುದು ಕಠೋರವಾದ ಸತ್ಯ.

ಶಾಲೆಗಳು ಪ್ರತಿಭಾಶಾಲಿಗಳನ್ನು ಕಾಣುವ ರೀತಿ ಬದಲಾಗಬೇಕು. ಸಾಮಾನ್ಯರಿಗೂ, ಇವರಿಗೂ ಒಂದೇ ರೀತಿ ಶಿಕ್ಷಣೋದ್ದೇಶಗಳು, ಹಾಗೂ ಕಾರ್ಯಕ್ರಮಗಳು ಸಾಧ್ಯವೂ ಅಲ್ಲ, ಸಾಧುವೂ ಅಲ್ಲ ಎಂಬ ವಿಷಯ ಮನದಟ್ಟಾಗಬೇಕು. ಪ್ರತಿಭೆಯ ಲಾಭವನ್ನು ನಿಜವಾಗಿ ಪಡೆಯಬೇಕಾದರೆ ಅಂತಹವರಿಗೆ ಉತ್ತಮ ರೀತಿಯ ಶಿಕ್ಷಣ ನೀಡುವ ಉದ್ದೇಶಗಳು ರೂಪಿತವಾಗಬೇಕು. ಅಂತಹ ಉದ್ದೇಶಗಳನ್ನು ಅವಲಂಬಿಸುವ ಶೈಕ್ಷಣಿಕ ಕಾರ್ಯಕ್ರಮಗಳು ಜಾರಿಗೆ ಬರಬೇಕು. ಶಿಕ್ಷಣ ಆಯೋಗಗಳೂ ಇದೇ ಮಾತನ್ನು ಒತ್ತಿ ಹೇಳುತ್ತಲೇ ಬಂದಿವೆ. ಆದರೆ ಅವುಗಳ ಅನುಷ್ಠಾನ ಎಂದು ಎಂಬುದು ಪ್ರಶ್ನಾರ್ಹ. ಕೇವಲ ವಿದ್ಯಾರ್ಥಿ ವೇತನಗಳನ್ನು ನೀಡಿದರೆ, ಪುಸ್ತಕಗಳನ್ನು ಕೊಟ್ಟರೆ ಪ್ರತಿಭೆಯು ಕೊನರುವುದಿಲ್ಲ!

ಪ್ರತಿಭಾವಂತರಿಗಾಗಿ ರೂಪಿತವಾಗುವ ಶಿಕ್ಷಣದ ಕಾರ್ಯಕ್ರಮಗಳು ಅವರ ಯೋಚನಾಲಹರಿಯನ್ನು ಬೆಳೆಸುವುದರತ್ತ ಗಮನ ನೀಡಬೇಕು. ಕಲ್ಪನೆಗಳ ಪರಸ್ಪರ ಸಂಬಂಧ, ವಿಶ್ಲೇಷಣೆ, ಸಂಶ್ಲೇಷಣೆ, ನೂತನ ಸಂಬಂಧಗಳ ಆವಿಷ್ಕಾರ, ಸಮಸ್ಯೆಗಳಿಗೆ ಸ್ಪಂದಿಸಬಲ್ಲ ಸೂಕ್ಷ್ಮತೆ, ವೈಜ್ಞಾನಿಕ ಮನೋಭಾವ ಇತ್ಯಾದಿ ಗುಣಗಳು ಅವರಲ್ಲಿ ಬೆಳೆಯುವ ಹಾಗಾಗಬೇಕು. ಕಲ್ಪನಾಶಕ್ತಿ ಬೆಳೆಯಬೇಕಾದರೆ ಪ್ರತಿಭಾಶಾಲಿಗಳ ಯೋಜನಾಸಮಯದಲ್ಲಿ ಪರೀಕ್ಷೆಗಳ ಭಯವಿರಬಾರದು ಎಂಬುದೂ ಪರಿಣತರ ಸಲಹೆ. ಪ್ರತಿಭಾವಂತರ ಅಸಂಬದ್ಧವೆನಿಸುವ, ಒರಟಾದ ಆಲೋಚನೆಗಳನ್ನು ಅವರ ಅಧ್ಯಾಪಕರುಗಳು ಸಹಿಸಬೇಕು. ಸಹಿಸಿಕೊಂಡು ಅವರಿಗೆ

ಸೂಕ್ತ ಮಾರ್ಗದರ್ಶನ ಹಾಗೂ ಪ್ರೋತ್ಸಾಹಗಳನ್ನು ಕೊಡಬೇಕು. ಇದು ಅವರ ಆದ್ಯ ಕರ್ತವ್ಯ.

ಕಲ್ಪನೆಗಳು ಶೂನ್ಯದಿಂದ ಮೂಡಲು ಅದೆಂತು ಸಾಧ್ಯ? ಕಲ್ಪನೆಗಳಿಗೆ ಪುಟ ಕೊಡಲು ವಿವಿಧ ವಿಷಯಗಳನ್ನು ಒಳಗೊಂಡ ಸುಸಜ್ಜಿತ ಗ್ರಂಥಭಂಡಾರ ಹಾಗೂ ಪ್ರಯೋಗಾಲಯಗಳು ಇವರ ನೆರವಿಗೆ ಬರಬೇಕು. ಮೇಧಾವಿಗಳ ಯೋಜನಾಲಹರಿ ಅವರಿಗೆ ಚಿಕ್ಕ ವಯಸ್ಸಿನಿಂದಲೂ ದೊರೆತ ವಿಷಯಗಳ ಬಗೆಗಿನ ಕಲ್ಪನೆಗಳ ಕ್ಲಿಷ್ಟತೆಯನ್ನು ಅವಲಂಬಿಸಿರುತ್ತದೆ.

ಸಂಪ್ರದಾಯದ ಸೆರೆಯಲ್ಲೇ ಬೆಳೆದವರಿಗೆ ನೂತನ ವಿಷಯಗಳ ಆವಿಷ್ಕಾರ ಸಾಧ್ಯವಾಗುವುದೇ ಇಲ್ಲ! ನವೀನತೆಯನ್ನು ರೂಪಿಸಲು ಈ ಪ್ರತಿಭಾಶೀಲರು ನೆರವಾಗಬೇಕಾದರೆ ಅಂತಹ ಶಿಕ್ಷಣ ಅವರಿಗೆ ಮೊದಲಿನಿಂದಲೂ ದೊರಕಬೇಕು. ಜ್ಞಾನದ ಗಡಿಯೊಳಕ್ಕೆ ಏಕಾಕಿಗಳಿಗೇ ಪ್ರವೇಶ. ಆದ್ದರಿಂದ ಏಕಾಕಿಯಾಗಿ ಕೆಲಸ ಮಾಡುವ ಹವ್ಯಾಸ ಹಾಗೂ ಅಗತ್ಯವಾದ ಕೌಶಲ್ಯಗಳನ್ನು ಮೊದಲಿನಿಂದಲೂ ಅವರಲ್ಲಿ ಬೆಳೆಸಬೇಕು.

ವ್ಯಕ್ತಿಗಳು ಮಾಡುವ ಕಾರ್ಯ, ಅವರ ಮೇಲೆ ಅವರ ಸುತ್ತಲಿನ ಗುಂಪು ತರುವ ಒತ್ತಡದ ಮೇಲೆ ಅವಲಂಬಿತವಾಗಿರುತ್ತದೆ. ಆ ಗುಂಪಿನಲ್ಲಿ ವ್ಯಕ್ತವಾಗುವ ಹಾಗೂ ಆಚರಣೆಯಲ್ಲಿರುವ ಮೌಲ್ಯಗಳು ಗುಂಪಿನ ಸದಸ್ಯರ ಕಾರ್ಯನಿರ್ವಹಣೆಯ ಶೈಲಿಯನ್ನೂ ನಿರ್ಧರಿಸುತ್ತವೆ. ಆದ್ದರಿಂದ ಪ್ರತಿಭಾಶಾಲಿಗಳು ಗುಂಪಿನ ಒತ್ತಡಕ್ಕೆ ಸಿಕ್ಕಿ ನರಳದಂತೆ ನೋಡಿಕೊಳ್ಳಬೇಕು. ಯಾವುದೇ ತರದ ಗುಂಪು ತನ್ನ ಮೌಲ್ಯಗಳ ಸೀಮಾರೇಖೆಯಿಂದ ಸದಸ್ಯರು ಹೊರ ಹೋಗುವುದನ್ನು ಸಹಿಸದು. ಆದ್ದರಿಂದ ಈ ದಿಸೆಯಲ್ಲಿ ಪ್ರತಿಭಾವಂತರಿಗೆ ನೆರವಾಗುವ ಕಾರ್ಯಕ್ರಮಗಳನ್ನೂ ನಿಯೋಜಿಸಬೇಕು.

ಯಾವುದೇ ಸಂಗತಿಯನ್ನು ಅನೇಕ ದೃಷ್ಟಿಕೋನಗಳಿಂದ ಅಧ್ಯಯನ ಮಾಡಬಹುದಷ್ಟೆ. ಹಾಗೆ ನೋಡುವಾಗ ನಿಷ್ಪಕ್ಷಪಾತ ಮನೋಭಾವ, ಉದ್ವೇಗ ರಹಿತ ವರ್ತನೆ ಅಗತ್ಯ. ಇಂತಹ ಮನೋಭಾವಗಳನ್ನು ಪ್ರತಿಭಾಶೀಲರಲ್ಲಿ ಮೊದಲಿನಿಂದಲೂ ಬೆಳೆಸಬೇಕು. ವೈಜ್ಞಾನಿಕ ದೃಷ್ಟಿ ಅವರ ರಕ್ತದಲ್ಲಿ ಸೇರಿ ಹೋಗಬೇಕು. ಇದರೊಡನೆ ತೃಪ್ತರಾಗದೆ, ಕ್ಷಣಿಕ ಆಸೆ ಆಮಿಷಗಳಿಗೆ ಬಲಿಯಾಗದೆ ತಮ್ಮ ಅನ್ವೇಷಣಾ ಪ್ರವೃತ್ತಿಯನ್ನು ಮುಂದುವರಿಸಿಕೊಂಡು ಹೋಗುವ ಪ್ರವೃತ್ತಿ ಇವರಲ್ಲಿ ಬೆಳೆಯಬೇಕು.

ಉತ್ತಮವಲ್ಲದ ನಾಯಕತ್ವವನ್ನು ಒಪ್ಪದ, ಅದರ ಸೂಕ್ತ ಬದಲಾವಣೆಗೆ ಆಶಿಸುವ, ಅನ್ಯಾಯದ ವಿರುದ್ಧ ಪ್ರತಿಭಟಿಸುವ ಮನೋಭಾವಗಳನ್ನು ಮೊದಲಿನಿಂದಲೇ ಇವರಿಗೆ ಕಲಿಸಬೇಕು. ಇವೆಲ್ಲದಕ್ಕಿಂತ ಮಿಗಿಲಾಗಿ ದೇಶದ, ಇಡೀ ಮಾನವ

ಜನಾಂಗದ ಉನ್ನತಿಗೆ ಕಂಕಣಬದ್ಧರಾಗಿ ನಿಲ್ಲುವ ಎದೆಗಾರಿಕೆ ಇವರಲ್ಲಿ ಮೂಡಿಬರಬೇಕು. ಇದನ್ನು ಅರಿಯುವ ಪ್ರಜ್ಞೆ ಅವರಲ್ಲಿ ಬೆಳೆಯಬೇಕು. ಅಂತಹ ಮನೋಭಾವಗಳನ್ನು ಅವರ ತಂದೆ ತಾಯಿಯರು, ಶಿಕ್ಷಕರು, ಶಾಲೆಗಳು ಹಾಗೂ ಪರಿಸರ ಬಿತ್ತಿ ಬೆಳೆಸಬೇಕು.

ಹಂಪೆಯಲ್ಲಿ

ಡಿ. ಬಿ. ಲಕ್ಷ್ಮೀನಾರಾಯಣ

ಹಂಪೆಯಲ್ಲಿ ಕಾಲಿಟ್ಟೊಡನೆ
ಕಣ್ಣಿಗೆ ಫಳಕ್ಕನೆ
ಬೀಳುವುದು
ಘನ ಸರ್ಕಾರದ ನೀಲಿ ಬೋರ್ಡು
"PROTECTED MONUMENT"
ಕೆಳಗೆ
ಗತ ಇತಿಹಾಸದ
ಜೋಟುದ್ದ ಚರಿತ್ರೆ
ಇನ್ನೂ ಕೆಳಗೆ
ತನ್ನದಾಗಿಸಿಕೊಂಡವರಿಗೆ ಶಿಕ್ಷೆಯೂ
ಸೇರಿದೆ.

ರಥ ಬೀದಿಯಲ್ಲಿ
ಅನಾಥವಾಗಿ ಬಿದ್ದಿರುವ
ಮುರುಕು ರಥದ ಮೇಲೆ
ಕಾಮಶಾಸ್ತ್ರದ ನೂರು ಭಂಗಿ
ರಥದ ನಾಲ್ಕು ಚಕ್ರದಲ್ಲೇ
ಹೂವಾಡ ಗಿತ್ತಿಯು
ಮುಳ್ಳಿನ ಸಂಸಾರದ ಪುಂಗಿ
ಬಂಗಾರ ಮಾರಿ
ಬರಡಾಗಿರುವ
ಛಾವಣಿ ಇಲ್ಲದ ಮಂಟಪದ
ಹಾಳು ಹಾಳು ಬೀದಿ.

ಮುಂದೆ
ಹಿರಣ್ಯಕಶ್ಯಪುವಿನ
ಕರುಳನ್ನೇ ಬಗೆವರೂ

ಶತ್ರುವಿನ ಕತ್ತಿಯಿಂದ
ಪಾರಾಗದೆ
ತೊಡೆ ಮುರಿದು
ಮೆರೆಯುತ್ತಿರುವ
ಉಗ್ರ ನರಸಿಂಹ.

ಫಿರಂಗಿಯ ಮಳೆಯಲ್ಲೂ
ಪನ್ನೀರಿನಲ್ಲಿ ಮೈತೊಳೆದ
ರಾಣಿಯರ
ಸ್ನಾನ ಕೊಳ
ಕಮಲವಂತೆಯೇ
ಚುಂಬಿಸಿ ಕೊಂಡ
ಜಾಗ
ಕಮಲ ಮಹಲ್ಲು.

ನಾಡಿನುಸಿರಾದ
ಮಾರನವಮಿ ಹಬ್ಬ
ವಲ್ಲಿ ಹುಲಿಯಂತೆ ಮೆರೆದ
ಹಾಳು 'ಮಾರನವಮಿ ದಿಬ್ಬ'.

ಇನ್ನೂ ಮುಂದೆ—
ತುಂಗ ಭದ್ರೆಯಲ್ಲಿ ಮುಳುಗಿ
ಶುಭ್ರನಾಗಿ
ಪರಿನಾಮವ ಭಜಿಸಿ
ವರೂ
ರಕ್ಷಿಸಲಾಗದ
ಪುರಂದರ ವಿಠಲನ
ಚಲಿಸಲಾಗದ
'ಕಲ್ಲಿನ ರಥದ' ಹಂಪೆ.
ಕನ್ನಡಿಗರ
ಹಾಳು ಹಾಳು ಕೊಂಪೆ.

ಸೂರ್ಯ ಶಕ್ತಿಗೆ ಕಡಿವಾಣ

ಪಾ. ಸಂ. ವೆಂಕಟಸ್ವಾಮಿ ಶೆಟ್ಟಿ

ಈಚಿನ ದಿನಗಳಲ್ಲಿ ಬೆಳಿಗ್ಗೆ ಎದ್ದ ಕೂಡಲೆ ದಿನ ಪತ್ರಿಕೆಯನ್ನು ಓದಿದಾಗ ಎಲ್ಲರ ಗಮನಕ್ಕೂ ಬರುವ ಒಂದು ವಿಷಯವೆಂದರೆ "ಅಭಾವ, ಕೊರತೆ".

ಆಹಾರದ ಉತ್ಪತ್ತಿ ಕಮ್ಮಿಯಾಗಿ ಕೊರತೆಯುಂಟಾಗಿದೆ. ಕಾಗದದ ಅಭಾವ ದಿಂದಾಗಿ ಹಲವಾರು ಸಣ್ಣ ಪತ್ರಿಕೆಗಳು ನಿಲ್ಲಿಸಲ್ಪಟ್ಟಿವೆ. ದೊಡ್ಡ ಪತ್ರಿಕೆಗಳು ತಮ್ಮ ಪುಟಗಳನ್ನು ಕಡಿಮೆ ಮಾಡಿವೆ. ಸಿಮೆಂಟು ಕಬ್ಬಿಣಗಳ ಅಭಾವದಿಂದ ಅನೇಕ ಕಟ್ಟಡಗಳು ಅರ್ಧಕ್ಕೆ ನಿಂತಿವೆ. ಸೀಮೆಗೊಬ್ಬರ, ದನಗಳ ಮೇವು ಎಲ್ಲಕ್ಕೂ ಅಭಾವ. ಪೆಟ್ರೋಲು ಸೀಮೆ ಎಣ್ಣೆಗಳ ಅಭಾವವಂತೂ ಅವುಗಳ ಬೆಲೆಗಳನ್ನು ಗಗನಕ್ಕೆ ಏರಿಸಿ ಬಿಟ್ಟಿವೆ. ಮಳೆಯ ಅಭಾವದಿಂದ ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನ ಕೊರತೆ ಉಂಟಾಗಿ ವಿದ್ಯುಚ್ಛಕ್ತಿಯ ಉಪಯೋಗದ ಮೇಲೆ ನಿಯಂತ್ರಣ ತಂದಿದ್ದಾರೆ.

ಈ ವಿಷಯಗಳೆಲ್ಲ ಪ್ರತಿ ದಿನದ ಮಾತಾಗಿದೆ. ಅನೇಕ ಸಲ ಹಗುರವಾಗಿ ಮಾತನಾಡುವಾಗ ಅಭಾವವಿಲ್ಲದ ಒಂದೇ ಒಂದು ಸಂಗತಿ ಎಂದರೆ "ಜನಸಂಖ್ಯೆ" ಎಂದು ಹೇಳುವುದೂ ಸಾಮಾನ್ಯವಾಗಿದೆ.

ಪ್ರಪಂಚದ ಮೇಲೆ ಮಾನವ ಬದುಕಿರುವುದಕ್ಕೆ ಅತ್ಯವಶ್ಯಕವಾಗಿ ಬೇಕಾಗಿರು ವುದು ಶಕ್ತಿ. ಈ ಶಕ್ತಿ ಸಾಮಾನ್ಯವಾಗಿ ಎರಡು ರೂಪದಲ್ಲಿ ಬಳಕೆಯಲ್ಲಿದೆ. ಮೊದಲನೆಯದು ಶಾಖ. ಎರಡನೆಯದು ವಿದ್ಯುಚ್ಛಕ್ತಿ. ಶಾಖವನ್ನು ವಿದ್ಯುಚ್ಛಕ್ತಿ ಯಾಗಿಯೂ, ವಿದ್ಯುಚ್ಛಕ್ತಿಯನ್ನು ಶಾಖವಾಗಿಯೂ ಮಾರ್ಪಡಿಸಬಹುದು.

ಮಾನವನ ಉಳಿವಿಗೆ ಶಕ್ತಿಯು ಶಾಖದ ರೂಪದಲ್ಲೇ ಇರಬೇಕು. ಸೂರ್ಯನ ಬಿಸಿಲಾಗಲಿ, ನಾವು ತಿನ್ನುವ ಆಹಾರವಾಗಲಿ, ತೊಡುವ ಉಡುಪಾಗಲಿ ನಮ್ಮ ಶರೀರಕ್ಕೆ ಬೇಕಾದ ಶಾಖವನ್ನು ಒದಗಿಸಿ ಕೊಡುವುದೇ ಆಗಿದೆ. ಇಂದಿನ ನಾಗರೀ ಕತೆಯ ಬೆನ್ನೆಲುಬೂ ಶಕ್ತಿಯೇ ಆಗಿದೆ. ಪ್ರಪಂಚದಲ್ಲಿರುವ ಲಕ್ಷಾಂತರ ಕಾರ್ಖಾನೆಗಳು ವಿದ್ಯುಚ್ಛಕ್ತಿಯ ಶಕ್ತಿಯಿಂದಲೇ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಈಗೀ ಗಂತೂ ವ್ಯವಸಾಯಕ್ಕೆ ನೀರು ಹಾಯಿಸಲು, ಮನೆ ಬೆಚ್ಚಗಿಡಲು, ಅಡಿಗೆ ಮಾಡುವು ದಕ್ಕಿರಲಿ ಹಿಟ್ಟು ರುಬ್ಬುವುದಕ್ಕೂ ಸಹ ವಿದ್ಯುಚ್ಛಕ್ತಿಯ ಉಪಯೋಗವಾಗುತ್ತಿದೆ. ಆದುದರಿಂದ ಜೀವನದ ಎಲ್ಲ ಚಟುವಟಿಕೆಗಳಿಗೂ ವಿದ್ಯುಚ್ಛಕ್ತಿಯೇ ಕಾರಣವೆಂದರೆ ತಪ್ಪಾಗುವುದಿಲ್ಲ.

ವಿದ್ಯುಚ್ಛಕ್ತಿಯನ್ನು ಎರಡು ವಿಧವಲ್ಲಿ ಉತ್ಪತ್ತಿಮಾಡುತ್ತಿದ್ದಾರೆ. ಮೊದಲನೆಯದಾಗಿ ಎತ್ತರದಲ್ಲಿರುವ ನೀರು ಕೆಳಗೆ ಬೀಳುವಾಗ ಅದರ ಶಕ್ತಿಯನ್ನು ಉಪಯೋಗಿಸಿಕೊಂಡು ವಿದ್ಯುಚ್ಛಕ್ತಿ ಉತ್ಪತ್ತಿಮಾಡುತ್ತಾರೆ. ಶಿವನ ಸಮುದ್ರ, ಲಿಂಗನಮಕ್ಕಿ ಜಲಾಶಯಗಳು ಇದಕ್ಕೆ ಉದಾಹರಣೆ. ಎರಡನೆಯದಾಗಿ ಕಲ್ಲಿದ್ದಲಿನ ಸಹಾಯದಿಂದ ಹಬೆಯಂತ್ರವನ್ನು ನಡೆಸಿ ತನ್ಮೂಲಕ ವಿದ್ಯುಚ್ಛಕ್ತಿಯ ಉತ್ಪಾದನೆ ಅಥವ ಪೆಟ್ರೋಲು, ಡೀಸೆಲ್ಲು ಮುಂತಾದ ಎಣ್ಣೆಗಳಿಂದ ಯಂತ್ರಗಳನ್ನು ನಡೆಸಿ ವಿದ್ಯುಚ್ಛಕ್ತಿ ಉತ್ಪಾದನೆ. ಕಲ್ಲಿದ್ದಲು ಮತ್ತು ಎಣ್ಣೆಗಳು ಭೂಮಿಯ ಒಳಗಡೆ ದೊರಕುವ ವಸ್ತುಗಳು. ಇವು ಬ್ಯಾಂಕಿನಲ್ಲಿಟ್ಟಿರುವ ಹಣದಂತೆ ಉಪಯೋಗಿಸುತ್ತ ಹೋದರೆ ಒಂದು ದಿನ ದಿವಾಳಿಯಾಗಬೇಕಾಗುತ್ತದೆ. ಆದುದರಿಂದ ಈ ಮೂಲ ವನ್ನು ಹೆಚ್ಚಾಗಿ ನಂಬುವುದು ಒಳ್ಳೆಯದಲ್ಲ. ಧುಮುಕುವ ನೀರಿನಿಂದ ಉತ್ಪಾದಿಸುವ ವಿದ್ಯುಚ್ಛಕ್ತಿಗೂ ಒಂದು ಮಿತಿ ಇದೆ. ಪ್ರಪಂಚದಲ್ಲಿ ಎಲ್ಲೆಲ್ಲಿ ನೀರು ಧುಮುಕುವುದೋ ಅಲ್ಲೆಲ್ಲಾ ವಿದ್ಯುಕ್ತಿಯನ್ನು ಉತ್ಪಾದಿಸಿದಮೇಲೆ ಈ ಮೂಲವೂ ಕೊನೆಗೊಳ್ಳುವುದು.

ಪ್ರಪಂಚದಲ್ಲಿ ಶಕ್ತಿಯ ಬಳಕೆ ದಿನ ದಿನಕ್ಕೆ ಹೆಚ್ಚುತ್ತಿದೆ. ಪ್ರತಿ ವ್ಯಕ್ತಿಗೂ ಪ್ರತಿ ದಿನವೂ ಅತ್ಯವಶ್ಯಕವಾಗಿ ಸುಮಾರು 12,500 ಬ್ರಿಟಿಷ್ ಥರ್ಮಲ್ ಯೂನಿಟ್ಟುಗಳಷ್ಟು ಶಕ್ತಿಬೇಕು. ಆದರೆ ಅಮೆರಿಕದಲ್ಲಿ 1970 ರಲ್ಲಿ ಪ್ರತಿ ವ್ಯಕ್ತಿಯೂ ಪ್ರತಿ ದಿನವೂ ಸುಮಾರು ಹತ್ತು ಲಕ್ಷ ಬ್ರಿಟಿಷ್ ಥರ್ಮಲ್ ಯೂನಿಟ್ಟುಗಳಷ್ಟು ಶಕ್ತಿಯನ್ನು ಉಪಯೋಗಿಸುತ್ತಿದ್ದನು. ಅಂದರೆ ಒಂದು ವ್ಯಕ್ತಿ 80 ವ್ಯಕ್ತಿಗಳಿಗೆ ಬೇಕಾಗುವ ಶಕ್ತಿಯನ್ನು ಉಪಯೋಗಿಸುತ್ತಿದ್ದ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳಬಹುದು. ಪ್ರತಿಯೊಬ್ಬ ಅಮೆರಿಕದ ವ್ಯಕ್ತಿಯು ತನ್ನ ನಾಗರಿಕ ಜೀವನವನ್ನು ನಡೆಸುವುದಕ್ಕಾಗಿ 80 ಗುಲಾಮರ ಸೇವೆಗೆ ಸಮನಾದ ಶಕ್ತಿಯನ್ನು ಪಡೆಯುತ್ತಿದ್ದನು. ಈಗಂತೂ ಶಕ್ತಿಯ ಉಪಯೋಗ ಇನ್ನೂ ಹೆಚ್ಚಾಗಿದೆ. ಜನಸಂಖ್ಯೆಯ ಸರಾಸರಿ ಏರಿಕೆ ಮತ್ತು ಶಕ್ತಿಯ ಬಳಕೆಯ ಏರಿಕೆ ಎರಡನ್ನೂ ಹೋಲಿಸಿದರೆ ಶಕ್ತಿಯ ಬಳಕೆಯ ಏರಿಕೆ ಜನಸಂಖ್ಯೆಯ ಏರಿಕೆಗಿಂತ ಹೆಚ್ಚಾಗಿದೆ ಎಂದು ಗೊತ್ತಾಗಿದೆ. ಎರಡನೆಯದಾಗಿ ಶಕ್ತಿಯ ಬಳಕೆಯ ಏರಿಕೆಯನ್ನು ಶಕ್ತಿಯ ಉತ್ಪಾದನೆಯ ಏರಿಕೆಯೊಂದಿಗೆ ಹೋಲಿಸಿದರೆ ಉತ್ಪಾದನೆಯ ಏರಿಕೆಯು ಬಳಕೆಯ ಏರಿಕೆಗಿಂತ ಕಡಿಮೆಯಾಗಿದೆಯೆಂದು ತಿಳಿದುಬಂದಿದೆ. ಈ ವಿಷಯಗಳನ್ನೆಲ್ಲ ಗಣನೆಗೆ ತೆಗೆದುಕೊಂಡರೆ ನಮಗೆ ತಿಳಿದು ಬರುವುದು ಇಷ್ಟೆ.

ಸುಮಾರು ಕ್ರಿಸ್ತಶಕ 2000 ದ ಹೊತ್ತಿಗೆ ಈ ಶಕ್ತಿ ಮೂಲಗಳು ಪ್ರಪಂಚಕ್ಕೆ ಅಂದು ಬೇಕಾಗುವ ಶಕ್ತಿಯನ್ನು ಒದಗಿಸಲಾರವು. ಆದಕ್ಕಾಗಿ ಈಗಿನಿಂದಲೇ ಶಕ್ತಿಯ ಹೊಸ ಹೊಸ ಮೂಲಗಳನ್ನು ಕಂಡುಹಿಡಿದರೆ ಉತ್ತಮ.

ಈ ಹೊಸ ಮೂಲಗಳು ನಾಲ್ಕು: ಭೂಮಿಯ ಬಸಿರಲ್ಲಿರುವ ಶಾಖದ ಶಕ್ತಿ, ಯಥೇಚ್ಛವಾಗಿ ದೊರೆಯುವ ಮರಳಿನಲ್ಲಿರುವ ಥೋರಿಯಂ ಲೋಹ, ಸಮುದ್ರದ ನೀರಿನಲ್ಲಿರುವ ಲಿಥಿಯಂ ಮತ್ತು ಡಿಯುಟೇರಿಯಂ ವಸ್ತುಗಳು. ಕೊನೆಯದಾಗಿ ಸೂರ್ಯನಿಂದ ಬರುವ ಬೆಳಕು ಮತ್ತು ಶಾಖ.

ಭೂಮಿಯ ಬಸಿರಿನ ಶಾಖವನ್ನು ಕೆಲವು ದೇಶಗಳಲ್ಲಿ ಮಾತ್ರ ಲಾಭದಾಯಕವಾಗಿ ಶಕ್ತಿಯ ರೂಪಕ್ಕೆ ಮಾರ್ಪಡಿಸಬಹುದು. ಅದರಿಂದ ಎಲ್ಲ ಮಾನವರಿಗೂ ಉಪಯೋಗ ಆಗುವುದಿಲ್ಲ. ಥೋರಿಯಂನ ಅಣುಶಕ್ತಿಯಿಂದ ವಿದ್ಯುತ್ ಉತ್ಪಾದನೆಯೂ ಸಹ ಸಾಮಾನ್ಯ ಜನರ ಉಪಯೋಗಕ್ಕೆ ಅನುಕೂಲವಾಗುವಂತೆ ತಯಾರಿಸಲು ಇನ್ನೂ ಅನೇಕ ವರ್ಷಗಳು ಬೇಕಾಗುವುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಲಿಥಿಯಂ ಮತ್ತು ಡಿಯುಟೇರಿಯಂಗಳಿಂದ ಜಲಜನಕದ ಬಾಂಬಿನ ತಂತ್ರವನ್ನು ಉಪಯೋಗಿಸಿ ಅಪಾಯಕರವಲ್ಲದ ಶಕ್ತಿಯನ್ನು ಉತ್ಪಾದಿಸಲು ಇನ್ನೂ 70–80 ವರ್ಷಗಳು ಬೇಕಾಗಬಹುದೆಂದು ವಿಜ್ಞಾನಿಗಳು ತಿಳಿಸಿದ್ದಾರೆ. ಇನ್ನು ಉಳಿದಿರುವ ಒಂದೇ ಒಂದು ಶಕ್ತಿಯ ಮೂಲವೆಂದರೆ ಸೂರ್ಯನಿಂದ ಬರುವ ಶಾಖ. ಇದರ ಬಗ್ಗೆ ಅನೇಕ ಸಂಶೋಧನೆಗಳು ನಡೆಯುತ್ತಿವೆ.

ಸೂರ್ಯನಿಂದ ಭೂಮಿಯನ್ನು ಸೇರುತ್ತಿರುವ ಶಕ್ತಿಯ ಅಗಾಧತೆಯನ್ನು ನೋಡಿ ಅಸಂಖ್ಯಾತ ಜನರು ಆಕರ್ಷಿತರಾಗಿದ್ದಾರೆ. ಇವರಲ್ಲಿ ವಿಚಾರಪೂರ್ಣರಾದ ವಿಜ್ಞಾನಿ ಮತ್ತು ಇಂಜನಿಯರುಗಳಿಂದ ಹಿಡಿದು ಅರೆಹುಚ್ಚರವರೆಗೆ ಎಲ್ಲ ವಿಧವಾದ ವ್ಯಕ್ತಿಗಳೂ ಇದ್ದಾರೆ. ನಮ್ಮ ಶಕ್ತಿಯ ಅಗತ್ಯತೆಗಳಿಗೆ ಸೂರ್ಯನ ಶಾಖವನ್ನು ಏಕೆ ಉಪಯೋಗಿಸಿಕೊಳ್ಳಬಾರದು ಎಂಬುದೇ ಇವರೆಲ್ಲರ ಪ್ರಶ್ನೆ.

ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಇಡೀ ಒಂದು ವರ್ಷದಲ್ಲಿ ಬಳಸಲಾಗುವ ಶಕ್ತಿಯನ್ನು ಅದೇ ದೇಶದ ಭೂಮಿಯ ಮೇಲೆ ಬೀಳುವ ಸೂರ್ಯನ ಶಾಖದಿಂದ ಸುಮಾರು ಎರಡು ಘಂಟೆಗಳಲ್ಲಿ ಪಡೆಯಬಹುದೆಂದು ಅಂದಾಜು ಮಾಡಿದ್ದಾರೆ. ಈ ಅಂದಾಜು ನಿಜವಾಗಬೇಕಾದರೆ ಎರಡು ಷರತ್ತುಗಳಿಗೆ ಒಳಪಡಬೇಕು. ಮೊದಲನೆಯದಾಗಿ ಭೂಮಿಯ ಸುತ್ತಲೂ ಇರುವ ವಾತಾವರಣ ಸೂರ್ಯನಿಂದ ಬರುವ ಶಾಖವನ್ನು ಹೀರಿಕೊಳ್ಳಬಾರದು. ಎರಡನೆಯದಾಗಿ ಸೂರ್ಯ ಶಾಖವನ್ನು ಶಕ್ತಿಯಾಗಿ ಮಾರ್ಪಡಿಸುವ ದಕ್ಷತೆ ನೂರಕ್ಕೆ ನೂರು ಇರಬೇಕು. ಈ ಷರತ್ತುಗಳನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಆದುದರಿಂದ ಈ ಲೆಕ್ಕಾಚಾರ ಅಷ್ಟು ಸರಿಯಲ್ಲ. ಸರಿಯಾದ ಲೆಕ್ಕಾಚಾರದ ಪ್ರಕಾರ ಸಂಯುಕ್ತ ಸಂಸ್ಥಾನಗಳ ಭೂಮಿಯ ಮೇಲೆ ಬೀಳುವ ಸೂರ್ಯ ಶಾಖದಿಂದ ಉತ್ಪತ್ತಿ ಮಾಡಬಹುದಾದ ಶಕ್ತಿಯು ಆ ದೇಶದ ಇಂದಿನ ಶಕ್ತಿಯ ಬೇಡಿಕೆಯ 150 ರಷ್ಟು ಮಾತ್ರ ಇರುತ್ತದೆ. ಸಂಯುಕ್ತ ಸಂಸ್ಥಾನಗಳಲ್ಲೇ ಇಷ್ಟು ಸೂರ್ಯ ಶಕ್ತಿ ಇರಬೇಕಾದರೆ ಇನ್ನೂ ಹೆಚ್ಚು ಬಿಸಿಲು

ದೇಶಗಳಾದ ಭಾರತ ಆಫ್ರಿಕಗಳಲ್ಲಿ ಸೂರ್ಯ ಶಕ್ತಿಯ ಪ್ರಮಾಣ ಅದ್ಭುತವಾಗಿರಬೇಕು. ಮತ್ತೊಂದು ಅಂದಾಜಿನ ಪ್ರಕಾರ ಇಡೀ ಪ್ರಪಂಚದಲ್ಲಿ ಈಗ ಬಳಸಲ್ಪಡುತ್ತಿರುವ ಶಕ್ತಿಯು ಸೂರ್ಯನಿಂದ ಭೂಮಿಯ ಮೇಲೆ ಬೀಳುತ್ತಿರುವ ಶಕ್ತಿಯಲ್ಲಿ ಆರು ಸಾವಿರ ದಲ್ಲಿ ಒಂದು (1/6000) ಭಾಗ ಮಾತ್ರ. ಅಂದರೆ ನಮಗೆ ದೊರೆಯುತ್ತಿರುವ ಸೂರ್ಯನ ಎಲ್ಲ ಶಕ್ತಿಯನ್ನೂ ನಾವು ಉಪಯೋಗಿಸಿಕೊಂಡರೆ ಈಗ ನಾವು ಬಳಸು ತ್ತಿರುವ ಶಕ್ತಿಯ 6000 ರಷ್ಟು ಶಕ್ತಿ ದೊರೆಯುತ್ತದೆ ಎಂದಾಯಿತು. ಇದರ ಅರ್ಥ ಇಷ್ಟೆ. ಸೂರ್ಯ ಶಕ್ತಿಯನ್ನು ನಾವು ಸರಿಯಾಗಿ ಉಪಯೋಗಿಸಿಕೊಂಡರೆ ನಮಗೆ ಸಹಸ್ರಾರು ವರ್ಷಗಳು ಶಕ್ತಿಯ ಕೊರತೆಯೇ ಉಂಟಾಗುವುದಿಲ್ಲ. ಆದರೆ ಸೂರ್ಯ ಶಕ್ತಿಗೆ ಕಡಿವಾಣ ಹಾಕಿ ನಮಗೆ ಬೇಕಾದಂತೆ ಬಳಸಿಕೊಳ್ಳಲು ಸಾಧ್ಯವೆ ಎನ್ನುವುದನ್ನು ವಿಚಾರಿಸೋಣ.

ಸೂರ್ಯ ಶಕ್ತಿಯನ್ನು ಅದರ ಗುಣ ಮತ್ತು ಪ್ರಮಾಣಗಳ ದೃಷ್ಟಿಯಿಂದ ನೋಡೋಣ. ಗುಣವಟ್ಟವನ್ನು ಗಮನಿಸಿದರೆ ಸೂರ್ಯಶಾಖವನ್ನು ಬಹು ಸುಲಭವಾಗಿ ಶಕ್ತಿಯಾಗಿ ಪರಿವರ್ತಿಸಬಹುದು. ಭೂಮಿಯನ್ನು ಸೇರುವ ಸೂರ್ಯ ಶಾಖದ ಪ್ರಮಾಣವನ್ನು 'ಸೋಲಾರ್ ಕಾನ್‌ಸ್ಟೆಂಟ್' ಎಂಬ ಅಂಕಿಯಿಂದ ತಿಳಿಯಬಹುದು. ಭೂಮಿಯ ವಾತಾವರಣದ ಹೊರಗಡೆ ಒಂದು ಚದುರ ಏಕಮಾನದ ಮೇಲೆ ಲಂಬ ವಾಗಿ ಬೀಳುವ ಸೂರ್ಯನ ಶಾಖವೇ "ಸೋಲಾರ್ ಕಾನ್‌ಸ್ಟೆಂಟ್". ಇದು ಒಂದು ಚದುರಡಿಗೆ 430 ಬ್ರಿಟಿಷ್ ಥರ್ಮಲ್ ಯೂನಿಟ್‌ಗಳು. ಅಂದರೆ ಈ ಶಾಖ ಅಷ್ಟೇನೂ ಹೆಚ್ಚಿನದಲ್ಲವೆಂದು ತಿಳಿದುಬರುತ್ತದೆ. ಏಕೆಂದರೆ ಒಂದು ಹಬೆಯ ಹಂಡೆಯ ಶಾಖವು ಇದರ 500 ರಷ್ಟಿರುತ್ತದೆ. ಆದುದರಿಂದ ಸೂರ್ಯ ಶಾಖವನ್ನು ಸಂಚಯಿಸಿ ಅಗಾಧವಾದ ಕೆಲಸಗಳನ್ನು ಮಾಡಲಾಗುವುದಿಲ್ಲ. ಏನಿದ್ದರೂ ಸ್ವಲ್ಪ ಸ್ವಲ್ಪ ವಾಗಿ ಕೂಡಿಟ್ಟು ಸಣ್ಣ ಸಣ್ಣ ಕೆಲಸಗಳನ್ನು ಮಾತ್ರ ಮಾಡಬಹುದು. (೧) ಒಂದು ಮನೆಯಲ್ಲಿ ಉಪಯೋಗಕ್ಕೆ ಬೇಕಾಗುವ ಬಿಸಿ ನೀರನ್ನು ತಯಾರಿಸಲು ಸೂರ್ಯ ಶಾಖ ವನ್ನು ಉಪಯೋಗಿಸುವುದು ಈಗ ಕೆಲವು ದೇಶಗಳಲ್ಲಿ ಆರ್ಥಿಕವಾಗಿ ಪ್ರಾಮುಖ್ಯತೆ ಪಡೆದಿದೆ. ಮನೆಯನ್ನು ಬೆಚ್ಚಗಿಡಲು ಸೂರ್ಯ ಶಾಖದ ಉಪಯೋಗ ಸಾಧ್ಯವೆಂದು ಮತ್ತೆ ಕೆಲವು ಕಡೆ ತಿಳಿದುಬಂದಿದೆ. (೨) ಎಲ್ಲಿ ಪೆಟ್ರೋಲು ಮುಂತಾದುವುಗಳ ಬೆಲೆ ವಿಪರೀತ ಹೆಚ್ಚಾಗಿದೆಯೋ ಅಲ್ಲಿ ಸೂರ್ಯ ಶಾಖದಿಂದ ಸಮುದ್ರದ ಉಪ್ಪುನೀರನ್ನು ಭಟ್ಟಿ ಇಳಿಸಿ ಕುಡಿಯುವ ಸಿಹಿನೀರಾಗಿ ಪರಿವರ್ತಿಸುವುದು ಆರ್ಥಿಕವಾಗಿ ಸಾಧುವೆಂದು ತಿಳಿದುಬಂದಿದೆ. (೩) ತೇಜೋ ವಿದ್ಯುತ್ ಕೋಶಗಳನ್ನು ಉಪಯೋಗಿಸಿ ಸೂರ್ಯ ಶಾಖವನ್ನು ವಿದ್ಯುಚ್ಛಕ್ತಿಯಾಗಿ ಪರಿವರ್ತಿಸುವುದು ಈಗ ಎಲ್ಲ ವಿಜ್ಞಾನಿಗಳ ಗಮನ ಸೆಳೆದಿರತಕ್ಕ ವಿಷಯ ಆಗಿದೆ.

ಸೂರ್ಯ ಶಾಖದಿಂದ ಮನೆಯನ್ನು ಬೆಚ್ಚಗಿಡಲು ಅಥವ ಶಕ್ತಿಯನ್ನು ಉತ್ಪಾದಿಸಲು Flat plate collector ಅಂದರೆ ಸಮತಲದ ತಗಡಿನ ಉಪಯೋಗದ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿದೆ. ಮನೆಗಳ ಛಾವಣಿಗಳಿಗೆ ಈ ಸಮತಲದ ತಗಡನ್ನು ಉಪಯೋಗಿಸುತ್ತಾರೆ. ಇವುಗಳ ಮೇಲೆ ಬಿದ್ದ ಸೂರ್ಯ ಶಾಖವು ನೀರನ್ನೋ ಗಾಳಿಯನ್ನೋ ಕಾಯಿಸುತ್ತದೆ. ಹೀಗೆ ಕಾದ ನೀರು ಅಥವ ಗಾಳಿಯನ್ನು ಒಂದು ಕಡೆ ಶೇಖರಿಸಿಟ್ಟು ಮನೆಗೆ ಶಾಖ ಬೇಕಾದಾಗ ಅದನ್ನು ಹಾಯಿಸಿಕೊಳ್ಳಬೇಕು. ಶೇಖರಿಸಿಡುವ ಶಾಖ ಮನೆಗೆ ಸೂರ್ಯನಿಲ್ಲದ ಛಳಿಗಾಲದ ಒಂದು ದಿನಕ್ಕೆ ಮಾತ್ರ ಸಾಕಾಗಬಹುದು. ಶಕ್ತಿಯ ಉತ್ಪಾದನೆಯಲ್ಲಿ ಇದರ ದಕ್ಷತೆ ಬಹಳ ಕಡಿಮೆ. ಅತಿಯಾದ ಬಿಸಿಲಿರುವ ಕಡೆ ಶೇಕಡ 4ರಷ್ಟು ಮಾತ್ರ ಶಕ್ತಿಯಾಗಿ ಮಾರ್ಪಡುತ್ತದೆ. ಕಪ್ಪು ಬಳಿದಿರುವ ತಗಡನ್ನು ಉಪಯೋಗಿಸುವುದರಿಂದ ಇದರ ದಕ್ಷತೆ ಶೇಕಡ 10ರ ವರೆಗೆ ಏರಬಹುದು. ಆದರೂ ಇತರ ಶಕ್ತಿ ಉತ್ಪಾದನೆಯ ಮಾರ್ಗಗಳ ಜೊತೆ ಹೋಲಿಸಿದರೆ ಇದು ವಿಪರೀತ ದುಬಾರಿಯಾಗುತ್ತದೆ. ಹತ್ತು ಲಕ್ಷ ಬ್ರಿಟಿಷ್ ಥರ್ಮಲ್ ಯೂನಿಟ್ಟುಗಳನ್ನು ಪಡೆಯಲು ಸುಮಾರು 10 ರೂ.ನಿಂದ 40 ರೂ. ವರೆಗೆ ಖರ್ಚು ಬೀಳುತ್ತದೆ. ಪ್ರತಿದಿನ ಒಂದು ಚದುರಡಿ ವಿಸ್ತೀರ್ಣಕ್ಕೆ 1,400 ರಿಂದ 2,200 ಬ್ರಿಟಿಷ್ ಥರ್ಮಲ್ ಯೂನಿಟ್‌ಗಳಷ್ಟು ಶಕ್ತಿಯನ್ನು ಉತ್ಪಾದಿಸಬಹುದು. ಆದರೆ ಕಲ್ಲಿದ್ದಲು ದ್ರವ ಅಥವ ಅನಿಲ ಇಂಧನಗಳಿಂದ ಶಕ್ತಿಯನ್ನು ಪಡೆದರೆ ಇದಕ್ಕಿಂತಲೂ ಬಹುಪಾಲು ಅಗ್ಗವಾಗಿರುತ್ತದೆ. ಅಮೆರಿಕದ ಎಂಟು ವಿವಿಧ ಸ್ಥಳಗಳಲ್ಲಿ ಒಂದು ಸಮೀಕ್ಷೆ ನಡೆಸಿದರು. ಅದರಿಂದ ಒಂದು ಸ್ಥಳ ಬಿಟ್ಟು ಮಿಕ್ಕೆಲ್ಲ ಸ್ಥಳಗಳಲ್ಲೂ ಅನಿಲ ಅಥವ ಎಣ್ಣೆಯ ಸಹಾಯದಿಂದ ಮನೆಯನ್ನು ಶಾಖವಾಗಿಡುವುದು ಸೂರ್ಯ ಶಾಖ ಉಪಯೋಗಿಸುವುದಕ್ಕಿಂತ ಅಗ್ಗವಾಗಿರುವುದೆಂದು ತಿಳಿದುಬಂದಿತು. ಆದುದರಿಂದ ಸಮತಲದ ತಗಡಿನ ಉಪಯೋಗದ ಭವ್ಯಕನಸನ್ನು ಕಂಡರೂ ಅದು ವ್ಯವಹಾರ ಯೋಗ್ಯವಲ್ಲವೆಂದು ಕಾಣುತ್ತದೆ. ಅನೇಕ ಸಲ ಖರ್ಚು ಎಷ್ಟಾದರೂ ಪರವಾಯಿಲ್ಲ, ಅನುಕೂಲ ಮಾತ್ರ ಬೇಕು ಎನ್ನುವ ಸೂತ್ರ ಬಳಕೆಯಲ್ಲಿರುತ್ತದೆ. ಅಂತಹ ಕಡೆ ಸೂರ್ಯ ಶಾಖವನ್ನು ಶಕ್ತಿಯಾಗಿ ಪರಿವರ್ತಿಸುವುದು ದುಬಾರಿಯಾದರೂ, ಮನೆ ಬೆಚ್ಚಗಿಡಲು ಆಹಾರವನ್ನು ಒಣಗಿಸಲು ನೀರನ್ನು ಬಿಸಿಮಾಡಲು ಉಪಯೋಗಿಸಬಹುದು. ಪ್ರಪಂಚದಲ್ಲಿ ಈ ಪದ್ಧತಿ ಪ್ರಾಮುಖ್ಯತೆ ಗಳಿಸಬಹುದಾದ ಅನೇಕ ಪ್ರದೇಶಗಳಿವೆ.

ಹಿಂದಿನ ಶತಮಾನದ ಕೊನೆಯಲ್ಲೂ ಈ ಶತಮಾನದ ಆದಿಯಲ್ಲೂ ಸೂರ್ಯ ಶಾಖದಿಂದ ಶಕ್ತಿಯನ್ನು ಉತ್ಪಾದಿಸಬಲ್ಲ ಯಂತ್ರಗಳಿಗೆ ಹೆಚ್ಚಿನ ಗಮನ ಕೊಟ್ಟಿದ್ದರು. ಈಗಲೂ ಅಮೆರಿಕ, ಫ್ರಾನ್ಸ್, ಈಜಿಪ್ಟ್ ಮತ್ತು ರಷ್ಯ ದೇಶಗಳಲ್ಲಿ ಈ ಪ್ರಯತ್ನಗಳು ನಡೆದಿವೆ. ಅನೇಕ ಆಕಾರದ ನಿಮ್ನ ದರ್ಪಣಗಳಿಂದ ಸೂರ್ಯನ ಶಾಖವನ್ನು

ಕೇಂದ್ರೀಕರಿಸಿ ಹಂಡೆಗಳ ಮೇಲ್ಮೈ ಮೇಲೆ ಹಾಯಿಸಿದಾಗ ಹಂಡೆಯಲ್ಲಿ ನೀರು ಕುದಿಯಲಾರಂಭಿಸಿ ಹಬೆ ಉತ್ಪತ್ತಿಯಾಗುತ್ತದೆ. ಈ ಹಬೆಯನ್ನು ಉಪಯೋಗಿಸಿ ಕೊಂಡು ಹಬೆಯಂತ್ರವನ್ನು ನಡೆಸುವ ಮೂಲಕ ವಿದ್ಯುಚ್ಛಕ್ತಿ ಉತ್ಪಾದನೆ ಮಾಡು ವುದೇ ಇವರ ಉದ್ದೇಶ. ಇವರಲ್ಲಿ ಎರಡು ತೊಂದರೆಗಳಿವೆ. ಮೊದಲನೆಯದಾಗಿ ನಿಮ್ನ ದರ್ಪಣಗಳು ಸೂರ್ಯನ ಗತಿಯನ್ನೇ ಅನುಸರಿಸುವುದಕ್ಕೋಸ್ಕರ ಬೇಕಾದ ವ್ಯವಸ್ಥೆ ಯನ್ನು ಮಾಡಲು ವಿಪರೀತ ಖರ್ಚಾಗುತ್ತಿದೆ. ಎರಡನೆಯದಾಗಿ ಸೂರ್ಯನ ಶಾಖ ದಲ್ಲಿ ಬಹಳಷ್ಟು ಭಾಗ ಕೇಂದ್ರೀಕರಣಕ್ಕೆ ಸಿಗದೆ ತಪ್ಪಿಸಿಕೊಂಡುಬಿಡುತ್ತದೆ. ಫ್ರಾನ್ಸ್ ದೇಶದವರು ಇಂತಹ ಒಂದು ಯಂತ್ರವನ್ನು ತಯಾರಿಸಿದ್ದರು. ಇದರಿಂದ ಕೈಗಾ ರಿಕಾ ಉಪಯೋಗಕ್ಕೆ ಸೂರ್ಯನ ಶಾಖವನ್ನು ಉಪಯೋಗಿಸಬಹುದೆಂದು ಆಸೆ ಅಂಕು ರಿಸಿತ್ತು. ಆದರೆ ಅದು ಹೆಚ್ಚು ಶಾಖದ ಸಂಶೋಧನಾ ಪರಿಕರಣವಾಗಿ ಮಾತ್ರ ಉಳಿ ಯಿತು. ದೆಹಲಿಯಲ್ಲಿ ರಾಷ್ಟ್ರೀಯ ಭೌತಶಾಸ್ತ್ರ ಪ್ರಯೋಗಾಲಯವಿದೆ. ಹಲವು ವರ್ಷಗಳ ಹಿಂದೆ ಇಲ್ಲಿ ಇಂತಹುದೇ ಒಲೆಗಳನ್ನು ಮಾಡಿ ಅದರಿಂದ ನೀರು ಕುದಿಯು ವಷ್ಟು ಶಾಖ ಪಡೆದು ಆಹಾರ ತಯಾರಿಸುವುದು ಸಾಧ್ಯವೆಂದು ತೋರಿಸಿಕೊಟ್ಟಿದ್ದರು. ಆದರೂ ಇದು ಪ್ರಯೋಗಾವಸ್ಥೆಯನ್ನು ದಾಟಿ ಉಪಯೋಗಾವಸ್ಥೆಗೆ ಬರಲಿಲ್ಲ.

ಸೂರ್ಯ ಶಾಖವನ್ನು ನೇರವಾಗಿ ವಿದ್ಯುಚ್ಛಕ್ತಿಯಾಗಿ ಮಾರ್ಪಡಿಸಬಲ್ಲ ಒಂದೇ ಒಂದು ಸಾಧನವೆಂದರೆ Photo voltaic cells ಅಥವ ತೇಜೋ ವಿದ್ಯುತ್ ಕೋಶ ಗಳು. ಇವುಗಳಲ್ಲಿ ಎರಡು ವಿಧ. ಸಿಲಿಕಾನ್ ಸೌರಕೋಶಗಳು ಮತ್ತು ಕ್ಯಾಡ್ ಮಿಯಂ ಸಲ್ಫೈಡ್ ಸೌರಕೋಶಗಳು. ಸಿಲಿಕಾನ್ ಸೌರಕೋಶಗಳು ಸೂರ್ಯ ಶಾಖದ ಶೇಕಡ 12ರಷ್ಟನ್ನು ವಿದ್ಯುಚ್ಛಕ್ತಿಯಾಗಿ ಮಾರ್ಪಡಿಸುತ್ತದೆ. ಕ್ಯಾಡ್‌ಮಿಯಂ ಸಲ್ಫೈಡ್ ಕೋಶಗಳ ದಕ್ಷತೆ ಶೇಕಡ 4 ರಿಂದ 5ರಷ್ಟು ಮಾತ್ರ. ಆಕಾಶ ಸಂಶೋಧನೆ ಯಲ್ಲಿ ಸಿಲಿಕಾನ್ ಸೌರಕೋಶಗಳ ಅಭಿವೃದ್ಧಿಗಾಗಿ ಬಹಳ ಪ್ರಯತ್ನ ನಡೆದಿದೆ. ಈ ಮೂಲಕ ಆಕಾಶದಲ್ಲಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಗೆ ಅಪಾರವಾದ ಖರ್ಚಾಗುತ್ತದೆ. ಒಂದು ಉಪಗ್ರಹಕ್ಕೆ ಬೇಕಾದ ವಿದ್ಯುಚ್ಛಕ್ತಿಯನ್ನು ತಯಾರಿಸಲು ಸುಮಾರು 30 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಅಂದರೆ ಒಂದು ವಾಟ್ ವಿದ್ಯುಚ್ಛಕ್ತಿಗೆ ಸುಮಾರು 1,500 ರೂ. ರಿಂದ 2,000 ರೂ. ವರೆಗೆ ಖರ್ಚಾಗುವುದೆಂದು ಅಂದಾಜು ಮಾಡಿದ್ದಾರೆ. ಇದು ಆಕಾಶದಲ್ಲಿ ವಿದ್ಯುತ್ ಉತ್ಪತ್ತಿ ಮಾಡಲು ತಗಲುವ ವೆಚ್ಚ. ಅದೇ ನಾವು ಭೂಮಿಯ ಮೇಲೆ ಸೂರ್ಯ ಶಾಖದಿಂದ ವಿದ್ಯುಚ್ಛಕ್ತಿ ಉತ್ಪತ್ತಿ ಮಾಡಲು ಒಂದು ವಾಟ್‌ಗೆ ಸುಮಾರು 60 ರೂಪಾಯಿ ಆಗುವುದೆಂದು ಅಂದಾಜು ಮಾಡಿ ದ್ದಾರೆ. ಇನ್ನು ಕೆಲವೇ ವರ್ಷಗಳಲ್ಲಿ ಇದು 35 ರೂಪಾಯಿಗೆ ಇಳಿಯಬಹುದೆಂದು ಆಶಿಸಿದ್ದಾರೆ. ವಿಜ್ಞಾನಿಗಳಿಗೆ ಇದರ ಬೆಲೆಯನ್ನು ಒಂದು ವಾಟ್‌ಗೆ 70 ಪೈಸೆಯಷ್ಟು ಇಳಿಸಬೇಕೆಂಬುದೇ ಆಸೆ. ಒಂದು ವಾಟ್‌ಗೆ 3 ರಿಂದ 6 ರೂ. ವರೆಗೆ ಖರ್ಚು ತಗುಲಿ

ದರೂ ಅಂತಹ ವಿದ್ಯುಚ್ಛಕ್ತಿ ಆರ್ಥಿಕವಾಗಿ ಪ್ರಾಮುಖ್ಯತೆಯನ್ನು ಹೊಂದುತ್ತದೆ. ಸೌರಕೋಶಗಳ ದಕ್ಷತೆಯನ್ನು ಹೆಚ್ಚಿಸಿದಾಗ ಅವು ಸೂರ್ಯ ಶಾಖದ ಶೇಕಡ 20ರಷ್ಟನ್ನು ಶಕ್ತಿಯಾಗಿ ಮಾರ್ಪಡಿಸಬಲ್ಲದು. ಈ ಕೋಶಗಳಲ್ಲಿ ಯಾವ ಸಡಿಲವಾದ ಭಾಗವೂ ಇರುವುದಿಲ್ಲ. ಸವೆದುಹೋಗುವ ಭಾಗ ಇರುವುದಿಲ್ಲ. ಇವು ವಾತಾವರಣವನ್ನು ಕೆಡಿಸುವುದಿಲ್ಲ, ನೀರನ್ನು ಹಾಳುಮಾಡುವುದಿಲ್ಲ. ಈ ಕೋಶಗಳ ಮೇಲುಭಾಗವನ್ನು ಶುದ್ಧವಾಗಿಟ್ಟಿದ್ದರೆ ಅವು ಸಹಸ್ರಾರು ವರ್ಷಗಳು ಯಾವ ತೊಂದರೆಯೂ ಇಲ್ಲದೆ ಕೆಲಸಮಾಡುತ್ತವೆ. ಆದರೆ ಅವುಗಳ ಬೆಲೆ ವಿಪರೀತ. ಇದಕ್ಕೆ ಉಪಯೋಗಿಸುವ ಸಿಲಿಕಾನ್‌ನ ಬೆಲೆ ವಜ್ರಗಳ ಬೆಲೆಯಷ್ಟೇ ಹೆಚ್ಚಾಗಿದೆ. ಇದರ ಬಗ್ಗೆ ವಿಜ್ಞಾನಿಗಳು ಸಂಶೋಧನೆಯನ್ನು ಮುಂದುವರಿಸಿದರೆ ಇತರ ವಿಧಗಳಿಂದ ದೊರೆಯುವ ಶಕ್ತಿಯ ಬೆಲೆಗಿಂತ ಕಡಿಮೆ ದರದಲ್ಲಿ ಸೂರ್ಯ ಶಾಖವನ್ನು ಶಕ್ತಿಯಾಗಿ ಮಾರ್ಪಡಿಸಲು ಸಾಧ್ಯವೆಂದು ತಿಳಿದುಬಂದಿದೆ. ಇಂತಹ ಒಂದು ಉಪಕರಣವನ್ನು ಯಾರಾದರೂ ನಿರ್ಮಿಸಿದರೆ ಅವರಿಗೆ ನೋಬೆಲ್ ಪಾರಿತೋಷಕ ಸಿಗುವುದರಲ್ಲಿ ಅನುಮಾನವೇ ಇಲ್ಲ.

ಹೀಗೆ ಸೂರ್ಯ ಶಾಖದಿಂದ ಶಕ್ತಿಯನ್ನು ಅಗ್ಗವಾಗಿ ಪಡೆಯಲು ಸಾಧ್ಯವಾದರೆ ಮಾನವನ ಶಕ್ತಿಯ ಅಭಾವ ಒಂದೇ ಸಲಕ್ಕೆ ಓಡಿಹೋಗುತ್ತದೆ.

ಕವಿರಾಜ ಮಾರ್ಗದ ಮೇಲೆ ಉದ್ಭಟನ ಪ್ರಭಾವ

ಎಂ. ವಿ. ಸೀತಾರಾಮಯ್ಯ

ಕವಿರಾಜಮಾರ್ಗದಲ್ಲಿ ಶ್ರೀ ವಿಜಯನು ದಂಡಿಭಾಮಹರನ್ನು ವಿಶೇಷವಾಗಿ ಅನುಸರಿಸಿರುವನೆಂಬುದು ಗ್ರಂಥವನ್ನು ವ್ಯಾಸಂಗ ಮಾಡಿರುವವರೆಲ್ಲ ಚೆನ್ನಾಗಿ ಬಲ್ಲ ಸಂಗತಿ. ಕವಿರಾಜಮಾರ್ಗದ ಕೆಲವು ಲಕ್ಷ್ಯ ಲಕ್ಷಣ ಪದ್ಯಗಳಲ್ಲಿ ಜಿನಸೇನಾಚಾರ್ಯನ ಪ್ರಭಾವ ಮುದ್ರೆಯನ್ನು ಭೀಮರಾವ್ ಚಿಟಗುಪ್ಪಿಯವರು ಗುರುತಿಸಿದ್ದಾರೆ.[1] ಕೆಲವು ಲಕ್ಷ್ಯ ಪದ್ಯಗಳಲ್ಲಿ ಮಾಘ ಮತ್ತು ಭಾರವಿಗಳ ಕೃತಿಗಳಿಂದ ಭಾವವನ್ನೂ ಪದಪುಂಜಗಳನ್ನು ಸ್ವೀಕರಿಸಿ ಅಳವಡಿಸಿರುವ ಅಂಶವನ್ನು ಡಾ॥ ಕೆ. ಕೃಷ್ಣಮೂರ್ತಿಯವರು ತೋರಿಸಿ ಕೊಟ್ಟಿದ್ದಾರೆ.[2] ಹೀಗೆ ಅನೇಕ ಪೂರ್ವ ಕವಿಗಳಿಗೆ ಋಣಿಯಾಗಿರುವ ಶ್ರೀ ವಿಜಯನು 'ಕಾವ್ಯಲಂಕಾರ ಸಾರ ಸಂಗ್ರಹ' ಕರ್ತೃವಾದ ಉದ್ಭಟನಿಗೂ ಕೆಲವು ವಿಚಾರಗಳಲ್ಲಿ ಋಣಿಯಾಗಿರುವನೆಂದು ಹೇಳಿದರೆ, ಅದು ಸೋಜಿಗದ ವಿಷಯವಾಗಲಿ ಅಲ್ಲಗಳೆಯಬೇಕಾದ ವಿಷಯವಾಗಲಿ ಆಗಬೇಕಿಲ್ಲ.[3] ಉದ್ಭಟನಿಂದ ಕವಿರಾಜ

---

1 ಶ್ರೀ ಭೀಮರಾವ್ ಚಿಟಗುಪ್ಪಿ : 'ಕವಿರಾಜಮಾರ್ಗ ಪ್ರಶಸ್ತಿ', 1972 ; ಪು. 157-162

2 'ಕವಿರಾಜಮಾರ್ಗ' (ಸಂ ಪ್ರೊ॥ ವಿ. ಸೀತಾರಾಮಯ್ಯ) – ಕವಿಕಾವ್ಯ ಪರಂಪರೆ 1. 1973 'ದಂಡಿಭಾಮಹರ ಕೃತಿಗಳು' ಡಾ॥ ಕೆ. ಕೃಷ್ಣಮೂರ್ತಿಯವರ ಲೇಖನ, ಪು. 127–128

3 ಕವಿರಾಜಮಾರ್ಗಕಾರನು ಗುಣಗಳಿಗೆ ರಸಪರತ್ವವನ್ನು ಕಲ್ಪಿಸಿರುವನಷ್ಟೆ. (II. 98–100) ಮಾರ್ಗಕಾರನಿಗಿಂತ ಪೂರ್ವದವನು ಎನ್ನಬಹುದಾದ ರುದ್ರಟನೂ 'ಯಾವ ಯಾವ ರಸಕ್ಕೆ ಯಾವ ಯಾವ ರೀತಿ ಉಚಿತವೆಂಬುದನ್ನು ಹೇಳಿದ್ದಾನೆ' (ಕಾವ್ಯಲಂಕಾರ XV – 20) ಉದ್ಭಟನಂತೆ ಇವನೂ ಶಾಂತ ರಸದ ಉಲ್ಲೇಖ ಮಾಡಿದ್ದಾನೆ. ಈ ಅಂಶಗಳಲ್ಲಿ ಮಾರ್ಗಕಾರನು ರುದ್ರಟನಿಂದಲೂ ಪ್ರೇರಣೆ ಹೊಂದಿರಬಹುದಲ್ಲವೆ ? ಮಾರ್ಗ ಅಥವಾ ರೀತಿ ಗುಣನಿಷ್ಠ ಎಂಬುದು ದಂಡಿ – ಶ್ರೀ ವಿಜಯರ ನಿಲುವು ; ಆದರೆ, ದಂಡಿಯಲ್ಲಿ ಕಾಣಬರದ ಗುಣ-ರಸ ಪರತ್ವವನ್ನು ಹೊಸದಾಗಿ ಇವನು ಸೇರಿಸಿದ್ದಾನೆ. ರುದ್ರಟನು ರೀತಿ – ರಸ ಸಂಬಂಧವನ್ನು ಹೇಳಿರುವುದರಿಂದ, ಗುಣ – ರೀತಿ ಸಂಬಂಧ ದಂಡಿಯಿಂದಲೇ ಪ್ರೋಕ್ತವಾಗಿದ್ದುದರಿಂದ, ರುದ್ರಟನು ರೀತಿ – ರಸ ಸಂಬಂಧವನ್ನು ಹೇಳಿ, ಪರ್ಯಾಯವಾಗಿ ಗುಣ – ರಸಸಂಬಂಧವನ್ನು ಅನುಮೋದಿಸಿದಂತೆಯೇ ಆಯಿತು. ದಂಡಿ ವೈದರ್ಭಗೌಡ ಮಾರ್ಗಗಳನ್ನು ನಿರೂಪಿಸಿದ್ದನು ; ಭಾಮಹ ಮಾರ್ಗ ಕಲ್ಪನೆಯನ್ನು ನಿರಾಕರಿಸಿದ್ದನು ; ರುದ್ರಟನು ಪಾಂಚಾಲೀ ಲಾಟೀಯ ಮಾರ್ಗಗಳನ್ನು ಹೊಸದಾಗಿ ಸೇರಿಸಿದ್ದನು. ಮಾರ್ಗಕಾರನು ದಂಡಿಯನ್ನನುಸರಿಸಿ ಎರಡೇ ಮಾರ್ಗಗಳನ್ನು ಒಪ್ಪಿಕೊಂಡದ್ದರಿಂದ, ರುದ್ರಟನನ್ನನುಸರಿಸಿ ನಾಲ್ಕು ಮಾರ್ಗಗಳಿಗೆ ರಸಪರತ್ವವನ್ನು ಹೇಳುವುದು ಕಷ್ಟವಾಗಿ ಕಂಡಿರಬೇಕು. ದಂಡಿ ಭಾಮಹರು

ಮಾರ್ಗಕಾರನಿಗೆ ಪ್ರೇರಣೆಯುಂಟಾಗಿರಬಹುದೆ ಎಂಬ ಸಂದೇಹ ನನ್ನನ್ನು ಬಾಧಿಸುತ್ತಲೇ ಇದ್ದಿತು.

ದೃಷ್ಟಾಂತಾಲಂಕಾರದ ನಿರ್ದೇಶ, ಶಾಂತ ರಸದ ಪ್ರಸ್ತಾವ ಧ್ವನ್ಯಲಂಕಾರ ನಿರೂಪಣೆ–ಈ ವಿಷಯಗಳನ್ನು ಪ್ರಸ್ತಾಪಿಸುವಲ್ಲಿ ಮಾರ್ಗಕಾರನು ಉದ್ಭಟನಿಂದ ಪ್ರೇರಣೆ ಪಡೆದಿದ್ದಾನೆ ಎಂಬುದು ನನ್ನ ನಿಶ್ಚಿತವಾದ ಅಭಿಪ್ರಾಯ. ಇದನ್ನು ಕೂಡಿದಮಟ್ಟಿಗೂ ಆಧಾರ ಪೂರ್ವಕವಾಗಿ ಮಂಡಿಸುವುದು ಈ ಲೇಖನದ ಉದ್ದೇಶ.

ಸಂಸ್ಕೃತ ಅಲಂಕಾರಿಕರಲ್ಲಿ ದೃಷ್ಟಾಂತವೆಂಬ ಭಾವ ಅಲಂಕಾರವನ್ನು ಹೇಳಿದವರಲ್ಲಿ ಉದ್ಭಟನೇ ಮೊತ್ತ ಮೊದಲಿಗ ಎಂಬಲ್ಲಿ ಸಂಶಯವೇ ಇಲ್ಲ.

ದಂಡಿ ಭಾಮಹರು ನಿದರ್ಶನಾಲಂಕಾರವನ್ನು ಮಾತ್ರ ನಿರೂಪಣೆ ಮಾಡಿದ್ದಾರೆ. ಇವರಿಬ್ಬರ ಲಕ್ಷಣ ನಿರೂಪಣೆಯಲ್ಲಿ ಸ್ವಲ್ಪ ವ್ಯತ್ಯಾಸವುಂಟು. ಉದ್ಭಟನು ಬಹುಮಟ್ಟಿಗೆ ಭಾಮಹನನ್ನೇ ಅನುಸರಿಸುತ್ತಿದ್ದರೂ, ನಿದರ್ಶನಾಲಂಕಾರದ ಲಕ್ಷಣ ನಿರೂಪಣೆಯ ವಿಷಯದಲ್ಲಿ ಒಂದು ಪ್ರತ್ಯೇಕವಾದ ನಿಲುವನ್ನು ತಳೆದು, ನಿದರ್ಶನಾಲಂಕಾರವನ್ನೂ ದೃಷ್ಟಾಂತಾಲಂಕಾರವನ್ನೂ ಎರಡು ಬೇರೆ ಬೇರೆ ಅಲಂಕಾರಗಳಾಗಿ ಪರಿಗಣಿಸಿ ನಿರೂಪಿಸಿದ್ದಾನೆ. ಮಾರ್ಗಕಾರನು ಈ ಮೂವರಲ್ಲಿ ಯಾರೊಬ್ಬರನ್ನೂ ಕುರುಡು ಕುರುಡಾಗಿ ಅನುಸರಿಸದೆ, ನಿದರ್ಶನ-ದೃಷ್ಟಾಂತ ಅಲಂಕಾರ ಸಮಸ್ಯೆಯನ್ನು ಸ್ವತಂತ್ರ ದೃಷ್ಟಿಕೋನದಿಂದ ಪರಿಶೀಲಿಸಿದ್ದಾನೆ. ಮಾರ್ಗಕಾರನ ದೃಷ್ಟಿಯಲ್ಲಿ ದೃಷ್ಟಾಂತವು ನಿದರ್ಶನದ ನಾಮಾಂತರ ಮಾತ್ರವೆ, ಅಥವಾ ಇವೆರಡಕ್ಕೂ ಇರುವ ಲಕ್ಷಣ ಭೇದ–ಅದು ಎಷ್ಟೇ ಅಲ್ಪ ಪ್ರಮಾಣದ್ದಾಗಿರಲಿ–ಅವನ ಗಮನದಲ್ಲಿದ್ದಿತೆ? ಇದು ವಿಚಾರಾರ್ಹವಾದ ಪ್ರಶ್ನೆ. ಮೂಲಕಾರಿಕೆಗಳನ್ನು ಪರಿಶೀಲಿಸಿ ವಿಚಾರ ಮಾಡಬೇಕು.

ದಂಡಿ : ನಿದರ್ಶನಲಂಕಾರ

ಅರ್ಥಾಂತರ ಪ್ರವೃತ್ತೇನ ಕಿಂಚಿತ್ ತತ್ಸದೃಶಂ ಫಲಂ ।
ಸದಸದ್ವಾ ನಿದರ್ಶ್ಯೇತಯದಿ ತತ್ ಸ್ಯಾನ್ನಿದರ್ಶನಂ ॥
(ಕಾವ್ಯಾದರ್ಶ, ii - 348)

ಗುಣಗಳಿಗೆ ರಸಪರತ್ವವನ್ನು ಹೇಳಿರಲಿಲ್ಲ. ವಾಮನನೇನೋ ಒಂದು ರಸಕ್ಕೆ ರಸತ್ವವನ್ನು ಹೇಳಿದ್ದ, (''ದೀಪ್ತರಸತ್ವಂ ಕಾಂತಿಃ'' – iii, 2, 14). ಹೀಗಿರುವಾಗ, ಮಾರ್ಗ (ರೀತಿ) ನಿರ್ಧಾರಕಗಳಾದ ಗುಣಗಳಿಗೆ ರಸಪರತ್ವವನ್ನು ಬಹುಮಟ್ಟಿಗೆ ಸ್ವತಂತ್ರವೆನ್ನುವಂತೆ ಹೇಳಿರುವುದರಲ್ಲಿ ಮಾರ್ಗಕಾರನಿಗೆ ರುದ್ರಟನಲ್ಲಿಯೆ ಸುಳಿವು ಸಿಕ್ಕಿರಬೇಕು. ''ನೃಪತುಂಗನು'' (ಶ್ರೀ ವಿಜಯ ಕರ್ತೃತ್ವ ವಿರೋಧಿಗಳು, ಡಾ॥ ಕೃಷ್ಣಮೂರ್ತಿ) ''ರುದ್ರಟನನ್ನು ನೋಡಿದ್ದನೆನ್ನಲು ಯಾವ ಸುಳಿವೂ ಗ್ರಂಥದಲ್ಲಿಲ್ಲ'' ಎಂಬ ಕೃಷ್ಣಮೂರ್ತಿಯವರ ಮಾತನ್ನು ನಾನು ಗಮನಿಸದೆ ಇಲ್ಲ.

[ಒಂದು ವಸ್ತುವಿನ ಅಥವಾ ಕಾರ್ಯದ ಒಳ್ಳೆಯ ಅಥವಾ ಕೆಟ್ಟ ಪರಿಣಾಮ ಫಲವು ಅದನ್ನು ಹೋಲುವ ಇನ್ನೊಂದನ್ನು ಅರಿಯುವುದರ ಮೂಲಕ ನಿದರ್ಶನಕ್ಕೆ ಬರುವುದು ನಿದರ್ಶನಾಲಂಕಾರ]

ಭಾಮಹನ ಲಕ್ಷಣ ನಿರೂಪಣೆ :

ಕ್ರಿಯಯೈವ ವಿಶಿಷ್ಟಸ್ಯ ತದರ್ಥಸ್ಯೋಪದರ್ಶನಾತ್ ।
ಜ್ಞೇಯಾ ನಿದರ್ಶನಾನಾಮಾ ಯಥೇವವತಿಭಿರ್ವಿನಾ ॥

(ಕಾವ್ಯಾಲಂಕಾರ, iii 33)

['ಅಂತೆ', 'ಹಾಗೆ' ಮುಂತಾದವು ಇಲ್ಲದೆ ಕೇವಲ ಕ್ರಿಯೆಯಿಂದ ಅದರ ವಿಶಿಷ್ಟವಾದ ಅರ್ಥವನ್ನು ತೋರ್ಪಡಿಸುವುದು ನಿದರ್ಶನ ಎಂಬ ಅಲಂಕಾರ]

ಉದ್ಭಟನ ನಿರೂಪಣೆ : (i) ನಿದರ್ಶನಾಲಂಕಾರ

ಅಭವನ್ವಸ್ತು ಸಂಬಂಧೋ ಭವನ್ವಾಯತ್ರ ಕಲ್ಪಯೇತ್ ।
ಉಪಮಾನೋಪಮೇಯತ್ವಂ ಕಥ್ಯತೇ ಸಾ ನಿದರ್ಶನಾ[4] ॥

(ಕಾವ್ಯಾಲಂಕಾರ ಸಾರಸಂಗ್ರಹ, ಕಾರಿಕೆ 61)

[(ಎರಡು ವಸ್ತುಗಳ ನಡುವೆ) ಇಲ್ಲದಿರಬಹುದಾದ ಅಥವಾ ಇರಬಹುದಾದ ವಸ್ತು ಸಂಬಂಧವು (ಆ ವಸ್ತುಗಳ ನಡುವೆ) ಉಪಮಾನೋಪಮೇಯ ಭಾವಕ್ಕೆ ಎಡೆಗೊಟ್ಟರೆ, ಹಾಗೆ ವರ್ಣಿಸಿದ ಅಲಂಕಾರವು ನಿದರ್ಶನ.]

(ii) ದೃಷ್ಟಾಂತ :

ಇಷ್ಟಸ್ಯಾರ್ಥಸ್ಯ ವಿಸ್ಪಷ್ಟ ಪ್ರತಿಬಿಂಬ ನಿದರ್ಶನಮ್ ।
ಯಥೇವಾದಿ ಪದೈಃ ಶೂನ್ಯಂ ಬುಧೈರ್ದೃಷ್ಟಾಂತ ಉಚ್ಯತೇ ॥

(ಅದೇ : ಕಾರಿಕೆ 75)

---

4 ನಾವು ನೋಡಿದ ಎರಡು ಮುದ್ರಿತ ಪ್ರತಿಗಳಲ್ಲಿಯೂ 'ನಿದರ್ಶನಾ' ಎಂದಿರದೆ 'ವಿದರ್ಶನಾ' ಎಂಬ ಪಾಠವೇ ಇದೆ. ವ್ಯಾಖ್ಯಾನಕಾರ ಪ್ರತೀಹಾರೇಂದು ರಾಜನೂ 'ವಿ' ಉಪಸರ್ಗವನ್ನೇ ಮಾನ್ಯ ಮಾಡಿದ್ದಾನೆ. ಮದರಾಸು ಹಸ್ತಪ್ರತಿಯಲ್ಲಿ ಮಾತ್ರ 'ನಿದರ್ಶನಾ' ಎಂಬ ಪಾಠವೇ ಇದೆಯೆಂದೂ, ಇದರಿಂದಾಗಿ ಪಾಠ ನಿರ್ಣಯದಲ್ಲಿ ಕ್ಲೇಶ ತಲೆದೋರಿದರೂ, ಉದ್ಭಟನು ಉದ್ದೇಶಿಸಿದ ಪಾಠ ಬಹುಶಃ 'ನಿದರ್ಶನಾ' ಎಂದೇ ಇರಬೇಕೆಂದೂ ಭಂಡಾರ್ಕರ್ ಓರಿಯಂಟಲ್ ಸಂಶೋಧನಾ ಸಂಸ್ಥೆಯ ಪರಿಷ್ಕೃತ ಮುದ್ರಣದ ಸಂಪಾದಕರಾದ ಎನ್. ಡಿ, ಬನಹಟ್ಟಿಯವರು ಅಭಿಪ್ರಾಯಪಟ್ಟಿದ್ದಾರೆ. ಭಾಮಹನನ್ನು ಸಮೀಪವರ್ತಿಯಾಗಿ ಅನುಸರಿಸುವ ಉದ್ಭಟ ಕಾರಣವಿಲ್ಲದೆ ಮಾರ್ಪಾಟು ಮಾಡತಕ್ಕವನಲ್ಲ. ಇಲ್ಲಿ ಅಂಥ ಯಾವ ಕಾರಣವೂ ಗೋಚರವಾಗದು. ಆದ್ದರಿಂದ, ಇಂದು ರಾಜನ ಕೈಗೆ ಬಂದ ಪ್ರತಿಯಲ್ಲಿ ಲಿಪಿಕಾರನ ಅಕ್ಷರಸ್ಖಾಲಿತ್ಯವಾಗಿದೆ ಎಂದು ಊಹಿಸಬಹುದು,

[ಯಥಾ, ಇವ (=ಅಂತೆ, ಪೋಲ್), ಮುಂತಾದ (ಉಪಮಾವಾಚಕ) ಪದಗಳನ್ನು ಪ್ರಯೋಗ ಮಾಡದೆ, 'ಇಷ್ಟಾರ್ಥ'ದ (ಎಂದರೆ, ವರ್ಣಿಸಬೇಕೆಂದಿರುವ ವಿಷಯದ, ಪದಾರ್ಥದ) ಸುಸ್ಪಷ್ಟವಾದ ಪ್ರತಿಬಿಂಬವು ತೋರಿಬರುವಂತಿದ್ದರೆ, ಅದನ್ನು ವಿದ್ವಾಂಸರು ದೃಷ್ಟಾಂತ ಎಂದು ಹೇಳುತ್ತಾರೆ.]

ಈಗ, ಮಾರ್ಗಕಾರನ ಲಕ್ಷಣ ನಿರೂಪಣೆಯನ್ನು ಗಮನಿಸಬಹುದು :

ಗುಣದೋಷಾದಿಗಳಿಂದನು
ಗುಣಮಾಗಿರೆ ಪೇಳ್ದು ತದನುಸದೃಶದಿನೊಂದಂ
ಪ್ರಣಿಹಿತ ನಿದರ್ಶನಕ್ರಮ–
ದೆಣೆಸುವುದಕ್ಕುಂ ನಿದರ್ಶನಾಲಂಕಾರಂ (iii-೧೪೧)

(ಒಬ್ಬ ವ್ಯಕ್ತಿಯ ಇಲ್ಲವೆ ಒಂದು ವಸ್ತುವಿನ ಗುಣದೋಷಗಳಿಗೆ (= ದಂಡಿ ಹೇಳುವ 'ಸತ್–ಅಸತ್') ಅನುಗುಣವಾಗಿ ಆ ವ್ಯಕ್ತಿಯ ಇಲ್ಲವೆ ವಸ್ತುವಿನ ವಿಷಯವನ್ನು ವಿವರಿಸಿ, ಅದನ್ನು ಹೋಲುವ ಮತ್ತೊಂದನ್ನು ನಿದರ್ಶನ ವಿಧಾನದಲ್ಲಿ ಅದರ ಮುಂದಿಟ್ಟು ಅದನ್ನು ಗ್ರಹಿಸುವುದು ನಿರ್ಶನಾಲಂಕಾರ)

ಮಾರ್ಗಕಾರನು ಮೂವರ ಲಕ್ಷಣ ನಿರೂಪಣೆಯನ್ನೂ ಪರಿಶೀಲಿಸಿದ್ದಾನೆ ಎಂದು ನನ್ನ ಅಭಿಪ್ರಾಯ. ಭಾಮಹನ ವಿವರಣೆ ಅಷ್ಟು ಸ್ಪಷ್ಟವಾಗಿಲ್ಲ. ಮಾರ್ಗಕಾರನು ಬಹುಮಟ್ಟಿಗೆ ದಂಡಿಯನ್ನೇ ಅನುಸರಿಸಿರುವುದು ಸ್ಪಷ್ಟ. ಆದರೂ, ನಿದರ್ಶನಾಲಂಕಾರದಲ್ಲಿ ಉಪಮಾನೋಪಮೇಯ ಭಾವವೂ ದೃಷ್ಟಾಂತದಲ್ಲಿ ಬಿಂಬ ಪ್ರತಿಬಿಂಬ ಭಾವವೂ ಇರುವುವೆಂಬ ಉದ್ಭಟನ ಭೇದಕಲ್ಪನೆ ಮಾರ್ಗಕಾರನ ಗಮನವನ್ನು ಸೆಳೆದಿದೆ. ಎರಡು ಅಲಂಕಾರಗಳೂ ಅಭಿನ್ನ ಎಂಬ ಪಕ್ಷವನ್ನಾಗಲಿ, ಭಿನ್ನ ಎಂಬ (ಉದ್ಭಟನ) ಪಕ್ಷವನ್ನಾಗಲಿ ಎತ್ತಿಹಿಡಿಯುವುದು ಅವನಿಗೆ ಸರಿಕಂಡಿಲ್ಲ. ಆದ್ದರಿಂದಲೇ ಒಂದು ಸಮನ್ವಯ ಮಾರ್ಗವನ್ನು ಹಿಡಿದು, ಲಕ್ಷ್ಯಗಳನ್ನು ಹೇಳಿಯಾದ ಮೇಲೆ,

ಇಂತುದಿತಭೇದಮಂ ದೃ–
ಷ್ಟಾಂತಾಳಂಕಾರ ಮಾರ್ಗಮಂ ಕನ್ನಡದೊಳ್
ಸಂತತಗುಣಮಂ ಕೈಕೊ–
ಳ್ವಂತಾಗಿರೆ ಬಗೆದು ಪೇಳ್ಗೆ ಪರಮ ಕವೀಶರ್

—ಎಂದು ಉಪಸಂಹಾರ ಮಾಡಿದ್ದಾನೆ. ಅವನ ಲಕ್ಷ್ಯಗಳನ್ನು ಪರಿಶೀಲಿಸಿದರೆ, ಉಪಮಾನೋಪಮೇಯ ಭಾವವನ್ನು ಹೊಂದಿರುವಂಥವೂ ಬಿಂಬ ಪ್ರತಿಬಿಂಬ ಭಾವವನ್ನು ಉಳ್ಳವೂ ಸಮಾವೇಶವಾಗಿರುವುದು ಕಂಡುಬರುತ್ತದೆ. ಮೊದಲನೆಯ ಪ್ರಕಾರದ ಲಕ್ಷ್ಯಗಳಲ್ಲಿ ಅಂತೆ, ಪೊಲ್, ತೆಱದಿ ಎಂಬ ಪದಗಳ ಪ್ರಯೋಗವನ್ನು ಗಮನಿಸಬೇಕು. ದಂಡಿಯಾಗಲಿ ಉದ್ಭಟನಾಗಲಿ ನಿದರ್ಶನಾಲಂಕಾರದಲ್ಲಿ ಇಂಥ ಪದ

ಗಳನ್ನು ಬಿಡಬೇಕೆಂದು ಹೇಳಿಲ್ಲ ; ಹಾಗೆ ಹೇಳಿರುವವನು ಭಾಮಹ. ಉದ್ಭಟನು ಆ ಪದಗಳ ಪ್ರಯೋಗವನ್ನು ದೃಷ್ಟಾಂತಾಲಂಕಾರದಲ್ಲಿ ಬಿಡಬೇಕೆಂದು ಹೇಳಿ, ನಿದರ್ಶನಾಲಂಕಾರ ಮತ್ತು ದೃಷ್ಟಾಂತಾಲಂಕಾರಗಳ ನಡುವೆ ಸ್ಪಷ್ಟವಾದ ಗೆರೆ ಎಳೆದಿದ್ದಾನೆ. ಮಮ್ಮಟನೇ ಮುಂತಾದ ಈಚಿನ ಆಲಂಕಾರಿಕರು ಉದ್ಭಟನನ್ನು ಅನುಸರಿಸಿ ಅಲಂಕಾರಗಳ ಪಟ್ಟಿಯಲ್ಲಿ ದೃಷ್ಟಾಂತಕ್ಕೂ ಎಡೆಗೊಟ್ಟಿದ್ದಾರೆ. ಕನ್ನಡ ಆಲಂಕಾರಿಕರಲ್ಲಿ ದೃಷ್ಟಾಂತಕ್ಕೆ ಪ್ರತ್ಯೇಕ ಸ್ಥಾನವನ್ನು ಕೊಡದಿದ್ದರೂ, ನಿದರ್ಶನದಿಂದ ಹುಟ್ಟಿದ ಒಂದು ಪ್ರಭೇದ ಇದು, ಇದನ್ನು ಕವೀಶ್ವರರು ಪ್ರಯೋಗಿಸುವುದರಿಂದ ಕನ್ನಡಕ್ಕೆ ಸಂತತವಾದ ಗುಣವು ಪ್ರಾಪ್ತವಾಗುವುದು ಎಂದು ಹೇಳಿ, ದೃಷ್ಟಾಂತದ ಪ್ರಾಮುಖ್ಯವನ್ನು ಎತ್ತಿಹಿಡಿದಿದ್ದಾನೆ[5]. ರುದ್ರಟನು ನಿದರ್ಶನದ ಹೆಸರನ್ನೇ ಎತ್ತದೆ, ದೃಷ್ಟಾಂತದ ಲಕ್ಷಣವನ್ನು ಹೇಳಿದ್ದಾನೆ ; ರುದ್ರಟನನ್ನು ಅನುಸರಿಸಿರುವ ನಾಗವರ್ಮನ ವಿಚಾರ ಇಲ್ಲಿಗೆ ಅಪ್ರಸಕ್ತ. ಈ ಹಿನ್ನೆಲೆಯಲ್ಲಿ ವಿಚಾರ ಮಾಡಿದರೆ, ನಿದರ್ಶನ-ದೃಷ್ಟಾಂತಗಳೆರಡನ್ನೂ ಸ್ಪಷ್ಟ ವ್ಯತ್ಯಾಸದೊಡನೆ ಪ್ರಸ್ತಾಪ ಮಾಡಿರುವ ಉದ್ಭಟನ ಪೂರ್ವ ನಿದರ್ಶನವಿರುವಾಗ ಈ ಅಲಂಕಾರದ್ವಯದ ಕಲ್ಪನೆ

---

5 ದಿವಂಗತ ಮುಳಿಯ ತಿಮ್ಮಪ್ಪಯ್ಯನವರು ಈ ಪ್ರಕರಣಕ್ಕೆ ಅನ್ವಯಿಸುವಂತೆ ಹೇಳಿರುವ ಮಾತುಗಳು ಗಮನಾರ್ಹ : ''ನಮ್ಮ ಗ್ರಂಥಕಾರನು...ಲಕ್ಷಣ ನಿರೂಪಣ ಸಂದರ್ಭದಲ್ಲಿ, ಇದು 'ನಿದರ್ಶನಾಲಂಕಾರ' ವೆಂದು ಹೇಳಿದರೂ ಕೊನೆಗೆ 'ಇಂತುದಿತ ಭೇದಮಂ ದೃಷ್ಟಾಂತಾಳಂಕಾರ ಮಾರ್ಗಮಂ ಕನ್ನಡದೊಳ್ ಸಂತತ ಗುಣಮಂ' ಎನ್ನುತ್ತಾನಷ್ಟೆ. ಅದರಿಂದ ಈ 'ದೃಷ್ಟಾಂತಾಳಂಕಾರ ಮಾರ್ಗ' ವು ಕನ್ನಡ ದೇಸಿಯಲ್ಲೇ ವಿಸ್ತರಿಸಿಕೊಂಡಿದ್ದಿರಬೇಕೆಂಬ ಭಾವನೆಯೂ ಹೊಳೆಯುತ್ತಿದೆ. ಮತ್ತಿನ ನಾಗವರ್ಮನಾದರೂ ಈ 'ನಿದರ್ಶನಾಲಂಕಾರ' ವನ್ನು ಹೆಸರಿಸಿ. ಲಕ್ಷಣ ಲಕ್ಷ್ಯಗಳನ್ನು ವಿವೇಚಿಸುವಲ್ಲಿ 'ದೃಷ್ಟಾಂತ' ಎಂದೇ ಹೇಳುತ್ತಾನೆ'' ('ಕವಿರಾಜ ಮಾರ್ಗ ವಿವೇಕ,' ಮೈಸೂರಿನ ಗೀತಾ ಬುಕ್ ಹೌಸ್‌ನ ಪ್ರಕಟನೆ, **1973** ; ಭಾಗ ೨, ಪು. ೨೯೯)

ಕನ್ನಡ ಕೈಪಿಡಿಕಾರರು ನಿದರ್ಶನಾಲಂಕಾರದ ಪ್ರಸ್ತಾಪಮಾಡದೆ ದೃಷ್ಟಾಂತಾಲಂಕಾರವೊಂದನ್ನೆ ನಿರೂಪಿಸಿರುವುದು ದೃಷ್ಟಾಂತದ ಪ್ರಾಮುಖ್ಯವನ್ನು ಎತ್ತಿಹಿಡಿದಂತಾಗಿದೆ. ಲಕ್ಷ್ಯಗಳಲ್ಲಿ ಉಪಮಾನೋಪಮೇಯ ಭಾವಕ್ಕೆ ಪ್ರಾಧಾನ್ಯ, ವಾಚಕ ಪದ ಪ್ರಯೋಗ, ಇವು ಇದ್ದರಂತೂ ನಿದರ್ಶನವನ್ನು ಉಪಮಾಪ್ರಭೇದವೆಂದೇ ಪರಿಗಣಿಸಬೇಕಾಗುತ್ತದೆ. ಅಲಂಕಾರದಲ್ಲಿ ಉಪಮೇಯಕ್ಕಿಂತ ಉಪಮಾನಕ್ಕೇ ಹೆಚ್ಚಿನ ಒತ್ತು ಇದ್ದು, ವಾಚಕ ಪದ ಪ್ರಯೋಗವಿಲ್ಲದೆ, ಬಿಂಬ ಪ್ರತಿಬಿಂಬ ಭಾವ ಸ್ಪಷ್ಟ ಗೋಚರವಾಗಿರುವುದೇ ದೃಷ್ಟಾಂತದ ಲಕ್ಷಣ ಎನ್ನಬಹುದು. ನಿದರ್ಶನ, ಉದಾಹರಣ, ದೃಷ್ಟಾಂತ–ಈ ಮಾತುಗಳು ನಿಘಂಟುವಿನಲ್ಲಿ ಒಂದೇ ಅರ್ಥವನ್ನು ಪಡೆದಿದ್ದ ಮಾತ್ರಕ್ಕೆ ನಿದರ್ಶನಕ್ಕೂ ದೃಷ್ಟಾಂತಕ್ಕೂ ವ್ಯತ್ಯಾಸವೇ ಇಲ್ಲವೆನ್ನುವಂತಿಲ್ಲ. ಇವೆರಡರ ನಡುವಣ ಭೇದಕ ಗುಣವನ್ನು ಉದ್ಭಟನು ಗುರುತಿಸಿ, ಎರಡನ್ನೂ ಪ್ರತ್ಯೇಕಿಸಿದ್ದು ಅಲಂಕಾರ ಶಾಸ್ತ್ರದ ಬೆಳವಣಿಗೆಯಲ್ಲಿ ಒಂದು ಗಮನಾರ್ಹ ಸಂಗತಿ. ಉದ್ಭಟನ ಮಾತಿನಿಂದ ಈ ಸಂಗತಿ ವಿದ್ವತ್ಪ್ರಪಂಚದ ಚರ್ಚೆಯ ವಿಷಯವಾಗಿರಬೇಕು-ಅಂದೂ, ನೃಪತುಂಗನ ಕಾಲದಲ್ಲೂ.

ಮಾರ್ಗಕಾರನ ಸ್ವತಂತ್ರದ್ದು ಎನ್ನುವುದಕ್ಕಿಂತ ಉದ್ಭಟನ ಪ್ರೇರಣೆಯಿಂದ ಮೂಡಿ ಬಂದದ್ದು ಎಂದು ಭಾವಿಸುವುದು ಸರಿಯೆಂದು ನನಗೆ ತೋರುತ್ತದೆ. 'ಇಂತುದಿತ ಭೇದಂ' ಎನ್ನುವಲ್ಲಿ, ದೃಷ್ಟಾಂತವನ್ನು ನಿದರ್ಶನದಿಂದ ಬೇರ್ಪಡಿಸಿ ಉದ್ಭಟನು ಮಾಡಿರುವ ಭೇದ ಕಲ್ಪನೆಯ ಛಾಯೆ ಸ್ಪಷ್ಟವಾಗಿದೆ[6].

ಶಾಂತ ರಸ

ಕವಿರಾಜ ಮಾರ್ಗಕ್ಕಿಂತ ಹಿಂದಿನ ಲಾಕ್ಷಣಿಕರಲ್ಲಿ ದಂಡಿ ಭಾಮಹರು ರಸವದಲಂಕಾರದ ಲಕ್ಷಣ ನಿರೂಪಣೆಯ ಸಂದರ್ಭದಲ್ಲಿ ರಸಗಳ ಪ್ರಸ್ತಾಪ ಮಾಡಿದ್ದಾರೆ. ದಂಡಿ ಎಂಟು ರಸಗಳು ಅಲಂಕಾರವೆನಿಸಿ ಹೇಗೆ ನಿರೂಪಿತವಾಗುತ್ತವೆ ಎಂಬುದನ್ನು ಲಕ್ಷ್ಯಲಕ್ಷಣ ಪೂರ್ವಕ ವಿವರಿಸಿದ್ದಾನೆ; ಭಾಮಹನು ಶೃಂಗಾರವನ್ನು ಮಾತ್ರ ಹೆಸರಿಸಿದ್ದಾನೆ. ಇಬ್ಬರೂ ಶಾಂತ ರಸದ ವಿಚಾರ ಹೇಳಿಲ್ಲ. ಈಗ ನಮಗೆ ತಿಳಿದು ಬಂದಿರುವ ಮಟ್ಟಿಗೆ, ಮೇಲ್ಕಂಡ ನಾಲ್ವರಲ್ಲಿ ಅಲಂಕಾರಿಕರಲ್ಲಿ ಶಾಂತರಸವನ್ನು ಹೇಳಿರುವವರು ಉದ್ಭಟ ಮತ್ತು ರುದ್ರಟ. ಮಾರ್ಗಕಾರನು ರುದ್ರಟನ ಅಭಿಪ್ರಾಯಗಳನ್ನು ಬಲ್ಲವನಾಗಿರಬಹುದು ಎಂಬ ಅಂಶವನ್ನು ಹಿಂದೆಯೇ ಸೂಚಿಸಿದ್ದೇನೆ. (ಅಡಿ ಟಿಪ್ಪಣಿ 3). ರುದ್ರಟನಿಂದಲೂ ಮಾರ್ಗಕಾರನಿಗೆ ಸೂಚನೆ ದೊರಕಿರಬಹುದು. ಆದರೆ, ಈ ಸಂದರ್ಭದಲ್ಲಿ ಮಾರ್ಗಕಾರನು ಉದ್ಭಟನಿಂದಲೇ ಸೂಚನೆಯನ್ನು ಸ್ವೀಕರಿಸಿರುವ ಸಂಭವ ಹೆಚ್ಚು. ಏಕೆಂದರೆ, ಉದ್ಭಟನು ನವರಸಗಳನ್ನು ಹೇಳಿರುವಲ್ಲಿ ರುದ್ರಟನು ಪ್ರೇಯಸ್ಸನ್ನೂ ಒಂದು ರಸವನ್ನಾಗಿ ಪರಿಗಣಿಸಿ, ಹತ್ತು ರಸಗಳ ಪ್ರಸ್ತಾಪ ಮಾಡಿರುವನು.

---

6 ಮಾರ್ಗಕಾರನು "ಉದ್ಭಟನ ಗ್ರಂಥವನ್ನು ಓದಿಯೇ 'ದೃಷ್ಟಾಂತ'ವೆಂಬ ಹೊಸ ಅಲಂಕಾರವನ್ನು ಕಂಡುಹಿಡಿದನೆಂದು ಭಾವಿಸುವುದು ಸರಿಯಲ್ಲ ಎಂಬುದು ಡಾ॥ ಕೆ. ಕೃಷ್ಣಮೂರ್ತಿಯವರ ಅಭಿಪ್ರಾಯ. (ಕನ್ನಡ ಕವಿಕಾವ್ಯ ಪರಂಪರೆ-1 ಪು. 129). "ನಿದರ್ಶನೋದಿತವೆನ್ನಬಹುದಾದ ಅಲಂಕಾರ ಭೇದವನ್ನು ಬಹುಶಃ ಮೊದಲು ಗುರುತಿಸಿದ ಗೌರವವು ಮಾರ್ಗಕಾರನಿಗೇ ಸಲ್ಲಬೇಕೆಂದು ಕಾಣುತ್ತದೆ" ಎಂಬುದು ನನ್ನ ಮೊದಲ ಅಭಿಪ್ರಾಯ. (ಕವಿರಾಜಮಾರ್ಗದ ತೃತೀಯ ಪರಿಷ್ಕರಣ, ಟಿಪ್ಪಣಿಗಳು, ಪು. 320). ನಾನು ಉದ್ಭಟನನ್ನು ನೋಡಿದ ಮೇಲೆ "ಕವಿರಾಜ ಮಾರ್ಗಕಾರನಿಗೆ ಉದ್ಭಟನ ಸೂಚನೆ ಪ್ರೇರಕವಾಗಿದ್ದರೂ ಇರಬಹುದು" ಎಂದು ಬರೆದೆ. (ನೋಡಿ : ನಾನು ಸಂಪಾದಿಸಿರುವ ಉದಯಾದಿತ್ಯಾಲಂಕಾರ. ಟಿಪ್ಪಣಿಗಳು. ಪು. 79). ಇದನ್ನು ಗಮನಿಸಿ ಕೃಷ್ಣಮೂರ್ತಿಗಳು ಮೇಲ್ಕಂಡಂತೆ ಹೇಳಿರುವುದಾಗಿ ಕಂಡು ಬರುತ್ತದೆ. ಒಂದು ವೇಳೆ ಮಾರ್ಗಕಾರನು ಉದ್ಭಟ ಗ್ರಂಥವನ್ನು ನೋಡಿರದಿದ್ದರೂ. ಉದ್ಭಟನು ದೃಷ್ಟಾಂತಾಲಂಕಾರದ ಪ್ರಸ್ತಾಪ ಮಾಡಿರುವ ವಿಚಾರ ನೃಪತುಂಗನ ಸಮ್ಮುಖದಲ್ಲಿ ಪರಿಶೀಲನೆಗೆ ಬಂದಿದ್ದು, ಮಾರ್ಗಕಾರನು ನಿದರ್ಶನ ನಿರೂಪಣೆಯ ಕಡೆಯಲ್ಲಿ ದೃಷ್ಟಾಂತವನ್ನೂ ನಿದರ್ಶನದ ಒಂದು ಪ್ರಭೇದವೆಂದು ಹೇಳಿರಬೇಕು. ಹೇಳಿಕೆಗೆ ಉದ್ಭಟ ಪ್ರೇರಕ, ಅಷ್ಟೆ ; ಲಕ್ಷಣಕ್ಕಲ್ಲ.

ಕ್ರಿ.ಶ. 5ನೆಯ ಶತಮಾನಕ್ಕೆ ಸೇರಿದ್ದೆಂದು ಊಹಿಸಲಾಗಿರುವ 'ಅಣುಓಗದಾರ ಸುತ್ತ' ಎಂಬ ಪ್ರಾಕೃತ ಭಾಷೆಯ ಜೈನಧರ್ಮ ಗ್ರಂಥದಲ್ಲಿ ಒಂಬತ್ತು ಕಾವ್ಯರಸಗಳು ಉಕ್ತವಾಗಿವೆ. ಅವುಗಳಲ್ಲಿ 'ಪ್ರಶಾಂತ'ವೂ ಒಂದು. ಮಾರ್ಗಕಾರನು ಜೈನನಾಗಿದ್ದುದರಿಂದ ಜೈನಧರ್ಮ ಗ್ರಂಥವನ್ನು ಅನುಸರಿಸಿ ಶಾಂತರಸವನ್ನು ಸೇರಿಸಿಕೊಂಡಿದ್ದಾನೆಂದು ಊಹಿಸಬಹುದಾದರೂ, ಅಲಂಕಾರ ಶಾಸ್ತ್ರಗ್ರಂಥವನ್ನು ಬರೆಯುವಾಗ ಪೂರ್ವದ ಲಕ್ಷಣ ಗ್ರಂಥಗಳನ್ನು ಅನುಸರಿಸುವ ಸಂಭವ ಹೆಚ್ಚು. ಮೇಲ್ಕಂಡ ಜೈನ ಗ್ರಂಥದಲ್ಲಿ ಬಳಸಿರುವ 'ಪ್ರಶಾಂತ' ಎಂಬ ಮಾತೇ ಕವಿರಾಜ ಮಾರ್ಗದಲ್ಲಿಯೂ ಬಳಕೆಯಾಗಿರುವುದು ಮಾರ್ಗಕಾರನು ಜೈನಧರ್ಮ ಗ್ರಂಥವನ್ನು ಅನುಸರಿಸಿದ್ದಾನೆ ಎನ್ನುವುದಕ್ಕೆ ಪ್ರಬಲವಾದ ಆಧಾರವಾಗದು. ಗುಣಗಳಿಗೆ ರಸ ಪರತ್ವವನ್ನು ಹೇಳುವ ಸಂದರ್ಭದಲ್ಲಿ ಒಮ್ಮೆ ಮಾತ್ರ ಆ ಪದಪ್ರಯೋಗವಾಗಿದೆ. (i-99). ಪ್ರಾಚೀನಾಲಂಕಾರಿಕರಲ್ಲಿ ರಸಪ್ರಸಕ್ತಿ ಬರುವುದು ರಸವದಲಂಕಾರ ನಿರೂಪಣ ಸಂದರ್ಭದಲ್ಲಿ. ಕವಿರಾಜ ಮಾರ್ಗದಲ್ಲಿ, ರಸವದಲಂಕಾರ ಲಕ್ಷಣ ನಿರೂಪಣೆಯಾದ ಬಳಿಕ ಒಂಬತ್ತು ರಸಗಳ ಹೆಸರುಗಳನ್ನು ಹೇಳುವಲ್ಲಿ (iii-188), "ವೀರಾದ್ಭುತ...ಹಾಸ್ಯ ಶಾಂತಾಧಾರಂ ನವವಿಧವಿಕಲ್ಪಮಾ ರಸಮಾರ್ಗಂ" ಎಂದಿದೆ; ಶಾಂತ ರಸದ ಲಕ್ಷ್ಯ ಪದ್ಯದಲ್ಲಿಯೂ, (iii-197) "ವಿಗತವಿಕಾರಾಕಾರಂ ಸೊಗಯಿಸುಗುಂ ನಿನ್ನ ರೂಪು ಶಾಂತಾಧಾರಂ" ಎಂದಿದೆ. ಎರಡು ಸಂದರ್ಭಗಳಲ್ಲಿಯೂ 'ಶಾಂತ' ಎಂಬುದೇ ಪ್ರಯುಕ್ತಪದ. ಇದರಿಂದ, ಪಾರಿಭಾಷಿಕವಾಗಿ 'ಶಾಂತ'ಪದವೇ ಮಾರ್ಗಕಾರನಿಂದ ಉದ್ದಿಷ್ಟವಾಗಿರುವುದು ; 'ಪ್ರಶಾಂತ'ವಲ್ಲ. i-99ನೆಯ ಪದ್ಯದಲ್ಲಿ ಛಂದಸ್ಸಿನ ಅಗತ್ಯಕ್ಕಾಗಿ 'ಶಾಂತ' 'ಪ್ರಶಾಂತ'ವಾಗಿದೆ ಎಂದು ತಿಳಿಯಬೇಕು. (i-188 ರಲ್ಲಿ, ರಸಗಳ ಪಟ್ಟಿಯಲ್ಲಿ, 'ಸರೌದ್ರ' 'ಮಹಾಸಾರತರ ಹಾಸ್ಯ' ಈ ಪ್ರಯೋಗಗಳನ್ನು ಗಮನಿಸಬೇಕು). ಆದ್ದರಿಂದ, ಮಾರ್ಗಕಾರನು ಈ ಜೈನ ಧರ್ಮ ಗ್ರಂಥದಿಂದ ಶಾಂತರಸ ಪ್ರಸಕ್ತಿಯನ್ನು ಸ್ವೀಕರಿಸಿದ್ದಾನೆ ಎಂಬ ಊಹೆಗೆ ಗಟ್ಟಿಯಾದ ನೆಲೆಯಿಲ್ಲ.

ಭರತನೇ ನಾಟ್ಯಶಾಸ್ತ್ರದಲ್ಲಿ ಶಾಂತರಸದ ನಿರೂಪಣೆ ಮಾಡಿದ್ದಾನೆ ಎಂಬ ವಾದವೂ ಇದೆ. ಆದರೆ, ಆ ಭಾಗ ಪ್ರಕ್ಷಿಪ್ತ ಎಂಬುದು ಬಹುಮಂದಿ ವಿದ್ವಾಂಸರ ಅಭಿಮತ, ಶಾಂತರಸದ ಪ್ರಸ್ತಾಪ ಕೆಲವು ಹಸ್ತಪ್ರತಿಗಳಲ್ಲಿ ಇದ್ದು, ಇನ್ನು ಕೆಲವಲ್ಲಿ ಇಲ್ಲ. ಮಾತ್ರವಲ್ಲ, ಬೇರೆ ಬೇರೆ ಸಂದರ್ಭಗಳಲ್ಲಿ ಭರತನು ಎಂಟು ರಸಗಳನ್ನು ಮಾತ್ರ ಹೇಳಿದ್ದಾನೆ. ಆದ್ದರಿಂದ, ಭರತನು ಎಂಟು ರಸಗಳನ್ನು ಮಾತ್ರ ಹೇಳಿದ್ದಾನೆ ಎಂಬುದರಲ್ಲಿ ಸಂದೇಹಕ್ಕೆ ಅವಕಾಶವಿಲ್ಲ. ಶಾಂತರಸ ಪಕ್ಷಪಾತಿಗಳು ಭರತನ ನಾಟ್ಯ ಶಾಸ್ತ್ರದಲ್ಲಿ ಶಾಂತರಸಕ್ಕೆ ಸಂಬಂಧಪಟ್ಟ ಶ್ಲೋಕಗಳನ್ನು ಪ್ರಕ್ಷೇಪ ಮಾಡಿರಬೇಕು. ಹಾಗೆ, ಅಲಂಕಾರಿಕರಲ್ಲಿ ಶಾಂತರಸದ ಉಲ್ಲೇಖ ಮಾಡಿರುವವರಲ್ಲಿ

ಉದ್ಭಟನೇ ಮೊದಲಿಗ ಎಂಬುದು ಸುನಿಶ್ಚಿತ. ಇಲ್ಲಿ, ಅವನ ಶ್ಲೋಕವನ್ನು ಗಮನಿಸುವುದು ಅಗತ್ಯ:

> ಶೃಂಗಾರಹಾಸ್ಯ ಕರುಣ ರೌದ್ರ ವೀರ ಭಯಾನಕಾಃ !
> ಭೀಭತ್ಸಾದ್ಭುತ ಶಾಂತಾಶ್ಚ ನವನಾಟ್ಯೇರಸಾಃಸ್ಮೃತಾಃ ॥

ಭರತನ ನಾಟ್ಯಶಾಸ್ತ್ರದಲ್ಲಿ ಪ್ರಕ್ಷೇಪವಾಗಿರಬಹುದು ಎಂದು ಅಭಿನವಗುಪ್ತನು ಉದ್ಧರಿಸಿರುವ ನಾಟ್ಯಶಾಸ್ತ್ರದ ಶ್ಲೋಕಕ್ಕೂ ಮೇಲ್ಕಂಡ ಉದ್ಭಟನ ಶ್ಲೋಕಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಅಭಿನವಗುಪ್ತನ ಸೂಚನೆಯನ್ನು ಆಧರಿಸಿ, ಶಾಂತ ರಸಪರವಾದ ಈ ಪ್ರಕ್ಷೇಪಕ್ಕೆ ಉದ್ಭಟನೇ ಕಾರಣಕರ್ತನಿರಬಹುದೆಂದು ಡಾ॥ ವಿ. ರಾಘವನ್ ಅಭಿಪ್ರಾಯಪಟ್ಟಿದ್ದಾರೆ.[7] ಉದ್ಭಟನು ಭರತನ ನಾಟ್ಯಶಾಸ್ತ್ರಕ್ಕೆ ಒಂದು ವ್ಯಾಖ್ಯಾನವನ್ನು ಬರೆದಿದ್ದು, ಅದರಲ್ಲಿ ಶಾಂತರಸ ವಿರೋಧಿಗಳನ್ನು ಉದ್ಭಟನು ಪ್ರತಿಭಟಿಸಿರುವುದು ಮಾತ್ರವಲ್ಲದೆ, ಶಾಂತರಸದ ಅಗತ್ಯವನ್ನು ವಿಸ್ತಾರ ವಾಗಿ ಪ್ರತಿಪಾದಿಸಿದ್ದಿರಬೇಕು ಎಂದೂ ಅವರು ಹೇಳುತ್ತಾರೆ.[8] ಆದರೆ, ಆನಂದ ವರ್ಧನ, ಮಮ್ಮಟ ಮುಂತಾದ ಈಚಿನ ಆಲಂಕಾರಿಕರು ಉದ್ಭಟನನ್ನು ಅತ್ಯಂತ ಗೌರವದಿಂದ ಸಂಬೋಧಿಸಿ ಗೌರವಿಸಿರುವರೆಂಬುದನ್ನು ನೆನೆದರೆ, ಪ್ರಕ್ಷೇಪದಂತಹ ಕೀಳ್ಗೆಲಸವನ್ನು ಆತ ಮಾಡಿರಲಾರ ಎನ್ನಬೇಕಾಗುತ್ತದೆ. ಆದ್ದರಿಂದ ಉದ್ಭಟನ ಕಾಲಕ್ಕಿಂತ ಮೊದಲೇ ಪ್ರಕ್ಷೇಪ ನಡೆದಿದ್ದು, ಪ್ರಕ್ಷಿಪ್ತಪಾತವುಳ್ಳ ಸಂಪ್ರದಾಯದ ಹಸ್ತಪ್ರತಿ ಉದ್ಭಟನ ಕೈಗೆ ಬಂದಿರಬೇಕು—ಎಂದು ತಿಳಿಯುವುದೇ ಸಾಧುವಾದುದು. ಭಾಮಹನ ಶ್ಲೋಕಗಳನೇಕವನ್ನು ಹಾಗೆ ಹಾಗೆಯೇ ಸ್ವೀಕರಿಸಿರುವ ಉದ್ಭಟ ನಾಟ್ಯ ಶಾಸ್ತ್ರದ ಶ್ಲೋಕವನ್ನೂ (ಭರತ ಮುನಿಯದೆಂದು ಭಾವಿಸಿ) ಮಾರ್ಪಾಟು ಮಾಡದೆ ಸ್ವೀಕರಿಸಿದ್ದಾನೆ. ಅದು ಹೇಗಿದ್ದರೂ, ಉದ್ಭಟನ ಶ್ಲೋಕ ನಾಟ್ಯಶಾಸ್ತ್ರದ ಸಂಬಂಧವುಳ್ಳದ್ದು ಎಂಬುದಕ್ಕೆ ಶ್ಲೋಕದಲ್ಲಿನ 'ನಾಟ್ಯ'ಪದ ಸೂಚಕವಾಗಿದೆ.

---

7 Dr. V. Raghavan : The Number of Rasa's p. 13

8 ಅದೇ ಗ್ರಂಥ : ಪು. 47, (ಈ ವ್ಯಾಖ್ಯಾನ ಉಪಲಬ್ಧವಿಲ್ಲ ; ಅದನ್ನು ಬರೆದಿದ್ದನೆಂಬುದಕ್ಕೆ ಆಧಾರವೇನೋ ತಿಳಿಯದು.) ಕಾವ್ಯಾಲಂಕಾರಸಾರ ಸಂಗ್ರಹದ ಸಂಪಾದಕರಾದ ಬನಹಟ್ಟಿ ಯವರು ಉದ್ಭಟನ ವ್ಯಾಖ್ಯಾತೃ ಇಂದು ರಾಜನ ಹೇಳಿಕೆಯ ಆಧಾರದ ಮೇಲೆ, ಕಾವ್ಯಾ ಲಂಕಾರಸಾರಸಂಗ್ರಹವೂ ಸೇರಿದಂತೆ ಕನಿಷ್ಠಪಕ್ಷ ಮೂರು ಕೃತಿಗಳನ್ನು ಉದ್ಭಟನು ಬರೆದಿರ ಬೇಕೆಂದು, ತಮ್ಮ ಮುನ್ನುಡಿಯಲ್ಲಿ ತಿಳಿಸುತ್ತಾರೆ. (ಪು. xii) 'ಭಾಮಹ ವಿವರಣ', ಮತ್ತು 'ಕುಮಾರ ಸಂಭವ' ಎಂಬವೇ ಅನುಪಲಬ್ಧವಾದ ಇನ್ನೆರಡು ಕೃತಿಗಳು. ಶಾಂತರಸದ ಉಲ್ಲೇಖವಿರುವ ಉದ್ಭಟನ ಶ್ಲೋಕಕ್ಕೂ ಅಭಿನವಗುಪ್ತನು ಉದ್ಧರಿಸಿರುವ ನಾಟ್ಯಶಾಸ್ತ್ರದ ಶ್ಲೋಕಕ್ಕೂ ಇರುವ ಏಕರೂಪವನ್ನು ನೋಡಿದರೆ, ಉದ್ಭಟನು ನಾಟ್ಯಶಾಸ್ತ್ರವನ್ನು ನೋಡಿದ್ದನೆನ್ನಲು ಅಡ್ಡಿಯಿಲ್ಲ. ನಾಟ್ಯಶಾಸ್ತ್ರದ ಮೇಲೂ ಒಂದು ವ್ಯಾಖ್ಯಾನ ಬರೆದಿದ್ದ ನೆನ್ನುವುದು ಬಹುಶಃ ಸಂಭಾವ್ಯವಾದ ಒಂದು ಊಹೆಯಾಗಿ ಉಳಿಯುತ್ತದೆ.

ಈವರೆಗಿನ ವಿವರಣೆಯಿಂದ, ಶಾಂತರಸದ ವಿಚಾರವಾಗಿ "ಉದ್ಭಟನ ನಿರೂಪಣೆಯನ್ನು ನೋಡಿಕೊಂಡು ಈತನು (ಎಂದರೆ, ಮಾರ್ಗಕಾರನು) ಬರೆದನೆಂದು ಹೇಳಲು ಸಾಕಾದಷ್ಟು ಆಧಾರವಿಲ್ಲ' ಎಂಬ ತೀ. ನಂ. ಶ್ರೀ. ಹೇಳಿಕೆಯನ್ನು ಪುನಃ ಪರಿಶೀಲನೆಮಾಡಬೇಕೆಂದು ಹೇಳಬೇಕಾಗುತ್ತದೆ.

ಧ್ವನ್ಯಲಂಕಾರ

"ಧ್ವನಿಯೆಂಬುದಳಂಕಾರಂ" ಎಂಬ ಕವಿರಾಜ ಮಾರ್ಗದ ಉಕ್ತಿ ಆ ಬಗೆಗಿನ ವಾದ ಪ್ರತಿವಾದಗಳಿಂದ ಈಗ ತುಂಬ ಪ್ರಸಿದ್ಧವಾಗಿರುವಂಥದು. ಈ ಮಾತಿನ ಅರ್ಥವೇನು ಎಂಬುದನ್ನು ವಿವರಿಸುವುದು ಪ್ರಕೃತದ ಉದ್ದೇಶವಲ್ಲ. ಮಾರ್ಗಕಾರನು ಹೀಗೆ ಹೇಳಲು ಉದ್ಭಟ ಪ್ರೇರಕನೇ ಅಲ್ಲವೇ ಎಂಬುದಷ್ಟೇ ಇಲ್ಲಿ ವಿಚಾರಣೀಯ ಕಾವ್ಯಾಲಂಕಾರಸಾರ ಸಂಗ್ರಹದಲ್ಲಂತೂ ಧ್ವನಿಯ ಪ್ರಸ್ತಾಪವಿಲ್ಲ. ಈ ಗ್ರಂಥಕ್ಕೆ ವ್ಯಾಖ್ಯಾನವನ್ನು ಬರೆದಿರುವ ಪ್ರತೀಹಾರೇಂದು ರಾಜನು (ಇವನ ಕಾಲ ಸುಮಾರು ಕ್ರಿ. ಶ. 940–990 ಎಂದು ಊಹಿಸಲಾಗಿದೆ),[9] ಉದ್ಭಟನ ಗ್ರಂಥಕ್ಕೆ ವ್ಯಾಖ್ಯಾನವನ್ನು ಬರೆದು ಮುಗಿಸಿದಮೇಲೆ ಅದನ್ನು ಮುಂದುವರಿಸಿ, ಮುಂದುವರಿಸಿದ ಭಾಗವಲ್ಲಿ ಧ್ವನಿ ವಿಚಾರವನ್ನು ವಿಸ್ತಾರವಾಗಿ ವಿವೇಚಿಸಿದ್ದಾನೆ. ಅಲಂಕಾರಗಳನ್ನು ನಿರೂಪಿಸುವ ಗ್ರಂಥದಲ್ಲಿ ಧ್ವನಿಯ ವಿವೇಚನೆ—ಅದರಲ್ಲೂ ಉದ್ಭಟನು ಆ ವಿಚಾರವಾಗಿ ಚಕಾರವನ್ನೂ ಎತ್ತದಿರುವಾಗ ಆಪಾತತಃ ಸೋಜಿಗದ ವಿಷಯವಾಗಿ ಕಾಣುತ್ತದೆ. ಆದರೆ, ಸ್ವಲ್ಪ ವಿಚಾರಮಾಡಿ ನೋಡಿದರೆ, ಇಂದು ರಾಜನ ಅಪ್ರಾಕರಣಿಕ ವೆನ್ನಬಹುದಾದ ವಿಷಯ ಪ್ರತಿಪಾದನೆಗೆ ಕಾರಣವೇನೆಂಬುದು ಗೋಚರಿಸುತ್ತದೆ. ಅದೇನಿರಬಹುದೆಂಬ ಬಗೆಗೆ ವಿದ್ವಾಂಸರು ವಿಚಾರ ಮಾಡಿದ್ದಾರೆ.[10] ಅವರ ಅಭಿಪ್ರಾಯವನ್ನು ಇಲ್ಲಿ ಸಂಗ್ರಹಿಸಿ, ವಿಚಾರ ಮಾಡಿದೆ.

'ಧ್ವನಿ'ಯನ್ನು ಕಾವ್ಯದ ಆತ್ಮವೆಂದು ವಿದ್ವಾಂಸರು ಹಿಂದೆಯೇ ಹೇಳಿದ್ದರು ; ಕೆಲವರು ಅದನ್ನು ಇಲ್ಲವೆಂದಿದ್ದರು ; ಮತ್ತೆ ಕೆಲವರು ಅದನ್ನು ಭಾಕ್ತವೆಂದರು – ಎಂದು ಧ್ವನ್ಯಾಲೋಕದ ಮೊದಲ ಕಾರಿಕೆಯಲ್ಲೇ ಹೇಳಿದೆ. ಹೀಗೆ, ಆನಂದವರ್ಧನನಿಗಿಂತ ಹಿಂದೆಯೇ ಧ್ವನಿತತ್ತ್ವ ಪ್ರತಿಪಾದಕರೂ ವಿರೋಧಿಗಳೂ ಇದ್ದರು.[10a] ಈ ವಿರೋಧಿ ಪಂಥಗಳಲ್ಲಿ 'ಧ್ವನಿ ಕಾವ್ಯದ ಆತ್ಮವಲ್ಲ, ಇತರ ಅಲಂಕಾರಗಳಂತೆ ಅದೂ ಒಂದು ಅಲಂಕಾರ' ಎಂದು ವಾದಿಸುವ ಒಂದು ಪಂಥವೂ ಇದ್ದಿರಬೇಕು. ಈ

---

9 ಮೇಲೆ ಉಲ್ಲೇಖಿತವಾದ ಗ್ರಂಥ, ಮುನ್ನುಡಿ (ಪು. xxvi)

10 ಅದೇ : ಮುನ್ನುಡಿ, ಪು. xxi, xxiii, xxiv

10a. ಇದು ಧ್ವನಿಕಾರನು ಕಲ್ಪಿಸಿಕೊಂಡಿರುವ ಪೂರ್ವಪಕ್ಷ ಎಂಬ ಅಭಿಪ್ರಾಯವೂ ಇದೆ. ಧ್ವನಿ ವಿಚಾರ ಹಿಂದಿನದು ಎಂದು ಆತ ಒಪ್ಪಿಕೊಂಡಿರುವಲ್ಲಿ, ತತ್ಸಂಬಂಧವಾದ ಭಿನ್ನಾಭಿಪ್ರಾಯಗಳೂ ಹಿಂದಿನವು ಎಂದು ತಿಳಿಯುವುದು ಅಸಾಧುವೆನಿಸದು.

ಪಂಥದವರು, 'ಧ್ವನಿ ವಾಚ್ಯಾರ್ಥಕ್ಕೆ ಸೌಂದರ್ಯವನ್ನು ಕೊಡತಕ್ಕದ್ದು. ಆದ್ದರಿಂದ, ಅದೂ ಒಂದು ಅಲಂಕಾರವೇ ; ಅಲಂಕಾರದಿಂದ ಭಿನ್ನವಾದ ಕಾವ್ಯಾಂಶವಲ್ಲ' ಎಂದು ಭಾವಿಸಿದ್ದರೆಂದು ಕಾಣುತ್ತದೆ. ಉದ್ಭಟನು ಈ ಭಾವನೆಯನ್ನು ಹೊಂದಿದ್ದನೆಂದು ಹೇಳಲು ಅವನ ಗ್ರಂಥದಲ್ಲಿ ಯಾವ ಸೂಚನೆಯೂ ಇಲ್ಲ. ಉದ್ಭಟನು ತಾನು ನಿರೂಪಿಸಿದ ಅಲಂಕಾರಗಳಲ್ಲೇ ಧ್ವನಿ ಅಡಕವಾಗಿರುವುದರಿಂದ ಅದನ್ನು ಪ್ರತ್ಯೇಕ ವಾಗಿ ನಿರೂಪಿಸಲು ಪ್ರಯತ್ನಿಸಲಿಲ್ಲ ಎಂದು ಇಂದುರಾಜನು ಅಭಿಪ್ರಾಯಪಟ್ಟಿ ದ್ದಾನೆ. ಹೀಗೆ ಅಭಿಪ್ರಾಯಪಟ್ಟು, ತನ್ನ ವ್ಯಾಖ್ಯಾನದಲ್ಲಿ ಧ್ವನಿ ತತ್ತ್ವವನ್ನು ವಿಶ್ಲೇಷಿಸಿ, ಅದೂ ಒಂದು ಅಲಂಕಾರವೆಂಬ ಸಿದ್ಧಾಂತವನ್ನು ಪ್ರತಿಪಾದಿಸಿ, ಅದರ ಪ್ರವರ್ತಕತ್ವವನ್ನು ಉದ್ಭಟನಿಗೆ ಆರೋಪಿಸಿದ್ದಾನೆ. ಉದ್ಭಟ ಆನಂದವರ್ಧನರು ಕೆಲವರ್ಷಗಳಾದರೂ ಸಮಕಾಲೀನರಾಗಿದ್ದಿರಬಹುದು ; ಇದ್ದಿರಬೇಕು. ಆನಂದ ವರ್ಧನನು ಉದ್ಭಟನನ್ನು ಗೌರವದಿಂದ ಸ್ಮರಿಸುವ ರೀತಿಯಿಂದ ಇದನ್ನು ಊಹಿಸ ಬಹುದಾಗಿದೆ. ಆದರೆ, ಧ್ವನ್ಯಾಲೋಕದಲ್ಲಿಯೇ ಆಗಲಿ ಅಭಿನವಗುಪ್ತನ ವ್ಯಾಖ್ಯಾನ ದಲ್ಲಿಯೇ ಆಗಲಿ ಉದ್ಭಟನು 'ಧ್ವನ್ಯಲಂಕಾರ' ಸಿದ್ಧಾಂತದ ಪ್ರತಿಪಾದಕ ಎಂಬ ಸೂಚನೆ ದೊರಕದು. ಇಂದುರಾಜನ ಹೇಳಿಕೆಯಲ್ಲಿ ವಿಶ್ವಾಸವಿಡಬಹುದಾದರೆ, ನಾವು ಹೀಗೆ ಅನುಮಾನಿಸಬಹುದು: ಆ ಸಿದ್ಧಾಂತವನ್ನು ಉದ್ಭಟನಾಗಲಿ ಬೇರೆಯಾರಾದರೂ ಆಗಲಿ ಗ್ರಂಥರೂಪದಲ್ಲಿ ಹೊರಗೆಡವದಿದ್ದರೂ 'ಧ್ವನಿ–ಕಾವ್ಯಾತ್ಮ' ಸಿದ್ಧಾಂತ ವನ್ನು ವಿರೋಧಿಸುವ ಪಂಥಗಳಲ್ಲಿ 'ಧ್ವನ್ಯಲಂಕಾರ'ದ ಪಂಥವು ಉದ್ಭಟನ ಕಾಲದಲ್ಲಿ ಪ್ರಸಿದ್ಧವಾಗಿರಬೇಕು ; ಉದ್ಭಟನು ಅದರ ಪ್ರವರ್ತಕನೋ ಪ್ರಬಲ ಪಕ್ಷಪಾತಿಯೋ ಆಗಿದ್ದಿರಬೇಕು. ಈ ಸಂಗತಿ ಪಾರಂಪರ್ಯವಾಗಿ ಇಂದುರಾಜನ ಕಾಲದಲ್ಲೂ ಪ್ರಚಲಿತ ವಾಗಿದ್ದು, ಆ ಸಿದ್ಧಾಂತ ಅವನಿಗೆ ಚೆನ್ನಾಗಿ ಪರಿಚಿತವೂ ಆಗಿದ್ದು, ಒಪ್ಪಿತವೂ ಆಗಿ ದ್ದಿತು. ಈ ವಿಷಯವಾಗಿ ಉದ್ಭಟನ ಗ್ರಂಥವಾಗಲಿ ಹೇಳಿಕೆಯಾಗಲಿ ಉಪಲಬ್ಧ ವಿಲ್ಲದಿದ್ದರೂ, ಉದ್ಭಟನ ಅಲಂಕಾರ ಗ್ರಂಥದಲ್ಲಿ ಇಂದುರಾಜನ 'ಧ್ವನ್ಯಲಂಕಾರ' ಸಿದ್ಧಾಂತದ ಸೇರ್ಪಡೆಯಾಗಿರುವುದಕ್ಕೆ ಬೇರೆಯ ರೀತಿಯಲ್ಲಿ ವಿವರಣೆ ನೀಡುವುದು ಕಷ್ಟ. ಕಾಲದೃಷ್ಟಿಯಿಂದ ಕವಿರಾಜಮಾರ್ಗಕಾರನು ಉದ್ಭಟನಿಗೆ ಇಂದುರಾಜನಿ ಗಿಂತ ಹೆಚ್ಚು ಹತ್ತಿರದವನು. ಅವನ ಕಾಲದಲ್ಲಿ ಧ್ವನಿತತ್ತ್ವದ ಬಗೆಗಿನ ವಾದ ವಿವಾದಗಳು ಬಿಸಿ ಬಿಸಿಯಾಗಿದ್ದು, ಅಖಿಲಭಾರತವ್ಯಾಪ್ತಿಯನ್ನು ಪಡೆದಿದ್ದಿರಬೇಕು. ಅಲ್ಲದೆ, ಆ ಕಾಲದಲ್ಲಿ ಅಲಂಕಾರಶಾಸ್ತ್ರದಲ್ಲಿ ಉದ್ಭಟನ ಮತ್ತು ಅವನ ಅನುಯಾಯಿ ಗಳ ಒಂದು ಪಂಥವೇ ಇದ್ದಿರಬೇಕು ಎಂಬುದನ್ನು ಉದ್ಭಟನ ಬಗೆಗೆ ಆನಂದವರ್ಧನ, ಅಭಿನವಗುಪ್ತ, ರುಯ್ಯಕ, ಮಮ್ಮಟ ಮುಂತಾದ ಅನೇಕ ಆಲಂಕಾರಿಕರು ಮಾಡಿ ರುವ ಪ್ರಸ್ತಾಪಗಳಿಂದ ಅನುಮಾನಿಸಬಹುದು. ಆ ಪಂಥದ ಮುಖ್ಯ ಸಿದ್ಧಾಂತಗಳಲ್ಲಿ 'ಧ್ವನ್ಯಲಂಕಾರ'ವೂ ಒಂದು. ಇನ್ನೊಂದು ಹೀಗೆ: 'ಶ್ಲೇಷೆಯೊ ಡನೆ ಯಾವುದಾ ದರೂ ಇನ್ನೊಂದು ಅಲಂಕಾರವೂ ಒಡಗೂಡಿದ್ದರೆ, ಶ್ಲೇಷೆಗೆ ಪ್ರಾಧಾನ್ಯ ; ಅಲಂಕಾರ

ಗೌಣ'.[11] ಈ ಎರಡು ಸಿದ್ಧಾಂತಗಳ ತತ್ತ್ವಗಳನ್ನೂ ಸಮಾವೇಶಗೊಳಿಸಿರುವ ಪ್ರಯುಕ್ತ ಕವಿರಾಜಮಾರ್ಗದ ಪದ್ಯದಲ್ಲಿ ಸಮೆದಿರುವಂತೆ ಕಂಡು ಬರುತ್ತದೆ.[12] ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದದ್ದು – ಅನಿಮಿಷಯುಗ ಎಂಬ (ಶಬ್ದನಿಷ್ಠ) ಶ್ಲೇಷೆ; ಪದ್ಯದಲ್ಲಿ ಇದಕ್ಕೇ ಪ್ರಾಧಾನ್ಯ; ಇದರಿಂದಲೇ – ಹಾಗೂ 'ಇದು ಚೋದ್ಯಂ' ಎಂಬ ಶಬ್ದಪ್ರಯೋಗದಿಂದ – ವಾಕ್ಯಸೌಂದರ್ಯ ಪೋಷಕವಾದ, ಉಪಮಾದ್ಯೋತಕವಾದ, 'ಕಮಲ ಸದೃಶವಾದ ಮುಖದಲ್ಲಿ ಮೀನದ್ವಯ (=ಅನಿಮಿಷ

---

11 "If Slesha and some other alankara exist together, importance is to be given to slesha and the other alankara is to be considered subordinate" – (ಅದೇ ಗ್ರಂಥ : ಮುನ್ನುಡಿ, ಪು. xxiii)

12 ಕವಿರಾಜಮಾರ್ಗದ ಪದ್ಯ ಹೀಗಿದೆ :

ಧ್ವನಿಯೆಂಬುದಲಂಕಾರಂ
ಧ್ವನಿಯಿಸುಗುಂ ಶಬ್ದದಿಂದಮರ್ಥದೆ ದೂಷ್ಯಂ ;
ನೆನೆವುದದನಿಂತು ಕಮಳ-
ದೊಳನಿಮಿಷಯುಗಮೊಪ್ಪಿತೋರ್ಪುದಿಂತಿದು ಚೋದ್ಯಂ (iii 208)

ಈ ಪದ್ಯಕ್ಕೆ ಬೇರೆ ಬೇರೆ ವಿದ್ವಾಂಸರು ಹಲವು ವಿಧಗಳಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಪ್ರತಿ ವಿದ್ವಾಂಸನೂ ತನ್ನ ಅರ್ಥವಿವರಣೆ ಸರಿ ಎಂದು ವಾದಿಸುವುದು ಸಹಜ. ಹೊಸ ಹೊಸ ಆಧಾರಗಳು ಗಮನಕ್ಕೆ ಬಂದಂತೆ, ಹೊಸ ಹೊಸ ಸಂಶೋಧನೆಗಳು ನಡೆದಂತೆ, ವಿಚಾರ ಧಾಟಿಗೆ ಹೊಸ ತಿರುವು ಬರುವುದೂ ಸಹಜ. ಮೇಲ್ಕಂಡ ವಿವರಣೆಯಲ್ಲಿ ಈವರೆಗೆ ವ್ಯಕ್ತಪಟ್ಟಿರುವ ಅಭಿಪ್ರಾಯಗಳಿಗಿಂತ ಭಿನ್ನವಾದ ವಿವರಣೆಯನ್ನು ಗುರುತಿಸಬಹುದು. ಈ ವಿವರಣೆಯೇ ಕೊನೆಯ ಮಾತು ಎಂದು ನಾನು ನಂಬಿಲ್ಲ; ಹೆಚ್ಚಿನ ವಿಚಾರವಿಮರ್ಶೆಗೆ ಇನ್ನೂ ಅವಕಾಶವಿದೆ. ಈ ವರೆಗೆ ವ್ಯಕ್ತಪಟ್ಟಿರುವ ಅಭಿಪ್ರಾಯ ಭೇದಗಳನ್ನು ತಿಳಿಯಲು ಅಪೇಕ್ಷಿಸುವವರು ಈ ಮುಂದೆ ಹೆಸರಿಸಿರುವ ಗ್ರಂಥಗಳಲ್ಲಿ ಸಂಬಂಧಪಟ್ಟ ಪ್ರಕರಣವನ್ನು ನೋಡಬಹುದು (1) ಮುಳಿಯ ತಿಮ್ಮಪ್ಪಯ್ಯ : 'ಕವಿರಾಜಮಾರ್ಗ ವಿವೇಕ', ಮೈಸೂರು ಗೀತಾ ಬುಕ್ ಹೌಸ್‌ನ ಪ್ರಕಟನೆ, 1973 ; ಭಾಗ 2, ಪು, 311-312. (2) ಡಾ॥ ಕೆ. ಕೃಷ್ಣಮೂರ್ತಿ ; 'ಆನಂದವರ್ಧನನ ಕಾವ್ಯ ಮೀಮಾಂಸೆ', ಮೈಸೂರು ಶಾರದಾಮಂದಿರದ ಪ್ರಕಟಣೆ. 1951 ; ಪು. 51. (3) ಪ್ರೊ॥ ತೀ. ನಂ. ಶ್ರೀಕಂಠಯ್ಯ : 'ಭಾರತೀಯ ಕಾವ್ಯಮೀಮಾಂಸೆ' 1953 : ಮೊದಲ ಮುದ್ರಣ. ಪು. 458-459. (4) ಎಂ. ವಿ. ಸೀತಾರಾಮಯ್ಯ : 'ಶ್ರೀ ವಿಜಯ ಕೃತಿ ಕವಿರಾಜಮಾರ್ಗಂ', 1968 ; ಟಿಪ್ಪಣಿಗಳು, ಪು. 357-365. (5) ಭೀಮರಾವ್ ಚಿಟಗುಪ್ಪಿ : 'ಕವಿರಾಜಮಾರ್ಗಪ್ರಶಸ್ತಿ', ಮನ್ವಂತರ ಪ್ರಕಾಶನ, ಧಾರವಾಡ. 1973 ; ಪು. 83-88. (6) ಡಾ॥ ಕೆ. ಕೃಷ್ಣಮೂರ್ತಿ : 'ದಂಡಿಭಾಮಹರ ಕೃತಿಗಳು' ಪ್ರೊ॥ 'ವಿ. ಸೀ.' ಸಂಪಾದಿತ 'ಕವಿರಾಜಮಾರ್ಗ'. ಕವಿಕಾವ್ಯ ಪರಂಪರೆ – 1 ; 1973 ; ಪು. 131-134.

'ಗುರುಕುಲ ಪತ್ರಿಕಾ' ಎಂಬ ಸಂಸ್ಕೃತ ಭಾಷಾ ಪತ್ರಿಕೆಯಲ್ಲಿ (ಜನವರಿ, 1974) ಶ್ರೀ ಮ. ಕೃಷ್ಣಶರ್ಮರು ಬರೆದಿರುವ 'ಅಪಿ ವಿದ್ಯತೇ ಧ್ವನ್ಯಾಖ್ಯೋऽಲಂಕಾರಃ ಕಶ್ಚಿತ್' ಎಂಬ ಲೇಖನವೂ ಗಮನಾರ್ಹ.

ಯುಗ) ಸವೃತವಾದ ನಯನದ್ವಯವು’ ಎಂಬ ಅರ್ಥವು ಧ್ವನಿತವಾಗಿರುವುದು. ಹೀಗೆ, ಶಬ್ದನಿಷ್ಠವಾಗಿ ಧ್ವನಿತವಾಗುವ ಕಾವ್ಯಶೋಭಾಕರವಾದ ಅರ್ಥವೇ ಧ್ವನಿ ಎನ್ನಿಸಿಕೊಳ್ಳುವುದು ; ಈ ಅರ್ಥವನ್ನೂ ಮೀರಿ, ಇಲ್ಲದ ಒಂದು ಅರ್ಥ ಅದರಿಂದ (ಎಂದರೆ, ಧ್ವನಿತವಾದ ಅರ್ಥದಿಂದ) ಪ್ರತೀಯಮಾನವಾಗುತ್ತದೆ ಎನ್ನುವುದು ದೂಷ್ಯ (ಎಂದರೆ, ಖಂಡನಾರ್ಹ).

ಈ ವಿವರಣೆಯ ಬೆಳಕಿನಲ್ಲಿ, ಉದ್ಭಟೋದಿತ ಎನ್ನಲಾದ, ಕವಿರಾಜಮಾರ್ಗ ರಚನೆಯ ಕಾಲದಲ್ಲಿ ವಿಶೇಷವಾಗಿ ಪ್ರಚಲಿತವಾಗಿದ್ದ, ‘ಧ್ವನಿ’ ತತ್ತ್ವ ವಿರೋಧಿಯಾಗಿದ್ದ ಅಲಂಕಾರ ಪಂಥದ ‘ಧ್ವನ್ಯಲಂಕಾರ’ ಸಿದ್ಧಾಂತದ ಕನ್ನಡ ಅವತರಣಿಕೆಯೇ ಶ್ರೀ ವಿಜಯನ ಪದ್ಯ—ಎಂದು ಹೇಳಬಹುದು. ಈ ಸಿದ್ಧಾಂತವನ್ನು ಸ್ವಕಪೋಲ ಕಲ್ಪಿತವಾಗಿ ಅವನು ಪ್ರತಿಪಾದಿಸುತ್ತಿದ್ದಾನೆ ಎನ್ನುವುದಕ್ಕಿಂತ ಉದ್ಭಟಪಂಥದ ಪ್ರೇರಣೆಯಿಂದ ಕನ್ನಡದಲ್ಲಿ ಅದಕ್ಕೊಂದು ನಿಶ್ಚಿತಸ್ವರೂಪವನ್ನು ಕೊಟ್ಟಿದ್ದಾನೆ ಎನ್ನುವುದು ಸಮಂಜಸ. ಸಂಸ್ಕೃತ ಅಲಂಕಾರ ಶಾಸ್ತ್ರದ ಇತಿಹಾಸದಲ್ಲಿ ಪ್ರತೀಹಾರೇಂದು ರಾಜನಿಗೆ ಪೂರ್ವದಲ್ಲಿ ಅನ್ಯತ್ರ ಕಾಣಬಾರದ ‘ಧ್ವನ್ಯಲಂಕಾರ’ದ ಪ್ರತಿಪಾದನೆಯನ್ನು ಮೊತ್ತಮೊದಲಿಗೆ ಮಂಡಿಸಿದ ಶ್ರೇಯಸ್ಸು ಒಬ್ಬ ಕನ್ನಡ ಅಲಂಕಾರಿಕನದು. ಪರೋಕ್ಷವಾಗಿ ಉದ್ಭಟನಿಗೆ ಅದು ಸಲ್ಲಬಹುದು. ಧ್ವನಿಪ್ರಸ್ಥಾನದ ಚರಿತ್ರೆಯಲ್ಲಿ ಅಗತ್ಯವಾಗಿ ಗಮನಿಸಬೇಕಾದ ಒಂದು ಮುಖ್ಯ ವಿಚಾರವಿದು.

ಕವಿರಾಜಮಾರ್ಗವು ಉದ್ಭಟನಿಗೆ ಎಷ್ಟರಮಟ್ಟಿಗೆ ಋಣಿಯಾಗಿದೆ ಎಂಬ ಈ ವಿಚಾರವಿಮರ್ಶೆ ಊಹೆಯ ಹಾರುಗುದುರೆಯ ಮೇಲೆ ಸಾಗಿದ್ದರೂ ಅದು ಅಲ್ಲಿ ಇಲ್ಲಿ ಹಿಡಿತಕ್ಕೆ ಸಿಕ್ಕುವ ಗಟ್ಟಿನೆಲದ ಮೇಲೆಯೇ ಸೋಕುತ್ತ ನಡೆದಿದೆಯೆಂದು ನಂಬಿದ್ದೇನೆ.

ಒಂದು ಸಂಭಾಷಣೆ

ಎಸ್. ಸತ್ಯೇಂದ್ರ

ಒಂದು ರಾತ್ರಿ, ನನ್ನ ವಾಚು ನಡೆಯುತ್ತಿದ್ದಂತೆಯೇ
ನಾನು ಹಾಸಿಗೆ ಸೇರಿದ್ದೆ,
ವಾಚಿಗೆ ಕಿವಿ ಕೊಟ್ಟೆ :
ಟಿಕ್.. ಟಕ್, ಟಿಕ್.. ಟಕ್, ಟಿಕ್.. ಟಿಕ್ !
ಹಾಗೆ ನನ್ನ ಎದೆಗೂ ಕಿವಿಕೊಟ್ಟೆ :
ಡಬ್.. ಡಬ್, ಡಬ್.. ಡಬ್.
ವಾಚು ಎದೆಗೆ ಹೇಳಿತು
“ ನಿಲ್ಲಿಸು ! ”
ತುಸು ನಿದ್ದೆ ಮಾಡು.
ನೀನು ಸುಸ್ತಾಗಿದ್ದೀಯ !
ನಿನಗೆ ಕೀ ಯಾವಾಗಲಿಂದ
ಕೊಡಲ್ಪಟ್ಟಿದೆ ?
ನಿನ್ನಲ್ಲಿ ಕೆಲವು ಬಾರಿ ಟೊಳ್ಳುಶಬ್ದವೂ ಕೇಳಿಸುತ್ತದೆ.
ಎದೆ ಎಂದಿಗಿಂತ ಜೋರಾಗಿ ಬಡಿದುಕೊಳ್ಳಲಾರಂಭಿಸಿತು.
ಅದು ಹೇಳಿತು :
“ ಏನು ನಿನ್ನ ಮಾತಿನರ್ಥ,
ಕೀ ಕೊಡುವುದು ” ?
ನಾನು ನೋವು ತಿಂದಿದ್ದೀನಿ,
ನಾನು ಸಿಟ್ಟಾಗಿದ್ದೀನಿ,
ನಾನು ಭಗ್ನವಾಗಿದ್ದೀನಿ,
ನಾನು ಹೊಡೆಯಲ್ಪಟ್ಟಿದ್ದೀನಿ,
ಆದರೆ ಎಂದಿಗೂ ನನಗೆ ಕೀ ಕೊಟ್ಟೇ ಇಲ್ಲ.
ನಾನು ಶಾಂತವಾಗಿಯೋ
ಜೋರಾಗಿಯೋ
ಅಥವಾ ಅಸ್ಥಿರವಾಗಿಯೋ
ಬಡಿದುಕೊಂಡರೂ

ನಾನು ಬರೀ ಹೃದಯವಷ್ಟೆ—
ನನಗೆ ಕೀ ಕೊಡಬೇಕಾದ ಅವಶ್ಯಕತೆಯಿಲ್ಲ.
ನಾನು ಕೀ ಕೊಡುವಂತಹ ವಸ್ತುವೇ ಆಗಿದ್ದಲ್ಲಿ
ನನ್ನನ್ನೂ ನಿನ್ನ ಹಾಗೆ—
ವಾಚೆಂದು ಕರೆದು ಬಿಡುತ್ತಿದ್ದರು.
ಆಗ ನಾನು ಸುಮ್ಮನೆ—
ಅವರು ಹಾಕಿದೆಡೆಗಳಲ್ಲೇ ಕುಳಿತುಬಿಡುತ್ತಿದ್ದೆ.
ಜೇಬುಗಳಲ್ಲಿ, ಮುಂಗೈಗಳಲ್ಲಿ.
ಯಥಾಪ್ರಕಾರವೇ ಬಡಿದುಕೊಳ್ಳುತ್ತಾ ಹೋಗುತ್ತಿರುತ್ತೇನೆ.
ಕೀ ಕೊಡದಂತೆ—
ಯಾರಿಗೂ ಸಿಗದಂತೆ.
ಮತ್ತು ಆ ವಿಷಯದಲ್ಲಿ ಹೆಮ್ಮೆ ಪಡುತ್ತೇನೆ.

ಬೇಕ್‌ಲೈಟ್ ಜನಕ ಬೇಕ್‌ಲಾಂಡ್

ಬಿ. ಗೋ. ರಮೇಶ್

ಮಾನವ ನಿರ್ಮಿತ ಅದ್ಭುತಗಳು ಹಲವು. ಬದುಕಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅವು ಅವನಿಗೆ ಸಹಕಾರಿ. ಮರ, ಕಲ್ಲು, ಕಬ್ಬಿಣ, ಮಣ್ಣು, ರಾಸಾಯನಿಕ ವಸ್ತುಗಳು, ಚರ್ಮ ಇತ್ಯಾದಿ ವಸ್ತುಗಳು ಅವನ ನೆರವಿಗೆ ಬಂದವು. ಒಂದಲ್ಲ ಒಂದು ರೂಪದಲ್ಲಿ ಅವನ್ನು ಬಳಸುವುದು ಮಾನವನ ಚಟುವಟಿಕೆಗಳನ್ನು ಹೆಚ್ಚಿಸಿತು. ಕ್ರಮೇಣ ಹೊಸ ಕೃತಕ ವಸ್ತುಗಳು ತಯಾರಾದವು. ಹಲವು ವಿಜ್ಞಾನಿಗಳ ಬುದ್ಧಿವಂತಿಕೆಯ ಫಲವಾಗಿ ವಸ್ತುಗಳ ಅಧ್ಯಯನದಲ್ಲಿ ವೈಜ್ಞಾನಿಕ ದೃಷ್ಟಿ ಪ್ರಜ್ವಲಿಸಿತು. ಇಂತಹ ಯತ್ನದ ಫಲವಾದ ಹಾಗೂ ನಾಗರಿಕತೆಯ ಸೌಲಭ್ಯಗಳನ್ನು ಹೆಚ್ಚಿಸಿ, ಹೆಚ್ಚಿಸುತ್ತಿರುವ ವಸ್ತು ಪ್ಲಾಸ್ಟಿಕ್ ಎಂದರೆ ತಪ್ಪಾಗಲಾರದು.

ಈ ಪ್ಲಾಸ್ಟಿಕ್ ಒಂದು ಅದ್ಭುತ ವಸ್ತು. ಯಾವುದೋ ಮಂಜಿನ ಪರ್ವತವ ಇಲ್ಲದೇ ನಿರ್ಜನ ಪ್ರದೇಶದ ಬೆಟ್ಟದ ಮೇಲಲ್ಲದೆ, ಭೂಮಿಯ ಮೇಲೆ ಎಲ್ಲೇ ನಿಂತು ನೋಡಿದರೂ ಪ್ಲಾಸ್ಟಿಕ್ ಅನ್ನು ಒಂದಲ್ಲ ಒಂದು ರೂಪದಲ್ಲಿ ಇಂದು ಕಾಣುತ್ತೇವೆ. ಪ್ಲಾಸ್ಟಿಕ್‌ನ ಮೂಲ ನೈಸರ್ಗಿಕ ಪದಾರ್ಥಗಳೇ ಅದರೂ ಅದು ಸಂಪೂರ್ಣ ಸಂಶ್ಲೇಷಿತ ಪದಾರ್ಥ. 'ಬೇಕ್‌ಲೈಟ್' ಹೆಸರಿನಲ್ಲಿ ಪ್ಲಾಸ್ಟಿಕ್ ಮೊದಲು ತಯಾರಾದ್ದು 1907 ರಲ್ಲಿ. ಅದಕ್ಕೆ ಮೊದಲು, ಸೆಲ್ಯುಲಾಯ್ಡ್ ಹೆಸರಿನಲ್ಲಿ ಅಂತಹ ಕೃತಕ ವಸ್ತು ತಯಾರಾದರೂ ಸರಿಯಾದ ವಿವರಣೆ ನೀಡಲಿಲ್ಲ. ಬೇಕ್‌ಲೈಟ್ ತಯಾರಿಸಲು ಮೊದಮೊದಲು ಕೇವಲ ಸುಮಾರು 40 ಕೈಗಾರಿಕೆಗಳಿದ್ದವು. ಆದರೆ ಇಂದು ಪ್ಲಾಸ್ಟಿಕ್ ಬಳಸದ ಕೈಗಾರಿಕೆ ಅಥವಾ ಉದ್ಯಮಗಳೇ ಇಲ್ಲವೆಂದರೆ ಉತ್ಪ್ರೇಕ್ಷೆಯಲ್ಲ. ಈ ಬೇಕ್‌ಲೈಟ್ ಕಂಡುಹಿಡಿದ ವಿಜ್ಞಾನಿ ಅಮೆರಿಕದ ಲಿಯೊ ಹೆಂಡ್ರಿಕ್ ಬೇಕ್ ಲಾಂಡ್ (1863-1944). ಬೆಲ್ಜಿಯಮ್ಮಿನ ಘೆಂಟ್ ನಗರ ಅವನ ಹುಟ್ಟೂರು, ಅವನಿಗೆ 8 ವರ್ಷ ವಯಸ್ಸಾಗಿದ್ದಾಗ ಶಾಲೆಯಲ್ಲಿ ಉಪಾಧ್ಯಾಯರು ಅಮೆರಿಕೆಯ ಮೊದಲನೆ ವಿಜ್ಞಾನಿ ಬೆಂಜಮಿನ್ ಫ್ರಾಂಕ್ಲಿನ್ನನ ಕಥೆ ಹೇಳಿದರು. ಕಥೆ ಕೇಳಿದ ಬೇಕ್‌ಲಾಂಡ್ ತಾನೊಬ್ಬ ಅಮೆರಿಕನ್ ಆಗುವೆ ಎಂದು ಕನಸಿನಲ್ಲೂ ನೆನೆಸಿರಲಿಲ್ಲ. ಬೇಕ್‌ಲಾಂಡ್‌ನಿಗೆ ವಿಜ್ಞಾನದಲ್ಲಿ ಆಸಕ್ತಿ ಇತ್ತು. ಘೆಂಟ್ ಪುರಸಭೆ ತಾಂತ್ರಿಕ ಶಾಲೆಯ ಸಂಜೆ ತರಗತಿಗಳಲ್ಲಿ ಪಾಠ ಕೇಳಲು ಹೋಗುತ್ತಿದ್ದ ಬೇಕ್‌ಲಾಂಡ್. 17 ನೇ ವಯಸ್ಸಿಗೆ ಘೆಂಟ್ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯಾಗಿ ಸೇರಿದ.

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲೆಲ್ಲಾ ಬೇಕ್‌ಲಾಂಡೇ ಚಿಕ್ಕವನು. 21 ನೇ ವಯಸ್ಸಿನಲ್ಲೇ ಡಾಕ್ಟರೇಟ್ ಪದವಿ ಪಡೆದ (1884).

ಘೆಂಟ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕನಾಗಿ ಒಂದೆರಡು ವರ್ಷ ಕಳೆದ ಬಳಿಕ ವಿದ್ಯಾರ್ಥಿ ವೇತನವನ್ನು ಪಡೆದು ಅಮೆರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ತೆರಳಿದ (1899). ಈ ವೇತನದಿಂದಾಗಿ ಜರ್ಮನಿ, ಫ್ರಾನ್ಸ್, ಸ್ಕಾಟ್ಲೆಂಡ್ ಮತ್ತು ಇಂಗ್ಲೆಂಡ್ ದೇಶಗಳ ವಿಶ್ವವಿದ್ಯಾನಿಲಯಗಳಿಗೂ ಭೇಟಿ ಇತ್ತು ಅಪಾರ ಜ್ಞಾನ ಸಂಪಾದಿಸಿದ.

ಬೇಕ್‌ಲಾಂಡನಿಗೆ ಫೋಟೋಗ್ರಫಿ ಒಂದು ಹವ್ಯಾಸವಾಗಿತ್ತು. ಅವನು ನ್ಯೂಯಾರ್ಕಿನಲ್ಲಿದ್ದಾಗ, ಅಲ್ಲಿಯ ಹೆಚ್. ಟಿ. ಅಂಥೋನಿ ಅಂಡ್ ಕಂಪೆನಿಯಲ್ಲಿ ಫೋಟೋಗ್ರಫಿ ಬಲ್ಲ ರಸಾಯನ ಶಾಸ್ತ್ರ ಪದವೀಧರನ ಕೆಲಸವೂ ಸಿಕ್ಕಿತು (1889). ಸುಮ್ಮನೆ ಭೇಟಿಗಾಗಿ ಬಂದಿದ್ದವನು ಅಲ್ಲೇ ತಳವೂರಬೇಕಾಯಿತು. ತಾನು ಕೆಲಸ ಮಾಡುತ್ತಿದ್ದ ವಿಶ್ವವಿದ್ಯಾನಿಲಯಕ್ಕೆ ರಾಜಿನಾಮೆ ಸಲ್ಲಿಸಿದರೂ ಬೆಲ್ಜಿಯಮ್ಮಿನ ಶಿಕ್ಷಣ ಮಂತ್ರಿ ಒಪ್ಪದೆ ಗೌರವ ಪ್ರಾಧ್ಯಾಪಕನೆಂದು ಕರೆದು ಗೌರವಿಸಿದರು.

ಅಂಥೋನಿ ಕಂಪೆನಿಯಲ್ಲಿ 2 ವರ್ಷಗಳ ಕಾಲ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿದಮೇಲೆ ಅವನಿಗೆ ತಾನೇ ಒಂದು ಪ್ರಯೋಗಾಲಯವನ್ನು ತೆರೆಯ ಬೇಕೆನಿಸಿ, 1891ರಲ್ಲಿ ತೆರೆದನು. ಕೈಗಾರಿಕೆಗಳಿಗೆ ಸಲಹೆ ನೀಡುವುದೇ ಇಲ್ಲಿ ಬೇಕ್‌ಲಾಂಡನ ಗುರಿಯಾಗಿತ್ತು. ಅಲ್ಲಿ ಅವನು ಇಡೀ ದಿನ ಕೆಲಸಮಾಡುತ್ತಿದ್ದ. ಕೈಲಿದ್ದ ಹಣ ಎಲ್ಲಾ ಖರ್ಚಾಯಿತು. ಜತೆಗೆ ಕಾಯಿಲೆ ಬೇರೆ ಅಂಟಿತ್ತು. ಆದರೂ, ಬೇಕ್‌ಲಾಂಡನಲ್ಲಿ ಉತ್ಸಾಹ ಕಡಮೆಯಾಗಲಿಲ್ಲ. ಗುಣಮುಖವಾದ ಮೇಲೆ ಫೋಟೋಗ್ರಫಿಯ ಬಗೆಗೆ ಸಂಶೋಧನೆ ನಡೆಸಿ, ಕೃತಕ ಬೆಳಕಿನಲ್ಲಿ ಸ್ಫುಟಗೊಳಿಸಬಹುದಾದ ವಿಶೇಷ ಬಗೆಯ ಫೋಟೋಗ್ರಾಫಿಕ್ ಕಾಗದವನ್ನು ತಯಾರಿಸಿದ. ಅದುವರೆಗೆ ಛಾಯಾಚಿತ್ರಗ್ರಾಹಕರು ಬಿಸಿಲಿನಲ್ಲಿ ಮಾತ್ರ ಫೋಟೊ ಹಿಡಿಯುತ್ತಿದ್ದರು. ಬಿಸಿಲು ಇಲ್ಲದಾಗ ಈ ಕೆಲಸ ಆಗುತ್ತಿರಲಿಲ್ಲ. ಆ ಸಂದರ್ಭದಲ್ಲಿ ಬೇಕ್‌ಲಾಂಡ್‌ನ 'ವೆಲಾಕ್ಸ್' ಎಂಬ ಕಾಗದ ಚೆನ್ನಾಗಿ ಉಪಯೋಗಕ್ಕೆ ಬಂತು. ಇದರ ಬಳಕೆಯನ್ನು ಕೆಲವರು ಮೊದಲು ವಿರೋಧಿಸಿದರು. ಆದರೆ ಈ ಕಾಗದಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸಿದಾಗ ಜನ ಅದನ್ನು ಸ್ವಾಗತಿಸಿದರು. ಸ್ವಲ್ಪದಿನಗಳಲ್ಲೇ ಹಣದ ತೀವ್ರ ತೊಂದರೆಗೊಳಗಾದ ಬೇಕ್‌ಲಾಂಡ್ ತನ್ನ ತಂತ್ರದ ಸ್ವಾಮ್ಯವನ್ನು ಈಸ್ಟ್‌ಮನ್ ಕೊಡಾಕ್ ಸಂಸ್ಥೆಗೆ ಮಾರಿದ (1899). ಇದರಿಂದ ಒಮ್ಮೆಲೇ ಅವನು ಭಾರಿ ಹಣವಂತನೂ ಆದ.

ಅನಂತರ 6 ವರ್ಷಗಳು ಬೇಕ್‌ಲಾಂಡ್ ನಯಾಗರದ ಕೈಗಾರಿಕೆಗಳಲ್ಲಿ ಕೆಲಸ ಮಾಡಿದ. ನಯಾಗರ ಜಲಪಾತಗಳಿಂದ ವಿದ್ಯುಚ್ಛಕ್ತಿ ಉತ್ಪತ್ತಿ ಆಗುತ್ತಿತ್ತು. ಈ ಮಧ್ಯೆ ಬೇಕ್‌ಲಾಂಡ್ ಒಮ್ಮೆ ಜರ್ಮನಿಯ ಚಾರ್ಲೋಟನ್‌ಬರ್ಗ್‌ನ ತಾಂತ್ರಿಕ ಸಂಸ್ಥೆಯ ವಿದ್ಯುತ್ ರಾಸಾಯನಿಕ ಪ್ರಯೋಗಶಾಲೆಯಲ್ಲಿ ವಿದ್ಯಾಭ್ಯಾಸಮಾಡಿ ಬಂದ. ಹಿಂತಿರುಗಿದಮೇಲೆ ಸಂಶ್ಲೇಷಿತರಾಳಗಳನ್ನು ತಯಾರಿಸುವುದರಲ್ಲಿ ತೊಡಗಿದ(1905). ಯಾವ ವಿಷಯ ಕಲಿಯಬೇಕಾದರೂ ಏಕಾಗ್ರತೆ ವಹಿಸಬಲ್ಲೆನೆಂದು ಬೇಕ್‌ಲಾಂಡ್ ತನ್ನ ಸಾಧನೆಯಿಂದ ಅರಿತಿದ್ದ. ಒಂದಷ್ಟು ರಜಾ ಕಾಲವನ್ನು ಹೆಂಡತಿಯೊಡನೆ ಕಳೆಯಲೂ ಅವನು ಹಿಂಜರಿಯುತ್ತಿದ್ದ. ಇದರಿಂದ ಎಲ್ಲಿ ತನ್ನ ಸಾಧನೆಗೆ ಭಂಗ ಬಂದೀತೋ ಎಂಬ ವಿಚಾರ ಅವನದು.

ನ್ಯೂಯಾರ್ಕ್ ಸಮೀಪದ ಯಾಂಕರ್ಸ್‌ನಲ್ಲಿ ಬೇಕ್‌ಲಾಂಡ್ ಒಂದು ಪ್ರಯೋಗ ಶಾಲೆ ತೆರೆದ. ಕರಗಿಸಲಾಗದ, ಕರಗದ, ಆಮ್ಲ ಮತ್ತು ತೈಲಗಳಿಗೆ ವಿರೋಧಿ ಯಾಗಿರಬಲ್ಲ ರಾಳದ ನಿರ್ಮಾಣ ಅವನ ಗುರಿಯಾಗಿತ್ತು. ಒಮ್ಮೆ ಅವನು ಫಾರ್ಮಾಲ್ಡಿಹೈಡ್ ಮತ್ತು ಕಾರ್ಬಾಲಿಕ್ ಆಮ್ಲ (ಫಿನಾಲ್) ರಾಸಾಯನಿಕಗಳನ್ನು ಬೆರೆಸಿದ. ಹೀಗೆ ಬೆರೆಸಿ ಪಡೆದ ಒತ್ತರವನ್ನು ಕರಗಿಸಿದಾಗ ಅರಗಿನಂಥ ಪದಾರ್ಥ ಸಿಗಬಹುದೆಂದು ಊಹಿಸಿದ್ದ. ದ್ರಾವಕವೊಂದರ ಸಹಾಯದಿಂದ ಪಡೆದ ಒತ್ತರ ಜಲನಿರೋಧಕವಾಗೂ ವಿದ್ಯುತ್ ಅವಾಹಕವಾಗೂ ಗಟ್ಟಿಯಾಗೂ ಇತ್ತು. ಕಾಯಿಸಿ ಇದನ್ನು ಕರಗಿಸಿ, ಅಚ್ಚಿನಲ್ಲಿ ಬೇಕಾದ ರೂಪು ಕೊಡುವಂತಿತ್ತು. ಒಣಗಿದ ಮೇಲೆ ಬಹಳ ಗಡುಸಾಗಿದ್ದು ಮತ್ತೆ ಗರಗಿಸಲು ಅಸಾಧ್ಯವಾಗಿತ್ತು. ಬೇಕ್‌ಲಾಂಡ್ ಒತ್ತರವನ್ನು ಗಾಜಿನ ಪಾತ್ರೆಯೊಂದರಲ್ಲಿ ಹಾಕಿ ಅದನ್ನು ಹೆಚ್ಚು ಶಾಖದಲ್ಲಿ ಕಾಯಿ ಸಿದ. ಒತ್ತರ ಕರಗಿ ದ್ರವವಾಗಿ ಸ್ವಲ್ಪಕಾಲದಲ್ಲಿ ಗಾಜಿನಂತೆಯೇ ಪಾರದರ್ಶಕವಾಗಿ ಪಾತ್ರೆಯ ಆಕಾರಕ್ಕೆ ಹೊಂದಿಕೊಂಡಿತು. ಪಾತ್ರೆಯನ್ನು ತಂಪು ಮಾಡಿದಾಗ, ಗಾಜಿನಪಾತ್ರೆ ಆಕಾರದ ಪಾತ್ರೆಯೊಂದು ಕೆಳಕ್ಕೆ ಬಿತ್ತು. ಬೇಕ್‌ಲಾಂಡ್ ತನ್ನ ಸಾಧನೆಗೆ ಆನಂದಪಟ್ಟ.

ಥರ್ಮೋಸೆಟಿಂಗ್ ಪ್ಲಾಸ್ಟಿಕ್‌ಗಳಲ್ಲಿ ಇದು ಮೊದಲನೆಯದು. ಕಾಯಿಸಿ ಒತ್ತರಕ್ಕೀಡಾದಾಗ ಗಟ್ಟಿಯಾಗುತ್ತದೆ. ಆರಿದಮೇಲೆ ಆಕಾರ ಬದಲಾಗುವುದಿಲ್ಲ. 1909ರ ಸುಮಾರಿಗೆ ಬೇಕ್‌ಲಾಂಡ್ ಇಂಥ ವಸ್ತುವಿನ ಅಸ್ತಿತ್ವವನ್ನು ಪ್ರಕಟಿಸಿದ. ತನ್ನ ಸಂಶೋಧನೆಯ ನೆನಪಿಗಾಗಿ ಹಗುರವಾದ ಇದಕ್ಕೆ ಬೇಕ್‌ಲೈಟ್ ಎಂದು ಹೆಸರಿಟ್ಟ. ಹಲವು ಕೈಗಾರಿಕೆಗಳಲ್ಲಿ ಬೇಕ್‌ಲೈಟ್ ಬಳಕೆಗೆ ಬಂದಿತು. ಸಾಮಾನ್ಯ ಕೆಲಸಗಾರನೂ ಇದನ್ನು ತಿಳಿಯಲು ಸುಲಭ ಸಾಧ್ಯವಿತ್ತು. ವಿದ್ಯುತ್ ಅವಾಹಕ ವಾಗಿದ್ದ ಬೇಕ್‌ಲೈಟ್ ವಿದ್ಯುತ್ ಸಾಧನಗಳ ತಯಾರಕರನ್ನು ಬಹುವಾಗಿ ಆಕರ್ಷಿಸಿತು. ಅಷ್ಟು ಹೊತ್ತಿಗೇ ಪ್ರಚುರವಾಗಿದ್ದ, ಹಾಗೂ ಜಾನ್ ಹಯಾಟ್ ಕಂಡುಹಿಡಿದಿದ್ದ

ಸೆಲ್ಯುಲಾಯ್ಡ್ ವಸ್ತುಗಳ ಸ್ಥಾನವನ್ನು ಬೇಕ್‌ಲೈಟ್ ಆಕ್ರಮಿಸಿತು. ಬೆಂಕಿಯ ಶಾಖಕ್ಕೆ ಸೆಲ್ಯುಲಾಯ್ಡ್‌ಗಳು ಕರಗಿ ಹೋಗುತ್ತಿದ್ದವು. ಬೇಕ್‌ಲೈಟ್ ಹಾಗಾಗದೆ, ಹೆಚ್ಚು ಉಪಯುಕ್ತವಾಯಿತು. ಫಿನಾಲಿಕ್ ಪ್ಲಾಸ್ಟಿಕ್ ಎನ್ನಬಹುದಾದ ಬೇಕ್‌ಲೈಟನ್ನು ಕೃತಕರಾಳ ಎನ್ನುವುದೂ ಉಂಟು. ಪೆನ್ನು, ದೀಪದ ಸ್ವಿಚ್, ಟೆಲಿಫೋನ್ ಮತ್ತು ರೇಡಿಯೋ ಭಾಗಗಳು, ಸಿಗರೇಟ್ ಹಿಡಿಕೆಗಳು ಇವುಗಳ ತಯಾರಿಕೆಯಲ್ಲಿ ಬೇಕ್‌ಲೈಟ್ ಇಂದೂ ಉಪಯೋಗದಲ್ಲಿದೆ.

ಬೇಕ್‌ಲಾಂಡ್ ತನ್ನ ಪ್ರಯೋಗಾಲಯದಲ್ಲಿ ರಸಾಯನ ಶಾಸ್ತ್ರಜ್ಞರಿಗೆ ಕ್ರಮಬದ್ಧ ಶಿಕ್ಷಣವನ್ನು ಕೊಡತೊಡಗಿದ. ಉತ್ತಮ ಗುಣ ಧರ್ಮಗಳುಳ್ಳ ವಸ್ತುಗಳ ತಯಾರಿಕೆಯಲ್ಲಿ ರಸಾಯನ ಶಾಸ್ತ್ರದ ಅನ್ವಯವನ್ನು ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದ. ಸಸ್ಯಜನ್ಯ ಹಾಗೂ ಇತರ ನೈಸರ್ಗಿಕ ರಾಳಗಳನ್ನೇ ಅವಲಂಬಿಸ ಬೇಕಾಗಿದ್ದುದು ಬೇಕ್‌ಲಾಂಡನ ಸಂಶೋಧನೆಯಿಂದ ತಪ್ಪಿತು. ಇದರಿಂದ ನೂರಾರು ಬಗೆಯ ಪ್ಲಾಸ್ಟಿಕ್‌ಗಳಿಗಾಗಿ ರಾಳಗಳ ತಯಾರಿಕೆ ಈಗ ಸಾಧ್ಯವಾಗಿದೆ.

ಬೇಕ್‌ಲೈಟ್‌ನಿಂದ ಬೇಕ್‌ಲಾಂಡನಿಗೆ ಜೀವನದ ಕೊನೆಗಾಲದಲ್ಲಿ ಸಂಪತ್ತೂ ಮಾನ್ಯತೆಯೂ ದೊರೆತವು. 1924ರಲ್ಲಿ ಅಮೆರಿಕನ್ ಕೆಮಿಕಲ್ ಸೊಸೈಟಿಗೆ ಅಧ್ಯಕ್ಷನಾಗಿದ್ದ. ತನ್ನ 75ನೇ ವಯಸ್ಸಿನವರೆಗೂ, ಬೇಕ್‌ಲೈಟ್ ಕಾರ್ಪೊರೇಷನ್‌ಗೆ ಅಧ್ಯಕ್ಷನಾಗಿದ್ದ. ಹಲವು ವಿಷಯಗಳ ಬಗೆಗೆ ಬೇಕ್‌ಲಾಂಡ್ ಸೊಗಸಾದ ಲೇಖನ ಗಳನ್ನು ಬರೆದದ್ದೂ ಉಂಟು. 1939ರಲ್ಲಿ ವೃತ್ತಿಯಿಂದ ನಿವೃತ್ತಿ ಹೊಂದಿದ ಪ್ಲಾಸ್ಟಿಕ್ ವಿಜ್ಞಾನಿ ಬೇಕ್‌ಲಾಂಡ್, 1944ರಲ್ಲಿ ನ್ಯೂಯಾರ್ಕಿನ ಸಮೀಪದ ಬೀಕನ್‌ನಲ್ಲಿ ತೀರಿಕೊಂಡ. ಸಂಯಮ, ಸಹನೆಗಳಿಗೆ ಹೆಸರಾದ ಈ ವಿಜ್ಞಾನಿ ಇಂದಿನ ಸೌಲಭ್ಯಗಳಲ್ಲಿ ಶೇಕಡ 80ರಷ್ಟು ಬಳಕೆಯಲ್ಲಿರುವ, ಹಾಗೂ ಕಬ್ಬಿಣ, ಉಕ್ಕುಗಳನ್ನೂ ಮೀರಿಸಿರುವ ಪ್ಲಾಸ್ಟಿಕ್‌ನ ಇಂದಿನ ಹಲವು ರೂಪಗಳಿಗೆ ಬಹುಮಟ್ಟಿಗೆ ಕಾರಣ ನಾದವನು ಎಂಬುದನ್ನು ನಾವು ಮರೆಯಬಾರದು.

ಜಾಗತಿಕ ನ್ಯಾಯಾಲಯ

ಎಸ್. ನಾರಾಯಣ ಮೂರ್ತಿ

ಎರಡನೆಯ ಜಾಗತಿಕ ಯುದ್ಧವಾದನಂತರ, 1945 ರಲ್ಲಿ ಅಲ್ಲಿಯವರೆಗಿದ್ದ ರಾಷ್ಟ್ರಗಳ ಸಂಘ (ಲೀಗ್ ಆಫ್ ನೇಶನ್ಸ್) ಕಣ್ಮರೆಯಾಗಿ ಅದರ ಸ್ಥಾನವನ್ನು ಈಗಿರುವ ಸಂಯುಕ್ತ ರಾಷ್ಟ್ರ ಸಂಸ್ಥೆ (ಯುನೈಟೆಡ್ ನೇಶನ್ಸ್) ತೆಗೆದುಕೊಂಡಿತು. ಪ್ರಪಂಚದಲ್ಲಿ ಯುದ್ಧಗಳನ್ನು ತಡೆಗಟ್ಟಲು, ಶಾಶ್ವತವಾದ ಶಾಂತಿಯನ್ನು ಸ್ಥಾಪಿಸಲು ಅನೇಕ ತಲೆಮಾರುಗಳಿಂದ ಮನುಷ್ಯ ಒಂದಲ್ಲ ಒಂದು ರೀತಿಯಲ್ಲಿ ಪ್ರಯತ್ನ ಮಾಡುತ್ತಲೇ ಬಂದಿದ್ದಾನೆ. ಶಾಂತಿ ಸ್ಥಾಪನೆಗಾಗಿ ಅವಿರತ ಪ್ರಯತ್ನ ನಡೆದಿದ್ದರೂ ಶಾಂತಿ ಮಾತ್ರ ಬಿಸಿಲ್ಗುದುರೆಯಂತೆ ದೂರ ದೂರ ಸರಿಯುತ್ತಲೇ ಇದೆ. ಒಂದಲ್ಲ ಒಂದು ಕಡೆ ಯುದ್ಧಗಳು ಪ್ರಪಂಚದಲ್ಲಿ ನಡೆಯುತ್ತಲೇ ಬಂದಿವೆ. ಶಾಂತಿ ಎಂಬುದು ಎರಡು ಯುದ್ಧಗಳ ಮಧ್ಯದ ಅವಧಿ ಮಾತ್ರ, ಎಂಬುದು ಅನುಭವದ ಮಾತು. ಯುದ್ಧಕ್ಕೆ ಪೂರ್ಣವಿರಾಮವನ್ನು ಕೊಡಬೇಕೆಂಬ ಮಾನವನ ಉತ್ಕಟೇಚ್ಛೆಯು ಇನ್ನೂ ಘನೀಭವಿಸಿಲ್ಲ. ಮೊದಲನೆಯ ಜಾಗತಿಕ ಯುದ್ಧವೇ ಯುದ್ಧಕ್ಕೊಂದು ಕೊನೆ ಎಂದು ಜಗತ್ತು ಸಾರಿತು. ಅದರನಂತರ ಶಾಂತಿ ಸರ್ವತೋಮುಖವಾಗಿ ಎಲ್ಲೆಡೆ ಹರಡಿತು. ಆದರೆ ಆ ಶಾಂತಿಯ ವಾತಾವರಣ ಬಹಳ ಕಾಲದವರೆಗೆ ಉಳಿಯಲಿಲ್ಲ; ಅದು ಕೇವಲ ಕೋರಿಕೆಯ ಶಾಂತಿಯೆಂಬುದು ಅನುಭವಕ್ಕೆ ಬಂದಿತು. ಯಾಕೆಂದರೆ, ಅದೇ ದ್ವಿತೀಯ ಮಹಾಯುದ್ಧಕ್ಕೆ ನಾಂದಿಯಾಯಿತು. ಆದ್ದರಿಂದ ಯುದ್ಧ ಎಂಬುದಕ್ಕೆ ಕೊನೆಯೇ ಇಲ್ಲವೇನೊ ಎಂಬ ಭಯ ಮೂಡಿತು. ಇಂಥ ವಾತಾವರಣದಲ್ಲಿಯೇ ಸಂಯುಕ್ತ ರಾಷ್ಟ್ರ ಸಂಘ ಮೈದೋರಿತು. ಅದರ ಕಾರ್ಯಕಲಾಪಗಳು ಪ್ರಾರಂಭವಾದಾಗಲೇ ಒಂದು ರಾಷ್ಟ್ರ ಮತ್ತೊಂದರ ಗಂಟಲನ್ನು ಹಿಸುಕಲು ಉಜ್ಜುಗಿಸಿತು. ಶಾಂತಿಗಾಗಿಯೇ ಹೋರಾಡುವುದೆಂದು ಹೇಳ ಹೇಳುತ್ತಾ ತಮ್ಮ ತಮ್ಮೊಳಗೇ ರಾಷ್ಟ್ರಗಳು ಸ್ವಾರ್ಥಕ್ಕಾಗಿ ಹೊಡೆದಾಡ ತೊಡಗಿದವು. ಅಲ್ಲಿಂದಲೇ ಮತ್ತೆ ಪ್ರಾರಂಭವಾಯಿತು ಕಚ್ಚಾಟ, ತಿಕ್ಕಾಟ; ಪರಿಣಾಮ ? ರಾಷ್ಟ್ರಗಳೊಳಗೆ ಒಂದಲ್ಲ ಒಂದು ರೂಪದ ಯುದ್ಧ ! ಶಾಂತಿಯ ಮಾತು ಗಂಟಲ ಹೊರಗುಳಿದರೆ ಒಂದನ್ನೊಂದು ಕಬಳಿಸುವ ರೀತಿ, ನೀತಿ ಒಳಗೇ ಉಳಿಯಿತು.

ಸಂಯುಕ್ತ ರಾಷ್ಟ್ರ ಸಂಘದ ಸ್ಥಾಪನೆಯು ಜಾಗತಿಕ ನ್ಯಾಯಾಲಯದ ಅಸ್ತಿತ್ವಕ್ಕೆ ಮೂಲವಾಯಿತು. ಇದು ಸಂಯುಕ್ತ ರಾಷ್ಟ್ರ ಸಂಘದ ಒಂದು

ಪ್ರಮುಖ ಅಂಗವಾಗಿ ಮಾರ್ಪಟ್ಟು 70 (ಎಪ್ಪತ್ತು) ಪ್ರಕರಣಗಳಿಂದ ಕೂಡಿದ ಒಂದು ಅಧಿ-ನಿಯಮ ಅದರ ನಡವಳಿಕೆಯನ್ನು ರೂಪಿಸಿದೆ. ವಿಶ್ವ ನ್ಯಾಯಾಲಯ ದಲ್ಲಿ ಬೇರೆ ಬೇರೆ ರಾಷ್ಟ್ರದ ಹದಿನೈದು ಪ್ರಮುಖ ವ್ಯಕ್ತಿಗಳು ನ್ಯಾಯಾಧೀಶರಾಗಿ ಕೆಲಸ ನಿರ್ವಹಿಸುವರು. ಅದು ನೆದರ್ಲೆಂಡಿನ ಹೇಗ್ ಎಂಬಲ್ಲಿ ತನ್ನ ಕಾರ್ಯ ವನ್ನೆಸಗುತ್ತದೆ. ಇದರ ನ್ಯಾಯಾಧೀಶರನ್ನು ಸಂಯುಕ್ತ ರಾಷ್ಟ್ರ ಸಭೆ ಮೂರು ವರ್ಷಕ್ಕೊಮ್ಮೆ ಚುನಾಯಿಸುತ್ತದೆ. ಒಂದೇ ರಾಷ್ಟ್ರಕ್ಕೆ ಸೇರಿದ ಇಬ್ಬರು ನ್ಯಾಯಾಧೀಶರಾಗಿ ಚುನಾಯಿಸಲ್ಪಡುವುದಿಲ್ಲ. ಚುನಾಯಿತರಾದ ನ್ಯಾಯಾಧೀಶರು ಒಂಬತ್ತು ವರ್ಷಗಳವರೆಗೆ ಅಧಿಕಾರದಲ್ಲಿರುವರು ; ಅಂತಹವರು ಇನ್ನಿತರ ಯಾವ ಸಂಸ್ಥೆಗಳಲ್ಲೂ ಕಾರ್ಯ ನಿರ್ವಹಿಸಲು ಬರುವುದಿಲ್ಲ. ಅವರು ಯಾವ ರಾಜಕೀಯ ರಂಗಕ್ಕೂ ಪ್ರವೇಶಿಸಕೂಡದು. ಒಬ್ಬ ನ್ಯಾಯಾಧೀಶರನ್ನು ತೆಗೆದುಹಾಕಬೇಕಾದರೆ ಉಳಿದವರು ಆ ಬಗ್ಗೆ ಒಮ್ಮತಕ್ಕೆ ಬರಲೇಬೇಕು. ಭಾರತದ ಶ್ರೀ ನಾಗೇಂದ್ರ ಸಿಂಗ್ ಇಂಥ ನ್ಯಾಯಾಧೀಶರಲ್ಲಿ ಒಬ್ಬರು. ಅವರ ಅವಧಿ 1982 ರತನಕ ಇದೆ. ಒಂದು ವಿಷಯವನ್ನು ಕುರಿತು ತೀರ್ಪುನೀಡಲು ಇರಬೇಕಾದ ನ್ಯಾಯಾಧೀಶರ ಅವಶ್ಯ ಸಂಖ್ಯೆ ಒಂಭತ್ತು. ಯಾವುದಾದರೂ ಸಮಸ್ಯೆಗೆ ಪರಮಾಧಿಕ್ಯದ ಅಭಿಮತ ಸಿಗದೆ ಬಿಕ್ಕಟ್ಟು ತಲೆದೋರಿದಲ್ಲಿ ಅಧ್ಯಕ್ಷರು ತಮ್ಮ ಪ್ರಸಂಗಾವಧಾನದ ಅಭಿಮತವನ್ನು ಕೊಟ್ಟು ವಿವಾದದ ಬಗ್ಗೆ ಬಹುಮತದ ತೀರ್ಪನ್ನು ಕೊಡಲು ಬರುತ್ತದೆ. ಎಲ್ಲಾ ತೀರ್ಪುಗಳು ಅಂತರರಾಷ್ಟ್ರೀಯ ಕಾನೂನಿನ ತತ್ತ್ವ ಪ್ರಣಾಳಿಕೆಗಳಿಗೊಳಪಟ್ಟು ಕೊಡಲ್ಪಡುತ್ತವೆ. ಜಾಗತಿಕ ನ್ಯಾಯಾಲಯ ನೀಡುವ ಎಲ್ಲಾ ತೀರ್ಪುಗಳೂ ಅಂತಿಮ ತೀರ್ಪುಗಳೇ ; ಅವುಗಳ ಮೇಲೆ ಪುನರ್ವಿಚಾರಣೆಯ ಅವಕಾಶವಿರುವುದಿಲ್ಲ.

ಅಧಿಕಾರ ವ್ಯಾಪ್ತಿ

ವಿಶ್ವ ನ್ಯಾಯಾಲಯದಲ್ಲಿ ಜಾಗತಿಕ ಜಲ ಪ್ರಶ್ನೆಗಳನ್ನು ಬಿಡಿಸಲು ಪಣತೊಟ್ಟು ಸದಾ ಕುಳಿತಿರುವ ನಿಷ್ಣಾತ ನ್ಯಾಯಾಧೀಶರಿದ್ದಾರೆ. ಆದರೆ ಇನ್ನೂ ಏಕೆ ಪ್ರಪಂಚದ ಸಮಸ್ಯೆಗಳ ಪರಿಹಾರವಾಗಿಲ್ಲ ? ವಿಶ್ವ ನ್ಯಾಯಾಲಯ ಸಾಕಷ್ಟು ಕೆಲಸವಿಲ್ಲದೆ ಏಕೆ ಕುಳಿತಿದೆ ? ಇಲ್ಲಿ ಮುಖ್ಯವಾಗಿ ತಿಳಿದುಕೊಳ್ಳಬೇಕಾದ ಅಂಶವೆಂದರೆ, ವಿಶ್ವ ನ್ಯಾಯಾ ಲಯ ತನ್ನ ಕಾರ್ಯವೆಸಗಬೇಕಾದರೆ ವಿವಾದಗಳನ್ನು ಅದರ ಎದುರು ಮಂಡಿಸು ವವರಿರಬೇಕು. ಬಿಕ್ಕಟ್ಟು ಉದ್ಭವಿಸಿರುವ ಯಾವುದಾದರೂ ಎರಡು ರಾಷ್ಟ್ರಗಳು ವಿವಾದವನ್ನು ನ್ಯಾಯಾಲಯದ ಎದುರು ಮಂಡಿಸಬೇಕೆಂದು ಒಮ್ಮತಾಭಿಪ್ರಾಯ ವನ್ನು ಹೊಂದಿದ್ದರೆ ಮಾತ್ರ ವಿಶ್ವನ್ಯಾಯಾಲಯವು ತನ್ನ ಚಟುವಟಿಕೆಯನ್ನು ಪ್ರಾರಂಭಿಸುತ್ತದೆ. ಸಾಧಾರಣವಾಗಿ, ಯಾವುದಾದರೂ ಎರಡು ರಾಷ್ಟ್ರಗಳೊಳಗೆ ಗಡಿ ತಂಟೆ ಇದ್ದಲ್ಲಿ ಆ ಎರಡು ರಾಷ್ಟ್ರಗಳು ಒಪ್ಪಿ ವಿವಾದವನ್ನು ನ್ಯಾಯಾಲಯ ದೆದುರು ಮಂಡಿಸಿ ಇತ್ಯರ್ಥವನ್ನು ಪಡೆದುಕೊಳ್ಳಬಹುದು. ಅದರಲ್ಲಿ ಯಾವು

ದಾದರೂ ಒಂದು ರಾಷ್ಟ್ರ ವಿವಾದದ ಮಂಡನೆಗೆ ಒಪ್ಪದಿದ್ದರೆ ವಿಶ್ವ ನ್ಯಾಯಾಲಯ ಅದಕ್ಕೇನೂ ಮಾಡಲು ಬರುವಂತಿಲ್ಲ. ಬರೇ ಒಂದು ರಾಷ್ಟ್ರ ಮಾತ್ರ ತನ್ನ ವಿವಾದ ವನ್ನು ಮಂಡಿಸಿ ಇತ್ಯರ್ಥ ಕೇಳಬರುವಂತಿಲ್ಲ. ಎಂದರೆ, ನಮ್ಮ ರಾಜ್ಯದಲ್ಲಿ ಕಾಣುವ ನ್ಯಾಯಾಲಯಗಳ ಸಾಮಾನ್ಯ ಅಧಿಕಾರ ವಿಶ್ವ ನ್ಯಾಯಾಲಯಕ್ಕಿಲ್ಲ. ನಮ್ಮ ನ್ಯಾಯಾಲಯಗಳು ತಮ್ಮ ಕೆಲಸವನ್ನು ಪ್ರಾರಂಭಿಸಬೇಕಾದರೆ ಒಂದೇ ಪಕ್ಷವು ತನ್ನ ವಿವಾದವನ್ನು ಮಂಡಿಸಿ ಪರಿಹಾರೋಪಾಯವನ್ನು ಬೇಡಬಹುದು. ಆಗ ನ್ಯಾಯಾಲಯವು ವಿವಾದಗ್ರಸ್ತ ಎಲ್ಲಾ ಪಂಗಡಗಳನ್ನು ತನ್ನೆಡೆಗೆ ಬರಮಾಡಿಕೊಂಡು, ವಿವಾದದ ಇತ್ಯರ್ಥದತ್ತ ಕಾರ್ಯಪ್ರವೃತ್ತವಾಗುವುದು. ಆದರೆ ಜಾಗತಿಕ ನ್ಯಾಯಾಲಯದ ನಡವಳಿಕೆ ಇದಕ್ಕೆ ತೀರಾ ಭಿನ್ನವಾಗಿದೆ. ನಮ್ಮ ನ್ಯಾಯಾಲಯಗಳು ತಮ್ಮ ಅಧಿಕಾರ ಅಥವಾ ಪ್ರಭುಶಕ್ತಿಯನ್ನು ಯಾರ ಮೇಲೂ ಚಲಾಯಿಸಲು ಶಕ್ತಿಯುಳ್ಳವುಗಳಾಗಿರುತ್ತವೆ. ಅಂಥ ಅಧಿಕಾರ ಅಥವಾ ಪ್ರಭುಶಕ್ತಿ ಸರ್ವರಿಗೂ ಬದ್ಧವಾಗಿರತಕ್ಕದ್ದು, ಎಂದಿರುವುದರಿಂದ ಅದನ್ನು ನಿರಾಕರಿಸುವ ಸಾಹಸಕ್ಕೆ ಯಾರೂ ತವಣಿಸುವುದಿಲ್ಲ. ಒಂದು ವೇಳೆ ಅದನ್ನು ಮಾನ್ಯ ಮಾಡದಿದ್ದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲವೆಂದು ಎಲ್ಲರಿಗೂ ತಿಳಿದಿದೆ. ನ್ಯಾಯಾಲಯದ ಅಧಿಕಾರವನ್ನು ಅಂಗೀಕರಿಸದವರ ವಿರುದ್ಧ ತಕ್ಕ ಶಾಸ್ತಿ ಕೈಗೊಳ್ಳಲು ಬರುತ್ತದೆ. ಆದರೆ ಜಾಗತಿಕ ನ್ಯಾಯಾಲಯದ ನಡವಳಿಕೆ ಇಲ್ಲಿನ ನ್ಯಾಯಾಲಯಗಳಂತಲ್ಲ. ಅದರ ನಿಯಮಾವಳಿಗಳ ಪ್ರಕಾರ ತನ್ನ ಅಧಿಕಾರವನ್ನು ರಾಷ್ಟ್ರಗಳ ವಿರುದ್ಧ ಹೇರ ಬರುವಂತಿಲ್ಲ. ಅದಕ್ಕೆ ತೀರ್ಪು ಕೊಡಲು ಬೇಕಾಗುವ ಕಾನೂನಿನ ಬಲವಿದೆ ; ಆದರೆ ಅದನ್ನು ಸರ್ವರೂ ಕಡ್ಡಾಯವಾಗಿ ಒಪ್ಪುವಂತೆ ಮಾಡಲು ಬೇಕಾದ ಅಧಿಕಾರ ಮಾತ್ರ ಇರುವುದಿಲ್ಲ. ಆದ್ದರಿಂದಲೇ ರಾಷ್ಟ್ರಗಳು ಒಂದಲ್ಲ ಒಂದು ರೀತಿಯಲ್ಲಿ ವಿಶ್ವನ್ಯಾಯಾಲಯದ ಎದುರು ತಮ್ಮ ಬಗ್ಗೆ ದೂರು ಹೋಗದಂತೆ ನೋಡಿಕೊಳ್ಳಲು ಬರುತ್ತದೆ. ಕಾನೂನಿಗೆ ಅಧಿಕಾರದ ಬಲವಿಲ್ಲದಿದ್ದರೆ ಅದು ನಿಶ್ಶಕ್ತ ವೆನಿಸುವುದು. ವಿಶ್ವನ್ಯಾಯಾಲಯಕ್ಕೆ ಇರುವ ಒಂದು ಕೊರತೆಯೆಂದರೆ ಇದೇ. ಆದ್ದರಿಂದಲೇ ಇಂದು ವಿಶ್ವ ನ್ಯಾಯಾಲಯವಿದ್ದರೂ ರಾಷ್ಟ್ರಗಳು ತಂತಮ್ಮೊಳಗೆ ಕಚ್ಚಾಡುತ್ತಲೇ ಇವೆ. ವಿಶ್ವ ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಈ ರೀತಿ ಸಂಕುಚಿತವಾಗಿರುವುದರಿಂದ ಜಗತ್ತಿನಲ್ಲಿ ಶಾಂತಿ ಮರೀಚಿಕೆಯಾಗಿದೆ.

ಕಾರ್ಯ ಸಿದ್ಧಿ

ಆದರೂ ವಿಶ್ವ ನ್ಯಾಯಾಲಯ ಸುಮ್ಮನೆ ಕೈಕಟ್ಟಿ ಕುಳಿತಿಲ್ಲ. ಅಧಿಕಾರ ಚಲಾಯಿಸುವ ಶಕ್ತಿ ಇಲ್ಲದಿದ್ದರೂ ರಾಷ್ಟ್ರಗಳು ಅದಕ್ಕೆ ಹೆದರಿಕೊಂಡೇ ಇವೆ. ಜಗತ್ತಿನ ಶಾಂತಿಯನ್ನು ಕಾಪಾಡಿಕೊಂಡು ಬರಲು ಅದು ಅಸ್ತಿತ್ವಕ್ಕೆ ಬಂದಂದಿನಿಂದ ನಡೆಸಿರುವ ಪ್ರಯತ್ನ ಎಷ್ಟು ಮಾತ್ರಕ್ಕೂ ಅಲ್ಪವಲ್ಲ. ಅದರ ಹಿರಿದಾದ ಪಾತ್ರ

ಎಲ್ಲರಿಗೂ ತಿಳಿದ ವಿಷಯ. ಅನೇಕ ವಿವಾದಗಳನ್ನು ಅದು ಈಗಾಗಲೇ ತೀರ್ಮಾನಿಸಿದೆ. ರಾಷ್ಟ್ರಗಳು ಅದರ ತೀರ್ಪನ್ನು ಒಪ್ಪಿಕೊಂಡಿವೆ. ಅನೇಕ ಜಟಿಲ ಪ್ರಶ್ನೆಗಳು ಪರಿಹಾರದ ಮಟ್ಟವನ್ನು ತಲುಪಿವೆ. ಅದರ ತೀರ್ಪನ್ನು ನಿರಾಕರಿಸಿದ ಸಂದರ್ಭಗಳು ಅತೀ ವಿರಳ. ಒಮ್ಮೆ ಫ್ರಾನ್ಸ್ ಮತ್ತೊಮ್ಮೆ ಐಸ್‌ಲೆಂಡ್ ಅದರ ತೀರ್ಮಾನವನ್ನು ಅಂಗೀಕರಿಸದ ಸನ್ನಿವೇಶಗಳನ್ನು ಬಿಟ್ಟರೆ ಅದರ ತೀರ್ಮಾನವನ್ನು ಶಿರಸಾಮಾನ್ಯವೆಂದು ಒಪ್ಪಿಕೊಂಡ ಸಂದರ್ಭಗಳೇ ಹೆಚ್ಚು.

ಜಾಗತಿಕ ನ್ಯಾಯಾಲಯದ ವ್ಯಾಪ್ತಿ ತೀರ ಸಂಕುಚಿತವಾಗಿದ್ದರೂ ಅದು ವಿಶ್ವದ ಅತ್ಯುಚ್ಚ ನ್ಯಾಯಾಲಯವೆನ್ನಿಸಿಕೊಳ್ಳಲು ಯೋಗ್ಯತೆಯನ್ನು ಪಡೆದಿದೆ ಎಂಬುದು ಅನೇಕ ಪರಿಣತರ ಅಭಿಪ್ರಾಯವಾಗಿದೆ. ವಿವಾದಗಳಿಂದ ಜರ್ಝರಿತವಾದ ಅನೇಕ ರಾಷ್ಟ್ರಗಳನ್ನು ಅದು ಈಗಾಗಲೇ ಉದ್ಧರಿಸಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ವಿಶ್ವನ್ಯಾಯಾಲಯದ ತೀರ್ಪುಗಳು ಹಾಗೂ ಕಾನೂನುಗಳು ಜಗತ್ತಿನ ರಾಷ್ಟ್ರಗಳೆಲ್ಲವನ್ನು ಕಾನೂನಿನ ಬಂಧನಕ್ಕೆ ಒಳಪಡಿಸಿವೆ. ಅದರ ಬಿಗಿಹಲ್ಲಿನ ಹಿಡಿತದಿಂದ ಜಿಗಿದು ಹೊರಬರುವುದು ದುಸ್ತರವಾದ ವಿಚಾರವೆಂಬುದು ಅನುಭವ ವೇದ್ಯ.

ನ್ಯಾಯಾಲಯದ ಭವಿಷ್ಯ

ಪ್ರಪಂಚ ಅಣು ಬಾಂಬಿನ ದವಡೆಯೊಳಗಿದೆ; ನಿಮಿಷ ಮಾತ್ರದಲ್ಲಿ ಇಡೀ ವಿಶ್ವದ ಜೀವರಾಶಿಗಳನ್ನು ನಾಶಮಾಡುವ ಸ್ಫೋಟಕ ಶಕ್ತಿಯಿಂದೊಡಗೂಡಿದ ರಾಷ್ಟ್ರಗಳು ಕೆಲವಾರಿವೆ. ಜಗತ್ತು ಅಪಾಯವನ್ನು ನಿಮಿಷ ನಿಮಿಷದಲ್ಲೂ ಎದುರಿಸುತ್ತಲೇ ನಡೆದಿದೆ. ಯಾವ ಗಳಿಗೆಯಲ್ಲಿ ಏನಾಗುತ್ತದೋ ಎಂದು ಹೇಳಲಾರದ ವಿಷಮ ಪರಿಸ್ಥಿತಿಯಲ್ಲಿ ನಾವಿದ್ದೇವೆ. ರಾಷ್ಟ್ರಗಳು ಶಾಂತಿ, ಶಾಂತಿ ಎಂದು ಕೂಗುತ್ತಾ ಅಶಾಂತಿಯ ಅಗ್ನಿಯನ್ನು ಕಾರುತ್ತಾ ನಡೆದಿವೆ. ಆ ಅಗ್ನಿ ಎಂದು ಹಿಡಿತ ತಪ್ಪಿ ಪ್ರಜ್ವಲಿಸುತ್ತದೋ ತಿಳಿಯದು. ಇಂಥ ಪ್ರಕ್ಷುಬ್ಧ ವಾತಾವರಣದಲ್ಲಿ ಜಾಗತಿಕ ನ್ಯಾಯಾಲಯ ಶಾಂತಿಯನ್ನು ಪ್ರಸ್ಥಾಪಿಸಲು ಎಷ್ಟು ಸಹಾಯಕವಾಗಬಹುದು? ಈ ಪ್ರಶ್ನೆ ನಮ್ಮೆಲ್ಲರ ಎದುರು ಬೃಹದಾಕಾರವಾಗಿ ನಿಂತಿದೆ. ಅದರ ಉಪಯೋಗ ಎಲ್ಲರಿಗೂ ದೊರಕಬೇಕಾದರೆ ಅದಕ್ಕಿರುವ ಕೊರತೆ ದೂರಾಗಬೇಕು. ತನ್ನ ತೀರ್ಪನ್ನು ಊರ್ಜಿತಗೊಳಿಸುವ ಅಧಿಕಾರ ಅದಕ್ಕಿರಬೇಕು. ಯಾವುದಾದರೂ ವಿಶ್ವಸಭೆ ಅದಕ್ಕನುಗುಣವಾದ ಒಂದು ಕಾನೂನನ್ನು ರಚಿಸಬೇಕು. ಒಪ್ಪಿಗೆಯಾಗಿರಲಿ, ವಿರೋಧವೇ ಇರಲಿ, ರಾಷ್ಟ್ರಗಳು ವಿಶ್ವ ನ್ಯಾಯಾಲಯದ ತೀರ್ಪನ್ನು ಶಿರಸಾವಹಿಸುವ ಸ್ಥಿತಿ ಬರಬೇಕು. ಇಲ್ಲವಾದರೆ ತನ್ನ ಕಾರ್ಯದಲ್ಲಿ ಅದು ಯಶಸ್ವಿಯಾಗಲಾರದೆಂದೇ ಅನೇಕರ ಅಭಿಮತ.

ಮಾನವನಲ್ಲಿ ಸೌಜನ್ಯ, ಸೌಹಾರ್ದಭಾವ, ಸೌಶೀಲ್ಯಗಳಿದ್ದಂತೆಯೇ ಸ್ವಾರ್ಥ, ವಂಚನೆ, ಪರವಿತ್ತಾಪಹಾರ ಬುದ್ಧಿ ಇವೆ. ಮಾನವ ಜೀವನವು ಒಳಿತು ಕೆಡುಕಗಳ ಒಂದು ಸಂಮಿಶ್ರಣ; ಒಳಿತಾಗಬೇಕಾದರೆ ಕೆಡುಕಿನ ದಮನವಾಗಲೇ ಬೇಕು; ರಾಷ್ಟ್ರಗಳು ಶಾಂತಿಯುತ್ತ ಸಾಗಬೇಕಾದರೆ ಕೊರೆದು ತಿನ್ನುವ ದುಷ್ಟ ಶಕ್ತಿಗಳು ನಿರ್ನಾಮವಾಗಬೇಕು. ಜಾಗತಿಕ ನ್ಯಾಯಾಲಯ ಪ್ರಪಂಚದಲ್ಲಿ ಶಾಂತಿಯನ್ನು ನೆಲೆಸುವಂತೆ ಮಾಡಬೇಕಾದರೆ ತಾನು ಕೈಗೊಂಡ ತೀರ್ಮಾನವನ್ನು ಎಲ್ಲರೂ ಮಾನ್ಯ ಮಾಡುವಂತಹ ಪರಿಸ್ಥಿತಿ ಒದಗಿ ಬರಬೇಕು. ಹಾಗಿದ್ದರೆ ಮಾತ್ರ ವಿಶ್ವ ನ್ಯಾಯಾಲಯದ ಪೀಠ ಊರ್ಜಿತವಾಗುಳಿಯುವುದು. ಹಾಗಿಲ್ಲವಾದರೆ ಅದರ ಭವಿಷ್ಯ ಉಜ್ವಲವಾಗಿದೆ ಎನ್ನಲು ಬರುವಂತಿಲ್ಲ. ನೆರೆ ರಾಜ್ಯವನ್ನು ಕಬಳಿಸುವ ದಾಹದಿಂದ ಕೂಡಿದ ರಾಷ್ಟ್ರಗಳ ಭೂ ಮೋಹವನ್ನಳಿಸಬೇಕಾದರೆ, ರಾಷ್ಟ್ರಗಳ ಹಿಂಸಾತ್ಮಕ ಚಟುವಟಿಕೆಗಳನ್ನು ತೊರೆಯುವಂತಾಗಬೇಕಾದರೆ, ಪ್ರಪಂಚದಲ್ಲಿ ಶಾಂತಿ, ಸುಭಿಕ್ಷ ಹರಡಬೇಕಾಗಿದ್ದರೆ ಜಾಗತಿಕ ನ್ಯಾಯಾಲಯದ ಕೈಗಳನ್ನು ಬಲಪಡಿಸಬೇಕಾದುದು ಮೊದಲ ಕರ್ತವ್ಯ. ಈ ದಿಶೆಯಲ್ಲಿ ಅಗತ್ಯವೆನಿಸುವ ಸುಧಾರಣೆಗಳನ್ನು ಕೈಗೊಳ್ಳುವುದು ಅನಿವಾರ್ಯ.

ನಿರ್ಧಾರ

ಶೈಲಜಾ ಉಡಚಣ

ನೂರು ಮೋಡಗಳ ಮಧ್ಯೆ
ಚಕ್ಕನೆ ಮಿಂಚಿದ ಗೆರೆಯನ್ನು
ಬಾನಿನಲ್ಲಿ ಕಟೆಯಲು ಹವಣಿಸಿದ್ದೇನೆ.
ಚಿತ್ತಾರದ ಚೌಕಟ್ಟಿನಲ್ಲಿಯೇ
ಚೆಲುವಿನ ಹೂ ಅರಳಿಸ ಹಮ್ಮಿದ್ದೇನೆ.
ಹರಿದು ಬಂದ ಅಬ್ಬರಗಳ
ಸಾಲಿನಲ್ಲಿಯೇ ಹೆದ್ದಾರಿಯ ಕೊರೆಯ ಬೇಕೆಂದಿರುವೆ
ಜೋತಾಡುವ ಹೆಣಗಳನ್ನು
ನೋಡಿ ಮಾರು ದೂರ ಹರಿದೂ
ಹಗ್ಗಕಟ್ಟಿ ಜಗ್ಗಿ ಜೀವ ತುಂಬಬೇಕೆಂದಿರುವೆ.

ಗುಡ್ಡದ ಮೇಲೆ ಗುಡ್ಡ ನಿಲ್ಲಿಸಿ
ಗೊಮ್ಮಟನನ್ನು ಕಟೆಯುವ ಶಿಲ್ಪಿ ನಾನಲ್ಲ—
ವಾದರೂ ಮಲಗಿದ್ದಲ್ಲಿಯೇ ಮೂರ್ತಿ
ಗಗನ ಮುಟ್ಟಲಿ ಎಂದು ಮಂತ್ರಿಸುವ ಮೋಡಿ ನನ್ನದು.

ಕಾಡು ಕಡಿದು, ತುರುಚಿ ತರುಬಿ,
ಕಂಟಿ ಕವಲುಗಳನ್ನೆಲ್ಲ
ಬುಲ್ ಡೋಜರಿನಿಂದ ಸವರಲಾರೆ—
ನಾದರೂ ದೇವದಾರುವಿನಡಿಯಲ್ಲಿ
ಹುಟ್ಟಿ ಬೆಳೆದು ತಲೆ ಎತ್ತಿದ ಕನಸು ಮಾತ್ರ ನನ್ನದು.

ಮೈಯೆಲ್ಲ ಮೆತ್ತಿರುವ ಈ
ಕತ್ತಲೆಯ ಕತ್ತಿವರಸೆಯಲ್ಲಿ
ಒಂದೊಂದೇ ಪದರ ಚರ್ಮ
ಸುಲಿದು ನಿರಾಳ ದ ನಿರ್ಧಾರ
ಇಣುಕಿದರೂ

ಪದವಿಲ್ಲದ ಬಾಳು,
ಕುದಿದು ಕುದಿದು ಸಣ್ಣಾದ
ಸೀಳು ದಾರಿ, ಪೆದ್ದಾರಿಗಾಗಿ
ಕಾದು ಕಾದು ಗಜ ಗಮನಕ್ಕಾಗಿ
ಹಾರೈಸುವವರೆಗೆ—
ಆಡುಗಳ ಓಡಾಟದಿಂದ ಫಾಸಿಗೊಂಡ ಹಾದಿಗೆ
ಹಾರೈಸು ಹಾರೈಸು ಎಂದು ಸಂತೈಸುತ್ತೇನೆ.

ಅಕ್ಕನ ನಡುವಣಕ್ಕರಗಳು

ಕೆ. ಶಿವರಾಮ ಐತಾಳ

ಪಿರಿಯಕ್ಕರದ ಮೇಲ್ಪಂಕ್ತಿಯನ್ನು ಅನುಸರಿಸತಕ್ಕದ್ದು ನಡುವಣಕ್ಕರ. ಪಿರಿಯಕ್ಕರದ ಲಕ್ಷಣ 'ಬ್ರಹ್ಮ+5ವಿಷ್ಣು+ರು' ಅದರ ವೈವಿಧ್ಯಗಳನ್ನು ಕನ್ನಡ ಕೈಪಿಡಿಕಾರರು ತೋರಿಸಿಕೊಟ್ಟಿದ್ದಾರೆ.[1] ಅವನ್ನು ಹೀಗೆ ಸಂಗ್ರಹಿಸಬಹುದು :

(ಅ) ಆದಿಬ್ರಹ್ಮ ಖಚಿತವಲ್ಲ. ವಿಷ್ಣು ಬರಬಹುದು.

(ಆ) ವಿಷ್ಣುಗಳ ಸ್ಥಾನಗಳಲ್ಲಿ ಬ್ರಹ್ಮ ಬರಬಹುದು. 'ಐಸಾ, ಸಿರ್ವರ್', 'ಮಾಡ, ಮಾಗೆ'–ಎಂಬಂತೆ ಬ್ರಹ್ಮಗಳ ಸರಣಿಯೂ ಬರಬಹುದು.

(ಇ) ವಿಷ್ಣುವಿನ ಸ್ಥಾನದಲ್ಲಿ 'ಮರುಳೀಜಿಸಂ' ಎಂದು ರುದ್ರ ಬಂದಿದೆ.

(ಈ) ಅಂತ್ಯರುದ್ರದ ಸ್ಥಾನದಲ್ಲಿ 'ಕೀಟುಮ್ಮಡೆ', 'ಅರಸಲ್ತೆ' ಎಂದು ಬಂದಿವೆ. ಈ ರುದ್ರ ವಿಚ್ಛೇದ್ಯರುದ್ರ : ವಿ+ಗುರು. ಇಲ್ಲಿನ ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮ ಬಂದಿದೆ ಎಂದುಕೊಳ್ಳಬಹುದು. ರು=ವಿಗ=ಬ್ರಗ.

ಎಂದರೆ, ಸರಳವಾಗಿ ಪಿರಿಯಕ್ಕರದ ಲಕ್ಷಣ: ಏಳು ವಿಷ್ಣು ಮೇಲೊಂದು ಗುರು,[2] ವಿಷ್ಣುವಿನ ಸ್ಥಾನದಲ್ಲಿ ವಿಶೇಷವಾಗಿ ಬ್ರಹ್ಮಗಳೂ, ಕೆಲವೇಳೆ ರುದ್ರವೂ ಬರಬಹುದು.

ಇದನ್ನೇ ಅನುಸರಿಸಿ ನಡುವಣಕ್ಕರದ ಸರಳ ಲಕ್ಷಣ: ಐದು ವಿಷ್ಣು ಮೇಲೊಂದು ದೀರ್ಘಾಂಶ. ವಿಷ್ಣುವಿನ ಸ್ಥಾನದಲ್ಲಿ ವಿಶೇಷವಾಗಿ ಬ್ರಹ್ಮಗಳೂ, ಕೆಲವೇಳೆ ರುದ್ರವೂ ಬರಬಹುದು.[3]

---

1 ಕನ್ನಡ ಕೈಪಿಡಿ, ಸಂಪುಟ 1. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. (1965) ಪು 131-135.

2 ಈ ಗುರುವನ್ನು, ಲಘುವಾಗಿದ್ದರೂ ಎಳೆಯಲ್ಪಡುವುದರಿಂದ 'ದೀರ್ಘಾಂಶ' ಎನ್ನಬಹುದು. 'ಗುರು' ಎಂಬಲ್ಲಿ ಎರಡು ಮಾತ್ರೆ ಎಂಬರ್ಥ ಬರುತ್ತದೆ. ದೀರ್ಘ ಎಷ್ಟೂ ಆಗಬಹುದು.

3 'ಮಾಡಮಾಗೆ' - ಎರಡು ಗಣಗಳ ಸ್ಥಾನದಲ್ಲಿ ಮಾಡ-ಮಾಗೆ ಎಂದು ಬಂದರೆ ಬ್ರಹ್ಮಗಳು. ಪಾದಾಂತ್ಯದಲ್ಲಿ ಬಂದಿದ್ದರೆ 'ಮಾಡಮಾ-ಗೆ' - ವಿಚ್ಛೇದ್ಯರುದ್ರ. ಒಂದು ಗಣಸ್ಥಾನದಲ್ಲಿ ತ್ವರಿತವಾಗಿ ನುಡಿಯುವಂತಿದ್ದರೆ ವಿಷ್ಣುವಿನ ಸ್ಥಾನದಲ್ಲಿ ಬಂದ ರುದ್ರ, ಪರ್ಯಾಯಗಣ. ಎರಡು ಗಣವನ್ನಾಗಿ ಕಲ್ಪಿಸಬೇಕೋ, ಒಂದೇ ಗಣವನ್ನಾಗಿಯೋ ಎಂಬುದು ಪಾದ ಪ್ರಮಾಣವನ್ನು ಅವಲಂಬಿಸಿದೆ. ಅದೇ ಅಂಶಛಂದಸ್ಸಿನ ಜೀವ, ಸ್ವಾರಸ್ಯ.

ಇನ್ನು ಯತಿಯ ವಿಚಾರ. ಪಿರಿಯಕ್ಕರಕ್ಕೆ ಸಂಬಂಧಿಸಿದಂತೆ ಕೈಪಿಡಿಕಾರರು "ನ್ಯಾಯವಾಗಿ ನೋಡಿದರೆ ಒಂದು ಮತ್ತು ನಾಲ್ಕನೆಯ ಗಣದ ಮುಂದೆ ಯತಿ" ಎಂದಿದ್ದಾರೆ. ಪಾದದ ಘಟಕಗಳನ್ನು ವಿಂಗಡಿಸಿ ಪ್ರಮಾಣಗಳ ಅನುರೂಪತೆಯನ್ನು ಕಲ್ಪಿಸುವುದೂ ಯತಿಯ ಒಂದು ಪ್ರಯೋಜನ. ಛಾಂದಿಕ ಪ್ರಯೋಗವಿಲ್ಲದಲ್ಲೂ ಲಯ ಹೇಗಿರುತ್ತದೆಂಬುದರ ಅನುಭವ ಈ ಶಾಸ್ತ್ರದಲ್ಲಿ ಸಾಧ್ಯವಿರುವುದರಿಂದ ಪಾದಗತಿಯಲ್ಲಿ ಯತಿಯ ಕಲ್ಪನೆ ತಾತ್ವಿಕವಾಗಿ ಸಾಧ್ಯ. ಆದರೂ, ನಡುವಣಕ್ಕರಗಳ ವಿಚಾರದಲ್ಲಿ ಯತಿಯನ್ನು ಉದಾಹರಣೆಗಳಲ್ಲೇ ಹುಡುಕೋಣ.

ಉದಾಹರಣೆಗಳತ್ತ ಹೋಗುವ ಮುನ್ನ, ಮೂರು ಬಗೆಯ ಗಣಗಳ ಪರಿಚಯ ಸದ್ಯಕ್ಕೆ ಅಗತ್ಯ. ಐದು ಮಾತ್ರೆಗಳ ರೂಪ : – ∪∪∪ ; ∪∪∪∪∪ ಮತ್ತು ಆರು ಮಾತ್ರೆಗಳ ರೂಪ :–∪–∪. ಇವು ಜನಪದದಲ್ಲಿ ಸಾವಿರ ಸಾವಿರಗಟ್ಟಲೆ ಬರುತ್ತವೆ. ಈ ಕೆಳಗಿನವೆಲ್ಲ ತ್ರಿಪದಿಯ ಸಾಲುಗಳು. '–' ಎಂದಿರುವಲ್ಲಿ, ಅದು, ತ್ರಿಪದಿಯ ಎರಡನೇ ಪಾದವೆಂಬುದನ್ನು ಸೂಚಿಸುತ್ತದೆ. '   ' ಸಂಬಂಧಪಟ್ಟ ಗಣ ಸೂಚನೆ. ಆಕರದ ಮುಂದಿನವು ಪುಟಸಂಖ್ಯೆ.[4] ಆಕರ ಸೂಚನೆ ಇಲ್ಲದವು ಹಿಂದಿನ ಆಕರದವೇ.

ಅಳುವ ಕಂ'ದನ ತುಟಿಯು' ಹವಳದ ಕುಡಿಯಂಗ (ಗರತಿ) ೮೫
'ಮಕ್ಕಳನ' 'ಬೇಡುವರು' 'ಪಟ್ಟಣಕ'ನಡಿರವ್ವ 106
'ಹೆಂಡ್ಡೆಡಗಿ' ಹೊರಲಾಕ ಬಡವರ ಮಗಳೇನ 118
ಅತ್ತೆ ಸ'ತ್ತರೆ ಸೊಸೆಯು' ಏನೆಂದು 'ಮರುಗುವಳು' 119
'ಪರಶಿವನೆ' ಇನ್ನು ಹೊನ್ನಮಳೆಯ (ಸಂಶೋಧ) 116
'ಉತ್ತರೆಯ' ಮಳೆಯ ಕರುಣಿಸು 116
'ಬಾಲೆಯರ' ಮನೆಗೆ ನಡೆತಂದ 116
'ಹೊಸ ಅಡಿಕೆ' ಸಿಪ್ಪೆ ಕುಶಲಾಗೆ 116
ಎಳ್ಳು ಜೀರಿಗೆ ಬೆಳೆಯೋಳೆ—'ಭೂಮಿತಾಯ' (ಗರತಿ) 49
ಬಂಟನ ಮೇಲೆ ಕಡಲೆಯು—'ಹೇರಿಕೊಂಡು' 55
ಅಂಗಿಯ ಮೇಲಂಗಿ ಸುಂಗರದ 'ಮೇಲುಕಟ್ಟು' 66
'ಹೋಗುವಾಗ' 'ಹುಲ್ಲೆ ಕಂಡೆ' 'ಬರುವಾಗ ಬಸ'ವನಕಂಡೆ 75
ಕಾಯ ಕತ್ತರಿಸಿ 'ತೂಗಿ ತೂಗಿ' ಮರೆತಾನೆ (ಸಂಶೋಧ) 116
ಪಟವಾಳ 'ಸೀರೆಯುಟ್ಟು' ಮುತ್ತಿನ 'ಬೊಟ್ಟು ಇಟ್ಟು' 118
'ಹುಟ್ಟಿದ್ದೇಳು' ದಿವಸಾಕೆ 'ಪಟ್ಟಣದ' ತಿರುಗ್ಯಾನೆ 119

---

4 ಗರತಿ–ಗರತಿಯ ಹಾಡು. ಸಂ, ಹಲಸಂಗಿಯ ಚೆನ್ನಮಲ್ಲಪ್ಪ ಮತ್ತಿತರರು. ಪ್ರಕಾಶ: ಸಾಹಿತ್ಯ ಭಂಡಾರ, ಹುಬ್ಬಳ್ಳಿ (1956)
ಸಂಶೋಧ-ಸಂಶೋಧನ ತರಂಗ (ಸಂಪುಟ 1) ಡಾ. ಎಂ. ಚಿದಾನಂದಮೂರ್ತಿ, ಸರಸ ಸಾಹಿತ್ಯ ಪ್ರಕಾಶನ, ಮೈಸೂರು 1966. 'ಜೋಕುಮಾರ' ಎಂಬ ಲೇಖನದ ಅನುಬಂಧ : 'ಜೋಕುಮಾರನ ಹಾಡುಗಳು'.

ಅಕ್ಕನ ಹದಿನಾಲ್ಕು ವಚನಗಳು ನಡುವಣಕ್ಕರಗಳಾಗಿವೆ[5] : ಇಲ್ಲಿನ ಪಠ್ಯಕ್ಕೆ ಆಕರ ಡಾ. ಎಲ್. ಬಸವರಾಜು ಅವರ 'ಅಕ್ಕನ ವಚನಗಳು'[6] ಭಿನ್ನ ಪಾಠವನ್ನೇನೂ ತೋರದಿದ್ದರೆ ಸಂಪಾದಿತ ಪಾಠವನ್ನು ಸ್ವೀಕರಿಸಿದೆ ಎಂದರ್ಥ. 'ಸ್ವೀಪಾ'–ನಾವು ಸ್ವೀಕರಿಸಿದ ಪಾಠ. ಉದಾಹರಣೆಗೆ+ನೀವು ಕಾಣಿರೇ ; ಸ್ವೀಪಾ. ಶೂ. ಎಂದರೆ 'ನೀವು ಕಾಣಿರೇ' ಎಂದು ಸಂಪಾದಿತ ಪಾಠದಲ್ಲಿ ಅಧಿಕವಾಗಿದೆ. ನಾವು ಶೂನ್ಯ ಸಂಪಾದನೆಯ ಪಾಠವನ್ನು ಸ್ವೀಕರಿಸಿದ್ದೇವೆ ಎಂದು.*—ಯತಿ.

1.[7] ಚಿಲಿಮಿಲಿ । ಎಂದೋ । ದುವಗಿಳಿ । ಗಳಿರಾ* । ನೀವು ಕಾಣಿ । ರೇ[8]
ಸರವರ । ದೊಳಗಾ । ಡುವ ಹಂಸೆ । ಗಳಿರಾ* । ನೀವು ಕಾಣಿ । ರೇ[9]
ಸರವೆತ್ತಿ । ಪಾಡುವ । ಕೋಗಿಲೆ । ಗಳಿರಾ* । ನೀವು ಕಾಣಿ । ರೇ[10]
ಎರಗಿ । ಬಂದಾ । ಡುವ ತುಂಬಿ । ಗಳಿರಾ* । ನೀವು ಕಾಣಿ । ರೇ[11]
ಗಿರಿಗ । ಹ್ವರ[12] [ದೊಳಾ] । [12]ಡುವನವಿಲು । ಗಳಿರಾ* । ನೀವು ಕಾಣಿ । ರೇ[13]
[14]ಚೆನ್ನ । ಮಲ್ಲಿಕಾ । ರ್ಜುನನೆಲ್ಲಿ । ದ್ದಹನೆಂದು* । [ನೀವು]ಹೇಳಿ । ರೇ[14]

ನಾಲ್ಕನೆಯ, ಆರನೆಯ ಪಾದಗಳಿಗೆ ಪರ್ಯಾಯ ಪ್ರಸ್ತಾರವೂ ಸಾಧ್ಯ : ಎರಗಿ ಬಂ, ದಾಡುವ, ತುಂಬಿ, ಗಳಿರಾ ; ಚೆನ್ನಮಲ್ಲಿ ; ಕಾರ್ಜುನ, ನೆಲ್ಲಿ, ದ್ದಹನೆಂದು ; ಕೊನೆಯ ಪಾದಕ್ಕಿರುವ ಭಿನ್ನ ಪಾಠಗಳನ್ನು ಗಮನಿಸಿದರೆ ಈ ಪಾದ ಎರಡು ರೀತಿಯಲ್ಲಿರಬಹುದೆನಿಸುತ್ತದೆ.

(ಅ) ಚೆನ್ನಮಲ್ಲಿಕಾರ್ಜುನ ದೇವನೆಲ್ಲಿದ್ದಾನೆಂದು ನೀವು ಹೇಳಿರೇ

(ಆ) ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ

---

5 ಅಕ್ಕನಲ್ಲಾಗಲೀ, ಇತರ ವಚನಕಾರರಲ್ಲಾಗಲೀ ನಡುವಣಕ್ಕರಗಳು ಇನ್ನೂ ಇಲ್ಲ ಎಂದರ್ಥವಲ್ಲ.

6 ಅಕ್ಕನ ವಚನಗಳು. ಸಂ. ಡಾ॥ ಎಲ್. ಬಸವರಾಜು. ಗೀತಾ ಬುಕ್ ಹೌಸ್. ಮೈಸೂರು (1972)

7 ಈ ಮೇಲಿನ ಆಕರ. ಪು. 79. 80; ವಚನ 72

8 +ನೀವು ಕಾಣಿರೇ. ಸ್ವೀಪಾ-ಶೂ.

9 +ನೀವು ಕಾಣಿರೇ. ಸ್ವೀಪಾ-K. A. 105 ; ಶೂ.

10 +ನೀವು ಕಾಣಿರೇ

11 +ನೀವು ಕಾಣಿರೇ. ಸ್ವೀಪಾ-K.A. 105.

12 ದೊಳಗಾ

13 +ನೀವು ಕಾಣಿರೇ ; 'ಪುಳಿಂದರು'-ಶೂ.

14 ಚೆನ್ನಮಲ್ಲಿಕಾರ್ಜುನ ದೇವನೆಲ್ಲಿದ್ದಾನೆಂಬುದಂ ನೀವು ಹೇಳಿರೆ : (ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೇ-K. A. 105)

ಇಲ್ಲಿ ಎರಡನೇ ರೂಪವನ್ನು ಸ್ವೀಕರಿಸಿ ಎಲ್ಲ ಪಾದಾಂತ್ಯದಲ್ಲೂ ಬಂದ 'ನೀವು' ಎಂಬುದನ್ನು ಸೇರಿಸಿದೆ. ಕೊನೆಯ ಗಣಗಳು ರುದ್ರಗಳೆಂಬುದು ಗಮನಾರ್ಹ.

2[15] ಕಾಣುತ್ತ । ಕಾಣುತ್ತ । ಕಂಗಳ । ಮುಚ್ಚಿದೆ* । ನೋಡ । ವ್ವ
ಕೇಳುತ್ತ । ಕೇಳುತ್ತ । ಮೈಮರೆ । ದೊರಗಿದೆ* । ನೋಡ । ವ್ವ
ಹಾಸಿದ । ಹಾಸಿಗೆಯ । ಹಂಗಿಲ್ಲದೆ । ಹೋಗಿತ್ತು* । ಕೇಳ । ವ್ವ
ಚೆನ್ನಮಲ್ಲಿ । ಕಾರ್ಜುನ । ದೇವರ । ದೇವನು* । ಕೂಡು । ವ
ಕೂಟವ । ನಾನೇನೆಂ । ದರಿಯದೆ । ಮರೆದೆ* । ಕಾಣ । ವ್ವ

ಇಲ್ಲಿ ಕೊನೆಯ ಗಣಗಳು ಬ್ರಹ್ಮಗಳು. ಎಳೆಯಬೇಕು.

3[16] ಆಡುವುದು । ಹಾಡುವುದು । ಕೇಳುವುದು* । ಹೇಳುವು । ದು
ನಗೆ ನುಡಿ । ಸರಸ ಸ । ಮ್ಮೇಳವಾ । ಗಿಪ್ಪುದು* । ಶರಣರೊಡ । ನೆ
ಚೆನ್ನಮಲ್ಲಿ । ಕಾರ್ಜುನ* । ಕೊಟ್ಟಆ । ಯುಷ್ಯ ಉ । ಳ್ಳನ್ನಕ । ರ
ಲಿಂಗಸುಖಿ । ಗಳ ಸಂಗ । ದಲ್ಲಿ ದಿ । ನಂಗಳ* । ಕಳೆವು । ದು

4[17] ಎನ್ನಂಗ । ದಲ್ಲಿ ಆ । ಚಾರವ । ತೋರಿದ*[18] । ಬಸವಣ್ಣ । ನು
ಆ ಆ । ಚಾರವೆ । ಲಿಂಗವೆಂ । ದರುಹಿದ*[19] । ಬಸವಣ್ಣ । ನು
ಆ ಪ್ರಾಣ । ದಲ್ಲಿ ಅ । ರುಹ ತೋ । ರಿದನಯ್ಯ* । ಬಸವಣ್ಣ । ನು
ಆ ಅರುಹೇ । ಜಂಗಮ । ವೆಂದರು । ಹಿದನಯ್ಯ* । ಬಸವಣ್ಣ । ನು
[20][ಚೆನ್ನಮಲ್ಲಿ । ಕಾರ್ಜುನ । ಹೆತ್ತತಂದೆ । ಸಂಗನ* । ಬಸವಣ್ಣ । ನು
ಬಸವಣ್ಣ । ನೆನಗೀ । ಕ್ರಮವ । ನರುಹಿದ* । ನಯ್ಯ ಪ್ರಭು । ವೆ][20]

5 [21] ಹಗಲು । ನಾಲ್ಕು ಜಾವ* । ನಿಮ್ಮ । ಕಳವಳ । ದಲ್ಲಿಪ್ಪೆ । ನು
ಇರುಳು । ನಾಲ್ಕುಜಾವ* । ಲಿಂಗದ[22] । ವಿಕಳ । ದಲ್ಲಿಪ್ಪೆ । ನು[22]
ಹಗಲಿರುಳು । ನಿಮ್ಮ ಹಂ । ಬಲದಲ್ಲಿ* । ಮೈಮರೆ । ದೊರಗಿದೆ । ನು
ಚೆನ್ನಮಲ್ಲಿ । ಕಾರ್ಜುನಯ್ಯ* । ನಿಮ್ಮಬಿ । ಲು ಮನಸಟ್ಟು* । ಹಸಿವುತೃ । ಷೆ
ನಿದ್ರೆಯ । ಮರೆದೆ । ನು

---

15 ಪು 85. ವಚನ 84.

16 ಪು 96. ವಚನ 120.

17 ಪು 107. ವಚನ 151.

18 + ನಯ್ಯ ; ಸ್ವೀಪಾ. ಪ. ಶೂ.

19 + ನಯ್ಯ ; ಸ್ವೀಪಾ. ಪ. ಶೂ.

20 [ಚೆನ್ನಮಲ್ಲಿಕಾರ್ಜುನ]. [ಎನ್ನ] ಹೆತ್ತ ತಂದೆ ಸಂಗನ ಬಸವಣ್ಣನು ಎನಗೀ ಕ್ರಮವ ನರುಹಿದನಯ್ಯ (ಸಂಪಾದಕರು) : ಚೆನ್ನಮಲ್ಲಿಕಾರ್ಜುನಯ್ಯ ಎನ್ನ ಹೆತ್ತತಂದೆ ಬಸವಣ್ಣನು ಬಸವಣ್ಣನೆನಗೀ ಕ್ರಮವನರುಹಿದನಯ್ಯ ಪ್ರಭುವೇ (ಪ) ; ಚೆನ್ನಮಲ್ಲಿಕಾರ್ಜುನನ ಹೆತ್ತ ತಂದೆ ಸಂಗನ ಬಸವಣ್ಣನು ಎನಗೀ......ನಯ್ಯ (ಶೂ) ; ಚೆನ್ನಮಲ್ಲಿಕಾರ್ಜುನಯ್ಯ ಎನ್ನ ಹೆತ್ತ ತಂದೆ ಬಸವಣ್ಣನು–ಬಸವಣ......ನಯ್ಯಪ್ರಭುವೇ (ಬ.ಸ್ತೋ.ಪ.)

21 ಪು 83, ವಚನ 79

22 ವಿಕಳಾವಸ್ಥೆಯಲ್ಲಿಪ್ಪೆನು ; ಸ್ವೀಪಾ-ಪ.ಶಾ.ಸಾರ.

ಮೂರನೇ ಗಣಕ್ಕೆ ಯತಿ ಬಂದಾಗ (3ನೇ ಪಾದ ನೋಡಿ) ಅದರ ಮುಂದಿನ ಭಾಗ ಒಂದು ಘಟಕವಾಗುತ್ತದೆ. ಅದರ ಪುನರುಕ್ತಿಯೇ 'ನಿದ್ರೆಯ ಮರೆದೆನು' ಆಗಬಹುದು. ಅಲ್ಲಮನ ಜೇರೊಂದು ಅಕ್ಕರದ ಉದಾಹರಣೆಯಲ್ಲಿ ಇದನ್ನು ಗಮನಿಸಬಹುದು.[23]

6 [24] ಕ್ರೀಗಳು | ಮುಟ್ಟ | ಲರಿಯುವು* | ನಿಮ್ಮನೆಂತು | ಪೂಜಿಸು | ವೆ
ನಾದ ಬಿಂ | ದುಗಳು* | ಮುಟ್ಟಲರಿ | ಯುವು ನಿಮ್ಮ* | ನೆಂತು ಹಾಡು | ವೆ
ಕಾಯಮು | ಟ್ಟುವೊಡೆ* | ಕಾಣಬಾ | ರದ ಘನವು* | ನಿಮ್ಮನೆಂ | ತು
ಕರಸ್ಥಲ | ದಲ್ಲಿ | ಧರಿಸುವೆ* | ಚೆನ್ನಮಲ್ಲಿ | ಕಾರ್ಜುನ | ಯ್ಯ
[25]ನಿಮ್ಮ | ನೋಡಿ | ನೋಡಿ* | ಸೈವೆರ | ಸಾಗುತಿರ್ದೆ | ನು

ನಾಲ್ಕನೆ ಪಾದದ ಮೊದಲ ಗಣದಲ್ಲಿ 'ಸ್ಥ' ಶಿಥಿಲ. ಎರಡು ಮೂರನೇ ಪಾದಾದಿಯಲ್ಲಿ ನಾದಬಿಂದು, ಗಳು ಮುಟ್ಟ, ಲರಿಯುವು, ನಿಮ್ಮ, ನೆಂತು ಹಾಡು,ವೆ ಎಂದೂ ; ಕಾಯ-ಮುಟ್ಟುವೊಡೆ ಎಂದೂ ಪ್ರಸ್ತಾರಿಸಬಹುದು. ಕೊನೆಯ ಪಾದ "ನಾನೇನೆಂ, ದರಿಯದೆ, ನಿಮ್ಮ ನೋಡಿ, ಸೈವೆರ, ಗಾಗುತಿರ್ದೆ,ನು"–ಎಂದೂ ಇರಬಹುದು. 'ಕಾಣುತ್ತ ಕಾಣುತ್ತ'ಎಂಬ ವಚನದಲ್ಲಿ ಇರುವ ರೂಪ ಇಲ್ಲಿ ಬಂದು ಸೇರಿರುವುದೇ ಸಂಭವ.

7 [26] ಅಯ್ಯಾ । ನೀ ಕೇಳಿ । ದರೆ ಕೇಳು* । ಕೇಳದಿ । ದ್ದರೆ ಮಾ । ಣು
ನಾನಿನ್ನ । ಹಾಡಿ । ದಲ್ಲದೆ* । ಸೈರಿಸ । ಲಾರೆನ । ಯ್ಯ
ಅಯ್ಯಾ । ನೀನೊಲಿ । ದರೆ ಒಲಿ* । ಒಲಿಯದಿ । ದ್ದರೆ ಮಾ । ಣು
ನಾನಿನ್ನ । ಪೂಜಿಸಿ । ದಲ್ಲದೆ* । ಸೈರಿಸ । ಲಾರೆನ । ಯ್ಯ
ಅಯ್ಯಾ । ನೀಮೆಚ್ಚಿ । ದರೆ ಮೆಚ್ಚು* । ಮೆಚ್ಚದಿ । ದ್ದರೆ ಮಾ । ಣು
ನಾನಿನ್ನ । ನಪ್ಪಿ । ದಲ್ಲದೆ* । ಸೈರಿಸ । ಲಾರೆನ । ಯ್ಯ
ಅಯ್ಯಾ । ನೀನೋಡಿ । ದರೆ ನೋಡು* । ನೋಡದಿ । ದ್ದರೆ ಮಾ । ಣು
ನಾನಿನ್ನ । ನೋಡಿ ಹಿಗ್ಗಿ[27] । ದಲ್ಲದೆ* । ಸೈರಿಸ । ಲಾರೆನ । ಯ್ಯ
ಚೆನ್ನಮಲ್ಲಿ । ಕಾರ್ಜುನ । ಯ್ಯ
ನಾ ನಿಮ್ಮ । ಪೂಜಿಸಿ* । ಹರುಷದ । ಲೋಲಾ । ಡುವೆನ । ಯ್ಯ

---

23 ಅಲ್ಲಮನ ವಚನ ಚಂದ್ರಿಕೆ-ಸಂ; ಎಲ್. ಬಸವರಾಜು, ಎಂ.ಎ.. ಪ್ರ; ನಳಿನೀಶಂಕರ ಪ್ರಕಾಶನ; ಮೈಸೂರು. (1960). ಪು. 15. ವಚನ 60. (ಮೂರನೇ ಗಣದಲ್ಲಿ ಶಿಥಿಲ)
ಕಾಣಬಾ । ರದಲಿಂಗ । ಕರಸ್ಥಲಕೆ । ಬಂದರೆ* । ಎನಗಿದು । ಸೋಜಿ । ಗ
ಎನಗಿದು | ಸೋಜಿ | ಗ
ಅಮದೆನ | ಲಮ್ಮೆನು | ಅಪ್ಪೆನ | ಲಮ್ಮೆನು* | ಗುss ಹೇ | ಶ್ವರಲಿಂ | ಗ
ನಿ] ರಾಳ ನಿ | ರಾಕಾ | ರ

24 ಪು. 73, ವಚನ 55.

25 + ನಾನೇನೆಂದರಿಯದೆ ; ಸ್ವೀಪಾ : ಹ

26 ಪು. 84-85. ವಚನ 83.

27 + ಹಾರೈಸಿ.

ಕೊನೆಯ ಮೂರು ಪಾದಗಳಲ್ಲಿ ಕ್ಲೇಶವಿದೆ. 'ನೋಡಿ ಹಿಗ್ಗಿ' ಎಂಬುದಕ್ಕೆ ಪ್ರತಿಯಾಗಿ 'ಹಾರೈಸಿ' ಎಂಬುದೇ ಹೆಚ್ಚು ಹೊಂದಬಹುದು. ಮೊದಲಿನಿಂದಲೂ ಎರಡೆರಡು ಪಾದಗಳು ಸಂವಾದಿಯಾಗಿ ಬಂದಿರುವುದರಿಂದ ಕೊನೆಯ ಎರಡು ಪಾದಗಳೂ ಹಾಗೆ ಇದ್ದಿರಬಹುದು. ಹೆಚ್ಚಿನ ಆಕರಗಳಿಂದ ಪಾಠಗಳು ಸಿಗಬೇಕಷ್ಟೆ. ನಾಲ್ಕನೇ ಪಾದ ಒಂದು ಪ್ರತಿಯಲ್ಲಿಲ್ಲದಿರುವುದೂ ಕೊನೆಯಲ್ಲಿ 'ಪೂಜಿಸು'ವ ವಿಷಯ ಬಂದಿರುವುದೂ ಗಮನಾರ್ಹ.

8 [28] ನಚ್ಚುಗೆ । ಮನನಿ । ಮ್ಮಲ್ಲಿ* । ಮೆಚ್ಚುಗೆ । ಮನನಿಮ್ಮ । ಲ್ಲಿ
ಸಲ್ಲುಗೆ । ಮನನಿ । ಮ್ಮಲ್ಲಿ* । ಸೋಲುಗೆ । ಮನನಿಮ್ಮ । ಲ್ಲಿ
ಆಳಲುಗೆ | ಮನನಿ | ಮ್ಮಲ್ಲಿ* | ಬಳಲುಗೆ | ಮನನಿಮ್ಮ | ಲ್ಲಿ
ಕರಗುಗೆ | ಮನನಿ | ಮ್ಮಲ್ಲಿ* | ಕೊರಗುಗೆ | ಮನನಿಮ್ಮ | ಲ್ಲಿ
ಎನ್ನಪಂ | ಚೇಂದ್ರಿಯ | ಗಳೂ ಕ | ಬ್ಬಿನ ಉಂಡ* | ನೀರಿನಂ | ತೆ
ನಿಮ್ಮಲ್ಲಿ | ಬೆರಸುಗೆ* | ಚೆನ್ನ | ಮಲ್ಲಿ | ಕಾರ್ಜನ | ಯ್ಯ

ಮೊದಲ ನಾಲ್ಕು ಪಾದಗಳ ಮೊದಲ ಮೂರು ಗಣಗಳನ್ನು ವಿರು (ವಿವಿಗ)ದಂತೆ ಪ್ರಸ್ತಾರಿಸಿ ಅಂಶ ಚೌಪದಿಯ ಎಂಟು ಪಾದಗಳನ್ನು ಕಲ್ಪಿಸಬಹುದು. ಆದರೆ ಕೊನೆಯ ಎರಡು ಪಾದಗಳು ಹಾಗಾಗವು. ಈ ಎರಡು ಪಾದಗಳಿಗೆ ತಕ್ಕಂತೆ ಮೇಲಿನವು ಅಚ್ಚುಗೊಳ್ಳಬೇಕು. ಐದನೇ ಪಾದ ನಡುವಣಕ್ಕರವೆಂಬುದನ್ನು ಸ್ಪಷ್ಟಪಡಿಸುತ್ತದೆ. 'ಗಳೂ' ಎಂಬಲ್ಲಿ ದೀರ್ಘ ಹ್ರಸ್ವವಾಗಬೇಕು.

9 [29] ಉಸುರಿನ | ಪರಿಮಳ | ವಿರಲು* | ಕುಸುಮದ | ಹಂಗೇಕ | ಯ್ಯ
ಕ್ಷಮೆದಮೆ | ಶಾಂತಿ ಸೈ | ರಣೆಯಿರಲು* | ಸಮಾಧಿಯ | ಹಂಗೇಕ | ಯ್ಯ
ಲೋಕವೆ | ತಾನಾದ | ಬಳಿಕ ಏ | ಕಾಂತದ* | ಹಂಗೇಕ | ಯ್ಯ ಚೆನ್ನ |
ಮಲ್ಲಿಕಾರ್ಜು । ನ

10 [30] ಸಂಸಾರ | ಸಾಗರ | ದೊಳಗೆ | ಬಿದ್ದೆ* | ನೋಡಾನಾ | ನು
ಸಂಸಾರ | ನಿಸ್ಸಾರ | ವೆಂದು | ತೋರಿದ* | ನೆನಗೆಗು | ರು
ಅಂಗವಿ | ಕಾರದ | ಸಂಗವ | ನಿಲಿಸಿ* | ಲಿಂಗವ | [31][ನು
ಅಂ][31]ಗದ | ಮೇಲೆ* | ಸ್ಥಾಪ್ಯವ | ಮಾಡಿದ* | ನೆನ್ನಗು | ರು
ಹಿಂದಣ ಜ | ನ್ಮವ ತೊಡೆದು* | ಮುಂದಣ ಪ | ಥವ ತೋರಿದ* | ನೆನ್ನತಂ | ದೆ
ಚೆನ್ನಮಲ್ಲಿ | ಕಾರ್ಜುನನ | ನಿಜವ | ನರುಹಿದ* | ನೆನ್ನ ಗು | ರು

---

28 ಪು. 77, ವಚನ 66.

29 ಪು. 96, ವಚನ 120 'ಸಮಾಧಿಯ' ಎಂಬಲ್ಲಿ ಎರಡನೇ ಸ್ವರಕ್ಕೆ ಹ್ರಸ್ವದ ಛಾಯೆ ಬರಬೇಕು.

30 ಪು. 69-70, ವಚನ 44.

31 ನಂ. (ಸಂಧಿ ಬಿಡಿಸಿದೆ).

ಐದನೇ ಪಾದ ತೊಡಕಾಗಿದೆ. ಮೊದಲನೆಯ ಮತ್ತು ನಾಲ್ಕನೆ ಗಣರೂಪ ಜನಪದದಲ್ಲಿ ಸಿಗುತ್ತವೆ. "ಒಂದಣವ, ತೊಡೆದು ಮುಂ, ದಣ ಪಥವ, ತೋರಿದ, ನೆನ್ನ ತಂ,ದೆ" ಎಂದಿರಬಹುದೆ ? ಇರುವ ರೂಪ ಅನೇಕ ಪ್ರತಿಗಳದು ಎಂದು ಖಚಿತ ವಾಗಿದೆಯೆ ?

11 [32] ಅರಸಿಮರೆ | ಹೊಕ್ಕಡೆ* | ಕಾವಗುರು | ವೇ ಜಯ* | ಜಯಗುರು | ವೇ
ಆರೂ | ಅರಿಯದ | ಬಯಲೊಳಗೆ | ಬಯಲಾಗಿ* | [33][ನಿಂದ ನಿಲ | ವ][33]
ನಿಂದ ನಿ | ಲವಹಿಡಿ | ದೆನ್ನಕರ | ದಲ್ಲಿತೋ | ರಿದಗುರು | ವೇ
ಚೆನ್ನ | ಮಲ್ಲಿ | ಕಾರ್ಜುನ | ಗುರುವೆ ಜಯ | ಜಯಗುರು | ವೇ

ಮೊದಲ ಪಾದದಲ್ಲಿ ಮೊದಲು ಬರುವ 'ಗುರುವೇ' ಎಂಬಲ್ಲಿನ ದೀರ್ಘವನ್ನೂ ಕೊನೆಯ ಪಾದದಲ್ಲಿ ಮೊದಲು ಬರುವ 'ಗುರುವೆ' ಎಂಬಲ್ಲಿನ ಪ್ರಸ್ವವನ್ನೂ ಗಮನಿಸಿ.

12 [34] ನರಜ | ನ್ಮವ ತೊಡೆದು* | ಪರಜ | ನ್ಮವ ಮಾ | ಡಿದ ಗುರು | ವೇ
ಭವಬಂಧ | ನವ ಬಿಡಿಸಿ* | ಪರಮಸು | ಖವತೋ | ರಿದ ಗುರು | ವೆ
ಭವಿ ಎಂ | ಬುದ ತೊಡೆದು* | ಭಕ್ತ | ಎಂದೆನಿ | ಸಿದಗುರು | ವೇ
ಚೆನ್ನಮಲ್ಲಿ | ಕಾರ್ಜುನನ* | ತಂದೆನ್ನ | ಕೈವಶಕೆ* | ಕೊಟ್ಟ ಗುರು | ವೇ[35]

13 [36] ಅಕ್ಕ | ಕೇಳವ್ವ* | ಅಕ್ಕಯ್ಯ | ನಾನೊಂದು* | ಕನಸ ಕಂ | ಡೆ
ಅಕ್ಕಿ | ಅಡಕೆ | ಓಲೆ | ತೆಂಗಿನ | ಕಾಯಕಂ | ಡೆ
ಚಿಕ್ಕ ಚಿಕ್ಕ | ಜಡೆಗಳ
ಸುಲಿಪಲ್ಲ | ಗೊರವನು |
ಭಿಕ್ಷಕ್ಕೆ[37] | ಬಂದುದ | ಕಂಡೆನ | ವ್ವ
ಮಿಕ್ಕು | ಮೀರಿ | ಹೋಪನ | ಬೆಂಬತ್ತಿ* | ಕೈವಿಡಿದೆ | ನು
ಚೆನ್ನಮಲ್ಲಿ | ಕಾರ್ಜು | ನಯ್ಯನ | ಕಂಡು* | ಕಣ್ದೆರೆದೆ | ನು

ಆರಂಭದಲ್ಲೋ, ಮಧ್ಯದಲ್ಲೋ, ಅಂತ್ಯದಲ್ಲೋ ಅರ್ಧ ಷಟ್ಪದಿಯನ್ನಿಂ ಸುವ ಬಗೆ ಬೇರೆಡೆಗಳಲ್ಲೂ ಇವೆ. 'ಜಡೆಗಳ ಸುಲಿಪಲ್ಲ ಗೊರವನು ಬಂದುದ ಕಂಡೆನವ್ವ' ಎಂಬುದು ನಡುವಣಕ್ಕರದ ಪಾದವಾಗುತ್ತದೆ.

---

[32] ಪು. 68, ವಚನ 40.

[33] × ; ಇಲ್ಲದಿದ್ದರೆ 'ಆರೂ, ಅರಿಯದ, ಬಯಲೊಳ,ಗೆ–, ಬಯಲಾ,ಗಿ' ಎಂದಾಗ ಬೇಕು.

[34] ಪು. 69, ವಚನ 43.

[35] + ನಮೋನಮೋ (ಸಂ) ; ಶರಣು (ಪ), ಶರಣು ಶರಣು (ಗೌಶಸ್ವಾ).

[36] ಪು. 86, ವಚನ 87.

[37] + ಮನೆಗೆ ; ಸ್ವೀಪಾ (ಹ)

14 [38] ಅರಲು | ಗೊಂಡ | ಕೆರೆಗೆ* | ತೊರೆಬಂದು | ಹಾಯ್ದುಂ | ತೆ
ಬರಲು | ಗೊಂಡಸ | ಸಿಗೆ ಮಳೆ* | ಸುರಿದಂ | ತಾಯ್ತುನೋ | ಡಾ
ಇಂದೆನಗೆ | ಇಹದ ಸುಖ | ಪರದ ಗತಿ* | ನಡೆದು ಬಂ | ದಂತಾಯಿ | ತ್ತು[39]
ಚೆನ್ನಮಲ್ಲಿ | ಕಾರ್ಜುನಯ್ಯ* | ಗುರುಪಾ | ದವಕಂಡು* | ಧನ್ಯಳಾದೆ | ನು[40]

‘ಹಾಯ್ದಂತಾಯ್ತು’ ಎಂದೋ, ‘ಹಾಯ್ದಂತಾಯಿತ್ತು’ ಎಂದೋ ಇದ್ದಿದ್ದರೆ ಪ್ರಾಯಶಃ ಅಲ್ಲೂ ಒಂದು ‘ನೋಡಾ’ ಎಂಬುದು ಸೇರುತ್ತಿತ್ತೋ ಏನೋ! ಇಲ್ಲಿನ ಪಾಠ ನಿಷ್ಕರ್ಷೆ ಅಂತಿಮವೆಂದೇನೂ ಅಲ್ಲ. ಎಲ್ಲಿನ ಕ್ಲೇಶ ಯಾವ ಚೌಕಟ್ಟಿನಲ್ಲಿ ಪರಿಹಾರವಾಗಬೇಕೆಂಬುದನ್ನಾದರೂ ಸೂಚಿಸಬಹುದು.

---

38 ಪು. 70. ವಚನ 45.

39 + ನೋಡಾ ; ಸ್ವೀಪಾ (ಹ ; ಲಿಂಲೀ. ವಿ.ಚಾ.)

40 + ನೋಡಾ.

ಬಯೋರಿದಮ್

ಎಚ್. ಆರ್. ಕೃಷ್ಣಮೂರ್ತಿ

'ಬಯೋರಿದಮ್' ವಿಜ್ಞಾನಿಗಳ ಕುತೂಹಲವನ್ನು ಕೆರಳಿಸಿ, ಪ್ರಯೋಗಗಳಿಗೆ ದಾರಿ ಮಾಡುತ್ತಿರುವ ಹೊಸ ವಿಷಯ. ವಿಜ್ಞಾನದ ಸ್ಥಾನ ಇದಕ್ಕೆ ಇನ್ನೂ ದೊರೆತಿಲ್ಲವಾದರೂ, ಇತ್ತೀಚೆಗೆ ಇದರ ಬಗೆಗೆ ಸಂಶೋಧನೆಗಳು ನಡೆಯುತ್ತಿವೆ. ಮಾನಸಿಕ ಒತ್ತಡಗಳು, ಜಿಗುಪ್ಸೆ, ನಿರಾಶೆ, ಆಕಸ್ಮಿಕಗಳು ಮುಂತಾದವೊಡನೆ ಉತ್ಸಾಹಭರಿತ ಜೀವನ, ರಚನಾತ್ಮಕ ಕೆಲಸಗಳು, ಅಪಾರ ಆತ್ಮವಿಶ್ವಾಸಗಳ, ವ್ಯಕ್ತಿಯೊಬ್ಬನ ಹಲವು ಮುಖಗಳ ಚಟುವಟಿಕೆಗಳ ಬಗೆಗೆ ಬೆಳಕು ಚೆಲ್ಲುವ ಈ ವಿಭಾಗ ಅತ್ಯಂತ ಕುತೂಹಲಕಾರಿ. ಕೆಲವು ದೇಶಗಳಲ್ಲಿ ಈ ವಿಷಯದ ಉಪಯೋಗದಿಂದ ಆಕಸ್ಮಿಕಗಳ ಸಂಖ್ಯೆ ಗಮನಾರ್ಹವಾಗಿ ಬದಲಾಗಿದೆ.

'ಬಯೋರಿದಮ್'ನ ಸಿದ್ಧಾಂತದಂತೆ, ಒಬ್ಬ ವ್ಯಕ್ತಿಯ ಚಟುವಟಿಕೆಗಳು ಗುರುತಿಸಬಹುದಾದ ನಿರ್ದಿಷ್ಟ ಪರಿಧಿಗಳಲ್ಲಿರುತ್ತವೆ. ಈ ಪರಿಧಿಗಳಲ್ಲಿ ಮುಖ್ಯವಾಗಿ 3 ಭಾಗಗಳಿವೆ: 'ದೈಹಿಕ ಚಕ್ರ', 'ಭಾವನಾಚಕ್ರ' ಮತ್ತು 'ಬೌದ್ಧಿಕ ಚಕ್ರ'. ಪ್ರತಿಯೊಂದು ಚಕ್ರಕ್ಕೂ ಗೊತ್ತಾದ ಆವರ್ತಕಾಲವಿದೆ. ಇದೇ ಚಕ್ರ ಪುನರಾವರ್ತವಾಗುತ್ತದೆ. ಈ ಮೂರು ಚಕ್ರಗಳ ಆವರ್ತಕಾಲ ಕ್ರಮವಾಗಿ, 23, 28 ಮತ್ತು 33 ದಿನಗಳು ಪ್ರತಿ ಚಕ್ರದ ಆವರ್ತಕಾಲದಲ್ಲೂ ಧನಾತ್ಮಕ ಮತ್ತು ಋಣಾತ್ಮಕ ಸಮಭಾಗಗಳಿವೆ. ಉದಾಹರಣೆಗೆ, 23 ದಿನಗಳ ದೈಹಿಕ ಚಕ್ರವನ್ನು, 11½ ದಿನಗಳ ಧನಾತ್ಮಕ ಚಕ್ರ ಹಾಗೂ 11½ ದಿನಗಳ ಋಣಾತ್ಮಕ ಚಕ್ರ ಎಂದು ಸಮವಾಗಿ ಭಾಗಿಸಲಾಗಿದೆ.

'ಬಯೋರಿದಮ್'ನ ಸಿದ್ಧಾಂತದಂತೆ, ಮೇಲೆ ಹೇಳಿದ ಒಂದೊಂದು ಚಕ್ರವೂ, ವ್ಯಕ್ತಿಯ ಗೊತ್ತಾದ ಚಟುವಟಿಕೆಯೊಂದನ್ನು ರೂಪಿಸುತ್ತದೆ. ದೈಹಿಕಚಕ್ರ ವ್ಯಕ್ತಿಯ ಶ್ರಮಸಾಧ್ಯವಾದ ದೈಹಿಕ ಕೆಲಸಗಳು, ಕಷ್ಟತರವಾದ ಆಟಗಳು, ಮುಂತಾದವುಗಳ ನಿಯಂತ್ರಣಕ್ಕೆ ಸಂಬಂಧಿಸಿದೆ. ದೈಹಿಕ ಚಕ್ರದ ಪ್ರಥಮ 11½ ದಿನಗಳು (ಧನಾತ್ಮಕ ಭಾಗ) ಇಂತಹ ಚಟುವಟಿಕೆಗಳಿಗೆ ಪ್ರಶಸ್ತಕಾಲ. ಶಕ್ತಿವ್ಯಯವಾಗುವ ಯಾವುದೇ ಕೆಲಸವನ್ನು ಈ ಅವಧಿಯಲ್ಲಿ ಸಮರ್ಪಕವಾಗಿ, ಯಶಸ್ವಿಯಾಗಿ ಮಾಡಬಹುದು. ಉಳಿದುದು ದೈಹಿಕ ಚಟುವಟಿಕೆಗೆ ಸೂಕ್ತವಲ್ಲದ ಅವಧಿ. ಈ ದಿನಗಳಲ್ಲಿ ಆಲಸ್ಯ, ದೇಹಬಾಧೆ ಅತ್ಯಧಿಕ.

ಮಾನಸಿಕ ಏರಿಳಿತಗಳು, ಬಹು ವಿವಿಧ ಭಾವನೆಗಳು, ಪ್ರೀತಿ, ದ್ವೇಷ, ಸ್ನೇಹ, ಉದ್ವೇಗ, ಕಾತುರತೆ ಆತಂಕಗಳು ಭಾವನಾಚಕ್ರದ ಸ್ವತ್ತು. ಧನಾತ್ಮಕ ಭಾವನಾಚಕ್ರದ ಹದಿನಾಲ್ಕು ದಿವಸಗಳು ಮಾನಸಿಕವಾಗಿ ಅತ್ಯಂತ ಉತ್ಸಾಹಭರಿತ, ಭರವಸಾಪೂರ್ವಕ, ಆತ್ಮವಿಶ್ವಾಸದ ದಿನಗಳು. ಉಳಿದವು ಕಾರಣವಿಲ್ಲದ ಉದ್ವೇಗದ, ಆತಂಕದ, ನಿರಾಶೆಯ ದಿನಗಳು. ಈ ಭಾವನಾಚಕ್ರದ ಗತಿಯನ್ನು ಸ್ತ್ರೀಯರ ಋತುಚಕ್ರದೊಡನೆ ಸಂಬಂಧಿಸಲಾಗಿದೆ. ಇದರಂತೆಯೇ ಬೌದ್ಧಿಕ ಚಕ್ರದ ಪ್ರಥಮ 16½ ದಿನಗಳಲ್ಲಿ ಅಧ್ಯಯನ, ಚಿಂತನ, ಬರವಣಿಗೆ, ಸಂಶೋಧನೆ ಮುಂತಾದ ಕ್ರಿಯಾತ್ಮಕ ಬೌದ್ಧಿಕ ಚಟುವಟಿಕೆಗಳನ್ನು ಮಾಡಲು ಸಾಧ್ಯ. ಕಷ್ಟಸಾಧ್ಯವಾದುದನ್ನು ಕಲಿಯಲೂ ಹಾಗೂ ಕಲಿತುದನ್ನು ದೀರ್ಘಕಾಲ ನೆನಪಿನಲ್ಲಿಟ್ಟುಕೊಳ್ಳಲು ಈ ಅವಧಿ ಸಹಾಯಕ. ಋಣಾತ್ಮಕ ಚಕ್ರದ ಉಳಿದ ದಿನಗಳು ಇದಕ್ಕೆ ವ್ಯತಿರಿಕ್ತ.

ಮೇಲಿನ ಮೂರೂ ಚಕ್ರಗಳಲ್ಲಿ, ಧನಾತ್ಮಕದಿಂದ ಋಣಾತ್ಮಕವಾಗುವ ಅಥವಾ ಋಣಾತ್ಮಕದಿಂದ ಧನಾತ್ಮಕವಾಗುವ ದಿನವನ್ನು, ಅಂದರೆ ಚಕ್ರ ತನ್ನ ಗತಿಯನ್ನು ಬದಲಿಸುವ ದಿನವನ್ನು 'ಶೂನ್ಯದಿನ'ವೆಂದು ಕರೆಯಲಾಗುತ್ತದೆ. ಉದಾಹರಣೆಗೆ ಮಾರ್ಚ್ 1 ರಂದು, ವ್ಯಕ್ತಿಯೊಬ್ಬನ ದೈಹಿಕ ಚಕ್ರದ ಗತಿ ಧನಾತ್ಮಕದಿಂದ ಋಣಾತ್ಮಕವಾದರೆ ಅಥವಾ ಋಣಾತ್ಮಕದಿಂದ ಧನಾತ್ಮಕವಾದರೆ, ಮಾರ್ಚ್ 1, ಆ ವ್ಯಕ್ತಿಯ ದೈಹಿಕ ಚಕ್ರದ ಶೂನ್ಯದಿನವಾಗಿರುತ್ತದೆ. ದೈಹಿಕ ಚಕ್ರದ ಶೂನ್ಯ ದಿನದಂದು ವ್ಯಕ್ತಿ ಅಪಘಾತಕ್ಕೆ ಈಡಾಗುವ ಸಂಭವ ಅಧಿಕವಾಗುತ್ತದೆ. ಅಂತೆಯೇ ಭಾವನಾಚಕ್ರದ ಶೂನ್ಯ ದಿನದಂದು ವ್ಯಕ್ತಿಯ ಉದ್ವೇಗ, ಕಾತುರತೆಗಳು ಅಧಿಕವಾಗಿ, ಭಾವಾವೇಶಗಳು ಸ್ಫೋಟಕ ಸ್ಥಿತಿಯಲ್ಲಿರುತ್ತವೆ. ಬೌದ್ಧಿಕ ಚಕ್ರದ ಶೂನ್ಯ ದಿನಕ್ಕೆ ಇಂತಹ ಪ್ರಾಮುಖ್ಯತೆಯನ್ನು ಕೊಟ್ಟಿಲ್ಲವಾದರೂ, ಬೌದ್ಧಿಕ ಚಕ್ರದ ಶೂನ್ಯ ದಿನ ಉಳಿದೆರಡು ಶೂನ್ಯ ದಿನಗಳೊಡನೆ ಕೂಡಿಬಂದಲ್ಲಿ ಅಪಾಯದ ಸಂಭವ ಅಧಿಕವಾಗುತ್ತದೆ.

ಜಪಾನಿನ 'ಓಮಿ' ರೈಲ್ವೇ ಕಂಪೆನಿಯಲ್ಲಿ, ವಾಹನಗಳನ್ನು ನಡೆಸುವ ಸುಮಾರು 500 ಚಾಲಕರಿದ್ದಾರೆ. ಪ್ರತಿಯೊಬ್ಬ ಚಾಲಕನ ದೈಹಿಕ, ಭಾವನಾ ಹಾಗೂ ಬೌದ್ಧಿಕ ಚಕ್ರಗಳನ್ನು ಈ ಕಂಪೆನಿಯ ಸೂಕ್ಷ್ಮ ಗಣಕಯಂತ್ರ ವಿಶದವಾಗಿ ಅಭ್ಯಾಸ ಮಾಡಿ, ಚಾಲಕರ ದೈಹಿಕ ಭಾವನಾ ಹಾಗೂ ಬೌದ್ಧಿಕ ಚಕ್ರಗಳ ಶೂನ್ಯ ದಿನವನ್ನು ಗುರುತಿಸಿರುತ್ತದೆ. ಶೂನ್ಯ ದಿನದಂದು ವಾಹನವನ್ನೇರುವ ಪ್ರತಿಯೊಬ್ಬ ಚಾಲಕನಿಗೂ ಕಂಪ್ಯೂಟರ್ ಅಪಘಾತದ ಮುನ್ಸೂಚನೆಯನ್ನು ನೀಡುತ್ತದೆ. ಶೂನ್ಯ ದಿನದ ಸೂಚನೆ ಪಡೆದ ಪ್ರತಿಯೊಬ್ಬ ಚಾಲಕನೂ ಅಂದು ಹೆಚ್ಚು ಎಚ್ಚರಿಕೆಯಿಂದ ವಾಹನ ನಡೆಸುತ್ತಾನೆ. ಈ ಕ್ರಮವನ್ನು ಜಾರಿಗೆ ತಂದನಂತರ ಕಂಪೆನಿಯ ವಾಹನಗಳಿಂದ ಆಗುತ್ತಿದ್ದ ರಸ್ತೆ ಅಪಘಾತಗಳು ಸೇಕಡಾ 50ರಷ್ಟು ಕಡಿಮೆಯಾಗಿವೆ.

ದೈಹಿಕ ಹಾಗೂ ಭಾವನಾ ಚಕ್ರಗಳ ಶೂನ್ಯದಿನ ಸರಾಸರಿ 6 ದಿನಗಳಿಗೊಮ್ಮೆ ಸಂಭವಿಸುತ್ತದೆ. ದೈಹಿಕ ಹಾಗೂ ಭಾವನಾ ಚಕ್ರಗಳ ಶೂನ್ಯದಿನ ಒಂದೇ ದಿನವಾಗಿದ್ದರೆ ಅಂತಹದನ್ನು ಇಮ್ಮಡಿ ಶೂನ್ಯದಿನವೆಂದೂ; ಎಲ್ಲ ಚಕ್ರಗಳ ಶೂನ್ಯದಿನ ಒಂದೇ ದಿನ ಸಂಭವಿಸಿದರೆ, ಅಂತಹದನ್ನು ಮುಮ್ಮಡಿ ಶೂನ್ಯದಿನವೆಂದೂ ಕರೆಯುಲಾಗುತ್ತದೆ. ವರುಷವೊಂದರಲ್ಲಿ ಇಮ್ಮಡಿ ಶೂನ್ಯದಿನ 6 ಬಾರಿ ಬಂದರೆ, ಮುಮ್ಮಡಿ ಶೂನ್ಯದಿನ ಒಮ್ಮೆ ಮಾತ್ರ ಬರುತ್ತದೆ. ಎರಡು ಚಕ್ರಗಳ ನಡುವೆ ವಿರುದ್ಧ ರೀತಿಯ ಸಂಬಂಧವಿದ್ದಾಗ ಶೂನ್ಯದಿನಗಳ ಪ್ರಾಮುಖ್ಯತೆ ಅಂದರೆ ಮಾರ್ಚ್ 1 ರಂದು, ವ್ಯಕ್ತಿಯ ದೈಹಿಕ ಚಕ್ರ ಧನಾತ್ಮಕದಿಂದ ಋಣಾತ್ಮಕವಾಗಿ, ಹಾಗೂ ಭಾವನಾಚಕ್ರ ಋಣಾತ್ಮಕದಿಂದ ಧನಾತ್ಮಕವಾದರೆ, ಮಾರ್ಚ್ 1ರಂದು, ವ್ಯಕ್ತಿ ಅಪಘಾತಗಳಿಗೆ; ಅತ್ಯಧಿಕ ಮಾನಸಿಕ ಒತ್ತಡಗಳಿಗೆ ಈಡಾಗುವ ಸಂಭವ ಅತ್ಯಧಿಕ.

ಸ್ವಿಸ್ ದೇಶದ ತಾಂತ್ರಿಕ ಸಂಸ್ಥೆಯೊಂದರ ವಿಜ್ಞಾನಿ ಹಾನ್ಸ್‌ಸ್ಕಿಲಿಂಗ್ ಜ್ಯೂರಿಚ್ ವಿಮಾ ಕಂಪೆನಿಯೊಂದರಿಂದ 1400 ಅಪಘಾತದ ಮಾಹಿತಿಗಳನ್ನು ಸಂಗ್ರಹಿಸಿ, ಸತತವಾಗಿ ಅಭ್ಯಾಸಮಾಡಿ, ಅದನ್ನು ಈ ಶೂನ್ಯದಿನಕ್ಕೆ ಸಮರ್ಪಕವಾಗಿ ಸಂಬಂಧಿಸಿದ್ದಾರೆ. ಅಪಘಾತಕ್ಕೆ ಈಡಾದ ಪ್ರತಿಯೊಬ್ಬ ವ್ಯಕ್ತಿಯ ವಿವಿಧ ಚಕ್ರಗಳನ್ನು ವ್ಯಕ್ತಿಯ ಜನ್ಮದಿಂದ, ಅಪಘಾತದ ದಿನದವರೆಗೆ ಅಭ್ಯಾಸಮಾಡಿ, ಪ್ರತಿ 10 ರಲ್ಲಿ 6 ಜನ ಅಪಘಾತದ ದಿನದಂದು ದೈಹಿಕ ಅಥವಾ ಭಾವನಾಚಕ್ರಗಳ ಶೂನ್ಯದಿನದಲ್ಲಿದ್ದರೆಂಬುದನ್ನು ಗುರುತಿಸಿದ್ದಾರೆ. ಅಪಘಾತದಿಂದ ಸತ್ತವರಲ್ಲಿ ಶೇಕಡಾ 65 ಮಂದಿ ದೈಹಿಕ ಮತ್ತು ಭಾವನಾಚಕ್ರಗಳ ಇಮ್ಮಡಿ ಶೂನ್ಯದಿನದಂದು ಸತ್ತಿದ್ದಾರೆಂದು ವಿಶದಪಡಿಸಿದ್ದಾರೆ.

‘ಬಯೋರಿದಮ್’ ಬಗೆಗಿನ ವಿಷಯಗಳು ವಿಜ್ಞಾನಿಗಳಿಗೆ ಹೊಸದಲ್ಲದಿದ್ದರೂ, ಸಂಶೋಧನೆಗಳು ಆಗುತ್ತಿರುವುದು ಇತ್ತೀಚಿನ ಕೆಲವೇ ವರುಷಗಳಿಂದ ಮಾತ್ರ. ವಿಯೆನ್ನಾ ವಿಶ್ವವಿದ್ಯಾಲಯದ ಮನಃಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಹೆರ್ಮನ್ ಸ್ವೊಬೋಡಾ 1897 ಹಾಗೂ 1902 ರ ನಡುವೆ ಈ ವಿಷಯದ ಬಗೆಗೆ ಆಳವಾದ ಸಂಶೋಧನೆ ನಡೆಸಿ, ತನ್ನ ಸಂಶೋಧನೆಗಳನ್ನು “ಮಾನವ ಜೀವನದಲ್ಲಿ ನಿಯತ ಕಾಲತೆ” ಎಂಬ ಗ್ರಂಥರೂಪದಲ್ಲಿ (1904) ಪ್ರಕಟಿಸಿದನು. ಇದೇ ಕಾಲದ ಬರ್ಲಿನ್ನಿನ ವೈದ್ಯ ವಿಲ್ಹೆಲ್ಮ್ ಫ್ಲೀಸ್, ತನ್ನ ರೋಗಿಗಳ ಮೇಲೆ ಅನೇಕ ಪ್ರಯೋಗಗಳನ್ನು ನಡೆಸಿ, ರೋಗಗಳು ಕಾಣಿಸಿಕೊಂಡ ದಿನಗಳು, ಉಲ್ಬಣಾವಸ್ಥೆ ಮುಟ್ಟಿದ ದಿನ, ಭಾವೋದ್ರೇಕಗಳು ಮುಕ್ತವಾಗಿ ವ್ಯಕ್ತಗೊಂಡ ಕಾಲ, ಕಾತುರತೆ, ಸುಸ್ತುನೋವುಗಳನ್ನು ಗುರುತಿಸಿ, ಅಧ್ಯಯನಮಾಡಿ, ‘ಜೀವನದ ಗತಿ’ ಗ್ರಂಥವನ್ನು (1906) ಪ್ರಕಟಿಸಿದನು. ಮಾನವನ ಜೀವನ ಲಯಬದ್ಧ ಪರಿಮಿತಗಳಿಂದ ಕೂಡಿದೆಯೆಂದು ವ್ಯಕ್ತಪಡಿಸಿದ ಈ ಗ್ರಂಥಗಳು ‘ಬಯೋರಿದಮ್’ ಸಿದ್ಧಾಂತದಲ್ಲಿ ಮೈಲಿಗಲ್ಲುಗಳು.

ಡಾ. ಸ್ವೊಬೋಡಾ ಮತ್ತು ಡಾ. ಫ್ಲೀಸ್ ಇಬ್ಬರೂ ತಮ್ಮ ಸಂಶೋಧನೆಗಳಿಂದ ದೈಹಿಕ ಮತ್ತು ಭಾವನಾಚಕ್ರಗಳನ್ನು ಯಶಸ್ವಿಯಾಗಿ ಗುರುತಿಸಿದ್ದರು. ಆಸ್ಟ್ರಿಯಾದ ಇನ್ಸ್‌ಬ್ರೂಕ್‌ನಲ್ಲಿನ ಉಪಾಧ್ಯಾಯ ಆಲ್‌ಫ್ರೆಡ್‌ಟೆಲ್‌ಶ್ಚರ್ ತನ್ನ ವಿದ್ಯಾರ್ಥಿಗಳ ಬುದ್ಧಿಶಕ್ತಿ, ಗ್ರಹಣ ಶಕ್ತಿ, ಕ್ರಿಯಾತ್ಮಕ ಚಟುವಟಿಕೆಗಳನ್ನು ಅಭ್ಯಾಸ ಮಾಡಿ, ಬೌದ್ಧಿಕ ಚಕ್ರವನ್ನು (1920) ಗುರುತಿಸಿದನು. ಬೌದ್ಧಿಕ ಚಕ್ರವನ್ನು ಇದೇ ಕಾಲದ ಡಾ. ರೆಕ್ಸ್‌ಫೋರ್ಡ್ ಹೆರ್‌ಸಿ ಮತ್ತು ಡಾ. ಮೈಕೇಲ್‌ಜಾನ್ ಬೆನೆಟ್ ಅಮೆರಿಕದ ಪೆನ್‌ಸಲ್‌ವೇನಿಯಾ ವಿಶ್ವವಿದ್ಯಾಲಯದಲ್ಲಿ ಗುರುತಿಸಿದರು. 'ಬಯೋರಿದಮ್' ಸಿದ್ಧಾಂತದಲ್ಲಿ ಇದುವರೆಗೆ ಸಾಧಿಸಿರುವ ಎಲ್ಲ ವಿಷಯಗಳೂ, ಕೇವಲ ಅಂಕಿ–ಅಂಶಗಳಮೇಲೆ ಆಧರಿತವಾಗಿದೆಯೇ ಹೊರತು, ಪ್ರಯೋಗ, ವೀಕ್ಷಣ, ಸಿದ್ಧಾಂತಗಳ ವಿಜ್ಞಾನದ ಕ್ರಮದಿಂದಲ್ಲ. ಈ ಕಾರಣಕ್ಕಾಗಿ ವಿಜ್ಞಾನದ ಸ್ಥಾನವನ್ನು ಪಡೆವಂತಿಲ್ಲ ಎಂಬ ವಾದವನ್ನು ಸಂಪೂರ್ಣವಾಗಿ ತಳ್ಳಿಹಾಕುವಂತಿಲ್ಲ.

ಇಷ್ಟಾದರೂ, 'ಬಯೋರಿದಮ್' ಸಿದ್ಧಾಂತಗಳನ್ನು ಅನೇಕ ಎಡೆಗಳಲ್ಲಿ ಅತ್ಯಂತ ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ. ಪ್ರಪಂಚದ ಅನೇಕ ಕೈಗಾರಿಕಾ ಸಂಸ್ಥೆಗಳಲ್ಲಿ, ಇದರ ಸಹಾಯದಿಂದ ಅನೇಕ ಅಪಘಾತಗಳು ತಪ್ಪಿವೆ. ಸ್ವಿಟಸರ್ ಲ್ಯಾಂಡಿನ ಸಾರಿಗೆ ಸಂಸ್ಥೆ ಇದರ ಪ್ರಯೋಜನವನ್ನು ಪಡೆಯುತ್ತಿದೆ. ಸ್ವಿಸ್ ವೈದ್ಯಕೀಯ ಸಂಸ್ಥೆಗಳು ವ್ಯಕ್ತಿಯೊಬ್ಬನ ಶಸ್ತ್ರಚಿಕಿತ್ಸೆಯ ದಿನವನ್ನು ಗೊತ್ತುಮಾಡುವ ಮೊದಲು ಈ ಕ್ರಮದಿಂದ ವ್ಯಕ್ತಿಯ ದೈಹಿಕ, ಮಾನಸಿಕ ಸ್ಥಿತಿಗಳನ್ನು ಅಭ್ಯಸಿಸುತ್ತದೆ. ಅಮೆರಿಕದ, ಆಲ್ಬುಕರ್ಕ್‌ನ ಸ್ಯಾಂಡಿಯಾ ಪ್ರಯೋಗಶಾಲೆಯ ವಿಜ್ಞಾನಿಗಳು ಇತ್ತೀಚೆಗೆ ಪ್ರಕಟಿಸಿದ "ಸ್ವಾಭಾವಿಕ ಪರಿಸರ ಮತ್ತು ಕುತೂಹಲಕಾರಿ ಆಕಸ್ಮಿಕಗಳು" ಎಂಬ ಹೊತ್ತಿಗೆಯಲ್ಲಿ, ಆಕಸ್ಮಿಕಗಳಾಗುವ ದಿನಗಳಿಗೂ ಈ ಚಕ್ರಗಳಿಗೂ ಇರುವ ಸಂಬಂಧವನ್ನು ಗುರುತಿಸಿದೆ.

ವ್ಯಕ್ತಿಯೊಬ್ಬನ ವಿವಿಧ ಚಕ್ರಗಳ ಗತಿಯನ್ನು ಗುರುತಿಸಲು ವ್ಯಕ್ತಿ ಹುಟ್ಟಿದ ದಿನ ತಿಳಿದಿರಬೇಕು. ಉದಾಹರಣೆಗೆ, ಜುಲೈ 7, 1949 ರಂದು ಹುಟ್ಟಿದವನ ದೈಹಿಕ, ಭಾವನಾ ಹಾಗೂ ಭೌದ್ಧಿಕ ಚಕ್ರಗಳ ಗತಿಯನ್ನು, 1974 ಮಾರ್ಚ್ ತಿಂಗಳಿನಲ್ಲಿ ಗುರುತಿಸೋಣ.

(ಅ) ಜುಲೈ 7, 1949 ರಿಂದ
ಜುಲೈ 7, 1973ರ ವರೆಗೆ
365 ದಿನಗಳ 24 ವರುಷಗಳು $365 \times 24 = 8760$ ದಿನಗಳು

(ಆ) ಜುಲೈ 7, 197೩ ರಿಂದ
1 ನೇ ಮಾರ್ಚ್ 1974ರ ವರೆಗೆ...... =237 ದಿನಗಳು

(ಇ) 24 ವರುಷಗಳಲ್ಲಿ ಬರುವ ಅಧಿಕ
ದಿನಗಳು $24 \times \frac{1}{4} =$ 6 ದಿನಗಳು
ಒಟ್ಟು 9003 ದಿನಗಳು

ಈ ಪೊತ್ತವನ್ನು ಕ್ರಮವಾಗಿ 23, 28 ಮತ್ತು 33 ದಿನಗಳಿಂದ ಭಾಗಿಸ ಬೇಕು.

(ಅ) $9003 \div 23 = 391$ ಸಂಪೂರ್ಣ ದೈಹಿಕ ಚಕ್ರಗಳು ಮತ್ತು ಉಳಿದ 10 ದಿನಗಳು

(ಆ) $9003 \div 28 = 321$ ಸಂಪೂರ್ಣ ಭಾವನಾಚಕ್ರಗಳು ಮತ್ತು ಉಳಿದ 15 ದಿನಗಳು

(ಇ) $9003 \div 33 = 272$ ಸಂಪೂರ್ಣ ಬೌದ್ಧಿಕ ಚಕ್ರಗಳು ಮತ್ತು ಉಳಿದ 27 ದಿನಗಳು

ಮೇಲಿನ ವ್ಯಕ್ತಿ, ಮಾರ್ಚ್ 1 ರಂದು ದೈಹಿಕ ಚಕ್ರದ 10 ನೆಯ ದಿನದಲ್ಲಿ, ಭಾವನಾಚಕ್ರದ 15 ನೆಯ ದಿನದಲ್ಲಿ ಹಾಗೂ ಭೌದ್ಧಿಕ ಚಕ್ರದ 27 ನೆಯ ದಿನದಲ್ಲಿ ಇರುತ್ತಾನೆ. ಧನಾತ್ಮಕ ದಿನ ಪ್ರಾರಂಭವಾದಂದು ಚಕ್ರ ಪ್ರಾರಂಭವಾಯಿತೆಂದು ತಿಳಿಯಬೇಕು. ಮೇಲಿನ ಲೆಕ್ಕಾಚಾರದಂತೆ ವ್ಯಕ್ತಿ ಫೆಬ್ರವರಿ 28 ರಂದು ಭಾವನಾ ಚಕ್ರದ ಶೂನ್ಯದಿನದಲ್ಲಿರುತ್ತಾನೆ. ಮಾರ್ಚ್ 3ರ ಸಂಜೆ ದೈಹಿಕ ಚಕ್ರದ ಶೂನ್ಯದಿನ ಹಾಗೂ ಮಾರ್ಚ್ 7 ರಂದು ಬೌದ್ಧಿಕ ಚಕ್ರದ ಶೂನ್ಯದಿನದಲ್ಲಿರುತ್ತಾನೆ. ಈ ವಿಧಾನದಿಂದ ಯಾರು ಬೇಕಾದರೂ, ಯಾವುದೇ ತಿಂಗಳಿಗೆ ತನ್ನ ಚಕ್ರಗಳನ್ನು ಗುರುತಿಸಿಗೊಳ್ಳಬಹುದು.

ವ್ಯಕ್ತಿ ಜೀವನದ ವಿವಿಧ ಮುಖಗಳ, ವಿವಿಧ ಚಟುವಟಿಕೆಗಳ ಲಯಬದ್ಧ ಏರಿಳಿತಗಳನ್ನು, ಬಯೋರಿದಮ್ ಸಿದ್ಧಾಂತದ ಉಪಯೋಗದ ಮೂಲಕ ಅರಿಯು ವುದಕ್ಕೆ ಮುನ್ನ, ವ್ಯಕ್ತಿಯ ವಯಸ್ಸು, ಸಮಾಜವಲ್ಲಿನ ಸ್ಥಾನ, ದೇಹಸ್ಥಿತಿ, ಮನೋ ಭಾವಗಳನ್ನು ಅರಿತಿರಬೇಕು. ನಿಖರವಾಗಿ ಭವಿಷ್ಯವನ್ನು ಅರಿಯಲಾಗದಿದ್ದರೂ ಇವರ ಉಪಯೋಗ ದಿನ ದಿನಕ್ಕೆ ಹೆಚ್ಚುವುದರಲ್ಲಿ ಯಾವ ಸಂದೇಹವೂ ಇಲ್ಲ.

ಆಧಾರ

(i) ಆಗಸ್ಟ್ 1973ರ. "ಸೈನ್ಸ್ ಡೈಜೆಸ್ಟ್" ಸಂಚಿಕೆಯಲ್ಲಿನ ಜೀನ್ ಮೆಕೆಂಜಿಯವರ ಲೇಖನ.

(ii) ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ ಮತ್ತು ಕೆಲವು ಪತ್ರಿಕೆಗಳು.

ಡೈನೋಸಾರ್

ಡಿ. ಎಸ್. ನಾಗಭೂಷಣ

1

ಡೈನೋಸಾರ್–
ಬಹುಶಃ ಈ ಹೆಸರು ಕೇಳಿರಲಾರರು ಎಲ್ಲ–
ಹೆಸರಿರಲಿ, ವಿಷಯ-ವಿವರ ಕೇಳಿದರೆ
ನಕ್ಕುಬಿಟ್ಟೀರಿ ;
ಅಥವಾ
ಅರೆಕ್ಷಣ ಸ್ತಬ್ಧರಾಗಿ ಅತ್ತುಬಿಟ್ಟರೂ ಆಶ್ಚರ್ಯವಿಲ್ಲ !

ಇನ್ನೂರು ದಶಲಕ್ಷ ವರ್ಷಗಳ ಹಿಂದಿನ ಮಾತು :
ಆಗ ಈ ಭೂಮಿ ಬಹುಪಾಲು ಜಲಾವೃತ–
ಅಮೀಬಾ, ಅಕ್ಟೋಪಸ್, ಷಾರ್ಕ್
ಮುಂತಾದ ಜಲಚರಗಳದ್ದೇ ಜೀವಜಗತ್ತು ;
ನಂತರದ ಜೀವ ವಿಕಾಸದ ಮತ್ತೊಂದು ಮಜಲು–
ಸರೀಸೃಪದ ಸೃಷ್ಟಿ : ಡೈನೋಸಾರ್‌ನ ಉದಯ ;
ಅದು, ಈ ನೆಲದ ಮೇಲೆ ಮೊದಲ ಹೆಜ್ಜೆ ಇಟ್ಟಾಗ
ಈ ಬದುಕು-ಮೌನ ಹೋರಾಟಕ್ಕೆ ಹೊಸದೊಂದು
ಲಯ.

ಒಂದೊಂದು ಮೊಟ್ಟೆ ಒಂದೊಂದು ಅಡಿ ಉದ್ದ,
ಮೊಟ್ಟೆಯೊಳಗೇ ಮೂರು ವರ್ಷಗಳ ಯುದ್ಧ ;
ಮೊಟ್ಟೆಯೊಡೆದು ಮರಿ ಹೊರಗೆ ಬಂದಾಗ
ಉದ್ದ : ಒಂದು ಅಡಿ ; ಎತ್ತರ : ಅರ್ಧ ಅಡಿ
ಮೆದುಳಿನ ತೂಕ : ಇನ್ನೂರೋ ಮುನ್ನೂರೋ ಗ್ರಾಂ–
ಮೈ ತೂಕ ಮಾತ್ರ ಹತ್ತೋ ಹದಿನೈದೋ ಕಿಲೋಗ್ರಾಂ !

ಆಗ ಈ ನೆಲದ ತುಂಬಾ ಸಸ್ಯ ಸಮೃದ್ಧಿ,
ತಂಪಾದ ಎಳೆಬಿಸಿಲು–
ಇನ್ನೇನು ಬೇಕಾದೀತು ಈ ಪ್ರಾಣಿಗೆ ?
ನೆಲ, ನೀರು ಎನ್ನದೆ ಓಡಾಡಿ
ಬೆಳೆಯಿತು ತಿಂದು ತೇಗಿ ;
ಮೈ ಭಾರವಾದಾಗ ತಂಪು ನೆಳಲಲ್ಲೋ
ಆಳವಿಲ್ಲದ ಹೊಂಡದಲ್ಲೋ ಮಲಗುತ್ತಿತ್ತು ಹೋಗಿ.

ಹತ್ತು ಕೇಜಿಯ ಮರಿಪ್ರಾಣಿ
ದಿನದಿನಕ್ಕೂ ಬೆಳೆಯಿತು–
ಬೆಳೆದು ಬಲಿಯಿತು–
ಬೆಳೆಯುತ್ತಾ ಬಲಿಯುತ್ತಾ
ತನ್ನತಾನೇ ಮರೆಯಿತು.

2

ಪಾಪ !
ಅದು ಬೆಳೆದೇ ಬಿಟ್ಟಿತ್ತು–
ತನಗೇ ತಿಳಿಯುದ ಹಾಗೆ ದೈತ್ಯವಾಗಿ ನಿಂತಿತ್ತು ;
ಈಗ ಅದರ ಒಂದೊಂದು ಹೆಜ್ಜೆಯೂ
ಬದುಕು ಸಾವಿನ ಪ್ರಶ್ನೆ :
ನಿಂತಾಗ ಎತ್ತರ ಅರವತ್ತು ಅಡಿ,
ಕತ್ತು ಚಾಚಿ, ಬಾಲ ನಿಗುರಿಸಿದರೆ
ಉದ್ದ-ನೂರು ಅಡಿ ;
ತೂಕವೋ ಐವತ್ತು ಮೆಟ್ರಿಕ್ ಟನ್ನು–
ತಲೆಮಾತ್ರ ಅಷ್ಟೇ-ಪುಟ್ಟಗೂಡೆಯುಹಾಗೆ ;
ಹೀಗಾದರೆ
ಅದು ಹೇಗೆ ಸಾಗೀತು ಆ ಮೈಹೊತ್ತು ಇನ್ನು ?

ಇಪ್ಪತ್ತು ಅಡಿ ಉದ್ದದ ಕತ್ತು ;
ಇಪ್ಪತ್ತು ಅಡಿ ಉದ್ದದ ಬಾಲ–
ಹೇಗೆ ಬ್ಯಾಲನ್ಸ್ ಮಾಡಿ ನಡೆದರೂ
ಒಮ್ಮೊಮ್ಮೆ ಹೆಜ್ಜೆತಪ್ಪಿ ಬೀಳುವುದಿಲ್ಲ

ಎಂಬ ಗ್ಯಾರಂಟಿ ಇಲ್ಲ–
ಅಂಗುಲಂಗುಲಕ್ಕೂ ಗಂಡಾಂತರ;
ಹೀಗೆ ಸಾಗಿದರೆ ಹೇಗೆ ಹೇಳಿ
ಪ್ರಾಣಿ ಪ್ರಕೃತಿ ನಡುವೆ ಈ ಅಂತರ...

ಚಿಂತೆಗಿಟ್ಟುಕೊಂಡಿತು ಪ್ರಾಣಿಗೆ–
ನೀರಲ್ಲಿ ತೇಲಿ ನಿದ್ರಿಸಿ ಕಳೆಯಿತು ಹಲವಾರು ವರ್ಷ;
ತನ್ನ ಹೆಣಭಾರಕ್ಕೆ ಹಲುಬಿ ಮಿಸುಕಾಡಿತು ಮತ್ತಷ್ಟು ವರ್ಷ.
ಹೀಗೆ ತೇಲುತ್ತಾ ಮಿಸುಕಾಡುತ್ತಾ
ತಾ ಹೊತ್ತಭಾರವನ್ನೆ ತಾ ಹಳಿಯುತ್ತಾ
ಬದುಕು ಸಾವುಗಳ ನಡುವೆ ತೊಳಲಾಡುತ್ತಾ
ನರಳುತ್ತಾ ನಡೆದ ಈ ಸಂತತಿಯ
ನೂರು ದಶಲಕ್ಷ ವರ್ಷಗಳ ಭೂ-ಚಕ್ರಾಧಿಪತ್ಯ
ಇದ್ದಕ್ಕಿದ್ದಂತೆ
ಒಮ್ಮೆ ಕಂಡಿತು ಅಂತ್ಯ.

ಈ ದುರಂತಕ್ಕೆ ಯಾರು ಹೊಣೆ?
ಜೀವಶಾಸ್ತ್ರಜ್ಞರಿಗೆ ಇದಿನ್ನೂ
ಬಿಚ್ಚಲಾಗದ ಗಂಟಾದರೂ,
ಅದರ ಅತಿ ಭಾರಕ್ಕೆ ಅದು ಮಣಿದು
ಅವನತಿಗೊಂಡಿರಬಹುದೆಂಬ ಅನುಮಾನವಾದರೆ
ಅವರಿಗೆ,

ಈಗಿನ ಹಲ್ಲಿ, ಹಾವು, ಓತಿಕ್ಯಾತ
ಯಾಕೆ,
ನಾವು ಕೂಡ ಇದರ ಸಂತತಿ
ಎಂದಾಗ
ಎಂಥದೋ ಭಯ ನನಗೆ
ಇತ್ತೀಚೆಗೆ–
ಮೆಸಜೋಯಿಕ್ ಯುಗದ ಈ ಪ್ರಾಣಿ
ನಮ್ಮ ಕಣ್ಮುಂದೆಯೇ ಕಸಿದು ಬಿದ್ದಹಾಗೆ!

ಬಸವಣ್ಣನವರ ಒಂದು ಹೊಸ ವಚನ

ಎಸ್. ಉಮಾಪತಿ

ಸಂಪಾದನೆ ಜೋಳ ಬಸವೇಶ್ವರನ 'ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ'[1] ಎಂಬ ವಚನ ಸಂಕಲನದಲ್ಲಿ ದೊರೆತ ಬಸವಣ್ಣನವರ ವಚನವೊಂದನ್ನು ಈ ಕೆಳಗೆ ಕೊಡಲಾಗಿದೆ.

ಪಂಚಾಮೃತದಲ್ಲಿ ಉಂಡರೇನು ?
ಮಲ ಮೂತ್ರ ವಿಷಯ ಘನವಕ್ಕು.
ಭ್ರಾಂತು ಬೇಡ ಮರುಳೆ
ಬೇಡದು ಕಾಯಗುಣ
ಆಶೆಯಾಮಿಷ ತಾಮಸ ಹಸಿವು ತೃಷೆ
ವ್ಯಸನ ವಿಷಯಾಧಿಗಳಲ್ಲಿ ಹಿರಿಯರು
ಗರುವರುಂಟೇ ?
ಭ್ರಾಂತು ಬೇಡ ಮರುಳೆ
ಬೇಡದು ಕಾಯಗುಣ
ಈ ಭೇದವ ಭೇದಿಸ ಬಲ್ಲಡೆ
ಕೂಡಲ ಸಂಗನ ಶರಣರ ಸಾಣೆಯಲ್ಲಿ ಸವೆದ
ಶ್ರೀಗಂಧದಂತಿರಬೇಕು ಶರಣ

---

1. ಮುರುಘಾ ಮಠ (ಚಿತ್ರದುರ್ಗ) ದ ಸಂಗ್ರಹದ ಓಲೆ ಪ್ರತಿ

ನೀಲಮ್ಮನ ಒಂದು ಹೊಸ ವಚನ

ಎಸ್. ಶಿವಣ್ಣ

ಭಕ್ತಿ ಭಂಡಾರಿ ಬಸವೇಶ್ವರನ ಪತ್ನಿ ನೀಲಮ್ಮ ಕ್ರಿ. ಶ. ಹನ್ನೆರಡನೆಯ ಶತಮಾನದ ಶಿವಶರಣೆಯರಲ್ಲಿ ಒಬ್ಬಳು. ಈಕೆ 'ಕಾಲಜ್ಞಾನ', 'ಪ್ರಸಾದ ಸಂಪಾದನೆ' ಗಳನ್ನು ರಚಿಸಿರುವುದಲ್ಲದೆ ಅನೇಕ ವಚನಗಳನ್ನು ಬರೆದಿದ್ದಾಳೆ.

ಶ್ರೀ ಸಿ. ಕೆ. ಪರಶುರಾಮಯ್ಯ ಎಂ.ಎ., ಮತ್ತು ಡಾ. ಆರ್. ಸಿ. ಹಿರೇಮಠರ ಪರಿಶ್ರಮದಿಂದ ಈಕೆಯ 125 ವಚನಗಳು ಈಗಾಗಲೇ ಪ್ರಕಾಶಿತವಾಗಿವೆ. ಇವರಿಬ್ಬರಿಗೂ ಸಿಗದ ಒಂದು ಹೊಸ ವಚನ ಉಪಲಬ್ಧವಾಗಿದ್ದು[1] ಅದನ್ನು ಈ ಕೆಳಗೆ ಕೊಡಲಾಗಿದೆ.

ಮುಟ್ಟದ ಮುನ್ನ–
ಗುರುವುಂಟು,
ಲಿಂಗವುಂಟು,
ಜಂಗಮವುಂಟು,
ಪಾದೋದಕವುಂಟು,
ಪ್ರಸಾದವುಂಟು,
ಮುಟ್ಟಿದ ಬಳಿಕ-
∩ ∩
ಗುರು [ವಿ] ಲ್ಲ
∩ ∩
ಲಿಂಗ [ವಿ] ಲ್ಲ
∩ ∩
ಜಂಗಮ [ವಿ] ಲ್ಲ
∩ ∩
ಪಾದೋದಕ [ವಿ] ಲ್ಲ
∩ ∩
ಪ್ರಸಾದ [ವಿ] ಲ್ಲ
ಸಂಗಯ್ಯನಲ್ಲಿ-
∩ ∩ ∩ ∩
ಸ್ವಯ [ವಿ] ಲ್ಲ, ಪರ [ವಿ] ಲ್ಲ.

1. K1022 (ಕನ್ನಡ ಅಧ್ಯಯನ ಕೇಂದ್ರ - ಬೆಂಗಳೂರು ಸಂಗ್ರಹ)
1. ಇ

ದಾಟು–ಒಂದು ಬರವಣಿಗೆ

ನರಹಳ್ಳಿ ಬಾಲಸುಬ್ರಹ್ಮಣ್ಯ

ಸಾಂಸ್ಕೃತಿಕ ಚಟುವಟಿಕೆಯಾದ ಸಾಹಿತ್ಯ ಒಂದು ಸಾಮಾಜಿಕ ಸೃಷ್ಟಿ. ಸಾಹಿತ್ಯ ಸ್ವ–ಅಭಿವ್ಯಕ್ತಿ ಎಂದರೂ ಸಾಹಿತಿ ಸಮಾಜದ ಒಂದು ಘಟಕವಾದ್ದರಿಂದ, ಸಾಹಿತ್ಯ ಸಾಮಾಜಿಕ-ಅಭಿವ್ಯಕ್ತಿ ಎಂದ ಹಾಗೇ ಆಯಿತು. ಪ್ರಾಚೀನ ಕಾಲದಲ್ಲಿಯಂತೂ ಸಾಹಿತ್ಯವನ್ನು ಸಮಾಜದ ರೀತಿ ನೀತಿಗಳಿಂದ, ಧಾರ್ಮಿಕ ನಂಬಿಕೆಗಳಿಂದ ಬೇರ್ಪಡಿಸುವುದೇ ಸಾಧ್ಯವಿಲ್ಲದ ಹಾಗೆ ಒಂದಾಗಿದೆ. ಯಾವ ಕಾಲಕ್ಕೂ ಸಾಹಿತ್ಯ ತನಗೆ ತಾನೇ ಸ್ವ-ಸಂಪೂರ್ಣವಲ್ಲ, ಅದೊಂದು ಸಾಮಾಜಿಕ ಘಟನೆ.

ಸಾಹಿತ್ಯಿಕವಾಗಿ ನಾವು ಎತ್ತುವ ಪ್ರಶ್ನೆಗಳು ಸಾಮಾಜಿಕ ಪ್ರಶ್ನೆಗಳೂ ಹೌದು. ಏಕೆಂದರೆ ಯಾವುದೇ ಸಾಂಸ್ಕೃತಿಕ ಚಟುವಟಿಕೆ ತನ್ನ ಕಾಲದ ಪರಿಸ್ಥಿತಿಯ ಕೂಸು. ಆಗಿಂದಾಗ್ಗೆ ಸಾಹಿತ್ಯದಲ್ಲಿ ಕಂಡುಬರುವ ಬದಲಾವಣೆಗಳು ಸಾಮಾಜಿಕ ಬದಲಾವಣೆಗಳ ಫಲಿತಗಳು. ಆದ್ದರಿಂದ ಒಂದು ಸಾಹಿತ್ಯ ಕೃತಿಯನ್ನು ವಿಶ್ಲೇಷಿಸುವುದು ಎಂದರೆ ಆ ಕಾಲದ ಸಾಮಾಜಿಕ ಪರಿಸ್ಥಿತಿಯ ವಿಶ್ಲೇಷಣೆ ಎಂದೇ ಅರ್ಥ.

ಭೈರಪ್ಪನವರು ಜನಪ್ರಿಯ ಕಾದಂಬರಿಕಾರರು. ಈ ಜನಪ್ರಿಯತೆ ಸಮಾಜ ಒಬ್ಬ ಲೇಖಕನ ಬಗ್ಗೆ ತೋರಿಸುವ ಪ್ರತಿಕ್ರಿಯೆ ಎನ್ನುವುದನ್ನು ನಾವು ಅಲ್ಲಗಳೆಯುವ ಹಾಗಿಲ್ಲ. ಏಕೆಂದರೆ ಅದೊಂದು ಸಾಮಾಜಿಕ ಸತ್ಯ. ನಮ್ಮ ದೇಶದಲ್ಲಿ 'ಜನಪ್ರಿಯತೆ' ಎಂಬ ಪದದ ಅರ್ಥವ್ಯಾಪ್ತಿ ಒಂದು ಅತಿಯನ್ನು ತಲುಪಿದ್ದು ಒಟ್ಟಾರೆ ಅಭಿರುಚಿಯ ಬಗ್ಗೆಯೇ ಅನುಮಾನಗಳಿರುವಾಗ ಅದನ್ನು ಗಂಭೀರವಾಗಿ ಪರಿಗಣಿಸುವುದು ಪ್ರಶ್ನಾರ್ಹವೆನ್ನಿಸಿದರೂ ಅದರ ಹಿಂದಿನ ಸಾಮಾಜಿಕ ಕಾರಣಗಳನ್ನು ಅಭ್ಯಸಿಸುವುದು, ವಿಶ್ಲೇಷಿಸುವುದು ಅದೇ ಪ್ರಶ್ನೆಗೆ ಉತ್ತರವನ್ನು ಹುಡುಕಿದಂತಾಗುತ್ತದೆ.

ಒಬ್ಬ ವ್ಯಕ್ತಿಯ ಆಂತರಿಕ ಪರಿವರ್ತನೆ ಸಾಮಾಜಿಕವಾಗಿ ಮಹತ್ವದ್ದಾಗುವುದಿಲ್ಲ. ಅಂದರೆ ಯಾವುದೇ ವ್ಯಕ್ತಿ ವೈಯಕ್ತಿಕ ಸ್ತರದಲ್ಲಿ ಪಡೆಯುವ ಬದಲಾವಣೆಗಳು ಸಾಮಾಜಿಕ ಪರಿಸರದಿಂದ ಹುಟ್ಟಿ ಬಂದದ್ದಾಗಿರದೆ ವ್ಯಕ್ತಿಗೆ ಮಾತ್ರ ಸೀಮಿತವಾದಾಗ ಅಂಥದ್ದನ್ನು ಕುರಿತ ಕೃತಿ ಸಹ ಮಿತಿಯುಳ್ಳದ್ದಾಗಿರುತ್ತದೆ. ನವ್ಯ ಸಾಹಿತ್ಯ ಸಾಮಾಜಿಕವಾಗಿ ಅರ್ಥ ಪೂರ್ಣತೆಯನ್ನು ಪಡೆಯದೆ ಹೋದುದರ, ಸಮಷ್ಟಿಯೊಡನೆ ಒಂದಾಗದೆ ಪ್ರತ್ಯೇಕವಾಗಿಯೇ ಉಳಿದುದರ ಮೂಲವೂ ಇಲ್ಲಿಯೇ ಇದೆ. ನವ್ಯ ಸಾಹಿತ್ಯದ ಬಹುಪಾಲು ಸಮಸ್ಯೆಗಳು ಆತ್ಮ ಕೇಂದ್ರಿತವಾದದ್ದು ಎಂಬುದನ್ನು

ಗಮನಿಸಬಹುದು. ಸಾಮಾಜಿಕ ಸಮಸ್ಯೆಯನ್ನು ತನ್ನ ಕೇಂದ್ರದಲ್ಲಿ ಉಳ್ಳ 'ಭಾರತೀಪುರ' ಸಹ ಜಗನ್ನಾಥನ ಮಟ್ಟಿಗೆ ಮಾತ್ರ ಸೀಮಿತವಾಗುತ್ತದೆಯೇ ಹೊರತು ಭಾರತೀಪುರದ ಜನಜೀವನದೊಡನೆ ಕ್ರಿಯಾತ್ಮಕ ಸಂಬಂಧ ಸೃಷ್ಟಿಸಿ ಕೊಳ್ಳುವುದಿಲ್ಲ. ಆದರೆ ಅದರಲ್ಲಿ ಸಾಮಾಜಿಕ ಸಮಸ್ಯೆಯೊಂದರ ಬಗ್ಗೆ ಅನಂತ ಮೂರ್ತಿಯವರು ಚಿಂತನೆ ನಡೆಸಿರುವುದು ಕಂಡುಬರುತ್ತದೆ. ಸಾಮಾಜಿಕ ಬದಲಾವಣೆಯ ಗುರಿಯುಳ್ಳ ಜಗನ್ನಾಥನಿಗೆ ತನ್ನನ್ನು ತಾನು ಕಂಡುಕೊಳ್ಳುವುದೇ ಗಡಿಯಾಗಿ ಜಗನ್ನಾಥನ ಸೋಲು ಸಾಮಾಜಿಕವಾಗಿ ಅರ್ಥಪೂರ್ಣ ಸೋಲಾಗದೆ ಅನಂತ ಮೂರ್ತಿಯವರ ಸೋಲೂ ಆಗುತ್ತದೆ.

'ದಾಟು' ಕಾದಂಬರಿಯಲ್ಲಿ ಮೇಲು ನೋಟಕ್ಕೆ ಸಮಸ್ಯೆ ಹತ್ತು ಕಡೆ ಹರಡಿ ಕೊಂಡಿರುವಂತೆ ಕಂಡುಬಂದರೂ ಭೈರಪ್ಪನವರ ಎಲ್ಲ ಗಮನ ಸತ್ಯಭಾಮೆಯಲ್ಲಿದೆ. ಕಾದಂಬರಿಯ ಎಲ್ಲ ಪಾತ್ರಗಳೂ, ಸನ್ನಿವೇಶಗಳೂ ಸತ್ಯಭಾಮೆಯೊಡನೆ ನೇರ ಸಂಬಂಧ ಪಡೆದುಕೊಂಡಿವೆ. ನಿಜವಾದ ಬ್ರಾಹ್ಮಣ್ಯವನ್ನೂ ಸ್ವಾವಲಂಬೀ ಶೂದ್ರತ್ವವನ್ನೂ ಒಮ್ಮೆಗೇ ಕೈಗೂಡಿಸಿಕೊಳ್ಳುವ ಗುರಿಯು ಕಡೆಗೆ ಸತ್ಯಭಾಮೆ ಸಾಗುತ್ತಾಳೆ. 'ಸತ್ಯ ಶೋಧನೆ' ಅವಳ ಆಶಯವೆನ್ನಿಸಿದರೂ ಸಾಮಾಜಿಕ ಸಂಬಂಧಗಳನ್ನೆಲ್ಲ ಕಡಿದುಕೊಂಡು ಏಕಾಂತದಲ್ಲಿ ನಡೆಸುವ ಅವಳ ಎಲ್ಲ ಕ್ರಿಯೆಗಳಿಗೆ, ಅನುಭವಿಸುವ ಎಲ್ಲ ಒತ್ತಡಗಳಿಗೆ ಹೆಚ್ಚಿನ ವ್ಯಾಪ್ತಿ ಇಲ್ಲದೆ 'ಸಾಮಾಜಿಕ ಸತ್ಯ' ಅವಳಿಂದ ದೂರವೇ ಉಳಿಯುತ್ತದೆ. ಸತ್ಯ ತಾನು ಮಾತ್ರ ಬದಲಾಗಲು ಪ್ರಯತ್ನಿ ಸುತ್ತಾಳೆ. ಈ ಪ್ರಯತ್ನದಲ್ಲಿ ಅವಳು ಒಂದೊಂದೇ ಹಂತವನ್ನು 'ದಾಟು'ತ್ತಾ ಹೋಗುತ್ತಾಳೆ. ಕಾದಂಬರಿಯ ಶೀರ್ಷಿಕೆಯ ಅರ್ಥವೂ ಇದೇ ಇರಬಹುದು. ಇಡೀ ಕಾದಂಬರಿಯ ಕೇಂದ್ರತಂತು ಸತ್ಯಳ ಬದಲಾವಣೆಗಳನ್ನು ಗುರ್ತಿಸುವಲ್ಲಿ ದುಡಿಯು ತ್ತದೆ. ಇದರಿಂದ ಒಬ್ಬ ವ್ಯಕ್ತಿಯ ವೈಯಕ್ತಿಕ ಬದಲಾವಣೆಯನ್ನು ಚಿತ್ರಿಸುವುದೇ ಕಾದಂಬರಿಕಾರರ ಆಶಯ ಎಂಬ ನಿಲುವನ್ನು ನಾವು ತಲುಪಬಹುದು. ಅಂದರೆ ಸಾಮಾಜಿಕವಾಗಿ ಕಾದಂಬರಿಕಾರರ ಆಶಯವೇ ಮಿತಿಯುಳ್ಳದ್ದು ಎಂದು ಇದ ರಿಂದ ಹೇಳಿದಂತಾಯಿತು. ಕಾದಂಬರಿಕಾರರ ಆಶಯವೇ ಸೀಮಿತವಾದ್ದರಿಂದ ಕಾದಂಬರಿಯ ಸೋಲು ಗೆಲುವುಗಳ ಪ್ರಶ್ನೆ ಪ್ರಾಥಮಿಕವಾಗದೆ ಸೆಮಿನಾರುಗಳ ಚರ್ಚೆಗೆ ವಿಷಯ ಮಾತ್ರವಾಗುತ್ತದೆ.

ಸೀಮಿತ ವ್ಯಾಪ್ತಿಯ ವಲಯದೊಳಗೇ 'ದಾಟು' ಕಾದಂಬರಿಯ ಬಹು ದೊಡ್ಡ ಗುಣ ಅದು ಪ್ರಕಟಿಸುವ ದಟ್ಟವಾದ ಜೀವನಾನುಭವ. ಸಮಾಜದ ಸೂಕ್ಷ್ಮ ನಡಾವಳಿಗಳನ್ನು, ಒಳಸುಳಿಗಳನ್ನು ಭೈರಪ್ಪನವರು ಹಸಿಹಸಿಯಾಗಿ ಎಲ್ಲ ವಿವರಗಳೊಂದಿಗೆ ಚಿತ್ರಿಸಿದ್ದಾರೆ. ಅನಂತಮೂರ್ತಿಯವರ ಭಾರತೀಪುರದಲ್ಲಿನ ಸಮಸ್ಯೆಯೇ ದಾಟುವಿನ ವಸ್ತುವಾದರೂ ಎರಡು ಕಾದಂಬರಿಗಳಿಗೂ ಮೂಲಭೂತ

ವ್ಯತ್ಯಾಸವಿದೆ. 'ಭಾರತೀಪುರ'ದ ಸಮಸ್ಯೆ 'ಅತಿಶಿಷ್ಟ' (Sophisticated) ವಾದದ್ದು. ಸಮಸ್ಯೆಯ ಮೂಲ ಸ್ವರೂಪ ಅದರಲ್ಲಿ ಚಿತ್ರಿತವಾಗದೆ, ಸಮಸ್ಯೆಗಿಂತ ಅದರ ಬಗೆಗಿನ ಆಲೋಚನೆಗಳು ಅಲ್ಲಿ ಮುಖ್ಯವಾಗುತ್ತವೆ. ಕ್ರಿಯಾಶೀಲ ಸಾಹಿತಿಗಿಂತ ಒಬ್ಬ ಚಿಂತಕ ಅಲ್ಲಿ ಹೆಚ್ಚು ಕೆಲಸ ಮಾಡುತ್ತಾನೆ. ಆದುದರಿಂದಲೇ ಅದು ಸಾಹಿತ್ಯ ಕೃತಿಯಾಗುವುದಕ್ಕೆ ಬದಲಾಗಿ ಒಂದು ಥೀಸಿಸ್ ಆಗಿರುವುದು. ದಾಟು ಈ ದೃಷ್ಟಿಯಿಂದ ಸಾಮಾಜಿಕ ಸಮಸ್ಯೆಗಳ ಸ್ವರೂಪವನ್ನು ಚಿತ್ರಲಿಯನ್ನಾಗಿಸುತ್ತದೆ, ಅದರ ವಿವಿಧ ರೂಪಗಳನ್ನು ಪರಿಚಯ ಮಾಡಿಕೊಡುತ್ತದೆ. ಸಮಸ್ಯೆಯನ್ನು ವಿಶ್ಲೇಷಿಸಿರುವ ರೀತಿ, ಅದರ ಬಗ್ಗೆ ಲೇಖಕರ ಧೋರಣೆ ಪ್ರಶ್ನಾರ್ಹವಾದರೂ ಸಮಸ್ಯೆಯ ಸ್ವರೂಪವೇನು, ಅದರ ಬೇರುಗಳು ಎಲ್ಲಿವೆ, ಎಷ್ಟೊಂದು ಆಳದಲ್ಲಿ ಹೇಗೆ ಹರಡಿಕೊಂಡಿವೆ–ಎಂಬ ವಿವರಗಳು ಕಾದಂಬರಿಯ ಉದ್ದಕ್ಕೂ ಸಿಗುತ್ತವೆ. ಆಲೋಚನೆಯ ಜೊತೆಗೆ ಅನುಭವವೂ ಇಲ್ಲಿ ಮೇಳೈಸಿಕೊಂಡು ಬಂದಿದೆ. "ಜಾತಿಯ ಪೃಥಕ್ಕರಣೆ 'ಅಕೆಡೆಮಿಕ್' ಆಗಿ ಉಳಿಯದೆ ಜೀವನದ ಒತ್ತಡವನ್ನೂ, ಸಂಕೀರ್ಣತೆಯನ್ನೂ ಪಡೆದುಕೊಳ್ಳುತ್ತದೆ." (ಸುಧಾ ವಿಮರ್ಶೆ-ಎಲ್. ಎಸ್. ಶೇಷಗಿರಿರಾವ್) ಆದ್ದರಿಂದ ದಾಟು ಮುಖ್ಯವಾಗುತ್ತದೆ.

ಕಾದಂಬರಿಯ ಕೇಂದ್ರ ಪಾತ್ರವಾದ ಸತ್ಯಭಾಮೆಯ ಬದುಕನ್ನು ಎರಡು ಘಟ್ಟಗಳನ್ನಾಗಿ ವಿಂಗಡಿಸಬಹುದು. ಹುಟ್ಟಿನಿಂದ ಬ್ರಾಹ್ಮಣಳಾದರೂ ಜಾತಿಬೇಧಗಳಲ್ಲಿ ನಂಬಿಕೆಯಿಲ್ಲದೆ ಅದನ್ನು ಸಂಪೂರ್ಣವಾಗಿ ಅಲ್ಲಗಳೆದು ಹೆಣ್ಣು – ಗಂಡು ಎರಡೇ ಜಾತಿ ಎಂದು ಶ್ರೀನಿವಾಸನನ್ನು ಮದುವೆಯಾಗಲು ತೀರ್ಮಾನಿಸಿ, ಹೆಪ್ಪುಗಟ್ಟಿದ ನಂಬಿಕೆಯನ್ನು ಪ್ರಶ್ನಿಸುತ್ತ ರೂಢಿಯನ್ನು ಮುರಿಯಲು ಪ್ರಯತ್ನಿಸಿದ್ದು ಸತ್ಯಳ ಜೀವನದ ಮೊದಲ ಘಟ್ಟವಾದರೆ, ತಿರುಮಲಾಪುರಕ್ಕೆ ಬಂದು ಅಪ್ಪಟ ವೈದಿಕ ತಳಿಯ ಬೋಳೀ ಹೆಣ್ಣಿನ ರೀತಿ ಅಪ್ಪ ವೆಂಕಟರಮಣಯ್ಯನವರ ಆರ್ಷೇಯ ನಂಬಿಕೆಯ ಅದಮ್ಯ ಒತ್ತಡದ ಆಕರ್ಷಣೆಗೆ ಒಳಗಾಗಿ ತಣ್ಣಗೆ ಬದುಕುವುದು ಇನ್ನೊಂದು ಘಟ್ಟ.

ಸತ್ಯಳ ಈ ಬದಲಾವಣೆಯಲ್ಲಿ ಭೈರಪ್ಪನವರ ಕೈವಾಡವೆಷ್ಟು ಎಂಬುದನ್ನು ಗುರ್ತಿಸುವುದರ ಮೂಲಕ ಕೆಲವು ನಿರ್ಧಾರಗಳನ್ನು ನಾವು ತಲುಪಬಹುದು.

ಸತ್ಯ ಮತ್ತು ಶ್ರೀನಿವಾಸರು ಮದುವೆಯಾಗಲು ನಿಶ್ಚಯಿಸುವುದರ ಮೂಲಕ ಕಾದಂಬರಿಯಲ್ಲಿ ಜಾತಿ ಸಮಸ್ಯೆಯ ವಿಶ್ಲೇಷಣೆ ಪ್ರಾರಂಭವಾಗುತ್ತದೆ. ಯಾವುದೇ ಸಮಸ್ಯೆಯಾಗಲೀ ವೈಯಕ್ತಿಕ ಸ್ತರದಲ್ಲಿ ಮಿಡಿದಾಗ ಅದು ಅನುಭವದ ತೆಕ್ಕೆಯಲ್ಲಿ ಬರುವುದರಿಂದ ಅದರ ಆಳಗಳು, ಸೂಕ್ಷ್ಮಗಳು ಮುಷ್ಟಿಗ್ರಾಹ್ಯವಾಗುತ್ತವೆ. ಭೈರಪ್ಪನವರು ಇಲ್ಲಿ ವೈಯಕ್ತಿಕ ಸಂಬಂಧಗಳ ಹಿನ್ನಲೆಯಲ್ಲಿ ಸಮಸ್ಯೆಯನ್ನು

ಪೃಥಕ್ಕರಿಸಲು ಪ್ರಯತ್ನಿಸಿರುವುದರಿಂದ ಸಮಸ್ಯೆ ಮೂರ್ತರೂಪ ಪಡೆದುಕೊಳ್ಳು ತ್ತದೆ.

ಶ್ರೀನಿವಾಸನನ್ನು ಮದುವೆಯಾಗುತ್ತೇನೆ ಎನ್ನುವ ಸತ್ಯಳ ನಿರ್ಧಾರ – ಮೇಲ ಗಿರಿಗೌಡರು ಮತ್ತು ವೆಂಕಟರಮಣಯ್ಯನವರು ಇಬ್ಬರಲ್ಲಿಯೂ ಏಕಕಾಲದಲ್ಲಿ ಕೆಲಸ ಮಾಡುತ್ತದೆ. ಇಬ್ಬರೂ ಬೇರೆ ಬೇರೆ ಕಾರಣಗಳಿಗಾಗಿ ಪ್ರತಿಭಟಿಸಿದರೂ ಅವರಿಬ್ಬರ ಹಿಂದಿರುವ ಮೂಲಪ್ರೇರಣೆ ಒಂದೇ ಆಗಿದೆ. ತಮ್ಮ ಪ್ರತಿಷ್ಠೆಯನ್ನು ಕಾಯ್ದು ಕೊಳ್ಳುವುದು ಇಬ್ಬರ ಗುರಿ. ವೆಂಕಟರಮಣಯ್ಯನವರು ಜಾತಿಭ್ರಷ್ಟರಾಗುವುದ ರಿಂದ ತಿರುಮಲಾಪುರದಲ್ಲಿ ಎದುರಿಸಬೇಕಾಗುವ ಅಪವಾದ, ಆಭಾಸಗಳಿಗೆ ಅಂಜಿದರೆ, ಮೇಲಗಿರಿಗೌಡರು ಅಧಿಕಾರ ಸ್ಥಾನಪಲ್ಲಟವಾಗುವ ಸಾಧ್ಯತೆಯನ್ನು ಕುರಿತು ಆಲೋ ಚಿಸಿ ಇದನ್ನು ಪ್ರತಿಭಟಿಸುತ್ತಾರೆ. ವ್ಯವಸ್ಥೆಯ ಹಿತಾಸಕ್ತಿಯನ್ನು ಕಾಯುವುದರಲ್ಲಿ ಇವರಿಬ್ಬರೂ ಒಂದಾಗುತ್ತಾರೆ.

ಇತಿಹಾಸವನ್ನು ಹೊಸ ದೃಷ್ಟಿಯಿಂದ ನೋಡ ಹೊರಟ ಸತ್ಯ ಇವರ ಪ್ರತಿ ಭಟನೆಯನ್ನು ಎದುರಿಸಲು ಸಿದ್ಧಳಾಗಿರುತ್ತಾಳೆ. ಬೆಳೆದುಬಂದ ಪದ್ಧತಿಯನ್ನು ಜಡ್ಡುಗಟ್ಟಿದ ರೂಢಿಯನ್ನು ಮುರಿಯುವುದು ಅವಳ ಉದ್ದೇಶ. ಅಪ್ಪ ವೆಂಕಟ ರಮಣಯ್ಯನವರು ಸತ್ಯಳ ನಿರ್ಧಾರಕ್ಕೆ ಚಪ್ಪಲಿಯಲ್ಲಿ ಹೊಡೆದಾಗಲೂ ವಿಚಲಿತ ಳಾಗದೆ – "ತುಂಬ ದಿನದಿಂದ ಪದ್ಧತಿ ಬೆಳೆದುಬಂದಿದೆ. ಮಧ್ಯಯಾರೇ ಮುರಿಯಲಿ ಮುರಿದೋರಿಗೂ ಕಷ್ಟವಾಗುತ್ತೆ, ಉಳಿದವರಿಗೂ ಕಷ್ಟವಾಗುತ್ತೆ. ಒಂದು ಸಲ ಕಷ್ಟ ಅನುಭವಿಸಲಿಕ್ಕೆ ಯಾರೂ ತಯಾರಿಲ್ಲದಿದ್ದರೆ ರೂಢಿ ಮುರಿಯುವುದು ಹ್ಯಾಗೆ" – ಎಂದು ತಾತ್ವಿಕವಾಗಿ ಪ್ರಶ್ನಿಸುವಷ್ಟು ಅವಳ ವ್ಯಕ್ತಿತ್ವ ಗಟ್ಟಿಯಾದುದು. ರೂಢಿ ಯನ್ನು ಮುರಿಯ ಹೊರಟ ಸತ್ಯ ಅದರಿಂದ ಅನೇಕ ಸಮಸ್ಯೆಗಳನ್ನು ಎದುರಿಸ ಬೇಕಾಗುವುದು ಅನಿವಾರ್ಯವಾಗುತ್ತದೆ.

ಇಲ್ಲಿ ಮೇಲುಗಿರಿಗೌಡರು ಮತ್ತು ವೆಂಕಟರಮಣಯ್ಯನವರು ವ್ಯವಸ್ಥೆಯ ಒಂದೊಂದು ಅಂಗಾಂಗಳಾದರೆ ಅವರನ್ನು ಉಲ್ಲಂಘಿಸಿ ವ್ಯವಸ್ಥೆಯಲ್ಲಿ ಹೊಸ ಬದಲಾವಣೆಯನ್ನು ಕಾಣುವ ವ್ಯಕ್ತಿಯಾಗಿ ಸತ್ಯಭಾಮ ಚಿತ್ರಿತವಾಗಿದ್ದಾಳೆ.

ಇದುವರೆಗೆ ಭೈರಪ್ಪನವರು ಜಾತಿ ಸಮಸ್ಯೆಯನ್ನು ಅದರ ಸ್ವರೂಪ ಪರಿಣಾಮ ಗಳಲ್ಲಿ ಪೃಥಕ್ಕರಿಸಿ ನೋಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಸತ್ಯಭಾಮಳ ನಿರ್ಧಾರ ನಿಂತ ನೀರಿನಂಥ ಸಮಾಜದಲ್ಲಿ ಉಂಟುಮಾಡುವ ಅಲೆಗಳು, ಅದರ ಮಿತಿ ಮತ್ತು ವ್ಯಾಪ್ತಿಗಳು, ಜಾತಿ ಮತ್ತು ವರ್ಗಗಳ ನಡುವಿನ ಸಂಬಂಧದ ಸಂಕೀರ್ಣತೆ – ಇವೆಲ್ಲ ವಿವರವಾಗಿ ಚಿತ್ರಿತವಾಗಿವೆ.

ಇಲ್ಲಿಯವರೆಗಿನ ಸತ್ಯಳ ಜೀವನಕ್ಕೆ ಅವಳೇ ತೆಗೆದುಕೊಂಡ ನಿರ್ಧಾರ ಮತ್ತು ಅದನ್ನು ಪ್ರತಿಭಟಿಸಿದ ಸಮಾಜ ಕಾರಣವಾದರೆ ನಂತರದ ಅವಳ ಬದಲಾವಣೆಗೆ

ಭೈರಪ್ಪನವರೇ ಸಂಪೂರ್ಣ ಜವಾಬ್ದಾರರಾಗುತ್ತಾರೆ. ಕಥೆ ಹೇಳುವ, ಓದುಗರ ಕುತೂಹಲ ತಣಿಸುವ ಭೈರಪ್ಪನವರ "ಜನಪ್ರಿಯ ಪ್ರಜ್ಞೆ"ಯ ಉತ್ಸಾಹಕ್ಕೆ ಸತ್ಯ ಒಂದು ಪಾತ್ರವಾಗಿ ಬಿಡುತ್ತಾಳೆ. ನನ್ನ ಮಾತುಗಳನ್ನು ಈ ರೀತಿ ವಿವರಿಸಲು ಪ್ರಯತ್ನಿಸುತ್ತೇನೆ :

ಎಲ್ಲವನ್ನೂ ಪ್ರಶ್ನಿಸುವುದು ಸತ್ಯಳಿಗೆ ಸಹಜವಾಗಿಯೇ ಬಂದುದು. ವೇದ ಉಪನಿಷತ್ತುಗಳನ್ನು ಮನುಧರ್ಮಶಾಸ್ತ್ರವನ್ನು ಅವಳು ಚಿಕ್ಕಂದಿನಿಂದಲೂ ಪ್ರಶ್ನಿಸಿ ದಂಥವಳು. ಸಾಂಪ್ರದಾಯಿಕ ಆಚಾರಗಳಲ್ಲಿ ಅವಳಿಗೆ ನಂಬಿಕೆಯಿಲ್ಲ. ಭಗವದ್ಗೀತೆಯ ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ – ಮುಂತಾದವುಗಳಿಗೆ ಸಾಮಾಜಿಕವಾದ ಕಾರಣಗಳನ್ನು ಹುಡುಕಿ ಅವುಗಳನ್ನು ಅರ್ಥೈಸುವಂಥ ಪ್ರವೃತ್ತಿಯುಳ್ಳವಳು. ಅಂಥ ಸತ್ಯ ತಿರುಮಲಾಪುರಕ್ಕೆ ಹಿಂತಿರುಗಿದಾಗ ಅವರ ಅಪ್ಪ ಅರೆಹುಚ್ಚಿನಲ್ಲಿ ಮಾಡುವ ಹವನ, ಹೋಮ, ಯಜ್ಞ ಮುಂತಾದವುಗಳಿಗೆ ಮಂತ್ರ – ಮುಗ್ಧಳಾದವಳಂತೆ ವಶಳಾಗಿ ಬಿಡುತ್ತಾಳೆ. ಎದುರಿನ ಅಗ್ನಿ, ತನ್ನ ಕೊರಳಿಗೆ ಬಿದ್ದ, ಯಜ್ಞೋಪವೀತ ಎಲ್ಲವೂ ಅವಳಿಗೆ ಪ್ರತ್ಯಕ್ಷ ಸತ್ಯಗಳಂತೆ ಕಾಣಿಸುತ್ತವೆ.

ಸತ್ಯಳ ಈ ವರ್ತನೆಯನ್ನು ಸಮರ್ಥಿಸುವವರು ಕಾದಂಬರಿಯಿಂದಲೇ ಕೊಡ ಬಹುದಾದ ಒಂದೇ ಒಂದು ಕಾರಣ - ಮೇಲಿಂದ ಮೇಲೆ ಒದಗಿದ ಆಘಾತಗಳಿಂದ ಸೋತಿದ್ದ ಸತ್ಯಳಿಗೆ ಒಂದು ಆಶ್ರಯ ಬೇಕಾಗಿರುತ್ತದೆ. ಜೊತೆಗೆ ಅಪ್ಪನ ಅಂಥ ಸ್ಥಿತಿಯಲ್ಲಿ ಕರುಳಿನ ಭಾವನೆ ಬಲಗೊಂಡು ಅಪ್ಪನ ಆರೈಕೆಗೆ ನಿಲ್ಲುವುದು ಆಕೆಗೆ ಅನಿವಾರ್ಯವಾಗುತ್ತದೆ. ಆದ್ದರಿಂದ ಅವಳು ಅಪ್ಪನ ಎಲ್ಲ ವಿಧಿಗಳಲ್ಲಿ ಭಾಗಿಯಾಗು ತ್ತಾಳೆ ಎಂಬುದು.

ಭೈರಪ್ಪನವರ ಜಾಣತನ ಇಂಥ ಕಾರಣವನ್ನು ಓದುಗರಲ್ಲಿ ಹುಟ್ಟಿಸುವಲ್ಲಿಯೇ ಸೂಕ್ಷ್ಮವಾಗಿ ಕೆಲಸ ಮಾಡಿರುವುದು.

'ತಂದೆಯ ಮೇಲಿನ ಪ್ರೀತಿಗೆ ನೀನು ಮನಸ್ಸು ಬದಲಾಯಿಸಿವರೆ...'–ಎಂದು ಶ್ರೀನಿವಾಸ ಸತ್ಯಳನ್ನು ಮದುವೆಯಾಗುವ ಮುನ್ನ ಅನುಮಾನ ವ್ಯಕ್ತಪಡಿಸಿದಾಗ 'ಅವರಿಗೆ ಸಿಟ್ಟು ಬರೋದು, ನೋವಾಗೋದು ಸಹಜವೇ. ಹಾಗಂತ ನನ್ನ ತೀರ್ಮಾನ ಎಂದಿಗೂ ಬದಲಾಯಿಸುಲ್ಲ' ಎಂದು ರೂಢಿಯಾದ ಸಂಬಂಧದ ಭಾವನೆಗಳಿಗೆ ಬಲಿ ಯಾಗದೆ ಸತ್ಯ ಸಂಯಮದಿಂದ ವರ್ತಿಸುತ್ತಾಳೆ. ದಿಟ್ಟ ಹೆಜ್ಜೆಯಿಡುವಲ್ಲಿ ಅಪ್ಪ, ಅವ್ವ, ಹೆಂಡತಿ–ಮುಂತಾದ ಸಂಬಂಧಗಳು, ಭಾವನೆಗಳು ತೊಡಕಾಗುವುದು ರೂಢಿ ಯಾದ ತೀರ ಸಾಮಾನ್ಯವಾದ ಕಾರಣಗಳು. ರೂಢಿಯನ್ನು ಮುರಿಯಲು ಪ್ರಯತ್ನಿ ಸುವ ವ್ಯಕ್ತಿ ಇಂಥ ಕೆರಳುವ ಭಾವನೆಗಳನ್ನು ತಡೆಹಿಡಿಯಬೇಕು. ಸತ್ಯ ಈ ಸಂದರ್ಭ ದಲ್ಲಿ ಅಪ್ಪನ ಅರ್ಷೇಯವಾದ ಅವೈಜ್ಞಾನಿಕ ಕ್ರಿಯೆಗಳನ್ನು ಏನೇನೂ ವಿಚಾರಿಸದೆ

ಆದ್ಯಾವುದೋ ಆಕರ್ಷಣೆಗೆ ಒಳಗಾದವಳಂತೆ ಪರವಶಳಾಗುವುದು ಭೈರಪ್ಪನವರ ಒತ್ತಾಯದಿಂದಾಗಿಯೇ. ಸತ್ಯಳ ಈ ವರ್ತನೆ ದುರ್ಬಲನಾದ ಶ್ರೀನಿವಾಸ ಅವರ ಅವ್ವ 'ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂದು ಹೆದರಿಸಿದ ಮಾತ್ರಕ್ಕೇ ತನ್ನ ನಿರ್ಧಾರವನ್ನು ಕೈಬಿಟ್ಟಷ್ಟೇ ಅರ್ಥವಿಲ್ಲದ್ದು. ಇಲ್ಲಿ ಮೂಲತಃ ಶ್ರೀನಿವಾಸನಿಗೂ ಸತ್ಯಭಾಮೆಗೂ ಏನೇನೂ ವ್ಯತ್ಯಾಸ ಉಳಿಯುವುದಿಲ್ಲ.

'ದುರ್ಬಲತೆ'ಯ ಬಳಕೆ ಓದುಗರ ಅನುಕಂಪೆ, ಸಹಾನುಭೂತಿ ಗಿಟ್ಟಿಸುವಲ್ಲಿ ಕಾದಂಬರಿಕಾರನಿಗಿರುವ ತೀರ ಸಾಮಾನ್ಯವಾದ ತಂತ್ರ. ಸವಾಲನ್ನು ಎದುರಿಸಿ ಸಂಘರ್ಷಕ್ಕೆ ಒಳಗಾಗದೆ ಜವಾಬ್ದಾರಿಯಿಂದ ಜಾರಿಕೊಳ್ಳಬೇಕಾದಾಗಲೆಲ್ಲ ಅಂಥ ದೊಂದು ದುರ್ಬಲ ಪಾತ್ರ ಅಥವಾ ಸನ್ನಿವೇಶ ಸೃಷ್ಟಿಸಿ ಕಥಾನಕದ ಕೊಂಡಿ ಸುಸೂತ್ರ ಸಾಗುವಂತೆ ಮಾಡುವಂಥ ಕಲೆ ಪ್ರಥಮ ದರ್ಜೆಯದ್ದಲ್ಲ. ಭೈರಪ್ಪನವರು ಇಲ್ಲಿ ಸೃಷ್ಟಿಸಿರುವ ಸನ್ನಿವೇಶ ಅಂಥದು. ಮೂಲಭೂತವಾಗಿ ಶ್ರೀನಿವಾಸನ ಪಾತ್ರ ಕಲ್ಪನೆಯೂ ಇಂಥದೇ ಎಂಬ ಅನುಮಾನ ನನಗಿದೆ.

ಅನೇಕ ಸಂದರ್ಭಗಳಲ್ಲಿ ಪ್ರಕಟವಾಗುವ ಸತ್ಯಾಳ ಉದಾತ್ತತೆ ಆ ಪಾತ್ರದ ಪರಿ ಪಲಯದೊಳಗೇ ಹುಟ್ಟಿಬಂದದ್ದಾಗಿರದೆ ಭೈರಪ್ಪನವರು ಮೇಲುಜಾತಿಯನ್ನು ಉದಾತ್ತೀಕರಿಸಲು ಇದನ್ನು ಬಳಸಿಕೊಂಡಿರಬಹುದೇ ಎಂಬ ಗುಮಾನಿ ಬರುತ್ತದೆ. ಒಂದು ನಿದರ್ಶನದ ಮೂಲಕ ಇದನ್ನು ವಿವರಿಸುತ್ತೇನೆ :

ವೆಂಕಟರಮಣಯ್ಯನವರು ಸತ್ತನಂತರ ಮಾತಂಗಿಗೆಂದು ಆತ ಇರಿಸಿದ್ದ ಎರಡು ಸಾವಿರ ರೂಪಾಯಿಗಳನ್ನು ಬೆಟ್ಟಯ್ಯನವರು ಬಂದಾಗ ಸತ್ಯ - 'ನೋಡಿ, ಆವತ್ತು ಮನೆಗೆ ಬಂದೆನಲ್ಲ, ಆ ಗಳುವಿಗೆ ನೇತುಹಾಕಿರುವ ಚೀಲದಲ್ಲಿ ಎರಡು ಸಾವಿರ ರೂಪಾಯಿಗಳನ್ನು ಅಪ್ಪ ಇಟ್ಟಿದ್ದ, ಸಿಕ್ಕಿತು. ಇದ್ಯಾಕೆ ಅಂತ ಕೇಳಿದೆ. ಅವನ ಮಾತಿನಲ್ಲಿ ಅದು ಮಾತಂಗಿಗೆ ಕೊಡಬೇಕು ಅನ್ನೋ ಅರ್ಥವಿತ್ತು. ಅವಳನ್ನು ಕರೆದು ಕೊಂಡು ಬರ್‍ತೀರಾ, ಕೊಟ್ಟುಬಿಡುವಾ' ಅನ್ನುತ್ತಾಳೆ.

ಈ ಮಾತುಗಳನ್ನು ಸತ್ಯ ಹೇಳುವ ಸಂದರ್ಭವನ್ನು ಗಮನಿಸಿ : ವೆಂಕಟ ರಮಣಯ್ಯನವರ ಸಾವಿಗೆ ಮೋಹನದಾಸ ಕಾರಣನೆಂದು ನಾಲ್ಕು ದಿನದ ಹಿಂದೆ ಊರಿನವರೆಲ್ಲ ಆತನ ಮೇಲೆ ಜಿದ್ದು ತೆಗೆಯಲು ಮಸಣಿಸುತ್ತಿದ್ದಾಗ ಇವಳು ಪೋಲೀಸ್ ಸ್ಟೇಷನ್ನಿಗೆ ಬಂದು ಆತನ ತಪ್ಪಿಲ್ಲವೆಂದು ಪ್ರಾಮಾಣಿಕವಾಗಿ ಹೇಳಿಕೆ ಕೊಟ್ಟಿದ್ದಳು. ಆದ್ದರಿಂದ ಬೆಟ್ಟಯ್ಯನವರಿಗೆ ಇವಳ ಬಗ್ಗೆ ಅಸಾಧ್ಯ ಗೌರವ ಉಂಟಾಗಿರುತ್ತದೆ. ತಮ್ಮ ಕೃತಜ್ಞತೆಯನ್ನು ಅರ್ಪಿಸಲು ಬಂದ ಅವರಿಗೆ ಸತ್ಯ ಈ ಮಾತುಗಳನ್ನು ಹೇಳುತ್ತಾಳೆ.

ಇಲ್ಲಿ ಭೈರಪ್ಪನವರ ಷರಾ ಹೀಗಿದೆ : ಬೆಟ್ಟಯ್ಯನವರು ಆರು ವರ್ಷ ಗಾಂಧಿಯ ಆಶ್ರಮದಲ್ಲಿದ್ದವರು. ಎಂಥೆಂಥ ದೊಡ್ಡ ಕೃತಿಗಳನ್ನೂ ತ್ಯಾಗಗಳನ್ನು ಮಾಡಿದ್ದವರನ್ನು ನೋಡಿದ್ದವರು. ಆದರೆ ಈ ಹುಡುಗಿ ಇಷ್ಟೊಂದು ಪ್ರಾಮಾಣಿಕತೆ ತೋರಿಸುತ್ತಿರುವುದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಮೊದಲೇ ಅವಳ ಬಗೆಗಿದ್ದ ಅವರ ಗೌರವ ಈಗ ಇಮ್ಮಡಿಸಿತು.

ಇಲ್ಲಿ ಓದುಗರ ಪ್ರತಿಕ್ರಿಯೆಯೂ ಬೆಟ್ಟಯ್ಯನವರ ಪ್ರತಿಕ್ರಿಯೆಯೂ ಸಂದರ್ಭದ ಪ್ರಭಾವದಿಂದ ಒಂದೇ ಆಗುತ್ತದೆ. ಸತ್ಯಳ ಉದಾತ್ತತೆ, ಪ್ರಾಮಾಣಿಕತೆ ಓದುಗರಲ್ಲಿ ಆಕೆಯ ಬಗ್ಗೆ ಗೌರವವನ್ನುಂಟುಮಾಡುತ್ತದೆ.

ಈ ಸಂದರ್ಭದಲ್ಲಿ ಸತ್ಯಳ ಉದಾತ್ತತೆಯ ಅಗತ್ಯವನ್ನು ಗಮನಿಸಿದರೆ – ಮಾತಂಗಿಗೆ ಸತ್ಯಳ ಈ ಉದಾರತೆ ಬೇಕಿಲ್ಲ. ಆಕೆಗೆ ಸರ್ಕಾರದವರೇ ಜಮೀನು, ಮನೆ ಕೊಟ್ಟಿದ್ದಾರೆ. ಅವಳ ಮಗನಿಗೆ ಅನ್ನ, ಬಟ್ಟೆ, ಪುಸ್ತಕ ಕೊಡುತ್ತಿದ್ದಾರೆ. ಅವಳೇನು ಈಗ ಕೂಲಿಮಾಡಿಕೊಂಡು ತಿನ್ನುವ ಸ್ಥಿತಿಯಲ್ಲಿಲ್ಲ. ಆರ್ಥಿಕವಾಗಿ ಅವಳ ಸ್ಥಿತಿ ಭದ್ರವಾಗಿದೆ. ಇದು ಸತ್ಯಳಿಗೂ ತಿಳಿದಿರುವಂಥದು. ಅದರೂ 'ಮಾತಂಗಿಗೆ ಈ ಹಣಾ ಕೊಟ್ಟುಬಿಡಬೇಕು' ಎಂಬುದು ಅವಳ ನಿಲುವು.

ಇದಕ್ಕೆ ಸಮಾನಾಂತರವಾದ ಇನ್ನೊಂದು ಸಂದರ್ಭವನ್ನು ಈಗ ಗಮನಿಸೋಣ :

ಅಪ್ಪನ ವಿಲ್ ವಿಷಯದ ನಂತರ ವೆಂಕಟೇಶ ತನ್ನ ಹೆಂಡತಿ ಜಯಮ್ಮನನ್ನು ತೌರು ಮನೆಗೆ ಕಳಿಸಿ ಅವಳ ಪಾಲನ್ನು ತೆಗೆದುಕೊಂಡು ಬರಲು ಒತ್ತಾಯ ಹೇರುತ್ತಾನೆ. ಆದರೆ ಅವರ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿರುತ್ತದೆ. ಇರುವ ಒಂದಿಷ್ಟು ಆಸ್ತಿಯಲ್ಲಿ ಮಗಳ ಪಾಲನ್ನೂ ಕೊಟ್ಟುಬಿಟ್ಟರೆ ಉಳಿದವರ ಜೀವನ ನಿರ್ವಹಣೆಯೇ ಸಾಗದಂಥ ಸ್ಥಿತಿ ಅವರದು. ಇಂಥ ಸ್ಥಿತಿಯಲ್ಲಿ ಅವರು ಸತ್ಯಳ ಬಳಿ ಬರುತ್ತಾರೆ. ಪರಿಹಾರವನ್ನು ತೋರಿಸಲು ಬೇಡುತ್ತಾರೆ. ವೆಂಕಟೇಶನಂತೂ ತನ್ನ ನಿರ್ಧಾರದಲ್ಲಿ ಕಿಂಚಿತ್ತೂ ಸಡಿಲಿರುವುದಿಲ್ಲ. ಇಂಥ ಸನ್ನಿವೇಶದಲ್ಲಿ ಸತ್ಯಳ ಪ್ರತಿಕ್ರಿಯೆ ಇದು : ‹ಒಳಗೆ ಕುಳಿತಿದ್ದ ಸತ್ಯಳಿಗೆ ಇದು ಅನ್ಯಾಯವೆನಿಸಿತು. ಆದರೆ ತಾನು ಮಾತನಾಡಲು ಹೋದರೆ ವೆಂಕಟೇಶನ ಕೈಲಿ ಬೈಸಿಕೊಳ್ಳುವುದು ಮಾತ್ರವಲ್ಲ, ತಾನೇ ಪೇಚಿಗೆ ಸಿಕ್ಕಬೇಕಾಗುತ್ತದೆ ಎಂದು ಸುಮ್ಮನಾದಳು'.

ಇಲ್ಲಿ ಸತ್ಯಳು ತಟಸ್ಥ ನೀತಿಯನ್ನು ಅನುಸರಿಸುವುದಕ್ಕೂ, ಮಾತಂಗಿ ಬೇಡವೆಂದರೂ ಅವಳ ಸೆರಗಿಗೆ ಹಣಕಟ್ಟಿ ಕಳುಹಿಸುವುದಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಿದಾಗ ಸತ್ಯಳ ಉದಾತ್ತತೆಯ ಹಿಂದಿನ ಉದ್ದೇಶ ಸ್ಪಷ್ಟವಾಗುತ್ತದೆ. ಈ ಉದ್ದೇಶವೇ ಭೈರಪ್ಪನವರ ಶ್ರೀನಿವಾಸನ ಪಾತ್ರ ಕಲ್ಪನೆಯ ಹಿಂದೆಯೂ ಕೆಲಸ

ಮಾಡಿದೆ ಎಂದು ನನಗನ್ನಿಸುತ್ತದೆ. ಸತ್ಯಳ ವ್ಯಕ್ತಿತ್ವದೆದುರು ಶ್ರೀನಿವಾಸನ ದೈನ್ಯ ಉಂಟುಮಾಡುವ ಪರಿಣಾಮ ಇಲ್ಲಿ ಗಮನಿಸಬೇಕಾದ ಸೂಕ್ಷ್ಮ ವಿಚಾರ.

ಸತ್ಯಳ ಉದಾತ್ತತೆಗಿಂತ ಮಾತಂಗಿ ಮತ್ತು ವಿಮಾರಾ ಇವರಲ್ಲಿ ಭೈರಪ್ಪನವರು ಚಿತ್ರಿಸುವ ಕೃತಾರ್ಥತೆಯ ಭಾವ ಸಾಮಾಜಿಕವಾಗಿ ಬಹಳ ಅಪಾಯಕಾರಿಯಾದುದು.

ಕೆಳವರ್ಗದ ಮಾತಂಗಿ ಮೇಲುಜಾತಿಯ ಪೂಜಾರಿ ವೆಂಕಟರಮಣಯ್ಯನವರಿಂದ ಭೋಗಿಸಲ್ಪಡುತ್ತಾಳೆ. ಮಾತಂಗಿ ಇಲ್ಲಿ ಒಂದು ವ್ಯಕ್ತಿಯಲ್ಲ, ಮೇಲುವರ್ಗದವರ ಹಸಿವೆಗೆ ವಸ್ತುವಾಗಿ ಬಳಸಲ್ಪಡುವ ಶೋಷಿತ ವರ್ಗದ ಪ್ರತೀಕ. ತಾನು ಶೋಷಣೆಗೊಳಗಾಗಿದ್ದೇನೆ ಎಂಬುದರ ಪರಿವೆಯೇ ಇಲ್ಲದೆ ಹಾಗೆ ಅವರು ತನ್ನನ್ನು ಉಪಯೋಗಿಸುತ್ತಿರುವುದರಿಂದಲೇ ತನ್ನ ಜನ್ಮ ಸಾರ್ಥಕ ಎಂದು ಆಕೆ ತಿಳಿದಿರುತ್ತಾಳೆ. ನಮ್ಮ ಸಮಾಜದಲ್ಲಿ ಶೋಷಣೆಗೊಳಗಾಗಿರುವ ಕೆಳವರ್ಗದ ಜನತೆಗೆ ತಾವು ಹಾಗೆ ಶೋಷಿಸಲ್ಪಡುತ್ತಿದ್ದೇವೆ ಎಂಬುದೇ ಗೊತ್ತಿಲ್ಲ. ಅವರ ಈ ಮುಗ್ಧತೆಯೇ ಉಳಿದವರು ಅವರ ಮೇಲೆ ಹಿಡಿತ ಸಾಧಿಸಿಕೊಳ್ಳಲು ಸಾಧ್ಯವಾಗಿರುವಂತೆ ಮಾಡಿರುವುದು. ಅವರಿಗೆ ಅಂಥ ಹಿಡಿತ ನೋವು ಅನ್ನಿಸದೆ ಅದರಲ್ಲೇ ಸುಖಿಸುವುದು, ಬದುಕಿಗೆ ತೊಡಕಾಗದೆ ತೊಡವು ಅನ್ನಿಸಿರುವುದು ಈ ದೇಶದ ಸಾಮಾಜಿಕ ದುರಂತ.

ಈ ದುರಂತದ ಪ್ರತೀಕವೇ ಮಾತಂಗಿ. ಎಂಥದೇ ಕಷ್ಟಬಂದರೂ ಪೂಜಾರಯ್ಯನವರ ಮಾನ ಸಂರಕ್ಷಣೆ ಅವಳ ಮುಖ್ಯ ಕಾಳಜಿ. ಅವರು ಸತ್ತಮೇಲೂ ಅವರ ಮಾನ ಹೋಗಬಾರದು. ಅದಕ್ಕಾಗಿ ಸತ್ಯಳನ್ನು ಕೇಳಿಕೊಳ್ಳುತ್ತಾಳೆ : 'ಅವ್ವಾ ನಂಗೂ ಅಯ್ಯಾರಿಗೂ ಹೀಗಿತ್ತು ಅಂತ ಯಾರಕುಟ್ಟೂ ಅನ್ನಬ್ಯಾಡ್ರಿ. ನಾನು ಹ್ಯಂಗೂ ಮಾದಿಗಿತ್ತಿ. ಜಾತಿ ಇಲ್ಲ. ಅವರು ಅಯ್ಯನೋರು. ಸತ್‌ಮ್ಯಾಗೂ ಅವರ ಮರ್ವಾದಿ ಹ್ವಾಗಬ್ಯಾಡ್‌ದು.'

ಸಾಮಾಜಿಕ ಕ್ರಾಂತಿಯಾಗಬೇಕು ಎನ್ನುವ, ಇತಿಹಾಸವನ್ನು ಹೊಸ ದೃಷ್ಟಿಯಿಂದ ನೋಡ ಹೊರಟ ಸತ್ಯ, ಮಾತಂಗಿ ಮತ್ತು ವೆಂಕಟರಮಣಯ್ಯನವರ ಸಂಬಂಧದ ಸಾಮಾಜಿಕ ದುರಂತದ ಬಗ್ಗೆ ಕಿಂಚಿತ್ತೂ ಗಮನಿಸದೆ ಅವಳ ಕೃತಾರ್ಥತೆಯ ಭಾವನೆಗೆ ಮೂಕವಿಸ್ಮಿತಳಾಗಿ ಮೆಚ್ಚುಗೆ ವ್ಯಕ್ತಪಡಿಸುವುದು ಸತ್ಯಳ ಆಲೋಚನೆಯ ರೀತಿಯನ್ನು ತನ್ಮೂಲಕ ಭೈರಪ್ಪನವರ ಸಾಮಾಜಿಕ ನಿಲುವನ್ನು ಹೇಳುತ್ತದೆ.

ಮಾತಂಗಿಯ ನಂತರದ ತಲೆಮಾರಿನ ವಿಮಾರಾ ಸಹ ಮೇಲುವರ್ಗದ ಶ್ರೀನಿವಾಸನಿಂದ ಶೋಷಿಸಲ್ಪಟ್ಟಿದ್ದರೂ ಅವಳು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಬರೆದಿದ್ದ ಕಾಗದದಲ್ಲಿ ಹೀಗಿರುತ್ತದೆ : 'ತೀರ್ಥರೂಪರ ಚರಣಗಳಲ್ಲಿ

ಬಾಲಕಿ ವಿಶಾಲಾಳ ನಮಸ್ಕಾರಗಳು. ಈ ಕಾಗದವನ್ನು ನಿಮಗೆ ಬರೆಯುತ್ತಿದ್ದೇನೆ. ಅಣ್ಣನಿಗೆ ಬರೆಯುತ್ತಿಲ್ಲ. ನೀವು ಇದರಂತೆಯೇ ಮಾಡಬೇಕು. ನನ್ನ ಮರಣಕ್ಕೆ ಯಾರಿಗೂ ಶಿಕ್ಷೆಯಾಗಕೂಡದು. ಶ್ರೀನಿವಾಸರಿಗೆ ಸ್ವಲ್ಪವೂ ಕೇಡಾಗದಂತೆ ಅಣ್ಣನನ್ನು ನೀವು ತಡೆಯಬೇಕು.'

ಮೂಲತಃ ಮಾತಂಗಿಗೂ ವಿಶಾಲಾಳಿಗೂ ಇಲ್ಲಿ ಏನೂ ವ್ಯತ್ಯಾಸ ಕಂಡು ಬರುವುದಿಲ್ಲ. ಇಬ್ಬರೂ ಶೋಷಣೆಗೆ ಒಳಗಾದವರು. ಆದರೆ ಅದರಿಂದ ಕೃತಾರ್ಥ ರಾದೆವೆಂದು ಭಾವಿಸಿದವರು. (ಆದರೆ ಇಲ್ಲಿ– ವಿಶಾಲಾ ತನ್ನ ನೋವಿನ ಬಿಂದುವನ್ನೇ ಹಿಡಿದು ಅದರ ಮೂಲಕ ಇತಿಹಾಸವನ್ನು ಸಮೀಕ್ಷಿಸುವ ಬೌದ್ಧಿಕ ಗತಿ ಉಳ್ಳವಳು. ಗಂಭೀರವಾಗಿ ಆಲೋಚಿಸುವ ಪ್ರವೃತ್ತಿಯುಳ್ಳವಳು. ಇಷ್ಟಾದರೂ ಅವಳ ನೋವು ಸಾಮಾಜಿಕ ವ್ಯಾಪ್ತಿಯನ್ನು ಪಡೆದುಕೊಳ್ಳದೆ ಮತ್ತೆ ಅವಳೂ ಮತ್ತೊಬ್ಬಳು ಮಾತಂಗಿಯೇ ಆಗುವುದು ಗಮನಿಸಬೇಕಾದ ಅಂಶ.) ಪ್ರತಿಭಟಿಸಬೇಕೆಂಬ ಭಾವನೆ ಯಾವ ನಲೆಯಲ್ಲೂ ಅವರ ಬಳಿ ಸುಳಿಯುವುದೇ ಇಲ್ಲ. ಬದಲಾಗಿ ಭೈರಪ್ಪ ನವರೂ 'ಮಾತಂಗಿ, ವಿಶಾಲಾ ನಿಯತ್ತಾದ ಹೆಣ್ಣುಗಳು, ಆದರ್ಶ ಸ್ತ್ರೀಯರು' ಎಂಬ ಕಡೆಗೆ ಹೆಚ್ಚು ಒತ್ತುಕೊಡುವುದರ ಮೂಲಕ ನಿಯತ್ತನ್ನು ಮುಂದುಮಾಡಿ ಅವರ ಮುಗ್ಧತೆಯನ್ನು ವೈಭವಿಸುತ್ತಾರೆ. ಅವರ ಸಾಮಾಜಿಕ ದುರಂತಕ್ಕೆ ಕಾರಣವಾಗಿರುವ ಮುಗ್ಧತೆಯನ್ನೇ ಭೈರಪ್ಪನವರು ಸೂಕ್ಷ್ಮವಾಗಿ ವೈಭವಿಸುವುದು ಸಾಮಾಜಿಕವಾಗಿ ಭಯಂಕರ ಅಪಾಯಕಾರಿಯಾದುದು ಅನ್ನಿಸುತ್ತದೆ.

ಈ ಸಂದರ್ಭದಲ್ಲಿ ಕಸ್ತೂರಿ (ಫೆಬ್ರುವರಿ 75) ಯಲ್ಲಿ ದಾಟು ಕಾದಂಬರಿಯು ಸಂಗ್ರಹ ರೂಪ–'ಮಾತಂಗಿ' ಯ ಮೂಲಕ ಬಂದದ್ದು ಮತ್ತು ಅದರ ಬಗ್ಗೆ ಓದು ಗರೊಬ್ಬರು ಪತ್ರ ಬರೆದು 'ಮಾತಂಗಿಯ ಪಾತ್ರವನ್ನು ಭೈರಪ್ಪನವರು 'ಮಹಾ ತಾಯಿ'ಯ ಪಾತ್ರದಂತೆ ಚಿತ್ರಿಸಿದ್ದಾರೆ' ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿರು ವುದು–ಇದನ್ನು ಗಮನಿಸಬಹುದು. ಇದು ಕಾದಂಬರಿ ಓದುಗರ ಮೇಲೆ ಬೀರುವ ಪರಿಣಾಮಕ್ಕೆ ಜೀವಂತ ಸಾಕ್ಷಿ. ಇಲ್ಲಿ ಮಾತಂಗಿಯ ಪಾತ್ರದ ಹಿಂದಿನ ಸಾಮಾಜಿಕ ದುರಂತಕ್ಕಿಂತ ಅವಳು 'ಮಹಾತಾಯಿ' ಯಾಗುವುದು ನನ್ನ ಮೇಲಿನ ಮಾತುಗಳಿಗೆ ಸಮರ್ಥನೆಯನ್ನು ಕೊಡುತ್ತದೆ.

ಕಾದಂಬರಿಯ ಅತ್ಯಂತ ಸತ್ವಶಾಲೀ ಪಾತ್ರ – ಮೋಹನದಾಸ. ಮೇಲುಜಾತಿ ಜೋರನ್ನ ಒದೀದೆ ಯಾವತ್ತೂ ಯಾರೂ ದಾರಿಗೆ ಬರೊಲ್ಲ. ಗಲಾಟೆಯಾಗಬೇಕು, ಒದೀಬೇಕು, ಸೊಂಟ ಮುರೀಬೇಕು, ಆಗ ಸುಧಾರಣೆಯಾಗುತ್ತೆ–ಎಂಬ ಕ್ರಾಂತಿಕಾರಿ ಮನೋಭಾವ ಅವನದು. ಸತ್ಯಭಾಮೆ ಮತ್ತು ಮೋಹನದಾಸ - ಇವರಿಬ್ಬರಿಗೂ ಜಾತಿ ಸಮಸ್ಯೆ ಪ್ರಜ್ಞೆಯ ವಸ್ತುವಾಗುವುದು ವೈಯಕ್ತಿಕ ಅನುಭವದಿಂದಲೇ. ತಾವು ಇಷ್ಟಪಟ್ಟವರನ್ನು ಮದುವೆಯಾಗಲು ಜಾತಿ ಅವರಿಗೆ ಅಡ್ಡವಾಗುತ್ತದೆ. ಸತ್ಯಭಾಮೆ

ಯಲ್ಲಿ ಈ ಅದ್ವಿ ವೈಯಕ್ತಿಕ ನೆಲೆಯಲ್ಲಿ ಮಾತ್ರ ಕೆಲಸ ಮಾಡಿದರೆ ಮೋಹನದಾಸನಲ್ಲಿ ಅದು ಕ್ರೋಧವಾಗಿ ಪರಿಣಮಿಸಿ ಸಾಮಾಜಿಕ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ.

ಸತ್ಯಳಿಗೂ ಪ್ರತಿಭಟನೆಗೂ ಇರುವ ಸಂಬಂಧದ ಸೂಕ್ಷ್ಮತೆಯನ್ನು ಇಲ್ಲಿ ಗಮನಿಸಬಹುದು: ಮೇಲುಜಾತಿಗೆ ಸೇರಿದ ಸತ್ಯ ಸ್ವಯಂಪ್ರೇರಣೆಯಿಂದ ಕೆಳಗಿನವರ ಮಟ್ಟಕ್ಕೆ ಇಳಿದು ಬಂದು ಪ್ರತಿಭಟಿಸುವುದು ಕಷ್ಟ. ಆಕೆ ಎಷ್ಟೇ ಎದುರು ಬಿದ್ದರೂ ಅವಳು ಮೇಲಿನ ಸಮಾಜದ ಒಂದು ಭಾಗ. ಅದರ ವಿರೋಧ ಅವಳ ವ್ಯಕ್ತಿತ್ವದಲ್ಲಿಯೇ ಇದೆ. ಈ ದ್ವಂದ್ವವನ್ನು ಗೆದ್ದು ಹೊರಬರುವುದು, ಗಟ್ಟಿಯಾಗಿ ನಿಂತು ಪ್ರತಿಭಟಿಸುವುದು ಸುಲಭದ ಮಾತಲ್ಲ. 'ಭಾರತೀಪುರ'ದ ಜಗನ್ನಾಥನಿಗಾಗಲೀ 'ದಾಟು'ವಿನ ಸತ್ಯಳಿಗಾಗಲೀ ತಮ್ಮ ವ್ಯಕ್ತಿತ್ವದಲ್ಲಿಯೇ ಇರುವ ವಿರೋಧವನ್ನು ಗೆದ್ದುಕೊಳ್ಳುವುದು ಅಗತ್ಯವಾದುದರಿಂದ ಅವರ ಹೋರಾಟ ಸಾಮಾಜಿಕ ಹೋರಾಟಕ್ಕಿಂತ ಮುಖ್ಯವಾಗಿ ಅಂತರಂಗದ ವೈಯಕ್ತಿಕ ಹೋರಾಟವಾಗುತ್ತದೆ.

ಕೆಳವರ್ಗದಿಂದಲೇ ಹುಟ್ಟಿಬಂದು ಅದರ ಎಲ್ಲ ನೋವುಗಳನ್ನುಂಡ ಮೋಹನದಾಸನ ವ್ಯಕ್ತಿತ್ವದಲ್ಲಿ ಇಂಥ ದ್ವಂದ್ವಕ್ಕೆ ಅವಕಾಶವೇ ಇಲ್ಲ. ಅವನ ವ್ಯಕ್ತಿತ್ವದ ಯಾವ ಭಾಗದಲ್ಲಿ ಮೀಟಿದರೂ ಕ್ರೋಧ ಜಿನುಗುತ್ತದೆ. ಆತನ ನೋವಿಗೆ ಅಪಮಾನಕ್ಕೆ, ಕೋಪಕ್ಕೆ ಸಹಸ್ರ ವರ್ಷಗಳ ಹಿನ್ನೆಲೆಯಿದೆ. ತನ್ನ ಮೀಸೆಯನ್ನು ತಾನು ಹುಲುಸಾಗಿ ಬೆಳೆಸಿಕೊಂಡದ್ದಕ್ಕೆ ಅವರಪ್ಪ ಪಟೇಲರಿಂದ ಒದೆತ ತಿಂದದ್ದು, ಕಾಸು ಕೊಟ್ಟು ಕಾಫಿ ಕುಡಿದರೂ ಮೋಹನದಾಸ ಬಟಿ ಹರಿಸಿಕೊಳ್ಳಬೇಕಾಗಿ ಬಂದುದು, ಅವರ ಹೆಂಗಸರನ್ನು ಮೇಲುಜಾತಿಯವರು ಹಗಲೇ ಹಾದರ ಮಾಡುವುದು – ಇವೆಲ್ಲ ಮೋಹನದಾಸನ ಹಿನ್ನೆಲೆಗಿರುವುದರಿಂದ ಆತನ ವೈಯಕ್ತಿಕ ನೋವು ಸಾಮಾಜಿಕತೆಯನ್ನು ಪಡೆದುಕೊಳ್ಳುತ್ತದೆ. ಆದ್ದರಿಂದ ಮೋಹನದಾಸನ ರೊಚ್ಚು, ಪ್ರತಿಭಟನೆ ಆಕರ್ಷಣೆಯಾಗದೆ ಆಳವನ್ನೂ ಗಟ್ಟಿತನವನ್ನೂ ಕಂಡುಕೊಳ್ಳುತ್ತವೆ.

"ಕಾದಂಬರಿಕಾರ ಬಾಲ್ಜಾಕ್‌ನ ವೈಯಕ್ತಿಕ ದೃಷ್ಟಿ ಸಂಪ್ರದಾಯದ ಪರವಾಗಿದ್ದರೂ, ಅವನ ಕೃತಿಗಳು ಮಾತ್ರ ಆತನಿಗೆ ಪ್ರಿಯವಾದ ಶ್ರೀಮಂತ ವರ್ಗ ಯಾಕೆ ಅವನತಿ ಹೊಂದಲೇಬೇಕೆಂಬುದನ್ನು ನಿಷ್ಠುರವಾಗಿ ಚಿತ್ರಿಸುತ್ತವೆ". ಬಾಲ್ಜಾಕ್‌ನ ಕೃತಿಯನ್ನು ಅಭ್ಯಾಸ ಮಾಡಿದ ವಿಮರ್ಶಕರ ಅಭಿಪ್ರಾಯವಿದು.

"ಸಾಹಿತಿಯ ವೈಯಕ್ತಿಕ ದೃಷ್ಟಿಕೋನಕ್ಕೂ, ಅವನ ಕೃತಿ ತನ್ನ ಸ್ವಂತ ಶಕ್ತಿಯಿಂದಾಗಿ ಹೊಮ್ಮಿಸುವ ವಿಚಾರಕ್ಕೂ ನಡುವೆ ವ್ಯತ್ಯಾಸಗಳಿರುವುದು ಸಾಧ್ಯವೆಂದು" ಇದರಿಂದ ಹೇಳಿದಂತಾಯಿತು.

ಕಾದಂಬರಿಕಾರನ ಆಶಯವನ್ನು ಮೀರಿ ಕೃತಿ ಬೆಳೆಯುವ ಸಾಧ್ಯತೆಯಿರುತ್ತದೆ ಎಂಬುದಕ್ಕೆ ಬಾಲ್ಜಾಕ್ ಒಂದು ಉತ್ತಮ ನಿದರ್ಶನ.

ಮೋಹನದಾಸನ ಪಾತ್ರ ಭೈರಪ್ಪನವರ ಆಶಯವನ್ನೂ ಮೀರಿ ಬೆಳೆದು ನಿಲ್ಲುತ್ತದೆ. ಹೇಗೆ ಎಂಬುದನ್ನು ಗುರ್ತಿಸುವುದಕ್ಕೆ ಮೊದಲು ಭೈರಪ್ಪನವರು ತಮ್ಮ ವಿಚಾರಗಳಿಗೆ ಮೋಹನದಾಸನಂಥವನನ್ನೂ ಹೇಗೆ ಬಳಸಿಕೊಳ್ಳುತ್ತಾರೆ ಎಂಬುದಕ್ಕೆ ಸಮಾಜವನ್ನು ಪ್ರತಿಭಟಿಸಿ ಎಲ್ಲ ರೀತಿಯ ಸಿದ್ಧತೆಗಳೊಂದಿಗೆ ದೇವಸ್ಥಾನ ಪ್ರವೇಶಿಸಿದ ಮೋಹನದಾಸ ಅಲ್ಲಿ ದೇವರನ್ನು ನೋಡುವಾಗ ಮೂರ್ಛೆ ಬೀಳುವ ಪ್ರಸಂಗವನ್ನು ಗಮನಿಸಬಹುದು. ಮೋಹನದಾಸ ಶ್ರೀನಿವಾಸನಂತೆ ದುರ್ಬಲನಲ್ಲ; ವೆಂಕಟರಮಣಯ್ಯನವರಂತೆ ಪಾಪಪ್ರಜ್ಞೆ ಅನುಭವಿಸಿದವನಲ್ಲ: ಸತ್ಯಳಂತೆ ಉದ್ರೇಕಗೊಂಡವನಲ್ಲ. ಆದರೂ ಮೂರ್ಛೆಹೋಗುತ್ತಾನೆ. ಯಾಕೆ? ಎಂದು ಪ್ರಶ್ನಿಸಿಕೊಂಡರೆ "ಭೈರಪ್ಪನವರ ವೈಯಕ್ತಿಕ ವಿಚಾರಗಳ ಒತ್ತಾಯಕ್ಕೆ ಆತ ಮೂರ್ಛೆ ಹೋಗಬೇಕಾಯಿತು" ಎಂದು ಉತ್ತರ ಹೇಳಬೇಕಾಗುತ್ತದೆ.

ಮೋಹನದಾಸ ಊರ ಕೆರೆಯನ್ನು ಡೈನಮೈಟ್ ಇಟ್ಟು ಒಡೆಯುವುದು ಇಡೀ ಕಾದಂಬರಿಯ ಅತ್ಯಂತ ಮುಖ್ಯವಾದ ಘಟನೆ.

ನಿಂತ ನೀರಿನಂತಹ ಈ ಸಮಾಜದಲ್ಲಿ ಇಡೀ ವ್ಯವಸ್ಥೆ ಬುಡಸಮೇತ ಅಲುಗಾಡಿದ ಹೊರತು ಹೊಸದೇನೂ ಇಲ್ಲಿ ಸಾಧ್ಯವಾಗುವುದಿಲ್ಲ. ಮಾಡುವ ಎಲ್ಲ ರೀತಿಯ ಸುಧಾರಣೆಗಳು ಯಾವುದೇ ಬದಲಾವಣೆಯನ್ನು ಉಂಟುಮಾಡುವುದಿಲ್ಲ. ಹೊಸದನ್ನು ಕಟ್ಟಬೇಕಾದರೆ ಹಳೆಯದನ್ನು ಮುರಿಯಲೇಬೇಕು.

ಕೆಳವರ್ಗದವರ ಮೌಢ್ಯವನ್ನು ಮುಗ್ಧತೆಯನ್ನು ಮೇಲುವರ್ಗದವರು ದುಡಿಸಿಕೊಳ್ಳಲು ಸಾಧ್ಯವಾಗಿರುವ ಸಾಧನಗಳಲ್ಲಿ 'ದೇವರು' ಬಹಳ ಮುಖ್ಯವಾದುದು. ಆದ್ದರಿಂದ ದೇವಸ್ಥಾನ ಇಲ್ಲಿ ವ್ಯವಸ್ಥೆಗೆ ಸಂಕೇತವಾಗುತ್ತದೆ. ಮೋಹನದಾಸನ ಪ್ರಕಾರ – ದೇವಸ್ಥಾನ ಪ್ರವೇಶ ಬರಿಯ ಭಕ್ತಿಯ ಪ್ರಶ್ನೆಯಲ್ಲ, ವ್ಯವಸ್ಥೆಯ ಬಂಧನವನ್ನು ಒಳಹೊಗುವ ಒಂದು ಪ್ರಯತ್ನ. ಈ ಪ್ರಯತ್ನದಲ್ಲಿ ಸೋಲನ್ನು ಅನುಭವಿಸಿದಾಗ ಮೋಹನದಾಸನ ವ್ಯಕ್ತಿತ್ವಕ್ಕೆ ಇದು ಒಂದು ಸವಾಲಾಗುತ್ತದೆ. ಇಡೀ ವ್ಯವಸ್ಥೆಯನ್ನೇ ಬುಡಸಮೇತ ನಾಶಮಾಡುವ ನಿರ್ಧಾರಕ್ಕೆ ಆತ ಬರುತ್ತಾನೆ. ಅದರ ಫಲಿತವಾಗಿಯೇ – ಆತ ಕೆರೆಗೆ ಡೈನಮೈಟ್ ಇಡುವುದು. ಮೋಹನದಾಸ ಕೆರೆಯ ಏರಿಯನ್ನು ಒಡೆಯುವಾಗಲೂ 'ದೇವಸ್ಥಾನದ ಮೇಲ್ಭಾಗದಲ್ಲಿಯೇ' ಒಡೆಯುತ್ತಾನೆ ಎಂಬುದು ಇಲ್ಲಿ ಬಹಳ ಮುಖ್ಯ.

ವೆಂಕಟರಮಣಯ್ಯನವರು ಪೂಜೆ ಮಾಡುತ್ತಿದ್ದ ದೇವರ ಗುಡಿ, ಗೌಡರು ದೇವರಿಗೆ ಮಾಡಿಸಿಕೊಟ್ಟ ಗುಡಿಯ ಶಿಖರದ ಮೇಲಿನ ಬಂಗಾರದ ಕಳಶ, ಅದಕ್ಕೆ ಮಂತ್ರಿಗಳು ಕಟ್ಟಿಸಿಕೊಟ್ಟಿದ್ದ ಸರ್ಕಾರದ ಗೋಡೆ – ಎಲ್ಲವೂ ನುಗ್ಗಿಬಂದ ನೀರಿನಲ್ಲಿ ನೆಲಸಮನಾಗುತ್ತವೆ.

ಈ ವ್ಯವಸ್ಥೆ ನಾಶವಾಗದೆ ಹೊಸ ಬದುಕು ಇಲ್ಲಿ ಸಾಧ್ಯವಿಲ್ಲ – ಎಂಬ ಸೂಚನೆಯನ್ನು ಈ ಘಟನೆ ಧ್ವನಿಸುತ್ತದೆ.

ಇಡೀ ಕಾದಂಬರಿಯಲ್ಲೇ ಅರ್ಥಪೂರ್ಣವಾದ ಈ ಘಟನೆಗೂ ಬೇರೊಂದು ಅರ್ಥ ಹಚ್ಚುವ ಸಾಧ್ಯತೆಯಿದೆ :

ವೆಂಕಟರಮಣಯ್ಯನವರು 'ಜಲಪ್ರಳಯ'ವಾಗಬೇಕು ಎಂದು ಹೇಳಿದ್ದನ್ನು ಸತ್ಯ ಇಲ್ಲಿ ಜ್ಞಾಪಿಸಿಕೊಳ್ಳುತ್ತಾಳೆ. ತನ್ಮೂಲಕ ಭೈರಪ್ಪನವರು ಓದುಗರಿಗೂ ಅದನ್ನು ಜ್ಞಾಪಿಸಿಕೊಡುತ್ತಾರೆ. ಅಂದರೆ ಜಲಪ್ರಳಯಕ್ಕೂ ಈ ಕೆರೆ ಒಡೆದು ಹೋದದ್ದಕ್ಕೂ ಸಂಬಂಧ ಕಲ್ಪಿಸುವ ಸಾಧ್ಯತೆಯನ್ನು ಭೈರಪ್ಪನವರು ಧಾರಾಳವಾಗಿ ಒದಗಿಸಿಕೊಟ್ಟಿದ್ದಾರೆ. ಆದರೆ ವಾಸ್ತವವಾಗಿ ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. 'ಜಲಪ್ರಳಯ'ವಾಗಬೇಕು ಎಂದು ವೆಂಕಟರಮಣಯ್ಯನವರು ಹೇಳಿದ್ದರಿಂದ 'ಜಲಪ್ರಳಯ' ಆಗಿಬಿಡಲಿಲ್ಲ. ಮೋಹನದಾಸನ ಕ್ರೋಧ ಕೆರೆ ಏರಿಗೆ ಡೈನಮೈಟ್ ಇಟ್ಟಿದ್ದರಿಂದ ಕೆರೆ ಒಡೆದು ನೀರು ನುಗ್ಗಿತು.

ಈ ದೇಶದ ಬದುಕಿನಲ್ಲಿ ಹೊಸದೇನಾದರೂ ಸಾಧ್ಯವಾಗಬೇಕಾದರೆ ಕೆಳವರ್ಗದವರ ಮೇಲೆ ಹಿಡಿತ ಸಾಧಿಸಿರುವ ಈ ವ್ಯವಸ್ಥೆ ನಾಶವಾಗಬೇಕು – ಎಂಬ ಅರ್ಥವನ್ನು ಧ್ವನಿಸುವ ಮೋಹನದಾಸನ ಈ ಕ್ರಿಯೆ ಭೈರಪ್ಪನವರ ಆಶಯವನ್ನೂ ಮೀರಿ 'ದಾಟು' ಕಾದಂಬರಿಗೆ ಹೊಸ ಅರ್ಥವನ್ನು ಕೊಡುತ್ತದೆ.

ಕಡೆಯದಾಗಿ ಒಬ್ಬ ಲೇಖಕನ ಸಮಸ್ಯೆ ಮತ್ತು ಮಿತಿಗಳ ಬಗ್ಗೆ ಕೆಲವು ಮಾತುಗಳು :

ಒಂದು ವರ್ಗದಿಂದ ಬಂದ ಲೇಖಕ ಆ ವರ್ಗದ ಸಾಮಾಜಿಕ ಪರಿಸ್ಥಿತಿ ಮತ್ತು ಪರಿಸರದ ಚೌಕಟ್ಟಿಗೆ ಬದ್ಧನಾಗಿರುತ್ತಾನೆ. ಅದರಿಂದ ಆತ ತಪ್ಪಿಸಿಕೊಳ್ಳುವುದು ಸುಲಭ ಸಾಧ್ಯವಲ್ಲ. ಉದಾಹರಣೆಗೆ – ಮೇಲುವರ್ಗದ ಒಬ್ಬ ಲೇಖಕ ಸ್ವಯಂ ಪ್ರೇರಣೆಯಿಂದ ಕೆಳವರ್ಗದ ಮಟ್ಟಕ್ಕೆ ಇಳಿದು ಬಂದು ಮೇಲುವರ್ಗವನ್ನು–ತನ್ನನ್ನು –ಪ್ರತಿಭಟಿಸಿ ಬರೆಯುವುದರ ವಿರೋಧ ಅವನ ವ್ಯಕ್ತಿತ್ವದಲ್ಲೇ ಇರುತ್ತದೆ. ಆದರೆ ಲೇಖಕನ ಸಂಸ್ಕಾರ ವಾಸ್ತವಿಕತೆ ಇದನ್ನು ಮೀರಿ ಬೇರೊಂದು ಸತ್ಯವನ್ನು ಸೃಷ್ಟಿಸುವ ಸಾಧ್ಯತೆಯನ್ನೂ ಒದಗಿಸುತ್ತದೆ. ಈ ದ್ವಂದ್ವ ಕೆಳವರ್ಗದ ಒಬ್ಬ ಲೇಖಕನಲ್ಲಿ ಬರುವುದೇ ಇಲ್ಲ. ಅವನ ವ್ಯಕ್ತಿತ್ವ ಈ ದೃಷ್ಟಿಯಿಂದ ಅಖಂಡವಾಗಿರುತ್ತದೆ.

ಆದ್ದರಿಂದ ಒಬ್ಬ ಲೇಖಕನ ಮಿತಿಗಳನ್ನು ಗುರುತಿಸುವಾಗ ಅದರ ಅನಿವಾರ್ಯತೆಯನ್ನೂ ಗಮನಿಸಬೇಕಾಗುತ್ತದೆ.

ಕೋಳಿಗಳಲ್ಲಿ ಕಾಯ್ಬೀಜಾಣುಜೀವಿ ರೋಗ

ಕೆ. ಎಸ್. ಪ್ರತಾಪ್ ಕುಮಾರ್

ಬದುಕಿನ ವಿಕಾಸದತ್ತ ಹೊರಟ ಆದಿಮಾನವ ಹಿಡಿದು ಪಳಗಿಸಿ ಸಾಕತೊಡಗಿದ ಪ್ರಾಣಿಗಳಲ್ಲಿ ಬಹುಶಃ ಕೋಳಿ ಪುರಾತನವಾದದ್ದು. ಆದರೆ ಕೋಳಿಸಾಕಣೆ ವೈಜ್ಞಾನಿಕವಾದುದು ತೀರ ಇತ್ತೀಚೆಗೆ. ಇಂದಿನ ಸಾಕು ಕೋಳಿಗಳ ಮೂಲ ತಳಿಯಾದ ಕಾಡು ಕೋಳಿಯ ಮೂಲ ನೆಲೆಗಳಲ್ಲಿ ಭಾರತವೂ ಒಂದಾದರೂ ಕೋಳಿಸಾಕಣೆ ಭಾರತದಲ್ಲಿನ್ನೂ ಅಷ್ಟು ಪ್ರಗತಿ ಹೊಂದಿಲ್ಲ. ಕೋಳಿಸಾಕಣೆಯಲ್ಲಿ ತೊಡಗಿರುವ ಜನ ಸಾಕಷ್ಟು ಬಂಡವಾಳವಿಲ್ಲದ ಬಡವರಾಗಿರುವುದು ಈ ಪ್ರಗತಿರಾಹಿತ್ಯಕ್ಕೆ ಒಂದು ಕಾರಣವಾದರೂ, ಅಜ್ಞಾನವೂ ಒಂದು ಮುಖ್ಯ ಅಂಶ. ಕೋಳಿಮೊಟ್ಟೆ ಹಾಗೂ ಮಾಂಸ ಪ್ರೋಟೀನಿನ ಉತ್ತಮ ಆಕರಗಳಾಗಿರುವುದರ ಜೊತೆಗೆ ಮೊಟ್ಟೆಯಲ್ಲಿ ಎ. ಡಿ. ಬಿ$_1$ ಬಿ$_{12}$ ಜೀವಸತ್ವಗಳು ಹಾಗೂ ಪಾಂಟೋಥೆನಿಕ್ ಆಮ್ಲಗಳಿರುತ್ತವೆ. ಕೋಳಿಮಾಂಸದಲ್ಲಿ ಥಯಾಮಿನ್, ರಿಬೋಫ್ಲೇವಿನ ಮತ್ತು ಪಾಂಟೊಥೆನಿಕ್ ಆಮ್ಲಗಳು ಅಧಿಕವಾಗಿರುತ್ತವೆ. ಇವೆಲ್ಲವೂ ದೇಹಾರೋಗ್ಯಕ್ಕೆ ಮುಖ್ಯ ಅಂಶಗಳು. ನಮ್ಮ ದೇಶದ ಇಂದಿನ ಪೌಷ್ಟಿಕ ಆಹಾರಾಂಶಗಳ ಕೊರತೆಯ ದೃಷ್ಟಿಯಿಂದ ಕೋಳಿ ಸಾಕಣೆಯ ಪ್ರಾಮುಖ್ಯತೆ ಹೆಚ್ಚುತ್ತದೆ. ಇತ್ತೀಚೆಗೆ ಇದರ ಕಡೆ ಹೆಚ್ಚಿನ ಗಮನ ಹರಿದಿರುವುದು ಆರೋಗ್ಯಕರ ಚಿಹ್ನೆ.

ಕೋಳಿಗಳ ದೇಹ ಪ್ರಕೃತಿ ಸೂಕ್ಷ್ಮ, ರೋಗದ ಚಿಹ್ನೆಗಳು ಕಂಡು ಬಂದ ಮೇಲೆ ಚಿಕಿತ್ಸೆಗೆ ಸಿಗುವ ಅವಧಿ ಕಡಿಮೆ. ಆದುದರಿಂದ, ರೋಗ ನಿರೋಧ ಅತಿ ಮುಖ್ಯ. ಕೋಳಿಗಳು ಅನೇಕ ರೋಗಗಳಿಗೆ ಬಲಿಯಾಗಬಹುದಾದರೂ, ಕಾಯ್ಬೀಜಾಣುಜೀವಿ ರೋಗ ಅತಿ ಮುಖ್ಯ.

ಕೋಳಿಗಳ ಕಾಯ್ಬೀಜಾಣುಜೀವಿರೋಗ ಮುಂಜೀವಿ ವರ್ಗದ ಪರಪಿಂಡಿ ಕಾಯ್ಬೀಜಾಣುಜೀವಿಗಳಿಂದ ಉಂಟಾಗುವ ಕರುಳಿನ ರೋಗ. ಇದರಿಂದಾಗುವ ಸಾವು ಮತ್ತು ರೋಗ ಅಂಟುವ ಗುಣಗಳಿಂದಾಗಿ ಇದು ಅತಿ ಮುಖ್ಯವಾದದ್ದು.

ಕಾಯ್ಬೀಜಾಣು ಜೀವಿಗಳು ಕೋಳಿಗಳ ಕರುಳುಗಳಲ್ಲಿ ವೃದ್ಧಿ ಹೊಂದುವಾಗ, ಆಹಾರವನ್ನು ಜೀರ್ಣಿಸಿ ಹೀರಿಕೊಳ್ಳುವ ಕರುಳಿನ ಜೀವಕೋಶಗಳನ್ನು ನಾಶಮಾಡುತ್ತವೆ. ತೀವ್ರ ಸ್ಥಿತಿಗಳಲ್ಲಿ ಜೀವಕೋಶಗಳ ನಾಶ ಬಹಳವಾಗಿ ರಕ್ತಸ್ರಾವದಿಂದ ಸಾವು ಉಂಟಾಗುತ್ತದೆ. ತೀವ್ರ ರೀತಿಯಲ್ಲಿ ಸಾವಿನ ಪ್ರಮಾಣ ಬಹಳ. ಬದುಕಿ

ಉಳಿದ ಕೋಳಿಗಳು ಬಹಳ ದುರ್ಬಲವಾಗಿರುತ್ತವೆ ; ಜೀರ್ಣಿಸಿದ ರೀತಿಗಳಲ್ಲಿ ಮೇವು ಮೈಗೂಡದೆ ಮೊಟ್ಟೆ ಉತ್ಪಾದನೆ ಕುಗ್ಗುತ್ತದೆ. ಅಷ್ಟೇ ಅಲ್ಲದೆ ಕಾಯ್ಬೀಜಾಣುಜೀವಿಗಳು ಕೋಳಿಗಳ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸಿ, ಗುಂಪನ್ನು ಇತರ ರೋಗಗಳಿಗೀಡುಮಾಡುತ್ತವೆ. ಕಾಯ್ಬೀಜಾಣುಜೀವಿ ರೋಗವಿರುವ ಗುಂಪಿನಲ್ಲಿ ಇತರೇ ರೋಗಗಳ ವಿರುದ್ಧ ಲಸಿಕೆ ಹಾಕುವುದು ಕೂಡ ಅಪಾಯಕಾರಿ.

ತತ್ತಿಚೀಲದಿಂದ ಮೊದಲುಗೊಂಡು ಕಾಯ್ಬೀಜಾಣುಜೀವಿ ವಿವಿಧ ಹಂತಗಳಲ್ಲಿ ವಿಕಸಿಸುತ್ತದೆ. ಮಿಣಿದರ್ಶಕದಲ್ಲಿ ಮಾತ್ರ ಕಾಣುವಷ್ಟು ಸಣ್ಣಗಿರುವ ತತ್ತಿಚೀಲದಲ್ಲಿ ಜೀವದ್ರವ್ಯ, ನಬ್ಬೀಜ, ಹಾಗೂ ಆಹಾರ ಪದಾರ್ಥಗಳಿರುತ್ತವೆ. ತೇವ, ಆಮ್ಲಜನಕ ಹಾಗೂ ಸೂಕ್ತ ಶಾಖವಿದ್ದಾಗ ತತ್ತಿಚೀಲದೊಳಗೆ ಒಂದೊಂದರೊಳಗೂ ಬಾಳೆ ಹಣ್ಣಿನಾಕಾರದ ಎರಡೆರಡು ಬೀಜಕಣಜೀವಿಗಳಿರುವ ನಿಂಬೆಯಾಕಾರದ 4 ಬೀಜಕಣಗಳಾಗುತ್ತವೆ. ಈ ರೀತಿ ಪಕ್ವವಾದ ತತ್ತಿಚೀಲವನ್ನು ಕೋಳಿ ನುಂಗಿದಾಗ, ಅದರ ಕರುಳಿನ ಜೀವಕೋಶಗಳಲ್ಲಿ 8 ಬೀಜಕಣಜೀವಿಗಳು ಬಿಡುಗಡೆಹೊಂದುತ್ತವೆ. ಈ ರೀತಿಯ ಬಿಡುಗಡೆಯಲ್ಲಿ ಜೀರ್ಣದ್ರವ ಹಾಗೂ ಶರೀರದ ಶಾಖಗಳೂ ಪಾತ್ರವಹಿಸುತ್ತವೆ. ಬೀಜಕಣ ಜೀವಿಗಳೇ ಸೋಂಕು ಹರಡುವಂತಹು.

ಕರುಳಿನ ಜೀವಕೋಶಗಳಲ್ಲಿ ಕಾಯ್ಬೀಜಾಣುಜೀವಿಗಳು ಪುನಃ ಪುನಃ ನಿರ್ಲಿಂಗ ರೀತಿಯಿಂದ ವಿಭಜನೆಹೊಂದಿ ಮರಿಜೀವಿಗಳನ್ನು ಅಧಿಕ ಸಂಖ್ಯೆಯಲ್ಲಿ ಉತ್ಪಾದಿಸುತ್ತವೆ. ಇದೇ ಕರುಳಿನ ಗೋಡೆಗಳ ನಾಶಕ್ಕೆ ಕಾರಣವಾದ ಹಂತ. ಎರಡನೇ ಹಂತದಲ್ಲಿ ಲಿಂಗ ರೀತಿಯಿಂದ ವಂಶಾಭಿವೃದ್ಧಿ ನಡೆದು ತತ್ತಿಚೀಲಗಳ ಉತ್ಪಾದನೆ ಆಗುತ್ತದೆ.

ಕಾಯ್ಬೀಜಾಣುಜೀವಿಗಳು ಬೆರೆತಿರುವ ಮೇವು, ನೀರು ಅಥವಾ ಇತರೆ ಪದಾರ್ಥಗಳ ಸೇವನೆಯಿಂದ ಈ ರೋಗ ಕೋಳಿಯಿಂದ ಕೋಳಿಗೆ ಹರಡುತ್ತದೆ. ತತ್ತಿಚೀಲ ಮನುಷ್ಯ, ಸಲಕರಣೆಗಳು, ಪ್ರಾಣಿಗಳು ಹಾಗೂ ಪಕ್ಷಿಗಳ ಮೂಲಕ ಯಾಂತ್ರಿಕವಾಗಿ ಒಂದು ಸ್ಥಳದಿಂದ ಇನ್ನೊಂದಕ್ಕೆ ಹರಡಬಹುದು. ಪುಕ್ಕ ನೆಕ್ಕುವುದರಿಂದಲೂ ಬರಬಹುದು. ಆದರೆ ಸೋಂಕಿನ ಮೂಲ ಕಾರಣ ಕೋಳಿಗಳೇ. ರೋಗಪೀಡಿತ ಕೋಳಿಗಳು ತಮ್ಮ ಹಿಕ್ಕೆಯಲ್ಲಿ ಅಧಿಕ ಪ್ರಮಾಣದಲ್ಲಿ ತತ್ತಿಚೀಲಗಳನ್ನು ಹೊರ ಹಾಕುತ್ತವೆ. ಟೀ ಚಮಚದ 1/3 ಭಾಗದಷ್ಟು ಹಿಕ್ಕೆಯಲ್ಲಿ ಸುಮಾರು 70 ಲಕ್ಷ ತತ್ತಿಚೀಲಗಳಿರಬಹುದೆಂದು ಅಂದಾಜಾಗಿದೆ. ಕಾಯ್ಬೀಜಾಣುಜೀವಿ ರೋಗದಿಂದ ಚೇತರಿಸಿಕೊಂಡಿರುವ ಕೋಳಿಗಳು ಹಲವು ತಿಂಗಳುಗಳವರೆಗೂ ತಮ್ಮ ಹಿಕ್ಕೆಯಲ್ಲಿ ತತ್ತಿಚೀಲಗಳನ್ನು ಹೊರಹಾಕುತ್ತಿರಬಹುದು. ಅಲ್ಲದೆ ತೇವಾಂಶವಿರುವ ಮಣ್ಣಿನಲ್ಲಿ ತತ್ತಿಚೀಲಗಳು ಒಂದೆರಡು ವರ್ಷಗಳೂ ಜೀವಿಸಿರಬಲ್ಲವು. ಆದುದರಿಂದ ರೋಗ ಪೀಡಿತ ಕೋಳಿಗಳನ್ನು ಸಾಕಿದ್ದ ಜಾಗದಲ್ಲಿ ಒಂದು ವರ್ಷದವರೆಗೂ ಸೋಂಕು

ಇರಬಹುದು. ಶಾಖದಿಂದ ಕೂಡಿದ ತೇವದ ಅನುಕೂಲಕರ ಹವಾಮಾನ ಒದಗಿದರೆ ರೋಗ ವಿನಾಶಕಾರಿಯಾಗಿ ತಲೆದೋರಬಹುದು.

ಕೋಳಿಗಳಲ್ಲಿ ರೋಗವನ್ನುಂಟುಮಾಡುವ ಕಾಯ್ಬೀಜಾಣುಜೀವಿಗಳಲ್ಲಿ 8 ವಿಧಗಳಿವೆ. ಅವುಗಳಲ್ಲಿ ಮುಖ್ಯವಾದವು ಮೂರು.

ಅತಿ ಮುಖ್ಯವಾದ ಚಿಹ್ನೆ ಎಂದರೆ ರಕ್ತದಿಂದ ಕೂಡಿದ ಹಿಕ್ಕೆ, ಗರಿಗಳು ಕೆದರಿದಂತಿದ್ದು ಕೋಳಿ ಸಾಮಾನ್ಯವಾಗಿ ಬಣ್ಣಗುಂದಿ, ಕಳೆಗುಂದಿರುತ್ತದೆ. ಶೇಕಡ 50 ರಿಂದ 100 ರಷ್ಟು ಸಾಯಬಹುದು. ಕೋಳಿಗಳು ತೂಕದಲ್ಲಿ ಶೇಕಡ 40ರಷ್ಟು ಕಡಮೆಯಾಗುವುದು ಒಂದು ಮುಖ್ಯ ಚಿಹ್ನೆ. ಎದೆಸ್ನಾಯು ಒಣಗಿ, ದಟ್ಟ ಬಣ್ಣಕ್ಕಿದ್ದು ಕುಗ್ಗಿದಂತಿರುತ್ತದೆ. ಸಣ್ಣ ಕರುಳು ಇಲ್ಲವೇ ಮೂಗರುಳು ಅಥವಾ ಎರಡೂ ಕಡೆಗಳಲ್ಲಿ ರಕ್ತಸ್ರಾವವಾಗಿ ಇವೆರಡೂ ರಕ್ತದಿಂದ ತುಂಬಿರುವುದು ಕಂಡು ಬರುತ್ತದೆ. ರಕ್ತಭೇದಿಗೂ ಮೊದಲು ಕಂಡಬರುವ ಪ್ರಾರಂಭಿಕ ಲಕ್ಷಣವೆಂದರೆ, ಮೇವಿನ ಕಡೆಗೆ ಅನಾಸಕ್ತಿ, ಹಾಗೂ ಕೋಳಿಗಳು ತಲೆಯನ್ನು ಕೆಳಕ್ಕೆ ಬಗ್ಗಿಸಿಕೊಂಡು ಮಂಕಾಗಿ ಕುಳಿತುಕೊಳ್ಳುತ್ತವೆ. ಹಿಕ್ಕೆಯಲ್ಲಿ ರಕ್ತ ಕಂಡು ಬರುವ ಮೊದಲು ಹಿಕ್ಕೆ ತೆಳುವಾಗಬಹುದು.

ಕೋಳಿಗಳಿಗೆ ಕಾಯ್ಬೀಜಾಣುಜೀವಿಗಳೊಂದಿಗೆ ಸಂಪರ್ಕ ಬರದಂತೆ ನೋಡಿಕೊಳ್ಳುವುದು ಸಾಧ್ಯವಿಲ್ಲದ ಮಾತು. ಉತ್ತಮವಾದ ಮೇಲುಸ್ತುವಾರಿ - ಸ್ವಚ್ಛ ಮರಿಗಳು, ಸ್ವಚ್ಛ ಬಯಲು ಹಾಗೂ ಇತರೆ ಸ್ವಚ್ಛತಾ ಕ್ರಮಗಳು, ಈ ರೋಗದ ಸಾಧ್ಯತೆಯನ್ನು ಕಡಮೆ ಮಾಡುತ್ತವೆ.

ಔಷಧಿಯನ್ನು ಕಡಮೆ ಪ್ರಮಾಣದಲ್ಲಿ ನಿರಂತರವಾಗಿ ಕೊಡುತ್ತಿರುವುದು ಕಾಯ್ಬೀಜಾಣು ಜೀವಿ ರೋಗವನ್ನು ಯಶಸ್ವಿಯಾಗಿ ನಿರೋಧಿಸುತ್ತದೆಂಬುದನ್ನು ಕೋಳಿಸಾಕಣೆಕೆದಾರರು ಹಲವು ವರ್ಷಗಳಿಂದ ಕಂಡುಕೊಂಡಿದ್ದಾರೆ. ಈ ಕಾರ್ಯ ಕ್ರಮ ಕೆಳಮಟ್ಟದ ಸೋಂಕಿನಿಂದ ಕೋಳಿಗಳು ರೋಗ ನಿರೋಧಕ ಶಕ್ತಿ ಬೆಳೆಸಿಕೊಳ್ಳಲೂ ಸಹಾಯಕವಾಗುತ್ತದೆ. ಒಂದು ವಿಧದ ಪರಪಿಂಡಿಯ ವಿರುದ್ಧ ಉಂಟಾದ ನಿರೋಧಕಶಕ್ತಿ ಬೇರೆ ವಿಧದ ವಿರುದ್ಧ ಕಾರ್ಯಶೀಲವಾಗಲಾರದು. ಈ ರೀತಿಯ ಔಷಧಗಳನ್ನು 'ಹೂಮರಿ' ಗಳಿಗೆ ರಕ್ಷಣೆ ಒದಗಿಸಲು ಮೊದಲಿನಿಂದಲೇ ಪ್ರಾರಂಭಿಸಿ ನಡುವೆ ನಿಲ್ಲಿಸದೆ, ಬದಲಾಯಿಸದೆ ಕೊಡಬೇಕು. ಇಂತಹ ಔಷಧಿ ವಿನಾಶಕಾರಿ ರೋಗವನ್ನು ತಡೆಗಟ್ಟುವುದಲ್ಲದೆ, ಕೋಳಿಗಳು ರೋಗ ನಿರೋಧಕ ಶಕ್ತಿ ಬೆಳೆಸಿಕೊಳ್ಳಲೂ ಸಹಾಯಕವಾಗುತ್ತದೆ.

ಆರೋಗ್ಯ ನಿಯಮಗಳನ್ನು ಸರಿಯಾಗಿ ಅನುಸರಿಸುವುದು ರೋಗ ನಿರೋಧಕ್ಕೆ ಸಹಕಾರಿ. ಸೋಂಕಿರಬಹುದಾದ ಜಾಗಗಳು, ಹಿಕ್ಕೆ ಹಾಕುವ ಹಳ್ಳ (ತಿಪ್ಪೆ)

ಇವುಗಳಿಂದ ಕೋಳಿಗಳನ್ನು ದೂರವಿಡಿ. ಹಿಕ್ಕೆಯನ್ನು ಕಾಲಕಾಲಕ್ಕೆ ತೆಗೆದು ಮನೆ ಹಾಗೂ ಸಲಕರಣೆಗಳನ್ನು ಸ್ವಚ್ಛವಾಗಿಡಬೇಕು. ತೇವವಾದ ಕೋಳಿಗೂಡನ್ನು ಕೂಡಲೆ ತೆಗೆದುಬಿಡಿ. ಮೇವಿನ ಬುಟ್ಟಿ ಹಾಗೂ ನೀರುಣಿಕಗಳ ಕೆಳಗೆ ತಂತಿಬಲೆ ಹಾಕಿ ಕೋಳಿಮನೆಗೆ ಸರಿಯಾದ ವಾತಾಯನ ಒದಗಿಸಿ.

ರೋಗ ಕಂಡುಬಂದಕೂಡಲೆ ಹತೋಟಿ ಕ್ರಮಗಳನ್ನು ಕೈಗೊಳ್ಳಿ. ರೋಗದ ಚಿಹ್ನೆಗಳು ಕಂಡ ಕೋಳಿಗಳನ್ನು ಕೂಡಲೇ ಬೇರ್ಪಡಿಸಿ ಜಾಗವನ್ನು ಸ್ವಚ್ಛಮಾಡಿ ಕ್ರಿಮಿ ನಾಶಕವನ್ನು ಸಿಂಪಡಿಸಿ. ಕೋಳಿಗೂಡು ಹಾಗೂ ರೋಗದ ಕೋಳಿಗಳನ್ನು ಸಾಕಿದ್ದ ಜಾಗ ತತ್ತಿ ಚೀಲಗಳನ್ನು ಹೊಂದಿರಬಹುದಾದುದರಿಂದ ಕೋಳಿ ಗೂಡನ್ನು ಬದಲಾಯಿಸಿ ಇಲ್ಲವೆ ಕೋಳಿಗಳನ್ನು ಬೇರೆ ಸ್ವಚ್ಛವಾದ ಜಾಗಕ್ಕೆ ಬದಲಾಯಿಸಿ. ಕುಡಿಯುವ ನೀರಿಗೆ ಕಾಯ್ಬೀಜಾಣುಜೀವಿನಾಶಕ ಔಷಧಗಳನ್ನು ಬೆರಸಿ.

ಮೇವು, ನೀರುಗಳಿಗೆ ಸೇರಿಸಬಹುದಾದ ಸಲ್ಫ ಮದ್ದುಗಳು, ಗೌರಿಪಾಷಾಣ, ಜೀವಿರೋಧಕಗಳೇ ಮುಂತಾದ ಕಾಯ್ಬೀಜಾಣುಜೀವಿನಾಶಕ ಔಷಧಗಳಿಂದ ಚಿಕಿತ್ಸೆ ಫಲಿಸಬಹುದಾದರೂ ಪ್ರಾಯೋಗಿಕವಲ್ಲ. ಆದುದರಿಂದ ನಿರೋಧವೇ ಬಹು ಮುಖ್ಯ.

ಪಾರಿಭಾಷಿಕ ಪದಗಳು :

ಕಾಯ್ಬೀಜಾಣುಜೀವಿ ರೋಗ coccidiosis
ಕಾಯ್ಬೀಜಾಣುಜೀವಿ coccidia
ಮುಂಜೀವಿ protozoan
ಮೂಗರುಳು caecum
ಪರಪಿಂಡಿ parasite
ತತ್ತಿಚೀಲ oocyst
ಮಿಣಿದರ್ಶಕ microscope
ಜೀವದ್ರವ್ಯ protoplasm
ನಬ್ಬೀಜ nucleus
ಬೀಜಕಣಜೀವಿ sporozoite
ಬೀಜಕಣ spore
ಪಡಿಜೀವಿ merozoite
ನೀರುಣಿಕ waterer
ಜೀವಿರೋಧಕ antibiotic

ಅದಾವಾಗ

ಮೂಲ : ಬಿಷ್ಣು ದೆ
ಅನುವಾದ : ಮೀರಾ ಚಕ್ರವರ್ತಿ
ಬಿ. ವೈ. ಲಲಿತಾಂಬ

ಅದಾವಾಗ ಹಾಡಿರುವೆ ನಾನು ನಿನ್ನ ಕೀರ್ತನೆಯಲ್ಲಿ
ಕೃತಾರ್ಥ ದ್ವಿಪದಿಗಳ,
ಪದಾವಳಿ ತೊಳೆದು ಹೋಗಿದೆ ಅನೇಕ ಶ್ರಾವಣಗಳಲ್ಲಿ ;
ಸ್ಮೃತಿಮಾತ್ರ ಉಳಿದಿದೆ ಅದರ.

ಬಿಸಿಲಲ್ಲಿ ನೀರಲ್ಲಿ ಆದೇ ಸ್ಮೃತಿ ತೊಲಗುವುದಿಲ್ಲ, ವಯಸ್ಸೊಂದು
ದುರಂತ ಕಬ್ಬಿಣದ್ದು.
ಮಾತ್ರ ತಗುಲಿಕೊಂಡಿದೆ ಮನದಲ್ಲಿ ವ್ಯಥೆಯ ಸ್ನಾಯುವಿನಲ್ಲಿ
ತುಕ್ಕಿನ ಸಡಗರ.

ಕೊಲೆ

ಜಿ. ಎಸ್. ಶಿವರುದ್ರಪ್ಪ

ಯಾರನ್ನಾದರೂ ಕೊಲ್ಲುವುದಿದೆಯಲ್ಲ,
ಅದಕ್ಕಿಂತ ಸುಲಭವಾದದ್ದು ಮತ್ತೊಂದಿಲ್ಲ ;
ತನ್ನನ್ನು ತಾನು ಕೊಂದುಕೊಳ್ಳುವುದು ಬಲುಕಷ್ಟ
ಮತ್ತೊಬ್ಬರನ್ನು ಕೊಲ್ಲುವುದು ಎಲ್ಲರಿಗೂ ಇಷ್ಟ.

ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂ – ಒಂದು ಟಿಪ್ಪಣಿ

ಕ. ವೆಂ. ರಾಜಗೋಪಾಲ್

1

ಮಾನ್ಯಖೇಟವನ್ನು ಕುರಿತ ಒಂದು ಟಿಪ್ಪಣಿಯನ್ನು ಪ್ರಬುದ್ಧ ಕರ್ಣಾಟಕವು ಪ್ರಕಟಿಸಿದೆ. ಆಗ 'ಖೇಟ' ಪದದ ವಿಚಿತ್ರವಾದ ಅರ್ಥಕ್ಕಾಗಿ ನನ್ನ ಶೋಧನೆಯು ನಡೆದಿತ್ತು. ನಾಸಿಕದ ಗುಹಾಂತರ ದೇವಾಲಯಗಳಲ್ಲಿ ದೊರಕಿದ ಶಾಸನಗಳ ಆಧಾರದಮೇಲೆ ಮತ್ತು ಪ್ರಾಕೃತ ವ್ಯಾಕರಣದ ರೀತಿ ನೀತಿಗಳನ್ನೂ ಗಮನಿಸಿ ಕ್ಷೇತ್ರ > ಖೇಟ (ಸಂ.), ಖೇಡ (ಕನ್ನಡ) ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಾಯಿತು. ಇದರಿಂದ ವಡ್ಡಾರಾಧನೆ ಮತ್ತು ಪಂಪನ ಕೃತಿಗಳಲ್ಲಿ ವಿಪುಲವಾಗಿ ಪ್ರಯೋಗವಾಗಿರುವ 'ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂ' – ಎಂಬ ಪದಮಾಲೆಯನ್ನು ಕುರಿತು ಗ್ರಾಮ ನಗರ, ಖೇಡ ಖರ್ವಡ, ಮಡಂಬ, ಪತ್ತನ ದ್ರೋಣಾಮುಖ – ಎನ್ನುವಂತೆ ಇವನ್ನು ವಿಭಜಿಸಲು ಅನುಕೂಲವಿರುವುದನ್ನೂ ತೋರಿಸಲು ಸಾಧ್ಯವಾಯಿತು. ಆಗ ನನಗಿನ್ನೂ ಪೂರ್ವ ಪುರಾಣಂ (ಜಿನಸೇನಾಚಾರ್ಯ ವಿರಚಿತ) ಗ್ರಂಥವು ದೊರಕಿಲಿಲ್ಲ. ಆದುದರಿಂದ ಈಗ ಆ ಗ್ರಂಥದ ಆಧಾರದಿಂದ ವಿವರವನ್ನು ನೀಡುತ್ತಿದ್ದೇನೆ.

'ಕ್ಷೇತ್ರ' ಪದವು ಖೇಡ ಮತ್ತು ಖೇಟಗಳಾಗಿದೆಯೆಂದು ಹೇಳಲು ಅನುಕೂಲವಾಗಿರುವಂತೆ ಪೂರ್ವ ಪುರಾಣಂ ಕೃತಿಯಲ್ಲಿ ಇನ್ನೂ ಹೆಚ್ಚಿನ ವಿವರಗಳಿವೆ. ಪಂಪನು ಈ ವಿವರವನ್ನೂ ತನ್ನ ಆದಿಪುರಾಣಂ – ನಲ್ಲಿ ಒಂದೆಡೆ ವಿವರಿಸಿದ್ದಾನೆ. ಅದನ್ನೇ ಡಿ. ಎಲ್. ನರಸಿಂಹಾಚಾರ್ಯರೂ ಪರಿಶೀಲಿಸಿದ್ದಾರೆಯಷ್ಟೆ. ಆದರೂ ಹಲವು ರೀತಿಗಳಲ್ಲಿ ವಿವರಣೆಯು ಸಾಲದಾಗಿದೆ.

ಪೂರ್ವ ಪುರಾಣಂ – ಕನ್ನಡಭಾವದೀಪಿಕಾವ್ಯಾಖ್ಯೆಯೊಳ್ ಭಗವತ್ಸಾಮ್ರಾಜ್ಯ ವರ್ಣನೆಯೆಂಬ ಹದಿನಾರನೆಯ ಪರ್ವ ಪುಟ 424 ಭಾಗ 1.

ಮಧ್ಯೇ ಜನಪದಂರೇಜೊ ರಾಜಧಾನ್ಯಃ ಪರಿಷ್ಕೃತಾಃ ।
ವಪ್ರ ಪ್ರಾಕಾರಪರಿಖಾ ಗೋಪುರಾಟ್ಟಾಲಕಾದಿಭಿಃ 162

ದೇಶ ಮಧ್ಯದಲ್ಲಿ ಅಗಳು ಕೋಟೆ ಕಂದರ ಗೋಪುರ ಉಪ್ಪರಿಗೆಯ ಮನೆ ಮೊದಲಾದುವುಗಳಿಂದ ಅಲಂಕೃತವಾದ ರಾಜಧಾನಿಗಳು ಪ್ರಕಾಶಿಸಿದವು.

ತಾನಿ ಸ್ಥಾನೀಯ ಸಂಜ್ಞಾನಿ ದುರ್ಗಾಣ್ಯಾವೃತ್ಯ ಸರ್ವತಃ ।
ಗ್ರಾಮಾದೀನಾಂ ನಿವೇಶೋಭಾದ್ಯಥಾಭಿಹಿತ ಲಕ್ಷಣಾಂ 163

ಸ್ಥಾನೀಯವೆಂದು ಹೆಸರುಳ್ಳ ಆ ರಾಜಧಾನಿಗಳನ್ನೂ ದುರ್ಗಗಳನ್ನೂ ಸುತ್ತಲೂ ಆವರಿಸಿಕೊಂಡು ಯಥೋಕ್ತವಾದ ಲಕ್ಷಣವುಳ್ಳ ಗ್ರಾಮ ಮೊದಲಾದವುಗಳ ರಚನೆ ಮಾಡುವುದು.

ಗ್ರಾಮಾ ವೃತಿ ಪರಿಕ್ಷೇಪಮಾತ್ರಾಸ್ಸ್ಯು ರುಚಿತಾಶ್ರಯಾಃ ।
ಶೂದ್ರ ಕರ್ಷಕಭೂಯಿಷ್ಠಾಃ ಸಾರಾಮಾಃ ಸಜಲಾಶಯಾಃ 164

ಸುತ್ತಲೂ ಬೇಲಿಯೂ ಯೋಗ್ಯವಾದ ಮನೆಗಳೂ ಹೆಚ್ಚಾಗಿ ಶೂದ್ರರೂ ಕೃಷೀವಲರೂ ಉಳ್ಳ ಗ್ರಾಮಗಳು ಉದ್ಯಾನ ಸಹಿತಗಳೂ ಸರೋವರಸಹಿತಗಳೂ ಆಗಿದ್ದವು.

ಗ್ರಾಮಃ ಕುಲಶತೇನೇಷ್ಟೋ ನಿಕೃಷ್ಟಃ ಸಮಧಿಷ್ಠಿತಃ ।
ಪರಸ್ತತ್ಪಂಚಶತ್ಯಾ ಸ್ಯಾತ್ಸು ಸಮೃದ್ಧ ಕೃಷೀವಲಃ 165

ನೂರು ಮನೆಗಳ ಸಮುದಾಯವು ಜಘನ್ಯ (ಚಿಕ್ಕ) ಗ್ರಾಮವೆನಿಸುತ್ತದೆ. ಹೆಚ್ಚಾಗಿ ಕೃಷೀವಲರುಳ್ಳ ಐನೂರು ಮನೆಗಳ ಸಮುದಾಯವು ಉತ್ಕೃಷ್ಟ (ದೊಡ್ಡ) ಗ್ರಾಮವೆನಿಸುತ್ತದೆ.

ಕ್ರೋಶದ್ವಿಕ್ರೋಶ ಸೀಮಾನೋ ಗ್ರಾಮಾಃ ಸ್ಯುರಧಮೋತ್ತಮಾಃ ।
ಸಂಪನ್ನ ಸಸ್ಯ ಸುಕ್ಷೇತಾಃ ಪ್ರಭೂತೆಯವ ಸೋದಕಾಃ 166

ಫಲಭರಿತವಾದ ಪೈರುಗಳ ಉತ್ತಮ ಕ್ಷೇತ್ರಗಳುಳ್ಳವೂ ಅಧಿಕವಾದ ಹುಲ್ಲು ನೀರೂ ಉಳ್ಳವೂ ಆದ ಆ ಜಘನ್ಯೋತ್ಕೃಷ್ಟ ಗ್ರಾಮಗಳು ಒಂದು ಅಥವಾ ಎರಡು ಹರದಾರಿ ಸರಹದ್ದುಗಳುಳ್ಳವಾಗಿರುವುವು.

ಸದಿದ್ಗಿರಿ ದರೀ ಭೃಷ್ಟಿ ಕ್ಷೀರಕಂಟಕ ಶಾಖಿನಃ ।
ವನಾನಿ ಸೇತವಶ್ಚೇತಿ ತೇಷಾಂ ಸಿಮೋಪಲಕ್ಷಣಂ 167

ನದೀ ಪರ್ವತ ಗುಹೆ ಸ್ಮಶಾನ ಹಾಲು ಬರುವ ಮರಗಳು ಮುಳ್ಳುಗಳುಳ್ಳ ಮರಗಳು ವನಗಳು, ಸೇತುವೆಗಳು ಇವುಗಳೆಲ್ಲ ಆ ಗ್ರಾಮಗಳ ಅವಧಿ (ಎಲ್ಲೆ) ಗಳಾಗಿವೆ.

ತತ್ಕರ್ತೃ ಭೋಕ್ತೃ ನಿಯಮೋ ಯೋಗಕ್ಷೇಮಾನು ಚಿಂತನಂ ।
ವಿಷ್ಟಿದಂಡಕರಾಣಾಂಚ ನಿಬಂಧೋ ರಾಜಸಾದ್ಭವೇತ್ 168

ಆ ಗ್ರಾಮಗಳ ನಿರ್ಮಾಣ ಕಾರ್ಯ ಅವುಗಳ ಅನುಭೋಗ ಯೋಗಕ್ಷೇಮ ಚಿಂತನೆ ಬಿಟ್ಟಿಹಿಡಿಯುವಿಕೆ ಶಿಕ್ಷಿಸುವಿಕೆ ಕಂದಾಯವನ್ನು ತೆಗೆದುಕೊಳ್ಳುವಿಕೆ ಇವುಗಳ ಸಂಬಂಧ ಇವೆಲ್ಲ ರಾಜಾಧೀನವಾಗಿರುವುವು.

ಪರಿಖಾಗೋಪುರಾಟ್ಟಾಲ ವಪ್ರಪ್ರಾಕಾರ ಮಂಡಿತಂ ।
ನಾನಾ ಭವನ ವಿನ್ಯಾಸಂ ಸೋದ್ಯಾನಂ ಸಜಲಾಶಯಂ 169

ಕಂದಕ ಗೋಪುರ ಉಪ್ಪರಿಗೆಯ ಮನೆ ಅಗಳುಕೋಟೆ ಇವುಗಳಿಂದ ಅಲಂಕೃತವೂ ನಾನಾ ವಿಧವಾದ ಮನೆಗಳ ರಚನೆಯುಳ್ಳದೂ ಉದ್ಯಾನವುಳ್ಳದೂ ಸರೋವರ ಸಹಿತವೂ ಪ್ರಶಸ್ತವೂ ಯೋಗ್ಯಪ್ರದೇಶದಲ್ಲಿರುವುದೂ ಪೂರ್ವೋತ್ತರ ದಿಕ್ಕುಗಳಲ್ಲಿ ಹರಿಯುತ್ತಿರುವ ನೀರುಳ್ಳದೂ ಪ್ರಧಾನ ಪುರುಷರಿಗೆ ಉಚಿತವೂ ಆದ ಊರಿಗೆ ಪುರವೆಂದು ಹೆಸರು.

ಪುರಮೇವಂ ವಿಧಂ ಶಸ್ತಮುಚಿತೋದ್ದೇಶಸುಸ್ಥಿತಂ ।
ಪೂರ್ವೋತ್ತರ ಪ್ಲವಾಂಭಸ್ಕಂ ಪ್ರಧಾನ ಪುರುಷೋಚಿತಂ 170

(ಇದರ ವ್ಯಾಖ್ಯಾನವು ಹಿಂದಿನ ಶ್ಲೋಕಾರ್ಥದಲ್ಲಿ ಸೇರಿದೆ - ನೋಡಿ)

ಸರಿದ್ಗಿರಿಭ್ಯಾಂ ಸಂರುದ್ಧಂ ಖೇಡಮಾಹುರ್ಮನೀಷಿಣಃ ।
ಕೇವಲಂ ಗಿರಿಸಂರುದ್ಧಂ ಖರ್ವಟಂ ತತ್ಪ್ರಚಕ್ಷತೇ 171

ನದಿಯಿಂದಲೂ ಪರ್ವತದಿಂದಲೂ ಸುತ್ತಲ್ಪಟ್ಟ ಗ್ರಾಮಕ್ಕೆ ವಿದ್ವಾಂಸರು ಖೇಡವೆಂದು ಹೇಳುತ್ತಾರೆ. ಕೇವಲ ಪರ್ವತಗಳಿಂದ ಸುತ್ತಲ್ಪಟ್ಟ ಊರಿಗೆ ಖರ್ವಟವೆಂದು ಹೇಳುತ್ತಾರೆ.

ಮಡಂಬಮಾಮನಂತಿ ಜ್ಞಾಃ ಪಂಚಗ್ರಾಮಶತೀವೃತಂ ।
ಪತ್ತನಂತತ್ಸಮುದ್ರಾಂತೇ ಯನ್ನೌಭಿರವತೀರ್ಯತೇ 172

ಐನೂರು ಗ್ರಾಮಗಳಿಂದ ಸುತ್ತಲ್ಪಟ್ಟ ಊರಿಗೆ ಜ್ಞಾನಿಗಳು ಮಡಂಬವೆಂದು ಹೇಳುತ್ತಾರೆ. ಸಮುದ್ರದ ಸಮೀಪದಲ್ಲಿ ಹಡಗುಗಳಿಂದ ಇಳಿಯಲರ್ಹವಾದ ಊರಿಗೆ ಪತ್ತನವೆಂದು ಹೆಸರು.

ಭವೇದ್ದ್ರೋಣಮುಖಂ ನಾಮ್ನಾ ನಿಮ್ನಗಾತಟಮಾಶ್ರಿತಂ ।
ಸಂವಾಹಸ್ತುಶಿರೋವ್ಯೂಢಧಾನ್ಯ ಸಂಚಯ ಇಷ್ಯತೇ 173

ನದಿಯ ದಡದಲ್ಲಿರುವ ಗಾಮಕ್ಕೆ ದ್ರೋಣಮುಖವೆಂದು ಹೆಸರು. ಮಸ್ತಕದವರೆಗೆ (ಆಳುದ್ದ) ಧಾನ್ಯರಾಶಿಗಳಿರುವ ಊರಿಗೆ ಸಂವಾಹವೆಂದು ಹೆಸರು.

ಪುಟಭೇದ ಸಭೇದಾನಾಮಮೀಷಾಂ ಚ ಕ್ವಚಿತ್ ಕ್ವಚಿತ್ ।
ಸನ್ನಿವೇಶೋಭವತ್ಪೃಥ್ವ್ಯಾಂ ಯಥೋದ್ದೇಶಮಿತೋಮುತಃ 174

ಉದ್ದೇಶಾನುಸಾರವಾಗಿ ಪೃಥ್ವಿಯಲ್ಲಿ ಈ ಪಟ್ಟಣ ಭೇದಗಳ ರಚನೆಯು ಅಲ್ಲಲ್ಲಿ ಈ ಕಡೆಗಾಕಡೆಗೆ ಉಂಟಾದುದು.

ಶತಾನ್ಯಷ್ಟೌ ಚ ಚತ್ವಾರಿ ದ್ವೇ ಚ ಸ್ವಗ್ರಾಮಸಂಖ್ಯಯಾ ।
ರಾಜಾಧಾನ್ಯಸ್ತಥಾದ್ರೋಣಮುಖ ಖರ್ವಟಯೋಃ ಕ್ರಮಾತ್ 175

ಎಂಟುನೂರು ಗ್ರಾಮಗಳಿಂದ ರಾಜಧಾನಿಯೂ ನಾಲ್ಕುನೂರು ಗ್ರಾಮಗಳಿಂದ ದ್ರೋಣಾಮುಖವೂ ಇನ್ನೂರು ಗ್ರಾಮಗಳಿಂದ ಖರ್ವಟವೂ ಆಗುವುವು.

ದಶಗ್ರಾಮ್ಯಾಸ್ತು ಮಧ್ಯೇ ಯೋ ಮಹಾನ್ಗ್ರಾಮಃ ಸ ಸಂಗ್ರಹಃ ।
ತಥಾ ಘೋಷಾಕರಾದೀನಾಮಪಿ ಲಕ್ಷ್ಮ ವಿಕಲ್ಪ್ಯತಾಂ 176

ಹತ್ತು ಗ್ರಾಮಗಳ ಗುಂಪಿನ ಮಧ್ಯದಲ್ಲಿರುವ ದೊಡ್ಡ ಗ್ರಾಮಕ್ಕೆ ಸಂಗ್ರಹವೆಂದು ಹೆಸರು. ಹಾಗೆಯೇ ಗೊಲ್ಲರ ಹಳ್ಳಿ ಗಣಿ ಮೊದಲಾದುವುಗಳ ಲಕ್ಷಣವನ್ನೂ ಊಹಿಸಿಕೊಳ್ಳಬೇಕು.

ಪುರಾಂ ವಿಭಾಗಮಿತ್ಯುಚ್ಚೈಃ ಕುರ್ವನ್ಗೀರ್ವಾಣ ನಾಯಕಃ ।
ತದಾ ಪುರಂದರ ಖ್ಯಾತಿಮಗಾದನ್ವರ್ಥ ತಾಂಗತಾಂ 177

ಈ ರೀತಿಯಾಗಿ ದೇವೇಂದ್ರನು ಪುರಗಳ ವಿಭಾಗವನ್ನು ಮಾಡಿದುದರಿಂದ ಆಗ ಅವನು ಸಾರ್ಥಕವಾದ ಪುರಂದರನೆಂಬ ಖ್ಯಾತಿಯನ್ನು ಹೊಂದಿದನು.

ಇದನ್ನು 'ದೇವೇಂದ್ರಕೃತ' ವೆಂದು ಹೇಳಲಾಗಿದೆ. ಪಂಪನು ತನ್ನ 'ಆದಿಪುರಾಣಂ' ಕೃತಿಯ ಅಷ್ಟಮಾಶ್ವಾಸಂ - ಭಾಗದಲ್ಲಿ ಇದನ್ನೇ ಅನುಸರಿಸಿ ಗದ್ಯ(ವಚನ)ದಲ್ಲಿ ಬರೆದಿದ್ದಾನೆ—

ತಜ್ಜನಪದ ಮಧ್ಯಂಗಳೊಳ್ ಪರಿಖಾ ವಪ್ರಪ್ರಾಕಾರ ಗೋಪುರಾಟ್ಟಾಲಕಾಲಂಕೃತಂಗಳಪ್ಪ ರಾಜಧಾನಿಗಳುಮನವಱ ಬಳಸಿಯುಂ ಯಥೋಚಿತ ಪ್ರದೇಶಂಗಳೊಳೇಕವೃತ್ತಿ ಪರಿವೃತಂಗಳುಮನತಿ ಸಮೃದ್ಧ ಕೃಷೀವಲಕುಲಾಧಿಷ್ಠಿತಂಗಳುಮಭಿರಾಮಜಲಾಶಯಂಗಳುಮಂ ಪ್ರಭೂತಯವ ಸೌಗಂಧಕಂಗಳುಮಂ ಸಮಸ್ತ ಸಸ್ಯಸಂಪತ್ ಸಂಪನ್ನಸುಕ್ಷೇತ್ರಂಗಳುಮಂ ಕ್ರೋಶದ್ವಿಕ್ರೋಶ ಸೀಮ್ನೈಕ ಪಂಚಶತ ಕುಟುಂಬಿಕುಲಾವಿರ್ಭಾವಿತಾಧಮೋತ್ತಮಭೇದಂಗಳುಮಂ ಸರಿದ್ಗಿರಿದರೀ ಭೂರುಹಸೇತು ವನಸೀಮೋಪಲಕ್ಷಿತಂಗಳುಮಪ್ಪ ಮಹಾಗ್ರಾಮಂಗಳುಮಂ ಪೂರ್ವೋತ್ತರಾಂಭಃಪ್ಲವಂಗಳುಮಂ ಪರಿಖಾ ವಪ್ರಪ್ರಕಾರ ಗೋಪುರಾಟ್ಟಾಲಪರಿವೃತಂಗಳುಮಂ ನಾನಾಭವನ ವಿನ್ಯಾಸೋದ್ಯಾನ ಜಲಾಶಯಂಗಳುಮಂ ಪ್ರಧಾನ ಪುರುಷಾಧ್ಯಾಸಿತಂಗಳಪ್ಪ ಪುರಂಗಳುಮಂ ಗಿರಿಸರಿತ್ಸಂರುದ್ಧಂಗಳಪ್ಪ ಖೇಟಂಗಳುಮಂ ಉರ್ವೀಧರನಿರುದ್ಧಂಗಳಪ್ಪ ಖರ್ವಡಂಗಳುಮಂ ಪಂಚಶತ ಗ್ರಾಮ ಪರೀತಂಗಳಪ್ಪ ಮಡಂಬಂಗಳುಮಂ ಸಮುದ್ರೋತ್ತೀರ್ಣ ನಿವಾಸಂಗಳಪ್ಪ ಪಟ್ಟಣಂಗಳುಮಂ ನಿಮ್ನಗಾತಟನಿಕಟವರ್ತಿಗಳಪ್ಪ ದ್ರೋಣಮುಖಂಗಳುಮಂ ಶಿಲಾಪ್ರಾಯಧಾನ್ಯ ಸಂಚಯೋಪಭೋಗಿ ಜನ ನಿವಾಸಿಗಳಪ್ಪ ಸಂವಾಹಂಗಳುಮಂ ಘೋಷಾಕರ ಸಂಗ್ರಹಾಕರ ಗೋವ್ರಜಂಗಳುಮನವನಾಳ್ದ ತೆಱಗೊಳ್ವ ಬಟ್ಟೆವೆಸಕೆಯಿಸಿ ಕೊಳ್ವಭೋಗಿಪ ನಿಯೋಗಂಗಳುಮ ನಿಂತು ಮಾಡಿ

ಗುರು ಬೆಸಸೆ ಸಮೆದು ಪಲವುಂ
ಪುರಂಗಳಂ ದೇವನಿಡೆ ಪುರಂದರವೆಸರಂ !
ಧರಿಯಿಸಿ ಭಕ್ತಿಭರಾನತ
ಕಿರೀಟನಮರೇಂದ್ರನಮರ ಲೋಕಕ್ಕೊಗೆದಂ ॥ 64 ॥

ಆದುದರಿಂದ ಈ ವಿವರವು ಪೂರ್ವ ಪುರಾಣಂ - ಕೃತಿಯ ಕಾಲಕ್ಕೆ (ಸು. ಕ್ರಿ. ಶ. 800) ಸೇರುತ್ತದೆ. ಇದಕ್ಕಿಂತ ಹಳೆಯ ದಾಖಲೆ ಕನ್ನಡಕ್ಕೆ ಬೇರೆಯಾಗಿ ದೊರಕುವುದಿಲ್ಲ.

ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂ – ಪದಮಾಲೆಯಲ್ಲಿರುವ ಏಳು ಪದಗಳೂ ಗ್ರಾಮದ ಅವಸ್ಥಾಂತರಗಳೆಂದು ಡಿ. ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. ಗ್ರಾಮಕೋಶಗಳಲ್ಲಿ ಇವನ್ನೆಲ್ಲಾ ಸೇರಿಸಿದಂತೆ ಪೂರ್ವ ಪುರಾಣಂ - ದಿಂದಲೂ ತೋರುತ್ತದೆ. ಆದರೆ ಇವನ್ನೆಲ್ಲಾ ವಾಸಸ್ಥಳಗಳು ಮತ್ತು ಜೈನ ಯತಿಯು ಮುಟ್ಟುತ್ತಿದ್ದ ಸ್ಥಳಗಳೆಂದು ಪರಿಗಣಿಸುವುದು ಸೂಕ್ಷ್ಮವಾದ ಮತ್ತು ಅರ್ಥಪೂರ್ಣವಾದ ವ್ಯತ್ಯಾಸವನ್ನು ತರುತ್ತದೆ. ಅವಶ್ಯಬಿದ್ದಾಗ ಜೈನಯತಿಯು ಇಲ್ಲೆಲ್ಲಾ ತಂಗುತ್ತಿದ್ದಿರಬೇಕು ಮತ್ತು ಚರಿಗೆಗೆ ಹೋಗುವವನಿರಬೇಕು.

ಗ್ರಾಮವನ್ನು 100 ರಿಂದ 500 ಮನೆಗಳಿರುವ ಸ್ಥಳಗಳೆಂದು ಮೇಲಿನ ವಿವರಣೆಯಲ್ಲಿ ಕಾಣುತ್ತೇವೆ. ಖೇಡ ಮತ್ತು ಖರ್ವಡಗಳನ್ನು ವಿವರಿಸುವಾಗ 'ಗಿರಸರಿತ್‌ಸಂರುದ್ಧಂಗಳಪ್ಪ ಖೇಟಂಗಳುಮಂ' ಎಂದೂ 'ಉರ್ವೀಧರನಿರುದ್ಧಂಗಳಪ್ಪ ಖರ್ವ್ವಡಂಗಳುಮಂ' ಎಂದೂ ಸ್ಪಷ್ಟವಾಗಿರುವಲ್ಲಿ ಖೇಟ = ಖೇಡವು ಬೆಟ್ಟದ ತಪ್ಪಲಿನ ನದಿಯ ಆಶ್ರಯವುಳ್ಳ ಹಳ್ಳಿಯಾಗುತ್ತದೆ. ಉಳುವ ಭೂಮಿಯನ್ನು ಕ್ಷೇತ್ರವೆಂದು ವೇದಗಳಲ್ಲಿ ಕರೆಯಲಾಗಿದೆ. ಆದುದರಿಂದ ಜೈನಯತಿಯು ಮುಟ್ಟುವ ಪುಣ್ಯಕ್ಷೇತ್ರಗಳನ್ನು ನೆನೆದು ಇವುಗಳಲ್ಲಿ ಕೋಟೆಯಿರಬೇಕಾದ ಅವಶ್ಯಕತೆಯಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬಹುದು. ಖರ್ವಡವು ಬೆಟ್ಟದ ಮೇಲಿನ ಜೈನಾಶ್ರಮವಿರಬೇಕು – ಏಕೆಂದರೆ ನದಿಯ ಮಾತೇ ಬರುವುದಿಲ್ಲ.

ಖರ್ವಡಕ್ಕೆ ಮತ್ತೊಂದು ಖಚಿತವಾದ ಆಧಾರವನ್ನು ಶಾಸನದ ಆಧಾರದಿಂದ ಕೊಡಬಹುದಾಗಿದೆ - ಇದು ಬೆಳಗಾಂ ಡಿಸ್ಟ್ರಿಕ್ಟಿನ ಸೌದತ್ತಿ ತಾಲ್ಲೂಕಿನ ಸಿರಸಿಂಗಿಯೆಂಬೂರಿನ ಕಾಳಮ್ಮನ ದೇವಸ್ಥಾನದಲ್ಲಿರುವ ಶಾಸನ. ಇದರ ಕಾಲ ಕ್ರಿ.ಶ. 1186 (ಶಕ 1108, ವಿಶ್ವಾವಸು, ಪುಷ್ಯ, ಪೂರ್ಣಿಮೆ, ಸೋಮವಾರ) Karnataka Inscriptions Vol. I Page 40. ಪ್ರೊ॥ ಜಿ. ವೆಂಕಟಸುಬ್ಬಯ್ಯನವರು ತಮ್ಮ 'ಕನ್ನಡ ಶಾಸನ ಪರಿಚಯ'ದಲ್ಲಿ ಈ ಶಾಸನವನ್ನು ಸೇರಿಸಿದ್ದಾರೆ. ಇದರ ವಿಶೇಷವೆಂದರೆ 12ನೇ ಶತಮಾನದ ಕೊನೆಯ ಭಾಗದಲ್ಲಿ ಕೂಡ 'ಖರ್ವಡ' ಪದದ ಅನ್ವಯವನ್ನು ಇಲ್ಲಿ ಕಾಣುವುದಾಗಿದೆ. ಇದರ 22ನೆಯ ಸಾಲಿನಲ್ಲಿ ಹೀಗಿದೆ–

ಅದೇದೊರೆತೆನೆ ॥ ಪಬ್ಬಿರೆ ಮೂಱುಂದೆಸೆಯೊಳ್ ಪರ್ವತಕುಳವೊಂದೆ
ದೆಸೆಯೆ ಬಯಲಾಗಿರೆ ತಾಂ ಖರ್ವ್ವಡವದಱೊಳುಕಿಂ
ನೀರುರ್ವ್ವರಲಂತದುವೆ ದೇವದುರ್ಗ್ಗವೆನಿಕ್ಕುಂ ॥
ಬಳಸಿದ ಭೂರುಹಂಕು-

ಈ ಋಷ್ಯಶೃಂಗಪುರವು ಮೊದಲಿಗೆ ಖರ್ವಡವಾಗಿದ್ದು ತೀರ್ಥಕ್ಷೇತ್ರವಾಗಿರಬಹುದು. ಕಾಲಕ್ರಮೇಣ ಇದರ ಅಸ್ತಿತ್ವವು ಬೆಳೆದಂತೆ ತೋರುತ್ತದೆ.

2

"ಪೂರ್ವ ಪುರಾಣಂ"[1] ಮತ್ತು "ಆದಿಪುರಾಣಂ" ಕೃತಿಗಳಲ್ಲಿ ಒಂದೇ ಆಗಿರುವ ಗ್ರಾಮ... ದ್ರೋಣಾಮುಖಂ... ವಿಚಾರವು ಅಂದಿನ ರಾಜಕೀಯ ಅಂದರೆ ರಾಷ್ಟ್ರಕೂಟರ ರಾಜ್ಯವ್ಯವಸ್ಥೆಯನ್ನೂ ಸೂಚಿಸುತ್ತದೆ. ಆದುದರಿಂದ, 800 ಗ್ರಾಮಗಳಿಂದ ರಾಜಧಾನಿ, 500 ಗ್ರಾಮಗಳಿಂದ ಮಡಂಬ, 400 ಗ್ರಾಮಗಳಿಂದ ದ್ರೋಣಾಮುಖ, 200 ಗ್ರಾಮಗಳಿಂದ ಖರ್ವಟ, 100 ರಿಂದ 500 ಮನೆಗಳ ಸಮುದಾಯವು ಗ್ರಾಮ – ಎಂಬ ರಾಜಕೀಯ ಲೆಖ್ಖಾಚಾರವು ಕಂಡು ಬರುತ್ತದೆ. ಇಂತಹ, ಆಳ್ವಿಕೆಗೆ ಅನುಕೂಲವಾಗುವ ರಚನೆಯನ್ನು ಕೌಟಿಲ್ಯನ ಅರ್ಥಶಾಸ್ತ್ರವು[2] ತಿಳಿಯಪಡಿಸುತ್ತದೆ.

800	ಗ್ರಾಮಗಳ	ಮಧ್ಯದ ಮಹಾಗ್ರಾಮಕ್ಕೆ	"ಸ್ಥಾನೀಯ"
400	"	"	"ದ್ರೋಣಮುಖ"
200	"	"	"ಕಾರ್ವಟಿಕ"
10	"	"	"ಸಂಗ್ರಹಣ"

ಸುವರ್ಣಾಧ್ಯಕ್ಷನು, ಗಣಕರು ಮತ್ತು ಸ್ಥಾನಿಕರೆಂಬ ಅಧಿಕಾರವರ್ಗವನ್ನೂ ಈ ಗ್ರಂಥವು ಗ್ರಾಮಗಳ ಗಣನೆಯ ಆಧಾರದ ಮೇಲೆ ತಿಳಿಸುತ್ತದೆ. ಇದರಲ್ಲಿ 5, 10 ಗ್ರಾಮಗಳ ಅಧಿಕಾರಿಗೆ 'ಸ್ಥಾನಿಕ'ವೆಂಬುದು ಸ್ಪಷ್ಟವಾಗಿದೆ. ಕೌಟಲೀಯ ಅರ್ಥಶಾಸ್ತ್ರದಲ್ಲಿ ಅಧ್ಯಕ್ಷಪ್ರಚಾರವೆಂಬ ದ್ವಿತೀಯಾಧಿಕರಣದಲ್ಲಿ ಜನಪದ ನಿವೇಶವೆಂಬ ಒಂದನೆಯ ಅಧ್ಯಾಯ.

---

[1] ಶಾಂತಿರಾಜ ಶಾಸ್ತ್ರಿಗಳ ಕನ್ನಡ ವ್ಯಾಖ್ಯಾನದಿಂದ ಕೂಡಿದ 'ಪೂರ್ವ ಪುರಾಣಂ' ಕಾವ್ಯವನ್ನು ಒದಗಿಸಿಕೊಟ್ಟುದಕ್ಕಾಗಿ ಪ್ರೊ. ಜಿ. ಎಸ್. ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ, ಇವರಿಗೆ ಕೃತಜ್ಞತೆಗಳು.

[2] ಕೌಟಿಲ್ಯನ ಅರ್ಥಶಾಸ್ತ್ರವು ಕ್ರಿ.ಪೂ. 400 ರ ಕಾಲಕ್ಕೆ ಸೇರುತ್ತದೆ ಮತ್ತು ಅಲ್ಲಿಂದ ಮುಂದಕ್ಕೆ (ಅಂದರೆ ಈಚೆಗೆ) ಭಾರತದ ರಾಜ್ಯಭಾರಕ್ರಮಕ್ಕೆ ಅನ್ವಯವಾಗುತ್ತದೆ. ರಾಷ್ಟ್ರಕೂಟರು ತಮ್ಮ ಆಳ್ವಿಕೆಯಲ್ಲಿ ಕೌಟಿಲ್ಯ ಪದ್ಧತಿಯನ್ನು ಜಾರಿಗೆ ತಂದಿರಬೇಕೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಏಕೆಂದರೆ 'ಪೂರ್ವಪುರಾಣಂ' ರಚಿಸಿದ ಜಿನಸೇನಾಚಾರ್ಯರು ಸುಮಾರು ಕ್ರಿ. ಶ. 800 ರ ವೇಳೆಗೆ ರಾಷ್ಟ್ರಕೂಟರ ಆಶ್ರಯದಲ್ಲಿದ್ದಿರಬೇಕು. ನೃಪತುಂಗನ ಬಿರುದುಗಳಲ್ಲಿ 'ಅತಿಶಯ ಧವಳ' ಎಂಬುದಂತೂ ಜೈನಮತೀಯವಾದುದಾಗಿದೆ.

ಆದುದರಿಂದ 'ಗ್ರಾಮನಗರ......ಇತ್ಯಾದಿ' ಪದಮಾಲೆಯು ಕೌಟಿಲ್ಯನ ಕಾಲದಿಂದ ತಮ್ಮ ನಿಗದಿಯಾದ ಅರ್ಥದಲ್ಲಿ ಹೊಸ ಹಾದಿಯನ್ನು ಹಿಡಿದಿರಬಹುದಾಗಿದೆ. ಅಂದರೆ ಇವುಗಳ ಅರ್ಥಕ್ಕೆ ಜೈನಾಗಮಗಳಿಗೆ ಶರಣಾಗಬೇಕಾಗುತ್ತದೆ.

ಕೌಟಿಲೀಯ ಅರ್ಥ ಶಾಸ್ತ್ರಮ್ (1960) ಇದನ್ನು ವಿದ್ವಾನ್ ಎನ್. ಎಸ್. ವೆಂಕಟನಾಥಾಚಾರ್ಯ ಅವರು ಸಂಪಾದಿಸಿದ್ದಾರೆ. ಅವರ ಪುಟ 50 ರ ಅಡಿ ಟಿಪ್ಪಣಿಯಲ್ಲಿ—

—(ಪ್ರಥಮ ಅಧ್ಯಾಯ - ರಾಷ್ಟ್ರ ರಚನಾ ವಿಧಿ)

ಸ್ಥಾನೀಯಾದಯಃ ತತ್ಪರಿವೃತ ತಾವದ್ಗ್ರಾಮವಾಸಿ ಜನತಾಯಾಃ ಕ್ರಯ ವಿಕ್ರಯಾದಿ ಕರ್ಮೋಪ ಜೀವ್ಯಃ ರಮಣೀಯ ನಗರ ವಿಶೇಷಾಃ, ''ನಗರಂ ರಾಜಧಾನೀ, ಪ್ರಾಂಸು ಪ್ರಾಕಾರ ನಿಬದ್ಧಂ ಖೇಟಮ್. ಕ್ಷುಲ್ಲಕ ಪ್ರಾಕಾರ ವೇಷ್ಟಿತಂ ಖರ್ವಟಮ್. ಅರ್ಧ ಗವ್ಯೂತತತೃತೀಯಾಂತ ಗ್ರಾಮಾಂತರ ಸಹಿತಂ ಮಂಟಪಮ್. ಪತ್ತನಂ ಶಕಟೈರ್ಗಮ್ಯಂ ಘಾಟಿಕೈ ರ್ನೌಭಿರೇವಚ । ನೌಭಿರೇವತು ಯದ್ಗಮ್ಯಂ ಪಟ್ಟಣಂ ತತ್ಪ್ರಚಕ್ಷತೇ ದ್ರೋಣಮುಖಂ ಜಲ ನಿರ್ಗಮ ಪ್ರವೇಶಂ ಪಟ್ಟಣ ಮಿತ್ಯರ್ಥಃ'' ಇತಿ ರಾಯಪಸೇಣೀ ಸೂತ್ರ ವ್ಯಾಖ್ಯಾನೇ ಪಂ. 306 ನಗರಾಣಿ ಕರವರ್ಜಿತಾನಿ ನಿಗಮವಣಿಜಾಂ ಸ್ಥಾನಾನಿ । ಜನಪದಾ ದೇಶಾಃ, ಪುರವರಾಣಿ ನಗರೈಕ ದೇಶಭೂತಾನಿ, ದ್ರೋಣಮುಖಾನಿ ಜಲಸ್ಥಲಪಥೋಪೇತಾನಿ, ಖೇಟಾನಿ ಧೂಲೀ ಪ್ರಾಕಾರೋ ಪೇತಾನಿ, ಖರ್ವಟಾನಿ ಕುನಗರಾಣಿ ಮಂಡಪಾನಿ ದೂರಸ್ಥಲ ಸೀಮಾಂತರಾಣಿ. ಸಂವಾಹಾಃ ಸ್ಥಾಪಿನ್ಯಃ, ಪತ್ತನಾನಿ ಜಲಸ್ಥಲ ಪಥಯೋರನ್ಯತರಯುಕ್ತಾನಿ ''ಇತಿ ಪ್ರಶ್ನವ್ಯಾಕರಣ ಸೂತ್ರ ವ್ಯಾಖ್ಯಾನೇ – ಇತ್ಯಾದಿ ವಿವರಗಳಿವೆ.

ಈ ಮೇಲಿನ ವಿವರಣೆಯಿಂದ ನಗರವೆಂದರೆ ರಾಜಧಾನಿಯಾಗುತ್ತದೆ-ಇತ್ಯಾದಿ. ಇಲ್ಲಿಯೂ ಗ್ರಾಮ, ನಗರ, ಖೇಟ, ಖರ್ವಡ, ಮಡಂಬ, ಪತ್ತನ, ದ್ರೋಣಾಮುಖ ಗಳೆಂಬ ಪದಗಳ ಮೂಲಾರ್ಥಗಳನ್ನು ಕಾಣಲಾಗುವುದಿಲ್ಲ. ಆದರೆ ಹಳೆಯ ಸಂಬಂಧದ ಸೂಚನೆಗಳು ಸಿಗುತ್ತವೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ 'ಮಂಟಪ' ಎಂಬ ಪದ. ಪ್ರಾಕೃತದಲ್ಲಿ ಇದೇ 'ಮಡಂಬ'ವೆಂದಿದೆ. ಇಂದಿಗೂ ಸಂಸ್ಕೃತದಲ್ಲಿ 'ಮಂಟಪ'ವಿದೆ.

ವಡ್ಡಾರಾಧನೆಯ ಪದಮಾಲೆಯಲ್ಲಿ 'ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂ' ಎಂದಿರುವುದರಲ್ಲಿಯೂ ಗ್ರಾಮ, ನಗರ, ದ್ರೋಣಾಮುಖ ಗಳು ಸಂಸ್ಕೃತ ಪ್ರಯೋಗಗಳಿರಬೇಕು. ಉಳಿದ ನಾಲ್ಕು ಪದಗಳು ಪ್ರಾಕೃತ ರೂಪ ಗಳೆಂದು ಒಪ್ಪಿಗೆಯಾದರೆ ಗ್ರಾಮ=ಗ್ರಾಮ, ನಗರ=ನಗರ, ಖೇಟ=ಖೇಡ, ಖರ್ವಟ=ಖರ್ವಡ, ಮಂಟಪ=ಮಡಂಬ, ಪಟ್ಟಣ=ಪತ್ತನ, ದ್ರೋಣಾ-ಮುಖ=? ಎಂದು ಗುರುತಿಸಲು ಸಾಧ್ಯವಾದೀತು.

ಇವು ಕ್ರಮೇಣ ಸಂಸ್ಕೃತದಲ್ಲೂ ಬೆರತುಹೋಗಿರಬೇಕೆನ್ನುವುದಕ್ಕೆ ಉದಾಹರಣೆಗಳಿವೆ.– ಸಂಸ್ಕೃತ ದಶಕುಮಾರ ಚರಿತೆಯಲ್ಲಿ 'ಕಾವೇರಿ ಪತ್ತನೇ ಸಹ' ಎಂಬ ಪ್ರಯೋಗವು ಮಿತ್ರಗುಪ್ತಂ ನಾಮ ಅರ್ಥ ಅಷ್ಟ ಉಛ್ವಾಸಃ। ಎಂಬಲ್ಲಿ ದೊರೆಯುತ್ತದೆ. ಇದು ಒಂದು ನಗರ (ಚೋಳರ ಪುರಾತನ ರಾಜಧಾನಿಯಾದ ಕಾರಣ 'ಪತ್ತನ' ಎಂಬ ಹಳೆಯ ಹೆಸರೇ ಬಳಕೆಯಲ್ಲಿರಬೇಕೆಂದು ತಿಳಿಯಬೇಕಾಗುತ್ತದೆ.)

ಜೈನರ ಆಗಮ ಗ್ರಂಥಗಳಲ್ಲಿ ಒಂದಾದ 'ಉತ್ತರಾಧ್ಯಯನ'ವೆಂಬ ಪ್ರಾಕೃತ ಗ್ರಂಥದಲ್ಲಿ Thirteenth lecture-The road of penance (Tr. by Jacobi) ಭಾಗದಲ್ಲಿ (ಪುಟ 176- ಟಿಪ್ಪಣಿ)

1. ನಗರ, (ನಕರ) ಗ್ರಾಮಗಳು ಕೊಡಬೇಕಾದ 18 ಕರಗಳಿಂದ ಮುಕ್ತವಾದ ಸ್ಥಳ
2. ದ್ರೋಣಮುಖ - ನೀರಿನ ಮೂಲಕವೂ ಪ್ರವೇಶಿಸಲು ಅನುಕೂಲವಾದ ಸ್ಥಳ. ಉದಾ : ಭೃಗ, ಕಚ್ಚ ಅಥವಾ ತಾಮ್ರಲಿಪ್ತಿ.

ಹೀಗೆಯೇ ಖೇಟ, ಕರ್ವಟ, ಪಟ್ಟನ, ಮಟಂಬ, ಪಲ್ಲಿ . . . ಇತ್ಯಾದಿ ಪ್ರಯೋಗಗಳಿಗೆ ವಿವರಗಳನ್ನು ನೀಡುವ ಪ್ರಯತ್ನಮಾಡಿದ್ದಾರೆ. ಆದರೆ ಅವರಿಗೂ ಪದಗಳ ಮೂಲವಾಗಲಿ ಅವರ ಭಾಗಗಳ ಅರ್ಥವಾಗಲಿ ತಿಳಿದಂತಿಲ್ಲ. ಅವರು 'ನಗರ'ವನ್ನು 'ನ-ಕರ'ವೆಂದು ಬಿಡಿಸಿದಂತೆ ಉಳಿದವನ್ನೂ ಬಿಡಿಸಿದ್ದರೆ ಒಂದು ಬಗೆಯ ಸಮಾಧಾನವಾಗುತ್ತಿತ್ತು. ಅಂತಹುದು ನಡೆದಿಲ್ಲ.

ಸಂಸ್ಕೃತ ಶಬ್ದಾರ್ಥ ಕೌಸ್ತುಭದಲ್ಲಿ ಇದಕ್ಕೆ ಭಿನ್ನವಾದ ವಿವರಗಳು ಸಿಗುತ್ತವೆ.

ನಗರ : (ನಂ) ನಗಾ ಇವ ಪ್ರಾಸಾದಾದಯಃ ಸನ್ತಿಯತ್ರ, ನಗ+ರ

ನಗರೀ : (ಸ್ತ್ರೀ) . .

ಗ್ರಾಮ : (ಪುಂ) √ ಗ್ರಸು+ಮನು, ಅದಂತಾದೇಶ್

ಖೇಟ : (ಪುಂ) √ ಖಿಟು+ಅಜ್.

ಖರ್ವಟ : (ಪುಂ. ನಂ) √ ಖರ್ವ+ಅಟನು.

ಪತ್ತನ : (ನಂ) ಪತಂತಿ ಗಚ್ಛಂತಿ ಜನಾ ಯಸ್ಮಿನ್ √ಪತು+ತನನು.

ದ್ರೋಣಮುಖ (ನಂ) 400 ಗ್ರಾಮೋ, ರಾಜಧಾನೀ.

ಇಂಥ ಪ್ರಯತ್ನವು ಕೇವಲ ಲಾಕ್ಷಣಿಕ ಹಾಸ್ಯಾಸ್ಪದ ಪ್ರವೃತ್ತಿಯಾಗುತ್ತದೆ. ಅರ್ಥವನ್ನು ಹುಡುಕಲು ಹೆಣಗಾಡಿರುವುದೊಂದೇ ಸತ್ಯವಾಗಿ ಕಂಡುಬರುತ್ತದೆ.

ಇವುಗಳಲ್ಲೆಲ್ಲಾ ಹರ್ಮನ್ ಜಾಕೋಬಿಯವರ ನ-ಕರ ಎಂದು ವಿವರಿಸುವ ರೀತಿಯೇ ಶ್ರೇಷ್ಠವೆಂದು ತೋರುತ್ತದೆ. ಆದುದರಿಂದ ಈ ಪದಮಾಲೆಗೆ ಜೈನ

ಸೂತ್ರಗಳಲ್ಲಿ ಕಂಡುಬರುವಂತೆ ವಿವರವನ್ನು ಮಾತ್ರ ಗಮನಿಸುವುದು ಉತ್ತಮ ಪಕ್ಷವಾಗಿದೆ.

ಗ್ರಾಮ ... ಮೊದಲಿಗೆ ವಾಸಸ್ಥಳ.
ನಗರ ... ದೊಡ್ಡ ಅಂದರೆ ಹಲವು ಕುಟುಂಬಗಳ ವಾಸಸ್ಥಳ.
ಖೇಡ ... ಒಂದು ತೀರ್ಥ ಕ್ಷೇತ್ರ
ಖರ್ವಡ ... ಬೆಟ್ಟದ ಮೇಲಿರುವ ತೀರ್ಥ ಕ್ಷೇತ್ರ. ಉದಾ: ಶ್ರವಣಬೆಳ್ಗೊಳ.
ಮಡಂಬ ... ನದಿಯ ದಂಡೆಯ ಮೇಲೆ ರಚಿತವಾದ ಮಂಟಪ.
ಪತ್ತನ ... ನದಿಯ ಮುಖಕ್ಕೆ ಸೇರಿದಂತೆ ಇರುವ ನಗರ, ಉದಾ : ಕಾವೇರೀ ಪತ್ತನ.
ದ್ರೋಣಾಮುಖ ... ದೋಣಿಯ ಕಡುವಿರುವ ನಗರ.

ಇವುಗಳನ್ನೆಲ್ಲಾ ಐತಿಹಾಸಿಕವಾಗಿ ಪ್ರಸಿದ್ಧವಾಗಿದ್ದ 'ಮಧ್ಯದೇಶ'ಕ್ಕೆ ಸೇರಿದ ಮಗಧ ಮತ್ತು ವಿದೇಹಗಳ ಭೌಗೋಲಿಕ ನೆಲೆಯಲ್ಲಿ ಪ್ರಾಕೃತವು ಬಳಕೆಯಲ್ಲಿದ್ದ ಜನಜೀವನಕ್ಕೆ ಅನ್ವಯಿಸಿ ನೋಡುವುದು ಒಳ್ಳೆಯದು. ಮಹಾವೀರನು ಸಂಚಾರ ಮಾಡಿದಾಗ ಕಂಡಿರಬಹುದಾದ ವಾಸಸ್ಥಳಗಳೆಂದು ಗುರುತಿಸಬೇಕಾಗುತ್ತದೆ.

ಮಂಟಪಗಳು ಸಾಮಾನ್ಯವಾಗಿ ಇಂದಿಗೂ ನದಿಯ ದಂಡೆಯ ಮೇಲೆ ಕಂಡು ಬರುತ್ತವೆ. ಇವುಗಳಲ್ಲಿ ಹತ್ತೊಂಬತ್ತನೆಯ ಶತಮಾನದ ತನಕ ಮತೀಯವಾದ ಧಾರ್ಮಿಕ ಕ್ರಿಯೆಗಳೂ ಅದರಲ್ಲಿಯೂ ಯತಿಗಳಿಂದ ಧರ್ಮಬೋಧೆಯ ಉಪನ್ಯಾಸ ಮೊದಲಾದುವು ಜರುಗುತ್ತಿದ್ದುವು. ಹಂಪೆಯ ಪುರಂದರದಾಸರ ಮಂಟಪವನ್ನು ಇಲ್ಲಿ ನೆನೆಯಬಹುದು. ಪುಣ್ಯಕ್ಷೇತ್ರಗಳಲ್ಲೆಲ್ಲಾ ಇಂತಹ ಮಂಟಪಗಳು ಇಂದಿಗೂ ಕಂಡು ಬರುತ್ತವೆ. ಇವುಗಳನ್ನು ಕಟ್ಟಿಸುವುದೂ ಪುಣ್ಯದ ಕೆಲಸವೆಂಬ ನಂಬಿಕೆಯಿತ್ತು. ಆದುದರಿಂದ ಈ ಮಂಟಪಗಳೇ 'ಮಡಂಬ'ಗಳಾಗಿರಬೇಕು. ಮೇಲೆ ಹೇಳಿದ ಪದಮಾಲೆಯ ಸ್ಥಳಗಳಲ್ಲಿ ಜೈನಯತಿಯು ಸಂಚರಿಸುತ್ತಿದ್ದನಂತೆ. ಗ್ರಾಮದಲ್ಲಿ ಒಂದೇ ರಾತ್ರಿ, ನಗರದಲ್ಲಿ ಐದು ರಾತ್ರಿ ಮತ್ತು ಕಾಡಿನ ಅಥವಾ ಖೇಡ ಖರ್ವಡವಾದರೆ ಯತಿಗಳ ಸಹವಾಸದಲ್ಲಿ ಹತ್ತು ರಾತ್ರಿಗಳನ್ನು ಕಳೆಯಬಹುದಾಗಿದ್ದು. ಚಾತುರ್ಮಾಸವನ್ನು ಗುಹಾಂತರಗಳಲ್ಲಿ ಕಳೆಯುವ ಪದ್ಧತಿಯಿದ್ದಿತೆಂಬುದನ್ನು ಇಲ್ಲಿ ನೆನೆಯಬಹುದಾಗಿದೆ.

ಆಧಾರ ಗ್ರಂಥಗಳು :

1. ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ (ನಾಲ್ಕನೆಯ ಮುದ್ರಣ) ಸಂ. ಡಾ. ಡಿ. ಎಲ್. ನರಸಿಂಹಾಚಾರ್, ಎಂ.ಎ.. ಡಿ.ಲಿಟ್. ಪ್ರಕಾಶನ : ಶಾರದಾ ಮಂದಿರ, ಮೈಸೂರು-4.

2. ಆದಿಪುರಾಣಂ : ಪಂಪ ಮಹಾಕವಿ ವಿರಚಿತ. ಸಂ. : ಪ್ರೊ. ಕೆ. ಜಿ. ಕುಂದಣಗಾರ, ಎಮ್. ಎ.
ದಿವಾಣಬಹಾದ್ದೂರ ಎ. ಪಿ. ಚೌಗುಲೆ, ಬಿ.ಎ.,ಎಲ್‌ಎಲ್.ಬಿ.

3. ಶಾಸ್ತ್ರಸಾರ ಸಮುಚ್ಚಯಂ : ಆಚಾರ್ಯ ಮಾಘನಂದಿ.

4. Jaina Sutras Part II, The Uttaradhyana Sutra Translated from Prakrit by Herman Jacobi.

5. Sacred Books of the East : Edited by F. Maxmuller. Vol. XLV.

6. ಕೌಟಿಲ್ಯನ ಅರ್ಥಶಾಸ್ತ್ರ. ಅನು. : ಕೆ. ಕೃಷ್ಣಭಟ್ಟ, ಶಿರೋಮಣಿ, ವಿದ್ವಾನ್. ಪ್ರಕಾಶನ : ಸಮಾಜ ಪುಸ್ತಕಾಲಯ, ಧಾರವಾಡ.

7. ಕಾಮಂದಕೀಯ ನೀತಿಶಾಸ್ತ್ರ (ವ್ಯಾಖ್ಯಾಟೀಕೆ) : ಚಿಕ್ಕುಪಾಧ್ಯಾಯ. ಸಂಪಾದಕರು : ವಿ. ಹನುಮಂತಾಚಾರ್, ಎಂ.ಎ. ಎಲ್‌ಎಲ್.. ಟಿ.

8. Hindu Polity by K. P. Jayaswal, The Bangalore Printing & Publishing Co., Ltd. (The Bangalore Press) Bangalore City.

9. ಕರ್ಣಾಟಕದ ಇತಿಹಾಸ, ಭಾಗ 2 (ಸಾಂಸ್ಕೃತಿಕ ಚರಿತ್ರೆ)

10. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಕ್ರಿ. ಶ. 450 ರಿಂದ 1150 ರ ವರೆಗೆ. ಡಾ. ಎಂ. ಚಿದಾನಂದಮೂರ್ತಿ, ಎಂ.ಎ., ಪಿ.ಹೆಚ್.ಡಿ. ಪ್ರಸಾರಾಂಗ : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

11. ಅಜಿತ ಪುರಾಣಂ : ರನ್ನ

12. ಸುಕುಮಾರ ಚರಿತೆ.

13. ಧರ್ಮಾಮೃತಂ : ನಯಸೇನ

14. ಅಭಿನವ ದಶಕುಮಾರ ಚರಿತೆ : ಚೌಂಡರಸ.

15. ಲೀಲಾವತೀ ಪ್ರಬಂಧಂ : ನೇಮಿಚಂದ್ರ ವಿರಚಿತ. ಸಂ. : ಎಸ್. ಜಿ. ನರಸಿಂಹಾಚಾರ್ ಮತ್ತು ಎಂ. ಎ. ರಾಮಾನುಜಐಯ್ಯಂಗಾರ್. ಕರ್ಣಾಟಕ ಕಾವ್ಯ ಕಲಾನಿಧಿ ಸೀರಿಸ್ 24.

16. ವರ್ಧಮಾನ ಪುರಾಣ – ಆಚಣ್ಣ.

17. ಪುಷ್ಪದಂತ ಪುರಾಣ – 2ನೇ ಗುಣವರ್ಮ.

18. ಕರ್ಣಾಟಕ ಭಾರತಕಥಾಮಂಜರಿ.

19. ಸೂಕ್ತಿಸುಧಾರ್ಣವಂ. ಮಲ್ಲಿಕಾರ್ಜುನ ಕವೀಶ್ವರ ಸಂಯೋಜಿತಂ. ಸಂ. : ಎಸ್. ಅನಂತರಂಗಾಚಾರ್, ಎಂ.ಎ., ಮೈಸೂರು ವಿಶ್ವವಿದ್ಯಾಲಯ.

20. ಕಾವ್ಯಸಾರಂ : ಅಭಿನವವಾದಿ ವಿದ್ಯಾನಂದ ಸಂಕಲಿತಂ.

21. ಶುಕ್ರ ನೀತಿಸಾರಂ : ಅನು. ; ಕೆ. ಎಲ್. ನರಸಿಂಹಶಾಸ್ತ್ರಿ.

22. ಹಿಂದುಸ್ಥಾನದ ಪ್ರಾಚೀನ ರಾಜ್ಯ ಪದ್ಧತಿಗಳು. ಬರೆದವರು : ಶ್ರೀ ವಿಷ್ಣು ಹರಿ ಒಡೆಯರ, ಎಂ.ಎ., ಎಲ್ಎಲ್.ಬಿ.
Member of the International Congress of Orientalists (Oxford).

23. ಅಮರಕೋಶ. ಸಂ. : ಲೀವಿಸ್ ರೈಸ್, ಎಂ.ಆರ್.ಎ.ಎಸ್.

24. ನಾನಾರ್ಥರತ್ನಮಾಲಾ : ಇರಂಗಪ್ಪ ದಂಡಾಧಿನಾಥ. ಸಂ. : ಟಿ. ರಾಮಚಂದ್ರ ಶರ್ಮ, ಪೂನ.

25. The History and Culture of the Indian People.
Vol. I The Vedic Age.
Political and Legal Institutions. Page 359
Gen. Editor : R. C. Majumdar.

26. ಸಂಸ್ಕೃತ ಶಬ್ದಾರ್ಥ ಕೌಸ್ತುಭ : ಸ್ವರ್ಗೀಯ ಚತುರ್ವೇದೀ ದ್ವಾರಕಾ ಪ್ರಸಾದ್ ಶರ್ಮಾ, ಎಂ.ಆರ್.ಎಂ.ಎಸ್. ರಾಮನಾರಾಯಣಲಾಲ್ ಪ್ರಕಾಶಕ್ ಇಲಹಾಬಾದ್ 1957.

27. ಶಬ್ದಕಲ್ಪದ್ರುಮಃ – ರಾಜಾ ರಾಧಾಕಾಂತದೇವ (ಭಾಗ 2)

28. ಪೂರ್ವಪುರಾಣಂ – ಜಿನಸೇನಾಚಾರ್ಯವಿರಚಿತ. ವ್ಯಾಖ್ಯಾನ ಶಾಸ್ತ್ರಿರಾಜಶಾಸ್ತ್ರಿಗಳು (1925)

ಸರ್ವಶಕ್ತ ಫ್ಲೂರೀನ್

ಎಸ್. ವೆಂಕಟೇಶ ಮೂರ್ತಿ

ಉಗ್ರತೆಯ ಮೂರ್ತಿಸ್ವರೂಪವೇ ಫ್ಲೂರೀನ್. ಸೋವಿಯತ್ ವಿಜ್ಞಾನಿ ಎ. ಈ. ಫೆರ್ಸ್ಮಾನ್ ಪ್ರಕಾರ ಅದು ಸರ್ವಶಕ್ತ ಮತ್ತು ಸರ್ವಭಕ್ಷ. ಫ್ಲೂರೀನ್‌ಗಿಂತ ಉಗ್ರವೂ, ಕ್ರೂರಿಯೂ, ಹಾಗೂ ಹೆಚ್ಚಿನ ರಾಸಾಯನಿಕ ಪಟುತ್ವವನ್ನು ಪಡೆದಿರುವ ಬೇರಾವ ಧಾತುವನ್ನೂ ನಿಸರ್ಗವು ಸೃಷ್ಟಿಸಿಲ್ಲ. ಹೆಚ್ಚಿನ ಪಟುತ್ವದಿಂದಾಗಿ **ಫ್ಲೂರೀನ್ ಪ್ರಕೃತಿಯಲ್ಲಿ ಸಹಜ ಸ್ಥಿತಿಯಲ್ಲಿ ಸಿಗುವುದಿಲ್ಲ.** ಫ್ಲೂರೈಡ್‌ಗಳೆಂಬ ಸಂಯುಕ್ತಗಳ ರೂಪದಲ್ಲಿ ಮಾತ್ರ ಕಂಡು ಬರುವುದು.

ಫ್ಲೂರೀನ್ ಎಂಬ ಹೆಸರಿಗೆ ಮೂಲ ಲ್ಯಾಟಿನ್ ಭಾಷೆಯ ಫ್ಲ್ಯೂ (Fluo). ಅಂದರೆ ಪ್ರವಹಿಸು ಎಂದರ್ಥ. ಆದರೆ ರಷ್ಯದ ಮೂಲ 'ಫ್ಟೋರ್' ಎಂಬುದೇ ಹೆಚ್ಚು ಸೂಕ್ತ. ಫ್ಟೋರ್ ಎಂದರೆ ವಿನಾಶಕಾರಿ ಎಂದರ್ಥ.

ಫ್ಲೂರೀನನ್ನು ಸ್ವತಂತ್ರಗೊಳಿಸಲು ನಡೆಸಿದ ಸಾಹಸದ ಕಥೆಯು ದುಃಖದಾಯಕ. ಇದುವರೆಗೂ ಮಾನವನು 105 ಧಾತುಗಳನ್ನು ಕಂಡುಹಿಡಿದಿದ್ದಾನೆ. ಅವುಗಳಲ್ಲಿ 92 ಧಾತುಗಳು ಪ್ರಕೃತಿಯ ಮಡಿಲಿನಿಂದಲೇ ಉದ್ಭವವಾಗಿದ್ದರೆ ಉಳಿದ ಮೂಲ ವಸ್ತುಗಳು ಮಾನವ ನಿರ್ಮಿತ. ಹೊಸ ಹೊಸ ವಸ್ತುಗಳ ಸಂಶೋಧನೆಯಲ್ಲಿ ವಿಜ್ಞಾನಿಗಳು ಅನೇಕ ಕಷ್ಟಗಳನ್ನು ಅನುಭವಿಸಬೇಕಾಯಿತು. ನಿರಾಶೆಗೊಂಡ ಸಂದರ್ಭಗಳೂ ಇಲ್ಲದಿಲ್ಲ. ಕೆಲವು ಸಲ ತಮ್ಮ ಅಚಾತುರ್ಯದಿಂದ ಪ್ರಾಣವನ್ನೇ ಬಲಿ ಕೊಡಬೇಕಾಯಿತು.

ಅಂತೆಯೇ ಸ್ವತಂತ್ರ ಫ್ಲೂರೀನ್‌ಗಾಗಿ ಅನೇಕ ಜನ ಸಾವು ನೋವುಗಳನ್ನು ಅನುಭವಿಸಿದ್ದಾರೆ. ಫ್ಲೂರೀನ್ ವಿರುದ್ಧದ ಸಮರದಲ್ಲಿ ನಡೆದ ಶೋಕಪೂರಿತ ದುರ್ಘಟನೆಗಳನ್ನು ಪಟ್ಟಿ ಮಾಡುತ್ತಾ ಹೋದರೆ ಬಹಳ ಉದ್ದವಾದ ಪಟ್ಟಿಯಾದೀತು! ಐರಿಷ್ ವಿಜ್ಞಾನ ಅಕಾಡೆಮಿಯ ಸದಸ್ಯರೊಬ್ಬರಾಗಿದ್ದ ನಾಕ್ಸ್, ಫ್ರಾನ್ಸಿನ ರಸಾಯನ ಶಾಸ್ತ್ರಿ ನಿಕ್ಲೇಸ್ ಮತ್ತು ಬೆಲ್ಜಿಯಂನ ವಿಜ್ಞಾನಿ ಲಾಯೆಟೆ ಮುಂತಾದ ಪ್ರಮುಖರು ಫ್ಲೂರೀನ್‌ಗೆ ಆಹುತಿಯಾದರು. ಅಲ್ಲದೆ ನೂರಾರು ವಿಜ್ಞಾನಿಗಳು ದೈಹಿಕ ತೊಂದರೆಗಳಿಗೀಡಾದರು. ಅಂಥವರಲ್ಲಿ ಪ್ರಮುಖರಾದವರೆಂದರೆ ಫ್ರಾನ್ಸಿನ ರಸಾಯನ ಶಾಸ್ತ್ರಿಗಳಾದ ಗೇಲುಸಾಕ್ ಮತ್ತು ಥೇನಾರ್ಡ್ ಹಾಗೂ ಇಂಗ್ಲೆಂಡಿನ ರಸಾಯನ ಶಾಸ್ತ್ರಿ ಹಂಫ್ರಿ ಡೇವಿ.

1886 ನೇ ಜೂನ್ 26 ರಂದು ಹೆನ್ರಿ ಮಾಯಿಸನ್ ಎಂಬ ವಿಜ್ಞಾನಿಯು ಪ್ಯಾರಿಸ್‌ನ ವಿಜ್ಞಾನ ಅಕಾಡೆಮಿಯ ಮುಂದೆ ಸ್ವತಂತ್ರ ಫ್ಲೂರೀನ್‌ನ ಬಗ್ಗೆ ವರದಿಯನ್ನು ಮಂಡಿಸಿದಾಗ ಆ ವಿಜ್ಞಾನಿಯ ಒಂದು ಕಣ್ಣು ಕಪ್ಪು ಬ್ಯಾಂಡೇಜ್‌ನಿಂದ ಬಂಧಿಸಲ್ಪಟ್ಟಿತ್ತು. ಫ್ಲೂರೀನ್ ಧಾತುವು ಸ್ವತಂತ್ರ ಸ್ಥಿತಿಯಲ್ಲಿ ಹೇಗೆ ವರ್ತಿಸುತ್ತದೆ ಎಂಬುದನ್ನು ಮೊಟ್ಟಮೊದಲು ಜಗತ್ತಿಗೆ ತಿಳಿಹೇಳಿದವರು ಫ್ರಾನ್ಸಿನ ವಿಜ್ಞಾನಿ ಮಾಯಿಸನ್. ಇದರಿಂದ ಅವರಿಗೆ ಪ್ರಖ್ಯಾತಿಯೇನೋ ಬಂದಿತು. ಆದರೆ ಇದಕ್ಕಾಗಿ ಅವರು ತೆತ್ತ ದಂಡ ಒಂದು ಕಣ್ಣು. ಇದರಿಂದಾಗಿ ಫ್ಲೂರೀನ್‌ನ ಸಂಶೋಧನೆಯನ್ನು ನಡೆಸಲು ಕೆಲವು ಕಾಲ ರಸಾಯನಶಾಸ್ತ್ರಗಳು ಭಯಭೀತರಾಗಿದ್ದರೆಂದರೆ ಆಶ್ಚರ್ಯವಿಲ್ಲ.

ಇವೆಲ್ಲಾ ಹತ್ತೊಂಬತ್ತನೇ ಶತಮಾನದ ಕತೆಯಾಯ್ತು. ಆದರೆ ಇಪ್ಪತ್ತನೇ ಶತಮಾನದ ವಿಜ್ಞಾನಿಗಳು ಫ್ಲೂರೀನ್‌ನ ಉಗ್ರತೆಯನ್ನು ಇಳಿಸುವುದರಲ್ಲಿ ಸಮರ್ಥರಾಗಿದ್ದಾರೆ. ಒಂದಾನೊಂದು ಕಾಲದಲ್ಲಿ ವಿಧ್ವಂಸಕಾರಿಯೆನಿಸಿದ್ದ ಫ್ಲೂರೀನ್‌ನ ಜುಟ್ಟು ನಮ್ಮ ಕೈಯ್ಯಲ್ಲೇ ಇದೆ. ಅದನ್ನು ನಮಗೆ ಬೇಕಾದಂತೆ ಉಪಯುಕ್ತ ಕಾರ್ಯಗಳಿಗೆ ಬಳಸಬಹುದಾಗಿದೆ.

ಫ್ಲೂರೀನ್ ಧಾತುವಿನ ಹೊಸ ಹೊಸ ಉಪಯೋಗಗಳು ಬೆಳಕಿಗೆ ಬಂದಿವೆ. ಇದರಿಂದಾಗಿ ಫ್ಲೂರೀನ್ ರಸಾಯನ ಶಾಸ್ತ್ರವೆಂಬ ಹೊಸದೊಂದು ವೈಜ್ಞಾನಿಕ ಕ್ಷೇತ್ರ ಹುಟ್ಟಿಕೊಂಡಿದೆ. ಸ್ವತಂತ್ರ ಫ್ಲೂರೀನ್‌ನ ತಯಾರಿಕೆ ಉತ್ತಮ ಫಲ ನೀಡಿದೆ.

ಹ್ಯಾಲೊಜಿನ್‌ಗಳೆಂಬ ಬಳಗಕ್ಕೆ ಸೇರಿರುವ ಫ್ಲೂರೀನು ಹಸಿರು ಮಿಶ್ರಿತ ಹಳದಿ ಬಣ್ಣದ ಅನಿಲ. ಸುಲಭದಲ್ಲಿ ದ್ರವವಾಗುವುದಿಲ್ಲ, ತನ್ನ ಬಳಗದ ಇತರ ಎಲ್ಲ ಸದಸ್ಯರುಗಿಂತಲೂ ಹೆಚ್ಚಿನ ರಾಸಾಯನಿಕ ಪಟುತ್ವವನ್ನು ಪಡೆದಿರುವ ಫ್ಲೂರೀನ್ ಅನಿಲವು ಪ್ರಬಲ ವಿಷವೂ ಹೌದು. ಬೇರೆ ಯಾವುದೇ ರಾಸಾಯನಿಕ ವಸ್ತುವಿನೊಂದಿಗೆ ಸುಲಭವಾಗಿ ಬೆರೆಯಬಲ್ಲುದು. ಫ್ಲೂರೀನ್‌ನ ಸಂಯುಕ್ತಗಳಿಗೆ ಫ್ಲೂರೈಡ್‌ಗಳೆಂದು ಹೆಸರು. ಹೈಡ್ರೋಜನ್ (ಜಲಜನಕ) ದೊಂದಿಗೆ ಸಂಯೋಗಗೊಂಡಾಗ ಹೈಡ್ರೋಜನ್ ಫ್ಲೂರೈಡ್ ಎಂಬ ಅನಿಲವು ಉತ್ಪತ್ತಿಯಾಗುವುದು. ಈ ಅನಿಲವು ಗಾಜಿನ ಪಾತ್ರೆಗಳನ್ನು ಘಾಸಿಗೊಳಿಸುವುದು. ಏಕೆಂದರೆ ಗಾಜಿನಲ್ಲಿರುವ ಸಿಲಿಕಾದೊಂದಿಗೆ ಹೈಡ್ರೋಜನ್ ಫ್ಲೂರೈಡು ಸುಲಭವಾಗಿ ಸಂಯೋಗಗೊಳ್ಳುವುದು.

ಫ್ಲೂರೀನ್‌ನ ಸಂಯುಕ್ತಗಳಿಗೆ ಯಾವುದರಿಂದಲೂ ಹಾನಿ ತಟ್ಟುವುದಿಲ್ಲ. ಎಲ್ಲ ರಾಸಾಯನಿಕಗಳನ್ನೂ ವಿರೋಧಿಸುವ ಶಕ್ತಿ ಫ್ಲೂರೀನ್ ಸಂಯುಕ್ತಗಳಿಗೆ ಇದೆ. ಫ್ಲೂರೈಡ್‌ಗಳು ಸುಡುವುದಿಲ್ಲ. ಕೊಳೆಯುವುದೂ ಇಲ್ಲ. ಆಮ್ಲಗಳಲ್ಲಾಗಲಿ, ಕ್ಷಾರಗಳಲ್ಲಾಗಲಿ ಅವು ಕರಗುವುದಿಲ್ಲ. ಹೆಪ್ಪುಗಟ್ಟಿಸುವಂತಹ ಶೈತ್ಯವೇ ಇರಲಿ

ಅಥವಾ ನೀರನ್ನು ಕುದಿಸುವಂತಹ ತಾಪವೇ ಇರಲಿ ಫ್ಲೂರೈಡ್‌ಗಳ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ. ಫ್ಲೂರೈಡ್ ಸಂಯುಕ್ತಗಳು ದ್ರವ ಹಾಗೂ ಘನ ರೂಪಗಳಲ್ಲಿ ಕಂಡುಬರುವುವು.

ಫ್ಲೂರೀನ್‌ನ ಸಂಯುಕ್ತಗಳಲ್ಲೆಲ್ಲಾ ಪ್ರಮುಖವಾದವು ಫ್ಲೂರೋ ಕಾರ್ಬನ್‌ಗಳು. ಇವು ಪ್ರಕೃತಿಯಲ್ಲಿ ಸಿಗುವುದಿಲ್ಲ. ಮಾನವನಿಂದಲೇ ನಿರ್ಮಿತವಾದಂಥವು. ಫ್ಲೂರೀನ್ ಮತ್ತು ಕಾರ್ಬನ್ (ಇಂಗಾಲ)ಗಳ ಸಂಯೋಗದಿಂದ ತಯಾರಿಸಬಹುದಾದ ಫ್ಲೂರೋ ಕಾರ್ಬನ್‌ಗಳು ಕೈಗಾರಿಕಾರಂಗದಲ್ಲಿ ಬಹಳ ಪ್ರಸಿದ್ಧವಾಗಿವೆ. ಮೋಟಾರುಗಳಲ್ಲಿ ಶೈತ್ಯಕಾರಿ ದ್ರವಗಳಂತೆಯೂ, ಕೆಲವು ನೂಲುಗಳನ್ನು ಬಲಪಡಿಸುವುದಕ್ಕಾಗಿಯೂ ಫ್ಲೂರೋಕಾರ್ಬನ್‌ಗಳನ್ನು ಉಪಯೋಗಿಸುತ್ತಾರೆ. ದೀರ್ಘಕಾಲ ಬಾಳಿಕೆ ಬರುವ ಮೃದುಕಾರಿಗಳಂತೆಯೂ (ಅಥವಾ ಲೂಬ್ರಿಕೆಂಟ್ಸ್), ಅಗ್ನಿ ಮತ್ತು ವಿದ್ಯುತ್ ನಿರೋಧಕಗಳಂತೆಯೂ ಉಪಯೋಗಿಸಲ್ಪಡುವ ಫ್ಲೂರೋಕಾರ್ಬನ್‌ಗಳು ಅನೇಕ ರಾಸಾಯನಿಕ ಕೈಗಾರಿಕೆಗಳಲ್ಲಿಯೂ ನೆರವಾಗಿವೆ.

ಇಂದು ಬಹಳ ಬೇಡಿಕೆಯಲ್ಲಿರುವ ಕೃತಕ ರಕ್ತದ ತಯಾರಿಕೆಯಲ್ಲಿಯೂ ಫ್ಲೂರೋಕಾರ್ಬನ್‌ಗಳೇ ಪ್ರಮುಖ ವಸ್ತುಗಳಾಗಿವೆ. ರಾಸಾಯನಿಕವಾಗಿ ಜಡವಾಗಿರುವ ಫ್ಲೂರೋಕಾರ್ಬನ್‌ಗಳು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಅನಿಲಗಳನ್ನು ಹೀರುವ ಸಾಮರ್ಥ್ಯ ಪಡೆದಿವೆ. ಹೀಮೊಗ್ಲೋಬಿನ್ ಅಣುಗಳಂತೆಯೇ ಅವು ಆಮ್ಲಜನಕವನ್ನು (ಆಕ್ಸಿಜನ್) ದೇಹದ ಅಂಗಾಂಶಗಳಿಗೆ ಒಯ್ಯಬಲ್ಲುವು. ಫ್ಲೂರೋ ಕಾರ್ಬನ್‌ಗಳೊಂದಿಗೆ ಉಪ್ಪುನೀರು ಮತ್ತು ಗ್ಲೂಕೋಸ್‌ಗಳನ್ನು ಬೆರೆಸುವುದರಿಂದ ಕೃತಕ ರಕ್ತವನ್ನು ತಯಾರಿಸಬಹುದು. ಈ ರೀತಿ ತಯಾರಿಸಿದ ಕೃತಕ ರಕ್ತವು ಹಾಲಿನಂತೆ ಬಿಳುಪಾಗಿರುತ್ತದೆ.

ಬಹುತೇಕ ಆಧುನಿಕ ರೆಫ್ರಿಜರೇಟರ್ (ಶೈತ್ಯಕ) ಯಂತ್ರಗಳು 'ಫ್ರಿಯಾನ್' ಎಂಬ ವಸ್ತುವನ್ನು ಶೈತ್ಯಕಾರಿಯಂತೆ ಉಪಯೋಗಿಸುತ್ತಿವೆ. 'ಫ್ರಿಯಾನ್'ಗೆ ರಾಸಾಯನಿಕ ಹೆಸರು : ಡೈಫ್ಲೂರೋ ಡೈಕ್ಲೋರೊ ಮೀಥೇನ್. ಈ ಸಂಯುಕ್ತದ ತಯಾರಿಕೆಗೆ ಫ್ಲೂರೀನ್ ಅನಿಲವೇ ಪ್ರಮುಖ ಅಂಗವಸ್ತುವಾಗಿದೆ.

ಅಣುಶಕ್ತಿಯನ್ನು ನಿಯಂತ್ರಿಸಿ ಶಾಂತಿಯುತ ಕಾರ್ಯಗಳಿಗೆ ಬಳಸುವಂತೆ ಮಾಡಲು ವಿಜ್ಞಾನಿಗಳು ಸಂಶೋಧನೆ ನಡೆಸುತ್ತಿದ್ದಾಗ ಅವರಿಗೆ ಒಂದು ಪ್ರಮುಖ ಸಮಸ್ಯೆ ಎದುರಾಗಿತ್ತು. ಅದೇನೆಂದರೆ ಅಣುಶಕ್ತಿಯ ಮೂಲವಾದ ಯುರೇನಿಯಂ ಧಾತುವಿನ ಎರಡು ರೂಪಗಳಾದ ಯುರೇನಿಯಂ – 235 ಮತ್ತು – 238 ಗಳನ್ನು ಹೇಗೆ ಬೇರ್ಪಡಿಸುವುದು ಎಂಬುದೇ ಬಗೆಹರಿಸಲಾಗದ ಸಮಸ್ಯೆಯಾಗಿತ್ತು. ಈ ದಿಶೆಯಲ್ಲಿ ಫ್ಲೂರೀನು ತನ್ನ ಸ್ನೇಹ ಹಸ್ತವನ್ನು ನೀಡಿತು. ಫ್ಲೂರೀನು ಯುರೇನಿಯಂ

ನೊಂದಿಗೆ ಸುಲಭವಾಗಿ ಸಂಯೋಗಗೊಂಡು ಯುರೇನಿಯಂ ಹೆಕ್ಸಾಫ್ಲೂರೈಡು ಎಂಬ ಸಂಯುಕ್ತವನ್ನು ಕೊಡುವುದು. ಯುರೇನಿಯಂನ ಎರಡು ರೂಪಗಳೂ ಈ ರೀತಿಯ ಸಂಯುಕ್ತಗಳನ್ನು ಕೊಡುತ್ತವೆ ಮತ್ತು ಅವುಗಳ ಗುಣಲಕ್ಷಣಗಳಲ್ಲಿ ವ್ಯತ್ಯಾಸಗಳು ತಲೆದೋರುತ್ತವೆ. ಆದ್ದರಿಂದ ಎರಡು ರೀತಿಯ ಯುರೇನಿಯಂ ಹೆಕ್ಸಾಫ್ಲೂರೈಡು ಗಳನ್ನು ಸುಲಭವಾಗಿ ಬೇರ್ಪಡಿಸಬಹುದು.

ಜಡಾನಿಲಗಳನ್ನು ಕಂಡುಹಿಡಿದಾಗಿನಿಂದಲೂ ಅವುಗಳು ನಿಜಕ್ಕೂ ಜಡ ಅನಿಲಗಳೇ? ಅಥವಾ ಅವುಗಳ ಸಂಯುಕ್ತಗಳನ್ನು ತಯಾರಿಸಲು ಸಾಧ್ಯವೇ? ಎಂಬ ಪ್ರಶ್ನೆಗಳನ್ನು ಬಗೆಹರಿಸಲು ವಿಜ್ಞಾನಿಗಳು ಸಂಶೋಧನೆಗಳನ್ನು ನಡೆಸುತ್ತಲೇ ಇದ್ದಾರೆ. ಈಗ ಜಡಾನಿಲಗಳು ನಿಜಕ್ಕೂ ಜಡವಲ್ಲ ಎಂಬುದಾಗಿ ತಿಳಿದಿದೆ. ಜಡಾನಿಲಗಳೂ ಸಂಯುಕ್ತಗಳನ್ನು ಕೊಡುತ್ತವೆಯೆಂಬುದನ್ನು ಮೊಟ್ಟಮೊದಲು ತೋರಿಸಿಕೊಟ್ಟಿದ್ದು ಫ್ಲೂರೀನ್. ಅನಂತರ ಅನೇಕ ಜಡಾನಿಲ ಫ್ಲೂರೈಡ್‌ಗಳನ್ನಲ್ಲದೆ ಬೇರೆ ಸಂಯುಕ್ತಗಳನ್ನೂ ತಯಾರಿಸಲು ಸುಲಭ ಮಾರ್ಗ ದೊರೆತಂತಾಯಿತು.

ಜೀವಿಗಳಲ್ಲಿ ಫ್ಲೂರೀನು ಅತ್ಯವಶ್ಯವಿಲ್ಲದಿದ್ದರೂ ಅತ್ಯಲ್ಪ ಅಂಶ ಫ್ಲೂರೀನ್ ಬಹಳ ಪ್ರಮುಖ ಪಾತ್ರ ವಹಿಸುವುದು. ಈಗ್ಗೆ ಕೆಲವು ವರ್ಷಗಳ ಹಿಂದೆ ಟೆಕ್ಸಾಸ್‌ನಲ್ಲಿ ನಡೆಸಿದ ಸರ್ವೇ ಪ್ರಕಾರ ಅಲ್ಲಿಯ ಜನರ ಹಲ್ಲುಗಳು ರಂಧ್ರರಹಿತವೂ ಶಕ್ತಿಯುತವೂ ಆಗಿರುವುದಾಗಿ ತಿಳಿದುಬಂದಿತು. ದಂತವೈದ್ಯರುಗಳು ಈ ವಿಷಯವಾಗಿ ಸಂಶೋಧನೆ ನಡೆಸಿದಾಗ ಬಹಳ ಕುತೂಹಲಕಾರಿಯಾದ ಅಂಶ ಬೆಳಕಿಗೆ ಬಂದಿತು. ಟೆಕ್ಸಾಸಿನ ಜನರು ಕುಡಿಯುತ್ತಿದ್ದ ನೀರಿನಲ್ಲಿ ಫ್ಲೂರೈಡ್ ಎಂಬ ಸಂಯುಕ್ತವು ಸೇರಿಕೊಂಡಿತ್ತು. ಆದ್ದರಿಂದ ದಂತಗಳ ಆರೋಗ್ಯಕ್ಕೆ ಫ್ಲೂರೈಡು ಸಿದ್ಧೌಷಧವೆಂಬುದಾಗಿ ಹೇಳಬಹುದು. ಆದರೆ ಇದು ಅತ್ಯಲ್ಪ ಅಂಶವಿರಬೇಕು. ಹೆಚ್ಚಿನ ಅಂಶ ಹಾನಿಕರ. ಫ್ಲೂರೀನು ವಿನಾಶಕಾರಿಯೂ ಹೌದು ಉಪಕಾರಿಯೂ ಹೌದು. ಅದನ್ನು ಬಳಸುವುದರಲ್ಲಿ ಜಾಣತನವಿದ್ದರೆ ಉತ್ತಮ ಫಲ ಪಡೆಯಬಹುದು.

ನಂಬಿಕೆ* : ಒಂದು ವಿಶ್ಲೇಷಣೆ

ಜಿ. ಎಸ್. ಕಾಪಸೆ

ಚೆನ್ನವೀರ ಕಣವಿಯವರ ಕವಿತೆಗಳಲ್ಲಿ 'ನಂಬಿಕೆ' ವಿಶಿಷ್ಟ ಸಂವೇದನೆಯುಳ್ಳ ಸಾಂದ್ರವಾದ ಸಂಕೇತ – ಪ್ರತಿಮೆಗಳಿಂದ ಕೂಡಿದ, ಸಂಕೀರ್ಣತೆಯನ್ನು ಒಳಗೊಂಡ ಒಂದು ಗಮನಾರ್ಹ ಕವಿತೆ: ಇಲ್ಲಿಯ ವಸ್ತು ಮೂಲತಃ ಅಮೂರ್ತ (abstract) ವಾದದ್ದು; ಆದರೂ ಜೀವನದ ತುಂಬ ವ್ಯಾಪಿಸಿಕೊಂಡಂಥದ್ದು. ಇಂಥ ವಸ್ತುವನ್ನು ಕಾವ್ಯಕ್ಕೆ ದುಡಿಸಿಕೊಳ್ಳುವಾಗ ಕವಿ ಎಷ್ಟು ಕಾಳಜಿ ತೋರಿದರೂ ಸಾಲದೆನಿಸುತ್ತದೆ. ಚಿಂತನ ಶೀಲ ವ್ಯಕ್ತಿತ್ವವುಳ್ಳ ಕಣವಿಯವರು ತಮ್ಮ ಅನುಭವಗಳಿಗೆಲ್ಲ ಆಕಾರಕೊಡುತ್ತ, ತೀರ ಸಹಜವೆನ್ನುವಂತೆ ಈ ಕವಿತೆ ಸೃಷ್ಟಿಸಿರುವುದನ್ನು ಕಾಣಬಹುದು.

ಕವಿತೆಯ ವಿಶ್ಲೇಷಣೆಗೆ ತೊಡಗುವ ಮುನ್ನ ಕವಿತೆಯ ಅಭಿವ್ಯಕ್ತಿ – ಸ್ವರೂಪಕ್ಕೆ ಸಂಬಂಧಿಸಿದ ಒಂದು ಮಹತ್ವದ ಅಂಶವನ್ನು ಗುರುತಿಸಿಕೊಳ್ಳುವದು ವಿಹಿತವೆನಿಸುತ್ತದೆ. ಅದೆಂದರೆ ಈ ಕವಿತೆಯಲ್ಲಿ ಕವಿಯೇ ನಾಯಕತ್ವ ವಹಿಸಿ ಮಾತಾಡುತ್ತಿರುವದು. ನನಗೆ ಗೊತ್ತಿದ್ದ ಮಟ್ಟಿಗೆ ಸ್ವತಃ ಕಣವಿಯವರೇ ಕವನದ ನಾಯಕತ್ವ ವಹಿಸಿದ್ದು ಕಡಿಮೆ. ತೀರ ಕೆಲವು ಕವಿತೆಗಳಲ್ಲಿ ಮಾತ್ರ ಅವರ 'ನನ್ನತನ' ಕಾಣಿಸಿಕೊಳ್ಳುತ್ತದೆ. ಉಳಿದ ಎಲ್ಲ ಕವಿತೆಗಳಲ್ಲಿ 'ನಾವು' ಎಂಬ ಸಾರ್ವತ್ರಿಕ ಪ್ರಜ್ಞೆಯೇ ಇದೆ. ಪ್ರಸ್ತುತ ಕವಿತೆಯ ದೃಷ್ಟಿಯಿಂದ ಅವರ 'ನನ್ನತನ' ಸೇರಿದುದೇ ಸೂಕ್ತವಾದದ್ದು. ಯಾಕೆಂದರೆ 'ನಂಬಿಕೆ' ಯಾವಾಗಲೂ ವ್ಯಕ್ತಿಗತವಾದದ್ದು, ಅದು ಆಯಾ ವ್ಯಕ್ತಿಯ ವ್ಯಕ್ತಿತ್ವದೊಂದಿಗೇ ಬೆಳೆದು ಬರುವಂಥಾದ್ದು. ಹಾಗಿದ್ದೂ ಅದು ಸಾರ್ವತ್ರಿಕ ಮೌಲ್ಯ ಉಳ್ಳದ್ದು. ಪ್ರತಿಯೊಬ್ಬ ವ್ಯಕ್ತಿ ತನಗಿಷ್ಟವಿರುವ ವಿಷಯಗಳಲ್ಲಿ, ವ್ಯಕ್ತಿಗಳಲ್ಲಿ ತನ್ನ ದೃಷ್ಟಿಗನುಗುಣವಾದ ವಿಚಾರಗಳಲ್ಲಿ, ಧೋರಣೆಗಳಲ್ಲಿ ಹಾಗೂ ತನ್ನ ವ್ಯಕ್ತಿತ್ವದ ವಿಕಾಸಕ್ಕೆ ಸಹಕಾರಿಯಾಗಬಲ್ಲ ತತ್ತ್ವಗಳಲ್ಲಿ, ಸಿದ್ಧಾಂತಗಳಲ್ಲಿ 'ನಂಬಿಕೆ' ಇಟ್ಟಿರುತ್ತಾನೆ. 'ನಂಬಿಕೆ' ವ್ಯಾವಹಾರಿಕವಾಗಿ, ನೈತಿಕವಾಗಿ, ತಾತ್ತ್ವಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ನಮ್ಮ ಜೀವನದ ವಿವಿಧ ಸ್ತರಗಳಲ್ಲಿ ಕಾರ್ಯ ಮಾಡುತ್ತಿರುತ್ತದೆ. ಅದು ಎಲ್ಲ ಸ್ತರಗಳಲ್ಲಿಯೂ ಜೀವನ ನಿರ್ವಹಣೆಗೆ

*ಚೆನ್ನವೀರ ಕಣವಿಯವರ ಒಂದು ಕವಿತೆ; ಅವರ ಕವನ ಸಂಗ್ರಹ 'ಎರಡು ದಡ' ಪುಟ 39 ನೋಡಿ.

ತೀರ ಅನಿವಾರ್ಯವಾದದ್ದಾಗಿರುತ್ತದೆ. ಹೀಗಿದ್ದರೂ ಅದು ಹೊಯ್ದಾಡುವಂತೆ, ಜಾರಿಕೊಳ್ಳುವಂತೆ, ಸುಳ್ಳಾಗುವಂತೆ ಮಾಡುವ ಘಟನೆಗಳು ಆಗಾಗ ನಡೆಯುತ್ತಿರುತ್ತವೆ. ಹಾಗಾದಾಗ ಸಹಜಾಚರಣೆಯಾಗಿದ್ದ 'ನಂಬಿಕೆ' ಒಂದು ಸಮಸ್ಯೆಯಾಗುತ್ತದೆ. ಸರಳವಾಗಿದ್ದ ಅದರ ಸಂವೇದನೆಗಳು ಸಂಕೀರ್ಣವಾಗುತ್ತವೆ. ಅಂಥ ಸಂದರ್ಭಗಳಲ್ಲಿ ವ್ಯಕ್ತಿಯು ತನ್ನೊಳಗೇ ಅವುಗಳನ್ನು ವಿಶ್ಲೇಷಿಸಿ ಅದರ ಎಲ್ಲ ಪದರಗಳನ್ನು ಗುರುತಿಸಲು ಯತ್ನಿಸುತ್ತಾನೆ. ವ್ಯಕ್ತಿಯ ಮನೋಧರ್ಮ ಹಾಗೂ ಅವನ ಜೀವನಾನುಭವಗಳ ಭೂಮಿಕೆಯ ಮೇಲೆ 'ನಂಬಿಕೆ'ಯಲ್ಲಿಯ ಗಟ್ಟಿತನ ಇಲ್ಲವೆ ಜೊಳ್ಳುತನ ಒಂದು ಸ್ಥಿತಿಗೆ ಬಂದು ನಿಲ್ಲುತ್ತದೆ.

ಹೀಗೆ ಜೀವನಕ್ಕೆ ನಿಕಟವಾಗಿರುವ 'ನಂಬಿಕೆ' ಯಂಥ ವಿಷಯವನ್ನು ಕಾವ್ಯಕ್ಕೆ ವಸ್ತುವಾಗಿರಿಸಿಕೊಂಡಾಗ ಕವಿಯಾದವನು ತನ್ನನ್ನು ಅದರಿಂದ ಪ್ರತ್ಯೇಕಿಸಿಕೊಳ್ಳುವದು ಸಾಧ್ಯವೇ ಇಲ್ಲ. ಇಂಥಲ್ಲಿ ಸವ್ಯದ ವಸ್ತು ಪ್ರತಿರೂಪ (Objective correlative) ಹಾಗೂ ವ್ಯಕ್ತಿತ್ವಕ್ಕೆ ಅತೀತವಾಗಿರುವ (escape from personality) ತಂತ್ರಗಳು ಪ್ರಯೋಜನಕಾರಿಯಾಗಲಾರವೆಂದು ಅನಿಸುತ್ತದೆ. ಕವಿ ತನ್ನ ವ್ಯಕ್ತಿತ್ವವನ್ನು ಅದರಲ್ಲಿ ಸಂಪೂರ್ಣ involve ಮಾಡಿಕೊಂಡಾಗಲೇ ಕಾವ್ಯಕ್ಕೊಂದು ಗಟ್ಟಿತನ ಬರುತ್ತದೆ, ಅದು ಜೀವಂತವೂ ಆಗುತ್ತದೆ. ಅಂದರೆ ಇಲ್ಲಿನ ಕವನಕ್ರಿಯೆ ಒಂದು ಸ್ವಗತ ಸಂಭಾಷಣೆಯಂತಿರಬೇಕೇ ಹೊರತು ಬೇರೆ ಯಾವದೆ ಬಗೆಯ ಶಬ್ದ ಚಿತ್ರದಂತೆ ಅಥವಾ ರೂಪಕದಂತೆ ಇರತಕ್ಕದ್ದಲ್ಲ.

ಕಣವಿಯವರ ಈ ಕವಿತೆ ಸಂಕೇತ ಪ್ರತಿಮೆಗಳನ್ನು ಸೃಷ್ಟಿಸಿಕೊಳ್ಳುತ್ತ 'ನಂಬಿಕೆ'ಯ ಒಂದು ಶಿಲ್ಪವನ್ನು ರಚಿಸುತ್ತ, ಸ್ವಗತ ಸಂಭಾಷಣೆಯಾಗಿ, ಅನುಭವದ ವಿವಿಧ ಮಗ್ಗುಲುಗಳನ್ನು ಹೊರಳಿಸಿ ಹೊರಳಿಸಿ ನೋಡುತ್ತ, ತನ್ನದೇ ಆದ ನಿಲುವನ್ನು ಸೂಚಿಸುತ್ತದೆ.

ಕವಿತೆ ಪ್ರಾರಂಭವಾಗುವದು 'ನಂಬಿಕೆ'ಯ ಸ್ವರೂಪ, ಜೀವನದಲ್ಲಿ ಅದರ ಪ್ರಭಾವ ಪರಿಣಾಮಗಳನ್ನು ಚಿತ್ರಿಸುವದರೊಂದಿಗೆ :

ಅನಂತವೆಂದರೂ ಆಕಾಶಕೊಂದು ಆಕೃತಿಯುಂಟು,
ನೀಲವೆಂದರೂ ನೂರು ಬಣ್ಣದ ಲೀಲೆಗವಕಾಶವುಂಟು.

ಇದು ನಂಬಿಕೆಯ ಒಂದು ರೂಪ. ಎರಡು ಚರಣಗಳ ಈ ಪ್ರತಿಮೆಯಲ್ಲಿ ಅದರ ಹರವನ್ನು, ವೈವಿಧ್ಯವನ್ನೂ ಗುರುತಿಸಬಹುದು. ಅನಂತ, ಆಕಾಶ, ಆಕೃತಿ ಇವು 'ನಂಬಿಕೆ'ಯ ಮೂರುಬಗೆಯ (ಮೂರುಬಗೆಯಾಗಿದ್ದರೂ ಎಲ್ಲ ಕೂಡಿ ಒಂದೇ ಆಗಿರುವದು) ಕಲ್ಪನೆಯನ್ನು ತಂದುಕೊಡುತ್ತವೆ. ಅನಂತವೆಂದರೆ ಅಂತವಿಲ್ಲದ್ದು ಅಥವಾ ಸೀಮಾತೀತವಾದದ್ದು. ಅಂದರೆ 'ನಂಬಿಕೆ'ಯು ಪರಿಮಿತಿಗೆ ಒಳಗಾಗ

ದುಢದ್ದು ಎಂದು ಅರ್ಥ, ಅದು ಆಕಾಶದಷ್ಟು ಅಪಾರ ವ್ಯಾಪ್ತಿಯುಳ್ಳದ್ದು ಎಂಬುದನ್ನು ಮುಂದಿನ 'ಆಕಾಶ' ವೆಂಬ ಪದವೇ ಸೂಚಿಸುತ್ತದೆ, ಒಟ್ಟಿನಲ್ಲಿ ಅದು ವಿಶ್ವವ್ಯಾಪಿಯಾದ ಒಂದು ವಿಶಿಷ್ಟ ವಸ್ತು. ಹಾಗಿದ್ದರೂ ಅದಕ್ಕೊಂದು ಆಕೃತಿ ಅಥವಾ ಆಕಾರವಿದೆ. ಯಾಕೆಂದರೆ ಆಕಾಶದಂತೆ ಅದು ನಮ್ಮ ಸುತ್ತು-ಮುತ್ತು, ಒಳಗು-ಹೊರಗೂ ವ್ಯಾಪಿಸಿಕೊಂಡಿದೆ. ಅಲ್ಲದೆ ಅನುಭವಗಮ್ಯವಾಗಿದೆ. ಇಲ್ಲಿಯ ಪ್ರತಿಯೊಂದು ಪದದ ಮೊದಲಕ್ಷರಗಳು ಅ. ಆ. ಆ. ಸವರ್ಣಗಳು ಒಂದೇ ಮೂಲವಸ್ತುವನ್ನು ಅಭಿನಯಿಸಿ ತೋರಿಸುವಂತಿದೆ. ಅದರ ಮುಂದಿನ ಚರಣದಲ್ಲಿಯೇ 'ನೀಲ'ವೆಂಬ ವರ್ಣವು ನಂಬಿಕೆ ಏಕವರ್ಣವುಳ್ಳದ್ದೆಂಬುದನ್ನು ಸಮರ್ಥಿಸುತ್ತದೆ. ಅಂದರೆ 'ನಂಬಿಕೆ' ಒಂದೇ ಒಂದು ನಿಶ್ಚಿತ ಬಣ್ಣ (ಸ್ವಭಾವ) ವುಳ್ಳದ್ದಾಗಿರುತ್ತದೆಯೇ ಹೊರತು ಊಸರವಳ್ಳಿಯಂತೆ ಗಳಿಗೆಗಳಿಗೆಗೆ ಬಣ್ಣ ಬದಲಿಸುತ್ತ ಹೋಗುವಂಥದ್ದಲ್ಲ. ಹಾಗಾದಾಗ ಅದು ಅಪನಂಬಿಕೆಯಾಗುತ್ತದೆ. ವಿಚಾರವನ್ನು ಗೃಹೀತ ಮಾಡಿಕೊಂಡಾಗ ಮುಂದೆ ಬರುವ 'ನೂರು ಬಣ್ಣದ ಲೀಲೆಗವಕಾಶವುಂಟು' ಎಂಬುದಕ್ಕೆ ಅರ್ಥವೇನು ಎಂಬುದು ಒಂದು ಪ್ರಶ್ನೆಯಾಗುತ್ತದೆ. ಇಲ್ಲಿಯ 'ನೂರು ಬಣ್ಣ' ಎಂಬುದು ಬಣ್ಣ ಬದಲಾಯಿಸುವುದನ್ನು ಸೂಚಿಸದೆ ಅದರ ವೈವಿಧ್ಯವನ್ನು ತಿಳಿಸಿ ಕೊಡುವಂಥದ್ದೆಂದು ಭಾವಿಸಬೇಕು. 'ಲೀಲೆಗೆ ಅವಕಾಶ' ವಿದೆಯೆಂಬುದು ಜೀವನವು ವೈವಿಧ್ಯಪೂರ್ಣ; ಅದರ ವ್ಯವಹಾರಗಳು, ಕಾರ್ಯಗಳು ಅನೇಕ ಎಂಬುದನ್ನು ಸೂಚಿಸುತ್ತದೆ. ಅನೇಕ ಮುಖವಾಗಿರುವ ಜೀವನ ವ್ಯವಹಾರದಲ್ಲಿ 'ನಂಬಿಕೆ'ಯೂ ಆ ಆ ಸಮಯ, ಸಂದರ್ಭಗಳಿಗನುಸಾರವಾಗಿ ಕಾಣಿಸಿಕೊಳ್ಳುತ್ತದೆ. (ಹಾಗೆ ಕಾಣುವದರಲ್ಲಿಯೇ ಅದರ ನೂರು ಬಣ್ಣಗಳಿವೆ) 'ಲೀಲೆ'ಯೆನ್ನುವದು ಅಗಾಧ ಕಾರ್ಯವನ್ನು ಸೂಚಿಸುವ ಪೌರಾಣಿಕ ಪದವಾದರೂ ಇಲ್ಲಿ ಅದು 'ನಂಬಿಕೆ'ಯ ವಿವಿಧ ಕಾರ್ಯ, ಪರಿಣಾಮಗಳನ್ನು ಸೂಚಿಸಲು ಮಾತ್ರ ನಿರ್ದಿಷ್ಟವಾಗಿದೆ.

> ಭೂಮಿಯ ಮೇಲೆ ಕಾಲೂರಿ ನಡೆದಿದ್ದರೂ ಇದರ
> ಸ್ತರಗಳ ನಡುವೆ ಸ್ಥಿರಗೊಂಡ ಒಡನಾಟ, ನಿರಂತರ ನಂಟು.

ಈ ಸಾಲುಗಳು ನಮ್ಮ ಬದುಕಿಗೂ ನಂಬಿಕೆಗೂ ಇರುವ ಸಂಬಂಧವನ್ನು ಸೂಚಿಸುತ್ತದೆ. 'ಭೂಮಿಯ ಮೇಲೆ ಕಾಲೂರಿ ನಡೆ'ದಿರುವ ಅಂದರೆ ವಾಸ್ತವ ಜಗತ್ತಿನ ಗಾಢ ಸಂಬಂಧವುಳ್ಳ ನಾವು, ನಂಬಿಕೆಯ ವಿವಿಧ ಸ್ತರಗಳ ನಡುವೆಯೇ ಬದುಕುತ್ತಿರುತ್ತೇವೆ. ಅಂತೆಯೇ ನಮಗೂ ಅದಕ್ಕೂ 'ಸ್ಥಿರಗೊಂಡ ಒಡನಾಟ' ವಿದೆ. ಅದು 'ನಿರಂತರ ನಂಟೂ' ಆದುದು. ಇಲ್ಲಿ 'ನಂಟು'ತನವು ರಕ್ತ ಸಂಬಂಧದ ಆಪ್ತತ್ವವನ್ನು ಸೂಚಿಸಿ, ಇನ್ನೂ ಅದರ ನಿಕಟತೆಯನ್ನು ಹೆಚ್ಚಿಸುತ್ತದೆ. 'ನಂಟು' ಪದದಲ್ಲಿರುವ 'ಅಂಟು' ಎಂಬ ಧ್ವನಿಯು ಅದರ ಜಿಗುಟತನವನ್ನು ಸೂಚಿಸದಿರದು. ಹೀಗೆ ಬದುಕು

ನಂಬಿಕೆಗಳಿಗಿರುವ ನಂಟಿನಿಂದ ಜೀವನದಲ್ಲಿ ಪಡೆಯುವ ಅನುಭವ ಎಂಥದು, ಅಥವಾ ಬದುಕು ನಂಬಿಕೆಗಳ ಗಾಢ ಸಮ್ಮಿಲನದಿಂದ ಉಂಟಾಗುವ ಪರಿಣಾಮವೇನು ಎಂಬುದನ್ನು ಮುಂದಿನ ಪ್ರತಿಮೆ ತಿಳಿಸಿಕೊಡುತ್ತದೆ.

ಪಗಲೆಲ್ಲ ಹಸುರಾಗಿ, ತುಂಬುಕೆಂಪಾಗಿ, ರೆಂಬೆ-
ಕೊಂಬೆಗಳೆಲ್ಲ ಸಂಜೆ ಬಾನಿನ ನಿರಾಳ ಮನದೊಳಚ್ಚೊತ್ತಿ.
ಚಿತ್ತಾರವಾಗಿ ಕಪ್ಪು ಮುಸುಕಿನ ಒಳಗೆ ಹುದುಗುವವು
ಇದ್ದು ಇಲ್ಲದ ಹಾಗೆ ಇರುಳಿನಲಿ ಒಮ್ಮೆಲೇ ಚಿಗುರೊಡೆದು
ಅಂತರಂಗವ ಬಿಟ್ಟಿ ಬಯಲಿಗಿಡುವದು ಬಾನು :

ಈ ಪ್ರತಿಮೆ ನೋಡಿದಾಕ್ಷಣಕ್ಕೆ ರೋಮ್ಯಾಂಟಿಕ್ ವರ್ಣನಾರೀತಿಯಾಗಿ ಕಾಣಿಸುತ್ತದಾದರೂ ಅದು ಈ ಸಂದರ್ಭದಲ್ಲಿ ಸಾರ್ಥಕವಾದ ಅಭಿವ್ಯಕ್ತಿಯ ಮಾಧ್ಯಮವಾಗಿದೆ. ಪಗಲೆಲ್ಲ ಹಸರಾಗು ಎಂಬುದು ಬದುಕು ಚೈತನ್ಯದಾಯಿಯಾಗುವದನ್ನು, ತುಂಬು ಕೆಂಪಾಗು ಎಂಬುದು ಚೈತನ್ಯದಾಯಿಯಾದ ನಂತರ ಅದು ಪಕ್ವವಾಗುವದನ್ನೂ ಅಥವಾ ಫಲಪ್ರದವಾಗುವದನ್ನು ಸೂಚಿಸುತ್ತವೆ. ರೆಂಬೆ-ಕೊಂಬೆಗಳೆಲ್ಲ ಎಂಬಲ್ಲಿ ಬದುಕಿನ ಶಾಖೋಪಶಾಖೆಗಳ ಸಂಬಂಧವನ್ನು ಅಂದರೆ ಒಬ್ಬ ವ್ಯಕ್ತಿಯ ಜೀವನಕ್ಕೆ ಸಂಬಂಧಿಸಿದ ಇತರ ಹಲವಾರು ತತ್ವ, ಸಿದ್ಧಾಂತಗಳ ಸಂಬಂಧವನ್ನು ಸೂಚಿಸುತ್ತದೆ. ನಿರಾಳ ಮನದೊಳಚ್ಚೊತ್ತಿ ಚಿತ್ತಾರವಾಗುವದು. ಪ್ರಶಾಂತ ಚಿತ್ರದ ವ್ಯಕ್ತಿತ್ವದ ಒಳಗೇ ಅದು ಸಾಕ್ಷಾತ್ಕರಿಸುವದನ್ನು ಸಂಕೇತಿಸುತ್ತದೆ. ಅದು ಮನೋವೈದ್ಯ ಅಥವಾ ಅನುಭವಗಮ್ಯ ಎಂಬುದೂ ಇದರ ಅರ್ಥವಾಗಿದೆ. ಹಾಗಿರುವದರಿಂದಲೇ ಅದು ಇದ್ದೂ ಇಲ್ಲದ ಹಾಗೆ (ಅವ್ಯಕ್ತವಾಗಿ) ಇರುವದು. ಇದಕ್ಕೆ ಪೂರ್ವಭಾವಿಯಾಗಿ ಬರುವ 'ಕಪ್ಪು ಮುಸುಕಿನ ಒಳಗೆ' ಎಂಬುದು ಒಂದಿಷ್ಟು ಸಂದಿಗ್ಧವಾಗಿದೆ. ಕಪ್ಪು ಮುಸುಕು ಸಾಮಾನ್ಯವಾಗಿ ಅಸತ್ಯ ಅನ್ಯಾಯದ ವ್ಯವಹಾರಗಳನ್ನು ಸೂಚಿಸುವಂಥದ್ದು. ಅಂಥ ವ್ಯವಹಾರದಲ್ಲಿಯೂ ನಂಬಿಕೆ ಚಿತ್ತಾರವಾಗಿ ಹುದುಗುವದು ಎಂದರೆ ವಿರೋಧಾಭಾಸವಾಗುತ್ತದೆ. ಆದರೆ ಇಲ್ಲಿಯ 'ಕಪ್ಪು ಮುಸುಕು' ಫೋಟೊ ನೆಗೆಟಿವ್ಹದಂಥಾದ್ದೆಂದಿಟ್ಟುಕೊಂಡರೆ ಅರ್ಥ ಸರಿಹೋಗುತ್ತದೆ. ಅಂದರೆ ಅಗೋಚರವಾದ ಆದರೂ ಚಿತ್ರವನ್ನು ಹುದಿಗಿಸಿಟ್ಟುಕೊಂಡ ನೆಗೆಟಿವ್ಹದಂತೆ 'ನಂಬಿಕೆ' ನಮ್ಮ ಮನಸ್ಸಿನಲ್ಲಿ ಹುದುಗಿಕೊಂಡಿರುತ್ತದೆ. ಅದರ ಎಲ್ಲ ಬಗೆಯ ಆಕಾರಗಳೂ ಅಲ್ಲಿಯೇ ರೂಪುಗೊಳ್ಳುತ್ತವೆ.

ಹೀಗೆ ಅಂತರಂಗದಲ್ಲಿ ಅಚ್ಚೊತ್ತಿಕೊಂಡಿರುವ "ನಂಬಿಕೆ" ನಮ್ಮ ಅಜಾಗೃತ (unconscious) ಮನಸ್ಸಿನಲ್ಲಿಯೂ ಕಾರ್ಯ ಮಾಡುತ್ತಿರುತ್ತದೆ. ಅಂದರೆ ನಂಬಿಕೆ ಪ್ರಜ್ಞಾಪೂರ್ವಕವಾದ ಆಚರಣೆಯಾಗದೆ ಸಹಜವಾದ ಜೀವನ ವ್ಯಾಪಾರವಾಗಿ ತನ್ನ ಪರಿಣಾಮವನ್ನು ಬೀರುತ್ತಿರುತ್ತದೆ. ಇರುಳಿನಲ್ಲಿ (ಸುಪ್ತಾವಸ್ಥೆಯಲ್ಲಿ ಅಥವಾ

ಅಜಾಗೃತ ಸ್ಥಿತಿಯಲ್ಲಿ) ಯೂ ಅದು ಕಾರ್ಯಮಾಡುತ್ತಿರುತ್ತದೆ. ಇದು ಅವರ ಸಂಕೀರ್ಣವಾದ ಕಾರ್ಯವೆಂದು ಹೇಳಬಹುದು. ಈ ಸಂಕೀರ್ಣತೆಯ ಸೂಕ್ಷ್ಮ ಕಾರ್ಯವನ್ನು ಗುರುತಿಸುವದು ಮಾನಸಶಾಸ್ತ್ರಕ್ಕೂ ಒಮ್ಮೆಲೆ ನಿಲುಕುವಂಥದ್ದಲ್ಲ. ಅವರ ಕ್ರಿಯೆ-ಪ್ರತಿಕ್ರಿಯೆಗಳನ್ನು ಗುರುತಿಸಿ, ವಿಶ್ಲೇಷಿಸಿ ಒಂದು ನಿರ್ಣಯಕ್ಕೆ ಬರ ಬೇಕಾಗುತ್ತದೆ. ಅಂಥವನ್ನು ಕಣವಿಯವರ ಕಾವ್ಯದ ಕಣ್ಣು ಗುರುತಿಸುತ್ತದೆ, ಸಂಕೇತದಲ್ಲಿ ಅಭಿವ್ಯಕ್ತಗೊಳಿಸುತ್ತದೆ. ಅಂದರೆ 'ನಂಬಿಕೆ' ಎಂಬ ಬಾನು (ಕಾವ್ಯದ ಆರಂಭದಲ್ಲಿ ಸೂಚಿಸಿದಂತೆ 'ಆಕಾಶ' ಎಂದೂ ಹೇಳಬಹುದು) ಆ ಅಜಾಗೃತ ಮನಸ್ಸಿನಲ್ಲಿ (ಇರುಳಿನಲಿ) ಒಮ್ಮೆಲೆ ಚಿಗುರೊಡೆದು ತನ್ನ ಹೃದಯವನ್ನು ತೆರೆದಿಡುತ್ತದೆ. ಹಾಗೆ ನಂಬಿಕೆ ತನ್ನತನವನ್ನು ತೆರೆದಿಟ್ಟಾಗ ನಮ್ಮ ವ್ಯಕ್ತಿತ್ವದೊಂದಿಗೆ ಗಾಢವಾಗಿ ಬೆರೆತುಕೊಂಡಿರುತ್ತದೆ. ಅದು :

> ಎಚ್ಚರಾಗದ ಹಾಗೆ ನೆಲದ ಮೈದಡವಿ ಮುದ್ದಿಸುವದು.
> ಆಗ ಎಲ್ಲರಿಗೂ ನಿದ್ದೆ.

ಎಂಬಲ್ಲಿ ವ್ಯಕ್ತವಾಗಿದೆ. 'ಆಗ ಎಲ್ಲರಿಗೂ ನಿದ್ದೆ' ಎಂಬುದರಲ್ಲಿ ಒಬ್ಬ ವ್ಯಕ್ತಿಯ 'ನಂಬಿಕೆ' ಗೆ ಒಳಗಾದ ಎಲ್ಲ ವಿಚಾರಗಳಲ್ಲಿ ಅವರದೆ ಆದ ಒಂದು ಮರೆವು ಇರುತ್ತದೆಂದು ಅರ್ಥ. ಅಥವಾ ಅಂಥ ವಿಚಾರಗಳೆಲ್ಲ ಸ್ಥಿರವಾದ ನಂಬಿಕೆಯ ಕಾರಣದಿಂದ ನಿಶ್ಚಿಂತವಾಗಿರುತ್ತವೆಂದೂ ಅರ್ಥ. ಈ ಸ್ಥಿರವಾದ 'ನಂಬಿಕೆ' ಯಲ್ಲಿ ಒಂದು ಸ್ವಪ್ನ ಸೃಷ್ಟಿಯೂ ಇದೆ :

> ಬೆಳಗಿನ ಜಾವ ಯಾವುದೊ
> ಕನಸು ! ಬೆಳಗಾದ ಮೇಲೆ ಮರೆತು ನೆನೆಸುವುದು -
> ತಿರುಗಾಡಿ ಬರುವಾಗ ಗೆಳೆಯರಿಗೂ ಹೇಳಿ ನಕ್ಕು
> ನಗಿಸುವುದು ; ಹೂ ಗಿಡಕೆ ನೀರು ಹಣಿಸುವದು.

ಬೆಳಗಿನ ಜಾವದ ಇಲ್ಲಿಯ ಕನಸು 'ನಂಬಿಕೆ' ಯ ಶುಭ ಪರಿಣಾಮವನ್ನು ಸೂಚಿಸುತ್ತದೆ. ಅಂತೆಯೇ ಅದನ್ನು ಕವಿ ಮರೆತು ನೆನಸುತ್ತಿದ್ದಾನೆ. ಅಷ್ಟಲ್ಲದೆ ಅದರ ಸೊಗಸನ್ನು ಗೆಳೆಯರಿಗೆ ಹೇಳಿ ನಕ್ಕು ನಗಿಸುತ್ತಾನೆ. ಇಲ್ಲಿಯವರೆಗೆ 'ನಂಬಿಕೆ' ಯ ಒಂದು ಆದರ್ಶದ ನಿಲುವು ಸೂಚಿತವಾಗಿದೆ. ಈ ಆದರ್ಶ ಅಚಲವಾಗಿರುವವರೆಗೂ ಜೀವನದಲ್ಲಿ ಹೊಯ್ದಾಟಕ್ಕೆ ಅವಕಾಶವಿಲ್ಲ. ಯಥಾಪ್ರಕಾರ ಹೂ ಗಿಡಕೆ ನೀರು ಹನಿಸುವ ದೈನಂದಿನ ವ್ಯವಹಾರದಲ್ಲಿ ಲೀನವಾಗಬೇಕಾಗುತ್ತದೆ. ಈ ಸಾಲುಗಳು ಗದ್ಯದ ಹೇಳಿಕೆಗಳಂತೆ (Statements) ತೋರಿದರೂ ಪ್ರತಿಮಾ ರೂಪದಲ್ಲಿಯೇ ಇರುವದನ್ನು ಗಮನಿಸಬಹುದು. ಹೀಗೆ ಹೇಳಿಕೆಗಳನ್ನು ಪ್ರತಿಮೆಗಳನ್ನಾಗಿ ಮಾಡಿಸಿಕೊಳ್ಳುವದರಲ್ಲಿ ಎ. ಕೆ. ರಾಮಾನುಜನ್ ಎದ್ದು ಕಾಣುತ್ತಾರೆ. ಕಣವಿಯವರೂ ಅವುಗಳನ್ನು ಆರಂಭದಿಂದಲೂ ಪ್ರತಿಮಾರೂಪಗಳಲ್ಲಿಯೇ ಮಾಡಿಸಿಕೊಳ್ಳುತ್ತಿರುವ

ವನ್ನು 'ಕೊನೆಯ ನಿಲ್ದಾಣ' 'ಕಾಲ ನಿಲ್ಲುವದಿಲ್ಲ' ಮುಂತಾದ ಕವಿತೆಗಳಲ್ಲಿ ಕಾಣಬಹುದು.

ಕವಿತೆಯ ಮೊದಲನೆಯ ಭಾಗದಲ್ಲಿ ಮೈಮರೆಸುವಷ್ಟು ಗಾಢವಾಗಿದ್ದ 'ನಂಬಿಕೆ' ಎರಡನೆಯ ಭಾಗಕ್ಕೆ ಬಂದಾಗ ಒಂದು ಸಮಸ್ಯೆಯಂತೆ, ಒಗಟಿನಂತೆ ಕಾಣಿಸಿಕೊಳ್ಳುತ್ತದೆ. ಅಂದರೆ 'ನಂಬಿಕೆ'ಯ ಮೊದಲಿನ 'ಸ್ಥಿರಗೊಂಡ ಒಡನಾಟ' 'ನಿರಂತರದ ನಂಟು' ಸಡಿಲವಾಗುವ ಸಮಯವೊದಗಿ ಬಂದು, ಅದು ವಿಶ್ಲೇಷಣೆಗೆ ಒಳಪಡುತ್ತದೆ. ಈ ವಿಶ್ಲೇಷಣೆಯಲ್ಲಿ ಅದರ ಶೈಥಿಲ್ಯಗಳನ್ನು ಕವಿ ತಾನೇ ಪ್ರಶ್ನಿಸಿಕೊಂಡು ಪ್ರಶ್ನೆಯಲ್ಲಿಯೇ ಉತ್ತರವನ್ನು ಹುಡುಕುತ್ತ – ಸಾಗುತ್ತಾನೆ.

ಚಳಿಗಾಲದಲ್ಲಿ ಒಂದೊಂದೆ ಎಲೆಯುದುರಿ ನೆನಪು ಕಳಚು –
ತ್ತಿರುವಾಗ ಯಾರಿಗೂ ಕಾಣದ ಹಾಗೆ ಬೇರಿಂದ ರಸ ಹೀರಿ
ಚಿಗುರಿ ನಿಂತವರಾರು ?

ಎಂಬುದು ಮೊದಲು ಪ್ರಶ್ನೆ. ಚಳಿಗಾಲ ಒಂದು ನಡುಕು ಹುಟ್ಟಿಸುವ ಹಾಗೂ ಎಲೆಗಳನ್ನು ಉದುರಿಸುವ ಸಮಯ. ಇಲ್ಲಿ 'ನಂಬಿಕೆ' ಥಂಡಿಯ ತೀಕ್ಷ್ಣತೆಗೆ ಸಿಕ್ಕು, ತನ್ನ ಪೂರ್ವದ ಎಲೆಗಳನ್ನು ಕಳಚಿಕೊಂಡಿದೆ. 'ಕಳಚು-ತ್ತಿರುವ' ಪದವನ್ನು ಒಡೆದು ಅದರ ಅರ್ಥವಂತಿಕೆಯನ್ನು ಹೆಚ್ಚಿಸಿರುವದನ್ನು ಇಲ್ಲಿ ಕಾಣಬಹುದು. ಹಾಗೆ 'ನಂಬಿಕೆ' ಕಳಚಿ ಹೋದಂತೆನಿಸಿದರೂ ಮತ್ತೆ ಬೇರಿಂದ ರಸ ಹೀರಿ ಚಿಗುರಿ ನಿಂತಿದೆ. ಅಂದರೆ ನಂಬಿಕೆಯ ಗಟ್ಟಿಮುಟ್ಟಾದ ಬೇರು ಸಡಿಲವಾಗಿದ್ದ ಸ್ಥಿತಿಯನ್ನು ಹೋಗಲಾಡಿಸಿ ಮತ್ತೆ ಹೊಸತನವನ್ನು ತಂದುಕೊಟ್ಟಿದೆ ಎಂದರ್ಥ. ಆದರೂ ಅದು ಪ್ರಶ್ನೆಯಾಗಿ, ಒಂದು ವಿಸ್ಮಯವಾಗಿ ಉಳಿದಿದೆ.

ಬಿರುಗಾಳಿ ಬೀಸಿ ಆಕಾಶದುದ್ದ
ಧೂಳಡರಿ ದಿಕ್ಕು ತಪ್ಪಿಸಿ, ಮನೆ ಮನೆಯ ಕಿಡಕಿ ಬಾಗಿಲು
ಬಡಿದು ಪಟ ಪಟ ಹನಿಯುದುರಿದಾಗ ಯಾರು ನೆಲಕಿಳಿದು
ಬಂದವರು ?

ಇದು 'ನಂಬಿಕೆ'ಯ ಇನ್ನೊಂದು ಕ್ರೈಸಿಸ್‌ನ್ನು ಸಾರ್ಥಕವಾಗಿ ಚಿತ್ರಿಸುತ್ತದೆ. ಯಾವುದೋ ಒಂದು ವಿಲಕ್ಷಣವಾದ ಆಘಾತ ಬಿರುಗಾಳಿಯಾಗಿ ಧೂಳೆಬ್ಬಿಸಿ ದಿಕ್ಕು ತಪ್ಪಿಸುತ್ತದೆ. ಆಗ ಮನಸ್ಸಿನ ಎಲ್ಲ ಸ್ತರಗಳ ಮೇಲೂ ಹೊಡೆತ ಬೀಳುತ್ತದೆ. ಅದು 'ಮನೆ ಮನೆಯ ಕಿಡಕಿ – ಬಾಗಿಲು ಬಡಿದು' ಎಂಬ ಪ್ರತಿಮೆಯಲ್ಲಿ ಸೂಚಿತವಾಗಿದೆ. ಮುಂದಿನ ಪ್ರಶ್ನಾರ್ಥಕವು ಹಿಂದಿನ ಆಘಾತ ಸೂಚಕವಾದ ಪ್ರತಿಮೆಗೆ ಒಂದು ಬ್ರೆಕ್ಕು ಹಾಕಿ ಒಂದು ಹೊಸ ಆಸೆಯನ್ನು ಹುಟ್ಟಿಸುತ್ತದೆ. ಎಲ್ಲ ಅಬ್ಬರಣೆ ಮುಗಿದು ಮಳೆಹನಿಯುದುರಿದಂತೆ 'ನಂಬಿಕೆ' ನೆಲಕಿಳಿದು ಬರುತ್ತದೆ. ಇಂಥ ಅವಸ್ಥೆಯಲ್ಲಿ ಒಂದು ದಿನ (ಹಾಗೆಂದು ಕವಿ ಹೇಳಿರದಿದ್ದರೂ ಮುಂದೆ ಮರುದಿನ ಎಂದಿರು

ವವರಿಂದ ಇಲ್ಲಿ ಒಂದು ದಿನ ಎಂಬುದು ಅಧ್ಯಾಹೃತವೆಂದು ತಿಳಿಯಬೇಕು) ಕಳೆದು ಹೋಗುತ್ತದೆ. ಇಲ್ಲಿ ಒಂದು ದಿನ ಎಂಬುದು ಒಂದು ಸಮಯ – ಒಂದು ಕಾಲಾವಧಿ ಎಂದು ಭಾವಿಸಬೇಕೆಂದು ಬೇರೆ ಹೇಳಬೇಕಾಗಿಲ್ಲ. ಅಂಥ ಒಂದು ಆಘಾತಕರ ಸಮಯ ಕಳೆದ ಮೇಲೆ :

> ಮರುದಿನ ಬೇಲಿಗುಂಟ ಹೂವರಳಿದಾಗ ಯಾರು
> ಕಿಲಕಿಲ ನಕ್ಕು ಹೋದವರು ?

ಎಂದು ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಮನಸ್ಸಿನ ಬೇಲಿಯಗುಂಟ 'ನಂಬಿಕೆ' ಮತ್ತೆ ಅರಳಿಕೊಂಡು ಸಂತೋಷವಾಗಿ ನಗುತ್ತಿರುವದು ಇಲ್ಲಿ ಚಿತ್ರಿತವಾಗಿದೆ. 'ಚಿಗುರಿ ನಿಂತವರಾರು ?' 'ಯಾರು ನೆಲಕಿಳಿದು ಬಂದವರು ?' 'ಯಾರು ಕಿಲಕಿಲ ನಕ್ಕು ಹೋದವರು ?' ಎಂಬವೆಲ್ಲ ಅವುಗಳ ಹಿಂದಿನ ನೈಸರ್ಗಿಕ ವಸ್ತುಗಳನ್ನೇ ಕುರಿತು ಹೇಳುತ್ತಿದ್ದರೂ ವ್ಯಕ್ತಿ ಸೂಚಕವಾದ ತತ್ತ್ವ ನಿರ್ದಿಷ್ಟವಾಗಿದೆ. ಅಂದರೆ ಕೆಲವು ಆಘಾತಕರ ಅಪಾಯಕಾರಿಯಾದ ಸಂದರ್ಭದಲ್ಲಿ ಕೆಲವು ತತ್ತ್ವಗಳು 'ನಂಬಿಕೆ' ಗರ್ಭವಾಗಿಯೇ ಉಳಿಯುತ್ತವೆಂಬುದುದನ್ನೂ ಕವಿ ಕಂಡು ಕೊಂಡಂತಿದೆ.

> ನಿರ್ಮಲವಾಗಿ ನಿಂತ ಮೋಡ
> ಹೊಯ್ದಾಡಿ ಎಲ್ಲೋ ಇಳಿಯುವುದು-ಭೂಮಿ ಗುಟುಕರಿಸುವದು
> ಆಗೀಗ ಮಿಂಚಿ ಅಂತರಿಕ್ಷದಲ್ಲೇನೋ ಹೊಳೆಯುವದು.

ಹೀಗೆ ಒಂದು ಕ್ರೈಸಿಸ್‌ನ್ನು ಮುಕ್ತಾಯಗೊಳಿಸುವ ಪ್ರತಿಮೆ ಅದರ ಎಲ್ಲ ಸ್ವರೂಪವನ್ನು ಸಮಾರೋಪವಾಗಿ ಚಿತ್ರಿಸುತ್ತದೆ. ಇಲ್ಲಿಯವರೆಗೆ 'ಆಕಾಶ' 'ಬಾನು' ಈ ರೂಪದಲ್ಲಿದ್ದ ನಂಬಿಕೆ ಈಗ ಘನೀಭೂತವಾಗಿ–ಆದರೂ ಆಕಾಶದ ಒಡಲಲ್ಲಿರುವ–ನಿರ್ಮಲವಾಗಿ ನಿಂತ ಮೋಡವಾಗಿ ಕಾಣಿಸಿಕೊಳ್ಳುತ್ತದೆ. ಅದು ಆರಂಭದಲ್ಲಿ ನಿರ್ಮಲವಾಗಿಯೇ ನಿಂತಿತ್ತು. ಮಧ್ಯ ಹೊಯ್ದಾಡಿತು. ಈಗ ಮತ್ತೆ ಎಲ್ಲೋ ಇಳಿದು-ಮನಸ್ಸಿನ ಯಾವ ಭಾಗದಲ್ಲಿಯೋ ಇಳಿದು-ಹೃದಯ ಭೂಮಿಯು 'ನಂಬಿಕೆ'ಯ ನೀರನ್ನು ಗುಟುಕರಿಸುವಂತೆ ಆಯಿತು. ಅಲ್ಲದೆ ಆಗೀಗ ಅಂತರಿಕ್ಷದಲ್ಲಿ ಮಿಂಚು ಹೊಳೆದಿದೆ. ಇಲ್ಲಿ ಅಂತರಿಕ್ಷವೆಂದರೆ ಅಂತರಂಗ. ಅಂತರಿಕ್ಷ=ಅಂತರಂಗ ಎಂಬ ಸಾಂಗತ್ಯದಲ್ಲಿಯೇ ಕವಿತೆಯ ಅರ್ಥವಂತಿಕೆ ಇದೆ, ಧ್ವನಿಯಿದೆ.

ಕವಿತೆಯ ಮೂರನೆಯ ಭಾಗದಲ್ಲಿ 'ನಂಬಿಕೆ'ಯ ಸಂಕೀರ್ಣಾನುಭವ ವ್ಯಕ್ತಗೊಂಡಿದೆ. ಈ ಹಿಂದಿನ ಅದರ ಹೊಯ್ದಾಟ ಮುಗಿದು ಈಗ ಅದು ಅತೀಂದ್ರಿಯ ಸ್ಪರ್ಶ ಪಡೆಯುತ್ತಿರುವದನ್ನು ಕವಿ ಗುರುತಿಸುತ್ತಾನೆ. ಇದೂ ಕೂಡ ಅಂತರಂಗದ ಕಾರ್ಯವೇ ಆಗಿದೆ :

ಯಾವುದೋ ಗಳಿಗೆಯಲಿ ಹಟಾತ್ತನೆ ಒಳಗೆ ಅನಿಸುವ
ದೊಂದು; ಬೆಟ್ಟದ ಮುಡಿಯ ಕಲ್ಲು ಬಂಡೆಯಲ್ಲಿ ಚಿಲ್ಲನೆ
ಬುಗ್ಗೆ ಚಿಮ್ಮಿ ಹರಿದದ್ದೆಲ್ಲೋ

ಯಾವುದೋ ಒಂದು ಸಮಯದಲ್ಲಿ ತನ್ನ ಒಳಗೆ ಇದ್ದಕ್ಕಿದ್ದಂತೆ ಮೂಡಿದ ಅದರ ಅವ್ಯಕ್ತ ಅನಿಸಿಕೆಯ ಹೇಳಿಕೆ ಇದು. ಈ ಅನಿಸಿಕೆ ಅನಿರ್ವಚನೀಯವಾದ ಒಂದು ಅನುಭವ. ಆ ಅನುಭವವನ್ನು ಕವಿ ಮುಂದಿನ ಸಾಲಿನಲ್ಲಿ ವಚನೀಕರಿಸಿದ್ದಾನೆ. ಇಲ್ಲಿ ಬರುವ ಬೆಟ್ಟದ ಮುಡಿಯ ಕಲ್ಲು ಬಂಡೆ 'ನಂಬಿಕೆ'ಯು ಹುಟ್ಟದೇ ಇರುವ ಒಂದು ಅಸಾಧ್ಯ ಹಾಗೂ ಕಠಿಣತಮ ಅವಸ್ಥೆಯನ್ನು ಪ್ರತಿಬಿಂಬಿಸಿ, ಅದರ ಮುಂದೆಯೇ ಬುಗ್ಗೆ ಚಿಮ್ಮಿ ಹರಿಯುವುದನ್ನು ಹೇಳಿಕೊಡುತ್ತದೆ. ಅಂದರೆ ಎಲ್ಲಿ ನಂಬಿಕೆಯ ನೀರಿಲ್ಲವೆಂಬ ಭಾವನೆಯುಂಟಾಗುತ್ತದೆಯೋ ಅಲ್ಲಿಯೇ ಅದು ಬುಗ್ಗೆಯಾಗಿ ಚಿಮ್ಮಿದ್ದನ್ನು ಕವಿ ಗುರುತಿಸುತ್ತಾನೆ. ಹಾಗೆ ನೋಡಿದರೆ ಬುಗ್ಗೆ ಚಿಮ್ಮುವುದು ಬೆಟ್ಟದ ಮುಡಿಯಲ್ಲಿಯೆ ಹೊರತು ಸಮತಟ್ಟಾದ ನೆಲದಲ್ಲಿ ಅಲ್ಲ. ಜೀವನವೆಲ್ಲ ಸಮವಿದ್ದಾಗ ಒಬ್ಬರು ಇನ್ನೊಬ್ಬರನ್ನು ನಂಬುವದು ಸಹಜ. ಬೆಟ್ಟದಂಥ ಕಷ್ಟ ಕಾಲದಲ್ಲಿ ಅದು ಒಂದು ಪರೀಕ್ಷೆಗೆ ಒಳಗಾಗುತ್ತದೆ. ಆಗ ನಮಗೆ ಎದ್ದು ಕಾಣುವದು ಅಪನಂಬಿಕೆಯ ಕಲ್ಲುಬಂಡೆಯೇ ಹೊರತು ನಂಬಿಕೆಯ ನೀರಲ್ಲ. ಆದರೆ ಕಣವಿಯವರಿಗೆ ಅಂಥ ಸ್ಥಿತಿಯಲ್ಲಿಯೂ ನೀರಿನ ಬುಗ್ಗೆ ಕಂಡಿದೆ. ಅಂದರೆ ಅವರಿಗೆ 'ನಂಬಿಕೆ' ಎಂಥ ಪ್ರಸಂಗದಲ್ಲಿಯೂ ಕೈಕೊಡದೆ ಉಳಿದುಕೊಂಡಿದ್ದುದರ ನಿಸರ್ಗ ಸಹಜವಾದ ಒಂದು ವಿಶಿಷ್ಟ ಸ್ವರೂಪವಾಗಿ ಗೋಚರಿಸಿದೆ.

ಇಷ್ಟಾದಮೇಲೆ ಕವಿಯ ಜೀವಾನುಭವವೆಲ್ಲ ಗಟ್ಟಿಗೊಂಡು ಒಂದು ಸ್ಥಿತಿಗೆ ಬಂದು ನಿಲ್ಲುವುದರ ಸೂಚನೆಯನ್ನು ಮುಂದಿನ ಸಾಲುಗಳು ಪ್ರತಿಬಿಂಬಿಸುತ್ತವೆ. ಇಲ್ಲಿಯೂ ಕವಿಯ ಅನುಭವದ ಸ್ತರಗಳಲ್ಲಿ ಏರಿಳಿತಗಳಿದ್ದರೂ ಕೊನೆಗೆ ಅತ್ಯಂತ ನಿಶ್ಚಿತವಾದ ಒಂದು ನೆಲೆಗೆ ಬಂದು ನಿಂತಿದ್ದನ್ನು ಕಾಣಬಹುದು.

ಹಗಲಿರುಳು ಜಾರುವುವು
ದಿನದಿನವು ನನ್ನೊಳಗಿಂದ ಏನೊ ಹೀರುವವು : ಮತ್ತೆಲ್ಲೋ
ತಿರುಗಿ, ಪತ್ತೆಯಿಲ್ಲದ ಹಾಗೆ ಜೇನಿಟ್ಟು 'ಬಿಡಿಸಿಕೊ' ಎಂದು
ದುಡಿಸುವವು.

ಎಂಬಲ್ಲಿ ಇಡೀ ಬದುಕಿನ ಅನುಭವವಿದೆ. ದೈನಂದಿನ ಜೀವನದಲ್ಲಿ ತನ್ನೊಳಗೆ ಬೆರೆತಿರುವ ಹಾಗಿದ್ದೂ ಮತ್ತೆಲ್ಲೋ ಮುಖ ತಿರುಗಿಸುವ, ಪತ್ತೆಯಿಲ್ಲದಂತಾಗುವ ಆ 'ನಂಬಿಕೆ'ಯ ವಿವಿಧ ರೂಪಗಳು ಜೇನಿಟ್ಟು 'ಬಿಡಿಸಿಕೊ' ಎಂದು ಆಹ್ವಾನಿಸುತ್ತವೆ. 'ನಂಬಿಕೆ'ಯೊಂದು ಜೇನು. ಆದರೆ ಅದು ಸುಲಭವಾಗಿ ಸಿಗುವಂಥಾದ್ದಲ್ಲ. ಪ್ರಯತ್ನಪೂರ್ವಕವಾಗಿ, ಬಿಡಿಸಿಕೊಳ್ಳಬೇಕಾಗುವಂಥಾದ್ದು. ಅಂಥ ಜೇಂಗೊಡದ

ಕಂಡು ಅಚ್ಚರಿಗೊಂಡರೂ ಅವಸರ ಪಡುವಹಾಗಿಲ್ಲ. ಎಂಬುದು ಮೊದಲಿನ ವಿಚಾರಕ್ಕೆ ಇನ್ನೊಂದು ಆಯಾಮವನ್ನು ನಿರ್ಮಿಸಿಕೊಡುತ್ತದೆ. ಇಲ್ಲಿ ಕವಿಯಲ್ಲಿಯೇ ಒಂದು ಬಗೆಯ ಹೋರಾಟ ನಡೆದಂತೆ ಕಂಡರೂ ಅವನ ಅನುಭವ ನಿರ್ದಿಷ್ಟವಾಗಿದೆ. "ದಾಹ ತೀರಿಸಲು ನೀರಲ್ಲ, ಮತ್ತು ಬರಿಸುವ ಮದ್ಯವಲ್ಲ" ಎಂಬಲ್ಲಿ ನಂಬಿಕೆಯು ಎರಡು ತುತ್ತತುದಿಗಳ (extreme) ನಡುವೆ ಇದೆ ಎಂದು ಕವಿ ಹೇಳುವಂತಿದೆ. 'ನಂಬಿಕೆ'ಯ ಕಾರ್ಯ ನೀರಿನಂತೆ ಬರೀ ದಾಹತೀರಿಸುವದಾಗಲಿ ಇಲ್ಲವೆ ಮದ್ಯದಂತೆ ಮತ್ತುಗೊಳಿಸುವದಾಗಲಿ ಅಲ್ಲ. ತೃಪ್ತಿ ಮತ್ತು ಮತ್ತತೆ ಇವೆರಡೂ ಆಯಾ ಅರ್ಥದಲ್ಲಿ ತಾತ್ಕಾಲಿಕವಾದವು. ಮತ್ತೆ ದಾಹವುಂಟಾಗುವದು, ಮತ್ತೆ ಮತ್ತೇರಬೇಕೆಂಬ ಅಪೇಕ್ಷೆ ಉಂಟಾಗುವದು ಇದ್ದೇ ಇರುತ್ತದೆ. ಜೀವನ ಸವಿಯುಂಡಿರುವ 'ನಂಬಿಕೆ'ಯನ್ನು ಅನುಭವಿಸಿದಾಗ ಆಗುವ ಆನಂದವೇ ಬೇರೆ. ಅದು 'ಅಂಗೈಯಲ್ಲಿ ಹನಿ ಹನಿ ಹಾಕಿ, ನೆಕ್ಕಿ ನಾಲಿಗೆ ತುಂಬ ಸವಿದು ಕಣ್ಮುಚ್ಚಿ ತೆರೆಯಬೇಕು' ಹನಿ ಹನಿ ಹಾಕಿಕೊಳ್ಳುವ, ನಾಲಗೆಯ ತುಂಬ ಸವಿಯುವ, ಕಣ್ಮುಚ್ಚಿ ತೆರೆಯುವ ಈ ಕ್ರಿಯಾತ್ಮಕವಾದ ಧ್ವನಿಪೂರ್ಣವಾದ ಚರಣಗಳಲ್ಲಿರುವ ಅರ್ಥ ಅನನ್ಯವಾದದ್ದು. ಆ ಪದಗಳನ್ನು ಬಿಚ್ಚಿ ನೋಡುವದಕ್ಕಿಂತ ಇಡಿಯಾಗಿ ಸ್ವಾನುಭವದ ಹಿನ್ನೆಲೆಯಲ್ಲಿ ಆಸ್ವಾದಿಸುವುದೇ ಸೂಕ್ತವೆನಿಸುತ್ತದೆ.

ಹೀಗೆ ಸ್ವಾನುಭವವನ್ನು ನಿವೇದಿಸಿ ಕೊನೆಗೆ ಕವಿ ತನ್ನ ಅದರ ವಿಲಕ್ಷಣ ಸಂಬಂಧವನ್ನು ಹೇಳಿಬಿಡುತ್ತಾನೆ.

ನನ್ನ ನಂಬಿಕೆಯೊಂದು ಆಕಾಶ :
ನಿಜ, ಅದಕೆ ತಳಬುಡವಿಲ್ಲ, ನಾನೆಷ್ಟು ಬೆಳೆದರೂ
ನನಗೆ ನಿಲುಕುವದಿಲ್ಲ, ದೂರದಿಂದಲ್ಲದೆ ನಾನದನು
ಮುಟ್ಟಿ ಅನುಭವಿಸಿಲ್ಲ. ಮೇಲೆ ನೋಡದೆ ಸೆಟೆದುಕೊಂಡೇ
ನಡೆದರೂ ಅದು ಸದಾ ನನ್ನ ತಲೆಯ ಮೇಲೆ.

ಕವಿತೆಯ ಆರಂಭದ ಉಕ್ತಿಗೆ ಪುಷ್ಟಿಕೊಡುವ, ಅದನ್ನು ಖಚಿತಪಡಿಸುವ ಹಾಗೂ ಅದರ ವ್ಯಾಪಕತೆಯನ್ನು ಪುನಃ ಸ್ಮರಿಸಿಕೊಳ್ಳುವ 'ನನ್ನ ನಂಬಿಕೆಯೊಂದು ಆಕಾಶ' ಎಂಬ ಹೇಳಿಕೆ ಕೊಟ್ಟು, ಅದರ ಇನ್ನೊಂದು ವಿಶಿಷ್ಟಾನುಭವವನ್ನು ಕವಿ ನಮ್ಮ ಮುಂದಿಡುತ್ತಾನೆ. ಇಲ್ಲಿ ಅದರ ಆಕಾರ ತಳಬುಡವಿಲ್ಲದ್ದಾಗಿ ಕಂಡಿದೆ. ಇದು ಆಧಾರರಾಹಿತ್ಯ, ಅಸ್ಥಿರತೆಯನ್ನು ಸೂಚಿಸುವಂತಿದೆ, ಅಥವಾ ಅಭದ್ರತೆಯ ಒಂದು ಸಂಕೇತವಾಗಿದೆ. ಆದರೆ ಕವಿಗೆ ಅದೇ ಇಲ್ಲಿ ನಿರ್ದಿಷ್ಟವಾದ ಅರ್ಥವಾದರೆ ಹಿಂದಿನ ಅನುಭವವೆಲ್ಲ ಆಭಾಸವಾಗಿ ಕಾಣುತ್ತದೆ. ಆಕಾಶದ ಆಕಾರ ದುಂಡಗಾದದ್ದು; ಉದಾಹರಣೆಕೊಟ್ಟು ಹೇಳುವದಾದರೆ ಚೆಂಡಿನಂಥಾದ್ದು. ಇಂಥದಕ್ಕೆ ತಳ ಯಾವುದು ಬುಡ ಯಾವುದು ಎಂಬುದನ್ನು ನಿರ್ಧರಿಸುವದು ಕಷ್ಟ. ಆದರೆ ಅದರ

ಯಾವ ಮಗ್ಗುಲೂ ತಳವಾಗಬಹುದು. ಹಾಗೆಯೇ 'ನಂಬಿಕೆ' ಇಂಥದೇ ಒಂದು ತಳವೆಂದು ನಿರ್ಧರಿಸುವುದು ಕಷ್ಟ. ಆದರೆ ಯಾವುದೋ ಒಂದು ಬಿಂದು ತಳವಾಗುತ್ತದೆ, ಅಷ್ಟೆ. ಆಕಾಶದಂತೆ ಅಪರಂಪಾರವಾಗಿರುವ 'ನಂಬಿಕೆ'ಯು ಕೈಗೆ ಸಿಲುಕುವದಾಗಲಿ, ಅಥವಾ ಅದರ ಆದಿ-ಅಂತ್ಯಗಳನ್ನು ಅಳೆದು ತೋರಿಸುವದಾಗಲಿ ಸಾಧ್ಯವಿಲ್ಲ. ಈ ಅರ್ಥದಲ್ಲಿಯೇ 'ನನಗೆ ಸಿಲುಕುವದಿಲ್ಲ' ಎಂಬುದನ್ನು ತೆಗೆದುಕೊಳ್ಳಬೇಕೇ ಹೊರತು ಅನುಭವಕ್ಕೆ ಸಿಗುವದಿಲ್ಲ–ಎಂದು ಭಾವಿಸಲಾಗದು. ಯಾಕೆಂದರೆ ಮುಂದಿನ ಸಾಲಿನಲ್ಲಿ ದೂರದಿಂದ ಪಡೆದ ಅನುಭವವಿದೆ. ಇದೂ ಕೂಡ ಅನುಮಾನಕ್ಕೆ ಎಡಕೊಡುತ್ತದೆ. ಹಿಂದೆ ಹೇಳಿದ 'ಒಡನಾಟ' 'ನಿರಂತರ ನಂಟು' ದೂರದಿಂದ ನಡೆಯುತಕ್ಕವುಗಳೇ ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ. ಅಲ್ಲದೆ ಕವಿ 'ನಾನವನು ಮುಟ್ಟಿ ಅನುಭವಿಸಿಲ್ಲ' ಎಂಬ ಮಾತು 'ಅಂಗೈಯಲ್ಲಿ ಹನಿಹನಿ ಹಾಕಿ, ನೆಕ್ಕಿ ನಾಲಿಗೆ ತುಂಬ ಸವಿದು, ಕಣ್ಮುಚ್ಚಿ ತಣಿಯಬೇಕು' ಎಂಬುದಕ್ಕೆ ವಿರೋಧವಾಗಿಯೂ ಕಾಣುತ್ತದೆ. ಹೀಗೆ ಪರಸ್ಪರ ವಿರೋಧವಿರುವುದೂ ಒಂದು ಸಂಕೀರ್ಣತೆ ಎಂದು ಹೇಳಿ ಕೈ ತೊಳೆದುಕೊಳ್ಳುವಂತಿಲ್ಲ. ಅದರ ಒಳಹೊಕ್ಕು ನೋಡಿಯೇ ಒಂದು ತೀರ್ಮಾನಕ್ಕೆ ಬರಬೇಕೆನಿಸುತ್ತದೆ. ಇಲ್ಲಿ 'ಮುಟ್ಟಿ ಅನುಭವಿಸಿಲ್ಲ' ಎಂಬುದರ ಮುಂದೆ ಬರುವ ಮೇಲೆ ನೋಡದೆ ಸೆಟೆದುಕೊಂಡೇ ನಡೆದರೂ 'ಅದು ಸದಾ ನನ್ನ ತಲೆಯ ಮೇಲೆ' ಎಂಬ ಹೇಳಿಕೆಯಿರುವುದನ್ನು ಗಮನಿಸಬೇಕು. ಅಂಗೈಯಲ್ಲಿ ಹನಿಹನಿ ಹಾಕಿ, ನೆಕ್ಕುವುದು ಒಂದು ಅನುಭವವಾದರೆ, ನಮ್ಮ ಮೈಮರೆವಲ್ಲಿಯೂ–ಅಂದರೆ ಅಹಮಹಮಿಕೆಯ ಭಾವನೆಯಲ್ಲಿಯೂ – ಅದು ಸ್ಪರ್ಶಾತೀತವಾಗಿ ತಲೆಯ ಮೇಲೆ ಇರುತ್ತದೆಂದು ಕವಿ ಹೇಳುತ್ತಾನೆ. ಇದು ಮಾನವನ ಇನ್ನೊಂದು ಸ್ವಭಾವವನ್ನು ಆ ಸ್ವಭಾವಕ್ಕು 'ನಂಬಿಕೆ' ಎನ್ನುವುದು ಅಗತ್ಯವೆಂಬುದನ್ನೂ ಸೂಚಿಸುತ್ತದೆ. ಇದನ್ನು ನೋಡಿದರೆ ಈ ಕವಿತೆಯಲ್ಲಿನ ಪ್ರತಿಮೆಗಳನ್ನು ಹಿಂದಿನ ಹಾಗೂ ಮುಂದಿನವುಗಳನ್ನು-ಜೊತೆ ಜೊತೆಗಿಟ್ಟು ಅರ್ಥೈಸದೆ ಆಯಾ ಪ್ರತಿಮೆಯ ಹಿನ್ನೆಲೆಯೊಂದಿಗೆ ಸ್ವತಂತ್ರವಾಗಿಯೇ ಅರ್ಥೈಸುವುದು ಒಳ್ಳೆಯದೆನಿಸುತ್ತದೆ.

ಕವಿತೆಯ ಕೊನೆಯ ಸಾಲುಗಳು ಸಾಮಯಿಕ ಪ್ರಜ್ಞೆಯಿಂದ ಒಂದು climax ಆಗಿ ಬರುತ್ತವೆ.

ಹಗಲು ಹೊತ್ತಿನಲಿ ಅದರೆಡೆಗೆ ಲಕ್ಷವಿಲ್ಲ. ನಮ್ಮ ಬದುಕಿನಲಿ
ನಾವು ಮಗ್ನರಾದರೆ ಸಾಕು, ಅದಕೆ ಚಿಂತೆಯಿಲ್ಲ.
ರಾತ್ರಿ ವಿದ್ಯುದ್ದೀಪ ಕೈಕೊಟ್ಟು, ಮಿಣಿ ಮಿಣಿ ಮೇಣ
ಬತ್ತಿಯ ಹಚ್ಚಿ, ಅಂಜಿ ಆಕಳಿಸುತ್ತ ಕುಳಿತಾಗಲೂ
ಆಕಾಶದಲ್ಲಿ ಹೊಳೆವ ನಕ್ಷತ್ರಕ್ಕೆ ಲೆಕ್ಕವಿಲ್ಲ.

ಹಗಲು ಹಾಗೂ ರಾತ್ರಿ ಇವು ಜೀವನದ ಎರಡು ಮಹತ್ವದ ಮುಖಗಳಾದ ಸುಖ

ದುಃಖಿಗಳನ್ನು ಪ್ರತಿನಿಧಿಸುವಂಥವು. ಇಲ್ಲಿ ಸುಖದ ಕಾಲದಲ್ಲಿಯ 'ನಂಬಿಕೆ'ಯು ಸಂಬಂಧ-ನಿಶ್ಚಿಂತವಾದುದಾದರೆ ದುಃಖದ ಕಾಲದಲ್ಲಿ ಅದರ ಸಂಬಂಧ ಹಾಗಲ್ಲ ದೆಂಬುದು ಸ್ಪಷ್ಟವಾಗಿದೆ. ವಿದ್ಯುದ್ದೀಪದ ಪ್ರತಿಮೆ ಆಧುನಿಕ ನಾಗರಿಕತೆಯ ಪ್ರತೀಕವಾಗಿ ಬಂದು, ಅದು ಸಂಪೂರ್ಣವಾಗಿ 'ನಂಬಿಕೆ'ಗೆ ಪಾತ್ರವಾದುದಲ್ಲ ಎಂಬು ದನ್ನು ಸೂಚಿಸುತ್ತದೆ. ಅಂಥ ಸ್ಥಿತಿಯಲ್ಲಿ ನಮ್ಮ ಸಂಸ್ಕೃತಿಯ ಪರಂಪರೆಯೇ ಬೆಳಕು ನೀಡುವಂಥದ್ದು. 'ಮಿಣಿ ಮಿಣಿ ಮೇಣಬತ್ತಿ' ಅದನ್ನು ಸಂಕೇತಿಸುತ್ತದೆ. ಕೊನೆಗೆ ನಕ್ಷತ್ರರೂಪದಲ್ಲಿರುವ ಹಲವಾರು ವಸ್ತು, ವಿಚಾರ, ವ್ಯಕ್ತಿ, ತತ್ತ್ವಗಳ ನೆನಪು ಕೊಟ್ಟು, 'ನಂಬಿಕೆ' ಅಗಣಿತವಾಗಿ ತನ್ನ ಸ್ಥಾನದಲ್ಲಿ ಹೊಳೆಯುತ್ತಿರುತ್ತದೆಂಬ ಭರವಸೆಯನ್ನು ಕವಿತೆ ಹುಟ್ಟಿಸುತ್ತದೆ.

ಈ ಕವಿತೆಯ ಇಡೀ ವಸ್ತು ವಾಸ್ತವ ಪ್ರಪಂಚಕ್ಕೆ ಸೇರಿದ್ದು. ಜೀವನದ ವಿವಿಧ ಮುಖ ಅನುಭವವನ್ನು ಅಭಿವ್ಯಕ್ತಗೊಳಿಸುವಂಥಾದ್ದು. ಹಾಗಿದ್ದು ಅದು ಸಂಪೂರ್ಣವಾಗಿ ಮಾನಸಿಕ ವ್ಯಾಪಾರಕ್ಕೆ ಸಂಬಂಧಿಸಿ Metaphysical ಆಗಿಯೇ ಬೆಳೆದದ್ದು. ಇಲ್ಲಿಯ ಕೆಲವು ಪ್ರತಿಮೆಗಳು ಬೆಡಗಿನ ವಚನದ ಮಾದರಿಯಲ್ಲಿಯೇ ಬೆಳೆಯುತ್ತಿರುವುದು ಈ ಕವಿತೆಯ ಇನ್ನೊಂದು ವಿಶೇಷ ಗುಣ. ಶೈಥಿಲ್ಯಕ್ಕೆಡೆಗೊಡದ ಕಾವ್ಯ ಬಂಧ ಹಾಗೂ ನುಡಿಗಟ್ಟುಗಳು ಕವಿತೆಯ ಅರ್ಥವಂತಿಕೆಯನ್ನು ತಿರು-ತಿರುಗಿ ನೋಡುವಂತೆ ಮಾಡುತ್ತವೆ. ಇದು ಕಣವಿಯವರ ಕಾವ್ಯಸಿದ್ಧಿಗೆ ಒಂದು ನಿದರ್ಶನ ವೆಂದು ಹೇಳಬಹುದು.

ಕರ್ನಾಟಕದಲ್ಲಿ ಮಾಸ್ತಿ

ದೇವರ ಕೊಂಡಾರೆಡ್ಡಿ

ಶಾಸನಗಳನ್ನು ಪರಿಶೀಲಿಸುವಾಗ ಪ್ರಶಸ್ತಿ ಶಾಸನಗಳು, ದಾನ ಶಾಸನಗಳು, ವೀರಗಲ್ಲುಗಳು ಎಂದು ವಿಂಗಡಿಸುತ್ತೇವೆ. ಆದರೆ ನಿರ್ದಿಷ್ಟವಾಗಿ ಇವನ್ನು ವಿಂಗಡಿಸಲು ಸಾಧ್ಯವಿಲ್ಲ. ಹೊರನೋಟಕ್ಕೆ ಮಾತ್ರ ಹೀಗೆ ವಿಂಗಡಿಸಬಹುದು. ಇತರ ಶಾಸನಗಳಿಗಿಂತ ವೀರಗಲ್ಲುಗಳು ಚರಿತ್ರೆಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತವೆ; ಯುದ್ಧ ನಡೆದ ಸ್ಥಳ, ಹೋರಾಡಿದ ರಾಜರು, ಇತ್ಯಾದಿ ವಿಷಯಗಳನ್ನು ತಿಳಿಸುತ್ತವೆ. ಆದರೆ ಅನೇಕ ಶಾಸನಗಳು ಬರವಣಿಗೆಯೇ ಇಲ್ಲದೆ ಅನಾಮಧೇಯ ಶಾಸನಗಳಾಗಿರುತ್ತವೆ. ಇನ್ನೂ ಕೆಲವೆಡೆ ಇರುವ ವಿಷಯ ಸಾಲದೆನಿಸುತ್ತದೆ. ಇದರಂತೆಯೇ ಬರವಣಿಗೆಯಿರುವ ಮಾಸ್ತಿಕಲ್ಲುಗಳೂ ಅಪರೂಪ. ಇಲ್ಲಿ ಮತ್ತೊಂದು ವಿಷಯವನ್ನು ತಿಳಿದುಕೊಳ್ಳುವುದು ಒಳ್ಳೆಯದು. ಅದೆಂದರೆ ವೀರಗಲ್ಲುಗಳನ್ನು ಮತ್ತು ಮಾಸ್ತಿಕಲ್ಲುಗಳನ್ನು ಬೇರೆ ಬೇರೆ ವಿಂಗಡಿಸುವುದು. ವೀರಗಲ್ಲುಗಳಲ್ಲಿ ವೀರರ ಚಿತ್ರವಿದ್ದು ಕೆಲವು ವೇಳೆ ಯುದ್ಧರಂಗದ ಚಿತ್ರ ಕೆತ್ತಿರುತ್ತಾರೆ. ಮಾಸ್ತಿ ಕಲ್ಲುಗಳಲ್ಲಿ ಹೆಂಗಸಿನ ಕೆತ್ತನೆಯಿದ್ದು ತನ್ನ ಕೈಯ್ಯನ್ನು ಮೇಲಕ್ಕೆತ್ತಿ ಅಂಗೈ ಬಿಡಿಸಿರುವ ಚಿತ್ರ. ಮತ್ತೊಂದು ಕೈಯ್ಯಲ್ಲಿ ಯಾವುದೋ ವಸ್ತುವನ್ನು ಹಿಡಿದುಕೊಂಡು ನಿಂತಿರುವ ಹೆಂಗಸಿನ ತಲೆ ಕೂದಲು ನಿಮಿರಿರುತ್ತದೆ. ಅಲ್ಲಿ ಅಗ್ನಿಯ ಜ್ವಾಲೆಗಳನ್ನು ಬಿಡಿಸಿರುತ್ತಾರೆ. ಕೆಲವೊಮ್ಮೆ ತುರುಬನ್ನು ಗಂಟುಹಾಕಿ ಮುಗುಳ್ನಗೆ ನಗುತ್ತಾ ಪದ್ಮಾಸನವನ್ನು ಹಾಕಿಗೊಂಡು ಕುಳಿತಿರುವ ಹೆಂಗಸನ್ನು ಕೆತ್ತಿರುತ್ತಾರೆ. ಇನ್ನೂ ಕೆಲವೊಮ್ಮೆ ಸ್ತ್ರೀಯ ಬಲಗೈಯನ್ನು ಮಾತ್ರ ಕೆತ್ತಿರುತ್ತಾರೆ. ಕೈತುಂಬ ಬಳೆ ಇರುತ್ತದೆ. ಬಹುಶಃ ಮಹಾಸತಿಯಾಗುವವಳು ಮಹಾಸತಿಯಾಗುವುದಕ್ಕೆ ಮೊದಲು ತನ್ನ ಬಲಗೈಯ್ಯನ್ನು ಬಂಡೆಯ ಮೇಲೆ ಮೂಡಿಸುತ್ತಿದ್ದಳೆಂದು ತೋರುತ್ತದೆ. ಕೆಲವು ಶಾಸನಗಳಲ್ಲಿ ಇದನ್ನು 'ತೋಳುಕಯಿಗೊಟ್ಟಳು' ಎಂದು ಕರೆದಿರುತ್ತಾರೆ. 'ಬೊಮ್ಮನಾಯ್ಕನ ಹೆಂಡತಿ ...... ಬಪೆನಾಯಕಿತ್ತಿ ತೋಳುಕಯಿಗೊಟ್ಟು ಸುರಲೋಕ ಪ್ರಾಪ್ತರಾದರು'[1] ಇವಲ್ಲದೆ ಇನ್ನೊಂದು ಬಗೆಯ ಕಲ್ಲುಗಳಿವೆ. ಅವು ವೀರಗಲ್ಲುಗಳೂ ಹೌದು, ಮಾಸ್ತಿಕಲ್ಲುಗಳೂ ಹೌದು. 'ರಾಮಣನು ಆಯಿಸೂರ ಹುಯಲಿ ಬಿದ್ದನು. ಆತನ ಮಡವಳಿಗೆ ರಾಮಾಯ ವೀರಮಾಸ್ತಿಯಾದಲಿ ನಿಲಿಸಿದ

[1] EC VII sh. 61.1286 AD

ವೀರಗಲ್ಲು'[2] ಇಂತಹವುಗಳನ್ನು ಶಾಸನದಲ್ಲಿ ಹೇಳಿರುವಂತೆ ವೀರಮಾಸ್ತಿಕಲ್ಲು ಎನ್ನುವುದೇ ಉತ್ತಮ.

ಮಾಸ್ತಿಯಾದ ಮೇಲೆ ಆ ಸ್ಥಳದಲ್ಲಿ ನೆಟ್ಟಕಲ್ಲನ್ನು ಮಾಸ್ತಿಕಲ್ಲೆಂದೇ ಅಲ್ಲದೆ ಇತರ ಹೆಸರುಗಳಿಂದಲೂ ಕರೆಯುತ್ತಿದ್ದರೆಂದು ತಿಳಿದುಬರುತ್ತದೆ. "ಸಂಗತಿ"[3] "ತೋಳುಕಯಿಕೊಟ್ಟು"[4] "ಮದವಳಿಗೆಕಲ್"[5] "ಸಹಾನುಭೂತಿ"[6] ಇತ್ಯಾದಿ ಹೆಸರು ಗಳಿಂದ ಕರೆದಿದ್ದಾರೆ. ಒಟ್ಟಿನಲ್ಲಿ ಮಾಸ್ತಿಯಾದವರ ಜ್ಞಾಪಕಾರ್ಥವಾಗಿ ನಿಲ್ಲಿಸಿದ ಕಲ್ಲು ಮಾಸ್ತಿಕಲ್ಲು.

ಮಾಸ್ತಿಯೆಂಬ ಪದವು ಮಹಾಸತಿ ಎಂಬ ಪದದ ತದ್ಭವ. ತನ್ನ ಗಂಡ ಸತ್ತಾಗ, ಕೆಲವೊಮ್ಮೆ ತನ್ನ ಸಮೀಪವರ್ತಿಗಳು ಸತ್ತಾಗ ತನ್ನ ಪ್ರಾಣವನ್ನು ಕಳೆದು ಕೊಳ್ಳುವ ಹೆಂಗಸರನ್ನು ಮಹಾಸತಿಯೆಂದು ಕರೆಯುತ್ತಾರೆ. ಇದು ಆತ್ಮಹತ್ಯೆ ಯಲ್ಲ. ಆತ್ಮಹತ್ಯೆಗೆ ಸಮಾಜದ ವಿರೋಧವುಂಟು. ಆದರೆ ಮಹಾಸತಿಯಾಗುತ್ತಿದ್ದ ವಳಿಗೆ ವಿರೋಧವಿಲ್ಲದೆ ಜನರ ಪುರಸ್ಕಾರಕ್ಕೆ ಪಾತ್ರಳಾಗಿ ಪ್ರಾಣಾರ್ಪಣೆ ಮಾಡುತ್ತಿ ದ್ದಳು. ದಾಕ್ಷಾಯಣಿಯೇ ಮಹಾಸತಿಯಾಗುವವರಿಗೆ ಮೂಲವೆನ್ನುತ್ತಾರೆ. ತನ್ನ ತಂದೆ ದಕ್ಷಬ್ರಹ್ಮ ಯಾಗವನ್ನು ಮಾಡಿ ಎಲ್ಲ ದೇವತೆಗಳನ್ನೂ ಆಹ್ವಾನಿಸಿ ತನ್ನ ಪತಿ ಯಾದ ಈಶ್ವರನನ್ನು ಆಹ್ವಾನಿಸದಿದ್ದಾಗ ಬಲಾತ್ಕಾರವಾಗಿ ಗಂಡನ ಅನುಮತಿ ಪಡೆದು, ಅಲ್ಲಿ ತಂದೆಯಿಂದ ಅಪಮಾನಿತಳಾಗಿ ಪತಿನಿಂದೆಯನ್ನು ಕೇಳಲಾರದೆ ಯಜ್ಞಕುಂಡದಲ್ಲಿ ಬಿದ್ದು ಸಾಯುತ್ತಾಳೆ. ಈಕೆಗೆ ಸತೀ ಎಂಬ ಹೆಸರೂ ಇದೆಯಾದ ಕಾರಣ ಮಹಾಸತಿಗೆ ಈಕೆಯೇ ಮೂಲವೆಂದು ಊಹಿಸುತ್ತಾರೆ. ಹೀಗೆ ಮಾಸ್ತಿ ಯಾಗಿ ಸತ್ತವರಿಗೆಲ್ಲ ಮಹಾಸತಿ ಎಂಬ ಪದ ಬಂದಿರಬಹುದು.

ಮಹಾಸತಿಯ ಮೂಲವನ್ನು ಗಮನಿಸಿ ಅನೇಕರು ಅನೇಕ ಅಭಿಪ್ರಾಯ ಗಳನ್ನು ನೀಡುತ್ತಾರೆ. ಬೇರೆ ಬೇರೆ ದೇಶಗಳಲ್ಲಿ ರಾಜ ಸತ್ತಾಗ ಅವನ ಸಂಗಡ ಅವನ ಪ್ರೀತಿಯ ವಸ್ತುಗಳನ್ನು ಕಳುಹಿಸುತ್ತಿದ್ದರು. ಆ ವಸ್ತುಗಳಲ್ಲಿ ಪಾನಪಾತ್ರೆ, ಅವನು ಉಪಯೋಗಿಸುತ್ತಿದ್ದ ಪ್ರಾಣಿ, ಹೆಂಡತಿಯೂ ಇರುತ್ತಿದ್ದಳು. ಪ್ರಾಚೀನ ಭಾರತದಲ್ಲಿ ಮಹಾಸತಿಯಾದವರ ಬಗ್ಗೆ ಉಲ್ಲೇಖ ದೊರೆಯುವುದಿಲ್ಲ. ಪುರಾಣ ಗಳ ಕಾಲಕ್ಕೆ ಬಂದಾಗ ರಾಮಾಯಣದಲ್ಲಿ ದಶರಥ ಸತ್ತಾಗ ಅವನ ಪತ್ನಿಯರಾರೂ ಸಾಯುವುದಿಲ್ಲ. ಮಹಾಭಾರತಕ್ಕೆ ಬಂದಾಗ ಅಲ್ಲಿ ಮೊದಮೊದಲು ಸತಿ ಕಾಣುವುದಿಲ್ಲ.

---

2 EC VIII sg. 47.

3 EC VIII sb. 163–1441 AD

4 EC VII sh. 61. 1286 AD

5 MAR 1928 No. 88

6 MAR 1925 No. 83

ಶಂತನು, ಚಿತ್ರವೀರ್ಯ, ವಿಚಿತ್ರವೀರ್ಯ ಮುಂತಾದವರು ಸತ್ತಾಗ ಇವರ ಪತ್ನಿಯು ರಾರೂ ಸಾಯುವುದಿಲ್ಲ. ಪಾಂಡು ಮಹಾರಾಜನ ಕಾಲಕ್ಕೆ ಬಂದಾಗ ಮಾತ್ರ ಇದರ ಉಲ್ಲೇಖ ದೊರೆಯುತ್ತದೆ. ಪಾಂಡು ಸತ್ತಾಗ ಅವನ ಶವದೊಡನೆ ಮಾದ್ರಿ ಅಗ್ನಿ ಪ್ರವೇಶ ಮಾಡುತ್ತಾಳೆ. ಈ ಕಾಲಕ್ಕೆ ಸತಿಯಾಗುವುದು ಅಪರೂಪವಾದರೂ ಸಮಾಜದ ಪುರಸ್ಕಾರವನ್ನು ಪಡೆದಿತ್ತೆಂದು ಹೇಳಬಹುದು. ಮುಂದೆ ಶಾಸ್ತ್ರಗಳಲ್ಲಿ ಮಹಾಸತಿಯಾಗುವುದನ್ನು ಪ್ರೋಷಿಸಿರುವುದನ್ನು ಕಾಣಬಹುದು. ಸ್ಮೃತಿಗಳಲ್ಲಿ ಪತ್ನಿಯಾದವಳು ಗಂಡನ ಮರಣಾನಂತರ ಸತಿಯಾಗಬೇಕು ಅಥವಾ ಶಾಸ್ತ್ರಗಳಲ್ಲಿ ಹೇಳಿರುವಂತೆ ಸದಾಚಾರ ನಿಷ್ಠಳಾಗಬೇಕು ಎಂದು ಹೇಳುತ್ತವೆ. ಬೃಹಸ್ಪತಿಯು 'ಪತಿಯು ಸುಖದಲ್ಲಿಯೂ, ದುಃಖದಲ್ಲಿಯೂ ಪತ್ನಿಯು ಸಹಭಾಗಿಯಾಗಿದ್ದಲ್ಲಿ ಅವನು ಸತ್ತಾಗ ತಾನೂ ಮೃತಪ್ರಾಯಳಾಗುತ್ತಾಳೆ. ಆಗಲೇ ನಿಜವಾಗಿಯೂ ಆಕೆ ಅವನಲ್ಲಿ ಅನುರಕ್ತಳು'[7] ಎಂದಿದ್ದಾನೆ. ಇದೇ ಅಲ್ಲದೆ ಬೃಹದ್ಧರ್ಮ ಪುರಾಣ ದಲ್ಲಿ 'ಪತಿಯೊಡನೆ ಚಿತೆಯೇರುವ ವಿಧವೆ ಪತ್ನಿ ಎಂತಹ ಪಾಪ ಮಾಡಿದ್ದರೂ ಅವನ ಆತ್ಮಕ್ಕೆ ಶ್ರೇಯಸ್ಸನ್ನು ಕೋರುತ್ತಾಳೆ'[8] ಎಂದಿದೆ. ಧರ್ಮಶಾಸ್ತ್ರಗಳಲ್ಲಿ ಈ ಮಾತು ಗಳು ಬಂದಮೇಲೆ ಅವುಗಳನ್ನು ಕಿಂಚಿತ್ತೂ ವಿಚಾರದ ಜನಗಳಿಗೆ ಅವುಗಳ ಮಾತೆ ವೇದವಾಕ್ಯವೆಂದು ಪರಿಗಣಿಸಿ ಸತಿಯಾಗಲು ತಯಾರಿ ಕೊಡುತ್ತಿತ್ತು. ಇದೆಲ್ಲವರ ಜೊತೆಗೆ ಇನ್ನೊಂದು ವಿಷಯವನ್ನು ನಾವು ಜ್ಞಾಪಕದಲ್ಲಿಡಬೇಕು. ಅದೇ ಪರ ಲೋಕದ ನಂಬಿಕೆ. ವೀರರು ಯುದ್ಧ ಮಾಡುತ್ತಿದ್ದುದು—

> ಜಿತೇನ ಲಭ್ಯತೇ ಲಕ್ಷ್ಮೀರ್ಮೃತೇನಾಪಿ ಸುರಾಂಗನಾ ।
> ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇರಣೇ ॥

[ಗೆದ್ದರೆ ಲಕ್ಷ್ಮಿ; ಸತ್ತರೆ ಸುರಾಂಗನೆ. ಆದ್ದರಿಂದ ಕ್ಷಣದಲ್ಲಿ ನಾಶವಾಗುವ ದೇಹ ವನ್ನು ರಣರಂಗದಲ್ಲಿ ತೊಡಗಿಸಲು ಚಿಂತೆಯೇಕೆ ?]

ಇವರ ಜೊತೆಗೆ ಇನ್ನೊಂದು ಶ್ಲೋಕವನ್ನು ನೋಡಿ :

> ದ್ವಾವಿಮೌ ಪುರುಷೌಲೋಕೇ ಸೂರ್ಯಮಂಡಲ ಭೇದಿನೌ ।
> ಪರಿವ್ರಾಡ್ಯೋಗ ಯುಕ್ತಾಶ್ಚ ರಣೇ ಚ ಭಿಮುಖೇಅಪತಃ ॥[9]

[ಸೂರ್ಯಮಂಡಲವನ್ನು ಇಬ್ಬರು ಮಾತ್ರ ಭೇದಿಸುತ್ತಾರೆ. ಯೋಗಿಗಳು ಮತ್ತು ರಣರಂಗದಲ್ಲಿ ಕಾದಾಡುವವರು.] ಇಂತಹ ನಂಬಿಕೆಯಲ್ಲಿ ಬೆಳೆದ ಸ್ತ್ರೀಯು ತನ್ನ ಪತಿ ಸತ್ತು ವೀರಲೋಕ ಸೇರಿದಾಗ ಆತನನ್ನು ಒಬ್ಬಂಟಿಯಾಗಿ ಆ ಲೋಕಕ್ಕೆ ಬಿಡದೆ ತಾನೂ ಆತ ಇಬ್ಬರೂ ಒಮ್ಮೆಗೆ ಆ ಲೋಕಕ್ಕೆ ಹೋಗಬೇಕೆಂಬ ಹೆಬ್ಬಯಕೆ,

---

7 ಯುಗಯಾತ್ರಿ ಭಾರತೀಯ ಸಂಸ್ಕೃತಿ ಪು. 454

8 ಯುಗಯಾತ್ರಿ ಭಾರತೀಯ ಸಂಸ್ಕೃತಿ ಪು. 454

9 Ec. VII. Sk. 307. 1016 AD

ಆ ಲೋಕದಲ್ಲಿಯೂ ಕೂಡಿ ಇರಬೇಕೆಂಬ ಬಯಕೆಯಿಂದ ಮಹಾಸತಿಯಾಗುತ್ತಿದ್ದಳು. ಆ ಕಾಲದಲ್ಲಿ ಮಾಸ್ತಿಯಾಗುವುದೂ ಸಹ ವೀರನಷ್ಟೇ ಗೌರವವನ್ನು ಹೊಂದಿತ್ತೆಂಬುದಕ್ಕೆ ಶಾಸನಾಧಾರಗಳಿವೆ. ಒಂದು ಶಾಸನದಲ್ಲಿ 'ರಾಮಣ್ಣನು ಅಯಿಸೂರ ಹುಯಲಿ ಬಿದ್ದನು. ಆತನ ಮದವಳಿಗೆ ರಾಮಾಯಿ ವೀರಮಾಸ್ತಿಯಾದಲಿ ನಿಲಿಸಿದ ವೀರಗಲು'[10] ಇಲ್ಲಿ ವೀರಮಾಸ್ತಿ ಎಂಬ ಪದವನ್ನು ಗಮನಿಸಿ. 'ಮದವಣಗೆರೆಯ ದೊಡ್ಡತಾಯಿ ವೀರ ಸ್ವರ್ಗವನೆಯಿದಲಿಗೆ ಮಾಡಿಸಿದ ವಿಗ್ರಹವು'[11] ತನ್ನ ಗಂಡ ವಿಜಯವನ್ನು ಸಂಪಾದಿಸಿದಾಗ ಆ ವಿಜಯದಲ್ಲಿ ತನ್ನ ಪಾಲೂ ಇದೆಯೆಂದು ಮಾಸ್ತಿಯಾಗುತ್ತಿದ್ದರು. 'ಮಧುವರಸನಾಯ್ಕರು ಸ್ವರ್ಗಸ್ಥರಾದಲ್ಲಿ ಆತನ ಸತಿ ಬುಳ್ಳರಸಿಕಂನಾಯಿಗಳು ಗಂಡನ ವಿಜಯ ಶ್ರೀಯನೆಯಿದಿ ಸುರಲೋಕ ಪ್ರಾಪ್ತರಾದರು'.[12] ಇಪ್ಪತ್ತನೆಯ ಶತಮಾನದಲ್ಲೂ ಸಹ ಗಂಡನಿಗಿಂತ ಮುಂಚೆ ಸಾವು ಬಂದರೆ ತಾನು ಧನ್ಯಳು ಎಂಬ ಮನೋಭಾವವನ್ನು ಪಡೆದಿರುವ ನಾರಿ ಹಿಂದಿನಕಾಲದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಸೋಂಕೂ ಇಲ್ಲದ ಕಾಲದಲ್ಲಿ ಗಂಡನ ಸಂಗಡ ಚಿತೆಯೇರುತ್ತಿದ್ದುದು ಅತಿಶಯವೆನಿಸುವುದಿಲ್ಲ. ಅದೊಂದು ನಿತ್ಯವಿಧಿಯೆಂಬಂತೆ ಜೀವಿಸುತ್ತಿದ್ದರು.

ಮಾಸ್ತಿಯಾಗುತ್ತಿದ್ದ ವಿಧಾನದಬಗ್ಗೆ ಹೇಳುವುದಾದರೆ, ಗಂಡಸತ್ತಾಗ ಆತನ ಶವದೊಡನೆ ಸತ್ತರೆ ಅದು ಸಹಗಮನ. ಗಂಡ ದೂರದಲ್ಲಿ ಸತ್ತು ಅವನ ಕಳೇಬರ ದೊರೆಯದೆ ಅವನ ಯಾವುದಾದರೂ ಪ್ರಿಯ ವಸ್ತುವನ್ನು ಕೈಯ್ಯಲ್ಲಿ ಹಿಡಿದುಕೊಂಡು ಸಾಯುತ್ತಿದ್ದ ಪದ್ಧತಿಗೆ ಅನುಗಮನವೆಂದು ಹೆಸರು. ಬೆಂಕಿಯಲ್ಲಿ ಬೀಳಲೇಬೇಕೆಂಬ ನಿರ್ಬಂಧವಿರಲಿಲ್ಲ. 'ಬೊಮ್ಮಗಾವುಂಡ ಸ್ವರ್ಗಸ್ಥನಾದಲ್ಲಿ ಆತನ ಮದವಳಿಗೆ ಬೊಮ್ಮಗವುಡಿ ಸಮಧಿ ಕುಳಿತು ಸ್ವರ್ಗಕೆ ಸಂದಳು.'[13] ತನ್ನ ಗಂಡನ ಕಳೇ ಬರದ ಜೊತೆಯಲ್ಲೇ ಜೀವವಿರುವಾಗಲೆ ಮಣ್ಣನ್ನು ಮುಚ್ಚಿಸಿಕೊಂಡಳು. ಇನ್ನೊಬ್ಬಾಕೆ ತನ್ನ ಪತಿಸತ್ತಾಗ '...ಆತನ ಸತಿ ದೇವಿಯಕ್ಕಂ ಪುರುಷ ಬ್ರತಮಂ ಕೈಗೊಂಡು ಸುರಲೋಕ ಪ್ರಾಪ್ತೆಯಾದಳು.'[14] ಇನ್ನೊಬ್ಬಳು ತನ್ನ ಗಂಡ ಸತ್ತ ನಂತರ ಸನ್ಯಾಸನ ವಿಧಿಯಿಂದ ಸತ್ತಳು. ಅಂದರೆ ಇದೇ ರೀತಿಯಲ್ಲಿ ಸಾಯಬೇಕೆಂಬ ನಿಯಮವಿದ್ದಂತೆ ಕಾಣುತ್ತಿಲ್ಲ. ಅವರವರ ಧರ್ಮಕ್ಕೆ ಅನುಗುಣವಾಗಿ ಸಾಯಬಹುದಿತ್ತು.

---

10 Ec VIII Sg. 47

11 Ec IV Hg 47

12 Ec VII Sk 239 1447 A D

13 Ec VIII Sb 165

14 Ec VII Sh 32 c1134 AD

ಮಾಸ್ತಿ ಕಲ್ಲುಗಳಲ್ಲಿ ಗಂಡನು ಸಾಯಲು ಕಾರಣಗಳನ್ನು ಕೆಲವುಗಳಲ್ಲಿ ಕೊಟ್ಟಿದೆ. ಕೆಲವರು 'ತುರುವ'[15] ಮಗುಳ್ಚಿ ಸತ್ತಿದ್ದರೆ, ಇನ್ನೊಬ್ಬ 'ಸರ್ಪದಂಷ್ಟ'[16] ಮಾಡಲು ಸತ್ತ. ಇನ್ನೊಬ್ಬ 'ಪಂಚ ನಮಸ್ಕಾರದಿಂದ ಮುಡಿಪಿ ಸ್ವರ್ಗಸ್ಥನಾದ.'[17] 'ಇನ್ನೊಂದರಲ್ಲಿ ತಂದೆಮಕ್ಕಳಿಬ್ಬರೂ ಅತಿರಥರಂತೆ ಕಾದಿ ಸುರಲೋಕ ಸೇರಿದಾಗ ತಾಯಿಗವುಡಿ ಇಬ್ಬರೂ ಸ್ವರ್ಗಸ್ಥರಾದರು.'[18] ಹೀಗೆ ಮಾಸ್ತಿಯಾಗುವಾಗ ತಮ್ಮ ಜೊತೆಗೆ ಪರಿವಾರದ ಇತರ ಸ್ತ್ರೀಯರೂ ಸಹಗಮನ ಮಾಡಿದ ಉಲ್ಲೇಖವಿದೆ' 'ಹರಪೂರ ಅಂಮಗವುಡನ ಬಯಿರಗವುಡಿ ತಮ್ಮ ಸ್ತ್ರೀಯರು ಸಹ ಸಂಗತಿಯಿಡಿದರು.'[19]

ಭಾರತದಲ್ಲಿ ಈ ಪದ್ಧತಿ ಆಚರಣೆಯಲ್ಲಿದ್ದರೂ ಇದು ಅತಿಯಾದದ್ದು ಪರಕೀಯರು ಈ ದೇಶಕ್ಕೆ ಬಂದನಂತರ. ಅದರಲ್ಲೂ ಮುಸಲ್ಮಾನರು ಯುದ್ಧದಲ್ಲಿ ಜಯವನ್ನು ಪಡೆದನಂತರ ವಿಜಯೋನ್ಮತ್ತರಾಗಿ ಮಾಡುತ್ತಿದ್ದ ಮಾನಭಂಗ, ಕೊಲೆ, ಲೂಟಿ ಇತ್ಯಾದಿಗಳು ಹೆಚ್ಚಾದಾಗ. 10-11 ನೆಯ ಶತಮಾನಗಳಿಂದೀಚೆಗೆ ಈ ಆಚರಣೆ ಯಾವಮಟ್ಟ ಮುಟ್ಟಿತೆಂದರೆ ರಾಜ ಯುದ್ಧಭೂಮಿಗೆ ಹೋದಮೇಲೆ ಆತ ಹಿಂತಿರುಗಿ ಬರುತ್ತಾನೋ ಇಲ್ಲವೋ ಎಂದು ಮೊದಲೇ ಚಿತೆಯನ್ನು ಸಿದ್ಧ ಮಾಡಿಟ್ಟು ಯುದ್ಧದ ಸುದ್ದಿಗೆ ಕಾಯುತ್ತಿದ್ದರು. ಯುದ್ಧದಲ್ಲಿ ರಾಜ ಮಡಿದ ಎಂಬ ವಾರ್ತೆ ಕಿವಿಗೆ ಬಿದ್ದರೆ ಸಾಕು, ರಾಣಿಯರು ತಮ್ಮ ಪರಿವಾರ ಸಮೇತವಾಗಿ ಬೆಂಕಿಯಲ್ಲಿ ಬೀಳುತ್ತಿದ್ದರು. ಹೀಗೆ ಒಟ್ಟಿಗೆ ನೂರಾರು ಮಂದಿ ಚಿತೆಯಲ್ಲಿ ಬಿದ್ದು ಪ್ರಾಣಾರ್ಪಣೆ ಮಾಡುತ್ತಿದ್ದ ಪದ್ಧತಿಯನ್ನು ಜೋಹರ್ ಪದ್ಧತಿಯೆಂದು ಕರೆಯುತ್ತಾರೆ. ಆದರೆ ಕರ್ನಾಟಕದಲ್ಲಿ ಮುಸಲ್ಮಾನರ ಪ್ರವೇಶ ಕಡಿಮೆ. ಜೋಹರ್ ಪದ್ಧತಿಯು ಇತ್ತೆಂಬುದಕ್ಕೆ ಆಧಾರಗಳು ಇಲ್ಲ. ಮಹಾಸತಿಯ ಉಲ್ಲೇಖವಿರುವ ಮೊದಲ ಶಾಸನ ಸೊರಬದ ಶಾಸನ. ಇದರ ಕಾಲ ಸುಮಾರು ಕ್ರಿ. ಶ. 400. ಇದರಲ್ಲಿ ಮೃಗೇಶನ ಮಗ...ಹಮಲ್ಲ-ರವಿವರ್ಮನ ಸಂಗಡ ಅವನ ರಾಣಿ ಮುಕ್ತಿ ಪಡೆದಳು.'[20] ಇದು ಶಿಥಿಲವಾದ ಸಂಸ್ಕೃತ ಶಾಸನ. ಅನಂತರದ ಉಲ್ಲೇಖ 908-9 ರ ಶಾಸನದಲ್ಲಿ '...ನ ಹೆಗ್ಗಡೆ ತಮ್ಮ ನೆಂಜಿಯ [ಆಜಿ] ಯೊಳ್ಕಾದಿ ಸತ್ತಡಾತನ ಪೆಂಡತಿ ಬಳಕ್ಕಗ... ಸಮೊ ಕಾಯಿಕೋಜ'.[21] ಇದರ ಸರಿಸುಮಾರಿನ ಜೇಗೂರಿನ ಶಾಸನವನ್ನು ಉಲ್ಲೇಖಿಸುವುದು ಒಳ್ಳೆಯದು. 'ನಾಗತ್ತರನ ಮಗಳು ಕೊಣ್ಣಬ್ಬೆ ಕತ್ತವ್ಯವೆಳೆಗೊಣ್ಡು

---

[15] Ec VIII Sb 482
[16] Ec VIII Sb 483
[17] Ec VIII Sb 106
[18] Ec VIII Sb 559 1450 AD
[19] Ec VIII Sb 163 1441 AD
[20] Ec VIII Sb 523 c 400 AD
[21] SII IX i 56

ಸತ್ತಂ'[22] ಇದು ವೀರಗಲ್ಲು. ಇದನ್ನು ವೇಳೆವಾಳಿಯೆನ್ನುವುದಕ್ಕಿಂತ ಮಾಸ್ತಿಯೆನ್ನುವುದೇ ಉತ್ತಮ. ಇಲ್ಲಿ ಸತ್ತಿರುವುದು ಕೊಣ್ಡಬ್ಬೆಯ ತಂದೆ ನಾಗತ್ತರ. ಇವನು ಸತ್ತ ನಂತರ ಕೊಣ್ಡಬ್ಬೆ ಜೈನದೀಕ್ಷೆಯನ್ನು ತೆಗೆದುಕೊಂಡು ಸತ್ತಂತೆ ಊಹಿಸಬಹುದು. ಇದರ ನಂತರದ ಶಾಸನದಲ್ಲಿ '...ಬಿದಿಯಣ್ಣ ಸತ್ತಾಗ ಅವನ ಪತ್ನಿ ಜಕ್ಕಬ್ಬೆ ಒಡ ಸತ್ತು ಸುರಲೋಕಕೆಯ್ದಿದಾಗ ಜಕ್ಕಬ್ಬೆಯ ತಂಗಿ ಜಾಬೆ ಕಲ್ಲನಿಱಿಸಿದಳ್.'[23] ಇದೇ ಸರಿಸುಮಾರಿನ ಅಜಿತನಾಥ ಪುರಾಣದಲ್ಲಿ ಬರುವ ಅತ್ತಿಮಬ್ಬೆಯ ಚರಿತವನ್ನು ಕವಿ ಹೇಳುವಾಗ ಅತ್ತಿಮಬ್ಬೆಯ ಗಂಡ ಸತ್ತಾಗ ಅತ್ತಿಮಬ್ಬೆಯ ತಂಗಿ ಗುಂಡಮಬ್ಬೆ ಅಕ್ಕನನ್ನು ಒಪ್ಪಿಸಿ ತಾನು ತನ್ನ ಗಂಡನ ಸಂಗಡ ಚಿತೆಯೇರುತ್ತಾಳೆ. ಈ ಕಾಲಕ್ಕೆ ಇದು ಹೆಚ್ಚು ಕಡಿಮೆ ಸಾರ್ವತ್ರಿಕವಾಗಿ ಹರಡಿತ್ತೆನ್ನಬಹುದು. 993 ರ ಶಾಸನವೊಂದರಲ್ಲಿ ಗಂಡಸತ್ತಾಗ – ಆತನ ಸತಿ ದೇವಿಯಕ್ಕಂ ಪುರುಷಬ್ರತಮಂ ಕೈಕೊಂಡು ಸುರಲೋಕ ಪ್ರಾಪ್ತೆಯಾದಳು.[24] ಕ್ರಿ. ಶ. 1057 ರ ಶಾಸನದಲ್ಲಿ ವಿಸ್ತಾರವಾಗಿ ಸತಿಯ ವರ್ಣನೆ ಬಂದಿದೆ. ಬಹುಶಃ ಈಗ ಸಿಕ್ಕಿರುವ ಮಾಸ್ತಿಕಲ್ಲುಗಳಲ್ಲೆಲ್ಲ ದೀರ್ಘವಾದುದು.[25] ಕಾವ್ಯಮಯವಾಗಿ ಬರೆದಿರುವ ಶಾಸನ. ಕವಿಯ ಹೆಸರು ಕವಿರಾಜ ಭಾಂಧವ. ಅಕ್ಕರ, ವೃತ್ತ, ಕಂದಗಳಲ್ಲಿ ಶಾಸನವನ್ನು ರಚಿಸಿದ್ದಾನೆ. ಮಾಸ್ತಿಯಾಗುವ ಸ್ತ್ರೀಯ ವಂಶಾವಳಿಯನ್ನು ಹೇಳಿ ಅಲ್ಲಲ್ಲಿ ಅವರ ಗುಣವನ್ನು ಹೊಗಳಿ ಇಂದಿನ ಜನರು ಅವರಿಗೆ ಸಾಟಿಯಿಲ್ಲ ಎಂದಿದ್ದಾನೆ. ನುಗುನಾಡ ಅಧಿಪತಿ ಎರೆಯಂಗ. ಅವನ ಮಗ ಬಿಜ. ಅವನ ಮಗ 'ಅಱಿವಿಂಗಾಮರ್ಜನಾದ' ಜವನಯ್ಯ. ಇವನ ಪತ್ನಿ ಜಾಕಬ್ಬೆ. ಇವರಿಬ್ಬರಿಗೂ ಆದ ಮಗ 'ರಿಪುಸನ್ತಾನ ನಗೇಂದ್ರ ವಿಳಯ ಪವಿಗಂ ರವಿಗಂ'. ಇವನ ಪತ್ನಿ 'ಎಡೆನಾಡ' ನಾಲ್ಗೋಜನ ಪತ್ನಿ ಭೂತಬ್ಬೆಯರ ಹೊಟ್ಟೆಯಲ್ಲಿ ಹುಟ್ಟಿದ ಪೊನ್ನಕ್ಕ. ಈ ಪೊನ್ನಬ್ಬೆ ರವಿಗರ ಮಗಳೇ ದೇಕಬ್ಬೆ. ಆಕೆಯನ್ನು ನವಿಲೆನಾಡ ಅಧಿಪತಿ ಕುಜುಮನ್ದುಗುಲದ ಪೆರ್ಮ್ಮಾಯಿಲ ಬಿಚನಿಗೆ ಕೊಟ್ಟು ಮದುವೆ ಮಾಡಿದರು. ಈತ ತನ್ನ ದಾಯಿಗರನ್ನು ಕೊನ್ದಾಗ ಆ ನಾಡನರಪ ತಲೆಕಾಡಿಗೆ ತೆಗೆದುಕೊಂಡು ಹೋಗಿ ಕೊನ್ದ. ಈ ಮಾತನ್ನು ಕೇಳಿದ 'ರವಿಗನ ಕುಲದೀಪಕಿ ಸಾವುಳಿನ್ದು ಕೊಣ್ಡ ಕೆ ನಡೆದಳ್.' ಆಗ ತಂದೆ ತಾಯಿ ಬಂಧು ಬಳಗಗಳು ಬಂದು ಬೇಡಿನ್ದು ಕಾಲ್ವಿಡಿದು ಬೇಡಿಕೊಂಡಾಗ ದೇಕಬ್ಬೆ ಅವರನ್ನು 'ಬಗ್ಗಿಸಿ' ಹೀಗೆ ನುಡಿಯುತ್ತಾಳೆ. 'ನುಗುನಾಡಾಧಿಪತಿ ರವಿಗನ ಮಗಳಾಗಿಯುಮಿನ್ತು ನವಿಲೆ ನಾಡಾಧಿಪತಿಗಾಂ ನೆಗಳೆ ಸತಿಯಾಗಿ ಬಾಳ್ವುದು ಬಗೆದೊಳ್ಪನೆ ಕೊಟ್ಟು ಕೊಣ್ಡ

---

22 Ec IX Bn 88 c900 AD

23 EC. VIII Sb 457-972 AD

24 EC VII Sh 32-993 AD

25 EC IV HD 18-1057 AD

ಮನೆಯ ಸಮಜಿಯಲ್' ಒಗೆಂದು ದಾನಗಳನ್ನು ಮಾಡಿ ಉರಿಯನ್ನು ದೇಕಪ್ಪೆ ಪ್ರವೇಶಿಸುತ್ತಾಳೆ. ಕವಿ ಆಕೆಯನ್ನು ವರ್ಣಿಸಿರುವ ರೀತಿ ನೋಡಿ : 'ಶ್ರೀರಮಣಿ ಗೌರಿ ಸಚಿ ಧಾರಣಿಯ ಪುತ್ರಿ ರತಿ ಭೂರಮಣಿಯನ್ನದ ಸರೂಪವಾಜಿಪ್ಪೊಳ್ಪಾಧಾರೆ ಜಯಧಾರೆ ಜನಧಾರೆ ಭಯಹಾರೆ ಪತಿಭಕ್ತೆ ಧೃತ ಶಕ್ತಿಯೆನೆ ಸನ್ನಿವೀರ ನಿಧಿಯುಂ ಚಲದವಾರಿ ನಿಧಿಯುಂ ಗುಣಚಾರು ನಿಧಿಯುಂ ನೆಗರ್ದದೇಕಲೆಯ ನಿನ್ನೀನಾರಿಜನರನ್ನ ಮನದಾರೋ ಮಜಿವರ್.' ಅದೇ ಸರಿಸುಮಾರಿನಲ್ಲಿ ರಚಿತವಾದ ಮತ್ತೊಂದು ಶಾಸನ......ನವಿಲಾಪಿ ರಾಜಂ ಸತ್ತೊಡೆ ಆತನ ಎಳತಿ ತಪಜಿಯ ಕವ್ವಾರಿವ್ವುಯ್ದು ಸತ್ತೊಡವರ್ಗೆ ಬಿಟ್ಟ.......'[26] ಕ್ರಿ. ಶ. 1150 ರ ಸುಮಾರಿಗೆ ಬಂದರೆ ಅನೇಕ ಶಾಸನಗಳು ನಮಗೆ ದೊರೆಯುತ್ತವೆ. '......ಸಾಮನ್ತ ಸೋವನ ಮಗ ಅನುಪಮ ದಾನಿ ಗಂಡುಗಲಿ ಸಜ್ಜನ ವಂದ್ಯನನೂನ ಕೀರ್ತಿ ಮಾನಿನಿ ವರನಾಥ ಧರ್ಮದುರಂಧರ ನುದ್ಭಟ ವೈರಿ ವಿರೋಧಿ ಮಾರದೇವನ ರಮಣಿ ಮನೋಹರಿ ಮಹಾಸತಿ ಶೀಲ ಗುಣೌಘ ಭೂಮಿ ಕಾಮಿನಿ ಮಹದೇವಿ ತನ್ನವರನೊಳು ಪ್ರತಿಪನ್ನದಿ ಸಂದಳಾದಿವಂ...'[27] ಮುಂದೆ 13 ನೇ ಶತಮಾನದಿಂದ 15 ನೇ ಶತಮಾನದವರೆಗೆ ಮಹಾಸತಿಯಾದವರ ಸಂಖ್ಯೆ ಅತಿಯಾಗಿ ಕಂಡುಬರುತ್ತದೆ. ಮಾಸ್ತಿಯ ಕೊನೆಯ ಉಲ್ಲೇಖವಿರುವ ಉಪಲಬ್ಧ ಶಾಸನ ಕೆಳದಿಯ ಅರಸರ ಕಾಲಕ್ಕೆ ಸೇರಿದ್ದು. ಇದರ ಕಾಲ ಕ್ರಿ. ಶ. 1619. '......ಕೆಳದಿಯ ಕರಿತಿಮ್ಮೇಗೌಡ ಸ್ವರ್ಗಸ್ಥನಾದಲ್ಲಿ ಆತನ ಮದವಳಿಗೆ ರಾಮಕ್ಕನು ಮಹಾಸತಿಯಾದಳು.[28] ಇಲ್ಲಿಂದ ಮುಂದೆ ಮಹಾಸತಿಯಾದವರ ಬರಹದ ಉಲ್ಲೇಖವಿಲ್ಲ. 19 ನೇ ಶತಮಾನದ ಕೊನೆಯವರೆಗೂ ಇದರ ಅಸ್ತಿತ್ವವಿತ್ತೆಂದು ಹೇಳಬಹುದು. ಡಿ॥ ಎಂ. ಎಸ್. ಪುಟ್ಟಣ್ಣನವರ 'ದೂಡಿದ್ದುಣ್ಣೊ ಮಹಾರಾಯ'ದಲ್ಲಿ ಬರುವ ಸಹಗಮನದ ವರ್ಣನೆ ಅವರು ಇದನ್ನು ಎಲ್ಲಿಯಾದರೂ ನೋಡಿರಬಹುದೆಂಬ ಅನುಮಾನ ಬರುತ್ತದೆ. ಬರಹದ ಉಲ್ಲೇಖಗಳಿಲ್ಲದಿದ್ದರೂ ಮಹಾಸತಿಯಾಗುತ್ತಿದ್ದರು. ಶಿವಮೊಗ್ಗ ಜಿಲ್ಲೆ ಮತ್ತು ಇತರ ಕೆಲವು ಜಿಲ್ಲೆಗಳ ಕೆಲವು ಶಾಸನಗಳನ್ನು ಬಿಟ್ಟರೆ ಮಾಸ್ತಿ ಕಲ್ಲುಗಳ ಮೇಲೆ ಬರಹವಿರುವುದು ಅಪರೂಪ. ಬಹಳಷ್ಟು ಮಾಸ್ತಿ ಕಲ್ಲುಗಳಲ್ಲಿ ಬರಹವಿಲ್ಲದೆ ಕೇವಲ ಚಿತ್ರಗಳು ಮಾತ್ರವಿರುತ್ತವೆ.

ಕರ್ನಾಟಕದಲ್ಲಿ ಮಹಾಸತಿಯ ಬಗ್ಗೆ ಚರ್ಚಿಸುವಾಗ ಇವರಿಗೆ ಸತಿಯಾಗಲು ಸ್ಫೂರ್ತಿಕೊಡುತ್ತಿದ್ದ ವಿಷಯಗಳಾವುವು ಎಂಬುದನ್ನು ತಿಳಿಯುವುದು ಒಳ್ಳೆಯದು. ಶಾಸ್ತ್ರಗಳಲ್ಲಿ ಯಾವುದೇ ರೀತಿಯ ಹೇಳಿಕೆಗಳಿದ್ದರೂ ಸತಿಯಾಗುವವಳು ತನ್ನಿಷ್ಟದಂತೆ

[26] EC IV HD 100 C 1088 AD
[27] EC IV ng 96 C 1150 AD
[28] EC VIII Sg 35 1619 AD

ಅದೇ ವೇಳೆವಾಳಿ, ಗರುಡ ಇತ್ಯಾದಿ. ತನ್ನ ನೆಚ್ಚಿನ ರಾಜ, ನಾಯಕ ಇತ್ಯಾದಿಯವರು ಸತ್ತಾಗ ಅಥವಾ ತೊಂದರೆಗೀಡಾದಾಗ ತಾನೂ ಸಾಯುತ್ತೇನೆಂದು ಒಂದು ರೀತಿಯ ಹರಕೆಹೊತ್ತುಕೊಂಡು ಅದರಂತೆ ನಡೆಯುತ್ತಿದ್ದರು. ಕುವರ ಲಕ್ಷ್ಮನಂತೆ ಅನೇಕರ ಉಲ್ಲೇಖಗಳು ಶಾಸನಗಳಲ್ಲಿ ಬರುತ್ತವೆ. ಹೀಗಾಗಿ ಕರ್ಣಾಟಕದಲ್ಲಿ ಮಹಾಸತಿಯಾಗುವವರ ಮೇಲೆ ಧರ್ಮಶಾಸ್ತ್ರಗಳಿಗಿಂತ ಈ ವೇಳೆವಾಳಿ, ಗರುಡರು ಪ್ರಭಾವ ಬೀರಿರುವರೆಂದು ಊಹಿಸಬಹುದು. ಹೀಗಾದಲ್ಲಿ ಮಹಾಸತಿ ಒಂದು ರೀತಿಯ ವೇಳೆವಾಳಿ ಎಂದರೂ ಎನ್ನಬಹುದು. ತನ್ನ ಗಂಡ ಸತ್ತನಂತರ ತಾನೂ ಸಾಯುವುದು. ಡಾ. ಚಿದಾನಂದ ಮೂರ್ತಿಯವರ ಮಾತಿನಲ್ಲಿ ಹೇಳುವುದಾದರೆ 'ವೇಳೆವಾಳಿ–ಮಾಸ್ತಿ ಎರಡೂ ಒಂದೇ ಆದರ್ಶದ ಎರಡು ಮುಖಗಳು. ಒಂದು ಕಡೆ ಒಡೆಯನಿಗಾಗಿ ತ್ಯಜಿಸಿದರೆ ಇನ್ನೊಂದು ಕಡೆ ಪತಿಗಾಗಿ ಪ್ರಾಣವನ್ನು ತ್ಯಜಿಸುವುದು. ಎರಡರ ಮೂಲದಲ್ಲೂ ಕೃತಜ್ಞತೆ ಭಕ್ತಿಗಳಿವೆ. ಇನ್ನೊಂದು ಲೋಕದ ವಿಷಯದಲ್ಲಿ ದೃಢವಿಶ್ವಾಸವಿದೆ.'[29] ಈ ಮಾತುಗಳು ಮಾಸ್ತಿಯಾದವರ ಅಥವಾ ವೇಳೆವಾಳಿಯಾದವರ ಮನೋಧರ್ಮವನ್ನು ಅಧ್ಯಯನ ಮಾಡಿದರೆ ಸತ್ಯವೆಂದು ತಿಳಿಯುತ್ತದೆ.

ಕರ್ಣಾಟಕದಲ್ಲಿ ಮಹಾಸತಿ ಪದ್ಧತಿಯಿದ್ದರೂ ಬಲಾತ್ಕಾರದ ಉಲ್ಲೇಖಗಳು ಎಲ್ಲಿಯೂ ಇಲ್ಲ. ಇದಕ್ಕೆ ಕಾರಣವೂ ಇದೆ. ಗಂಡ ಸತ್ತವರೆಲ್ಲರೂ ಮಹಾಸತಿಯಾಗಬೇಕೆಂಬ ನಿರ್ಬಂಧವಿಲ್ಲದಿದ್ದುದು. ಇದೆಲ್ಲದರ ಜೊತೆಗೆ ಉನ್ನತ ಜಾತಿಗಳಲ್ಲಿ ಆಚರಣೆಯಲ್ಲಿರುವಷ್ಟು ಕಠಿಣ ಜೀವನವನ್ನು ನಡೆಸಬೇಕೆಂಬ ನಿರ್ಬಂಧವಿಲ್ಲದಿದ್ದುದು. ಕರ್ಣಾಟಕದ ಅನೇಕ ಜಾತಿಗಳಲ್ಲಿ ವಿಧವಾ ವಿವಾಹ ಪುನರ್ವಿವಾಹಗಳ ಅನುಕೂಲ ಇದೆ. ಹೀಗಾಗಿ ಇಲ್ಲಿ ಮಹಾಸತಿಯಾದವರು ಸ್ವಯಿಚ್ಛೆಯಿಂದ ಆದವರು. ಶಾಸನಗಳಲ್ಲಿ ಕಾವ್ಯಗಳಲ್ಲಿ ಇದರ ಉಲ್ಲೇಖ ಬರುತ್ತದೆ. ಉದಾಹರಣೆಗೆ, 'ಸಾಯಲೆನ್ದು ಕೊಣ್ಡಕೆ ಬಂದ ದೇಕಬ್ಬೆಯನ್ನು ನೋಡಿ ತನ್ದೆಯುಮಬ್ಬೆಯುಮೊಡನೆಯು ಬನ್ದು ಬಳಗಮುಂ ಬನ್ದು ಮಗಳೆ ಸಾಯದೆ ಮಾಣ್ಣೆನೆಂದೆಲ್ಲಂ ಕಾಲ್ವಿಡಿದವರನೆಲ್ಲಂ ದೇಕಬ್ಬೆ ಬಗ್ಗಿಸುಡಿದು – ಭೂಮಿಪ್ಪೊಂ ಪುಟ್ಟುಗೆ ವಸು ಧನಮಂ ನೀಡುತ್ತಾ – ದೇವರ ದೇವಂಗಚ್ಚಿತ್ತಯಿಂ ಕಯ್ಮುಗಿದುರುಪುರಿಯುಂ ಪೊಕ್ಕಳು'.[30] ಅತ್ತಿಮಬ್ಬೆಯ ಪತಿ ನಾಗದೇವ ಸ್ವರ್ಗಕ್ಕೆ ಹೋದಾಗ ಗುಂಡಮಬ್ಬೆ—

ಎರಡೆವಲಂ ಕುಲವಧುಗಾ
ಚರಿಪಲ್ ಪತಿಯಿಂ ಪರೋಕ್ಷದೊಳ್‌ಜಿನದೀಕ್ಷಾ

---

29 ಕ. ಶಾ. ಸಾಂ. ಅ. ಪು 319

30 Ec IV HD 18 1057 AD

ಚರಣಂ ಮೇಣ್ ಶುಭಚರಿತದೆ
ಮರಣಂ ಮೇಣಳಿಸಿಂದೆ ಬಾಳ್ವುದು ದೊರೆಯೇ ॥[31]

ಎಂದು ಪರಿಚ್ಛೇದಿಸಿ ತಮ್ಮಕ್ಕನತ್ತಿಮಬ್ಬೆಯಲ್ಲಿಗೆ ಗುಂಡಮಬ್ಬೆ ಬಂದು ಬದ್ಧಾಂಜಲಿಯಾಗಿ—

ನಿನಗೆ ಮಗಂ ಜಗತ್ತಿಲಕ ನಿರ್ದ್ದನಕ್ಕ ಮಗ ಸಮರ್ಥನ
ಪ್ಪಿನಮಿರು ನಾಗದೇವನೊಡನಾಂ ಬೆಸಕೇಳ್ದಪೆನೆಂದು ಬೇಡಿಕೊಂ।
ಡಿನಿಯನನಪ್ಪಿಕೊಂಡು ಚಿತಮಾಗೆ ಚಿತಾಗ್ನಿಯೊಳುಣ್ಮೆ ಸತ್ತ ಸ
ಜ್ಜನಿಕೆಯ ಪೆಂಪು ಸಜನಕೆ ಬಣ್ಣಿಸೆ ಸಂದುದು ಗುಂಡಮಬ್ಬೆಯಾ ॥

ವ॥ ಅಂತು ಗುಂಡೆಲ್ಲಂ ಪೊಗಟೆ ಗುಂಡಮಬ್ಬೆ ಮಹಾಸತೀ ಸಮುಚಿತಾಚಾರದೊಳವಾಭರಣದೊಳ್ ನೆಗಟೆ'— ಉರಿಯಲ್ಲಿ ಪ್ರವೇಶಿಸಿದ ದೇಕಲೆಯನ್ನು 'ಧರೆಯೆಲ್ಲಂ ಮೆಚ್ಚಿ ನಿಚ್ಚಂ ಪೊಗಟೆ ನೆಗಳುತುಂ ದೇವಲೋಕಕ್ಕೆ ಪೋದಳ್' ಮತ್ತೆ ಕೆಲವು ಶಾಸನಗಳನ್ನು ನೋಡಿ 'ಹೊಯ್ಸಳ ದೇವರು—ಪಲವರನು ಕೊಂದು ಬಿದ್ದ. ಮದವಳಿಗೆ ಸೋಮವ್ವೆ ದೇವಿಡೆ ಕೊಡುಗೆ ಕಲು'[32]...ತನ್ನ ಗಂಡ ಸತ್ತಾಗ—ಆತನ 'ಪೆಂಡತಿ ಮುಕ್ಕಬ್ಬೆ ಮಾಡಿಸಿದಳು.'[33] ಈ ಶಾಸನಗಳಲ್ಲಿ ಗಂಡ ಸತ್ತಿದ್ದರೂ ಹೆಂಡತಿ ಸತ್ತಿಲ್ಲ. '...ಬೊಮ್ಮರಸ ಗೌಡ ನೆಯ್ದಿದ ದೇವ ಪದಮಂ ಆತನರ್ಧಾಂಗಿ ಬಲುಚಕ್ಕಭೂತಳದೊಳಗುಳ್ಳ ಯುವತಿಯರ ಶಿರೋಮಣಿ ಸಹಗಮನಾತುರಮಂ ಮಾಡಿ ಕೂಡಿದರು ಶಿವಪದಮಂ'[34] 'ರಾಮುಗವುಡರೂ ಹೋಗಿಯಿದ್ದು ಅಲ್ಲಿ ದೇವರ ಪಾದವನು ಕೂಡಿದನು ಆ ಸ್ಥಿತಿಯನು ಯಿರಗಪ್ಪ ಗವುಡರು ಚಿತ್ತಯಿಸಿ ಗುತ್ತಿಯಿಂದ ಹಾರಿಕೆಗೆ ಕಳುಹಿಸಿದಲ್ಲಿ ರಾಮುಗವುಡ ಸ್ತ್ರೀ ಬೊಮ್ಮಗವುಡಿ ಆರಾಮುಗವುಡರ ಕೂಡಿ ಸ್ವರ್ಗವನು ಸೂಱೆಗೊಂಡರು'[35] ಹೀಗೆ ಅನೇಕ ಉದಾಹರಣೆಗಳನ್ನೂ ಕಾಣಬಹುದು.

ಕರ್ನಾಟಕದಲ್ಲಿ ಬ್ರಾಹ್ಮಣರಂತೆ ಆಚರಣೆಗಳನ್ನು ಆಚರಿಸುವ ಉನ್ನತ ಜಾತಿಯವರನ್ನು ಬಿಟ್ಟು ಉಳಿದ ಅನೇಕ ಜಾತಿಗಳಲ್ಲಿ ವಿಧವಾವಿವಾಹ ಪುನರ್ವಿವಾಹ ಮುಂತಾದ ಪದ್ಧತಿಗಳಿವೆ. ಇದನ್ನು ಕೂಡಿಕೆ, ಕಟ್ಟುವಳಿ ಎಂಬ ಹೆಸರುಗಳಿಂದ ಕರೆಯುತ್ತಾರೆ. ಉನ್ನತ ಜಾತಿಗಳಲ್ಲಿ ಈ ಅನುಕೂಲವಿಲ್ಲ. ಇಂತಹ ಸನ್ನಿವೇಶದಲ್ಲಿ ಉನ್ನತ ಜಾತಿಯ ವಿಧವೆ ಅಜಿತ ಪುರಾಣದಲ್ಲಿ ಬಂದಿರುವಂತೆ '...ಪತಿಯಿಂ ಪರೋಕ್ಷದೊಳ್ ಜಿನದೀಕ್ಷಾಚರಣ ಮೇಣ್ ಶುಭಚರಿತದೆ ಮರಣಂ' ಗಂಡನ

31 ಅಜಿತ ಪುರಾಣ I 47

32 EC XIV Supp. ಶ್ರೀರಂಗಪಟ್ಟಣ 315

33 EC VIII sb 408 C 950

34 EC VIII Sb 495 1441 AD

35 EC VII s k 37 AD 1417

ಮರಣವನಂತರ ಸದಾಚಾರ ನಿಷ್ಠಳಾಗಬೇಕು ಇಲ್ಲವೆ ಸತಿಯಾಗಬೇಕು. ಈ ಕಾಲಕ್ಕೆ ವಿಧವೆಗೆ ಧರ್ಮಶಾಸ್ತ್ರಗಳು ಕಠಿಣ ಜೀವನದ ರೀತಿಯನ್ನು ವಿಧಿಸಿರುತ್ತವೆ. ಇಂತಹವರಲ್ಲಿ ವಿಧವೆಯೆನಿಸಿಕೊಂಡು ಕಠಿಣ ಜೀವನ ನಡೆಸುವುದಕ್ಕಿಂತ ಸಾಯು ವುದೇ ಮೇಲೆಂದು ಭಾವಿಸುತ್ತಿದ್ದರು. ಆದರೆ ಮಹಾಸತಿಯಾದವರೆಲ್ಲರೂ ಹೀಗೆಯೇ ಆದರೆಂದು ಹೇಳಲು ಸಾಧ್ಯವಿಲ್ಲ. ಸತಿಯಾದವರಲ್ಲಿ ಹೆಚ್ಚಿನವರು 'ಉನ್ನತ ಜಾತಿ ಯವರೆಂದು' ಕಂಡುಬರುವುದಿಲ್ಲ. ಹೀಗಾಗಿ ಕರ್ನಾಟಕದಲ್ಲಿ ಸತಿಯಾದವರೆಲ್ಲ ಸ್ವಇಚ್ಛೆಯಿಂದ ಆದವರೆ. ರಾಜಾರಾಮ ಮೋಹನರಾಯರ ಕಾಲಕ್ಕೆ ಇಲ್ಲಿ ಸತಿ ಪದ್ಧತಿ ಅಪರೂಪವಾಗಿದ್ದಿರಬಹುದು. ಆದರೆ ಅದು ಬೇರೆಯ ಕಡೆಯಿದ್ದಂತೆ ಬಲಾತ್ಕಾರವಾಗಲೀ ಅಥವಾ ಇತರರ ಮನಸ್ಸಿಗೆ ನೋವುಂಟುಮಾಡುವಂತಾಗಲೀ ಇರಲಿಲ್ಲ. ಆಗ ಬಂಗಾಳ ಮತ್ತಿತರ ಕಡೆಗಳಲ್ಲಿದ್ದಂತೆ ಕ್ರೂರ ಪದ್ಧತಿಗಳು ನಮ್ಮಲ್ಲಿ ಇರಲಿಲ್ಲ.

ಕರ್ನಾಟಕದಲ್ಲಿ ಸತಿಪದ್ಧತಿ ಸಾರ್ವತ್ರಿಕವಾಗಿರಲಿಲ್ಲ. ಮಾಸ್ತಿಯಾದ ವ್ಯಕ್ತಿಗಳ ಜ್ಞಾಪಕಾರ್ಥವಾಗಿ ಅವರ ಸಮೀಪದ ಬಂಧುಗಳು ಶಾಸನ ಕಲ್ಲನ್ನು ನೆಡುತ್ತಿದ್ದರು. ಶಿವಮೊಗ್ಗ ಜಿಲ್ಲೆಯಲ್ಲಿ ಈ ಮಾಸ್ತಿ ಬಹು ಪ್ರಚಾರದಲ್ಲಿದ್ದಂತೆ ಕಂಡುಬರುತ್ತದೆ. ಶಾಸನಗಳ ಆಧಾರದಿಂದ ಇದನ್ನು ಹೇಳಬಹುದು. ಬೇರೆಯ ಕಡೆ ಮಾಸ್ತಿಯಿದ್ದರೂ ಅಷ್ಟು ಹೆಚ್ಚಾಗಿರಲಿಲ್ಲ. ಅಥವಾ ಬರವಣಿಗೆಯಿಲ್ಲದ ಅಜ್ಞಾತ ಕಲ್ಲುಗಳು ಶಾಸನ ಗಳನ್ನು ಪರಿಶೀಲಿಸುವಾಗ ವಿಜಯನಗರದ ಅರಸರ ಕಾಲದಲ್ಲಿ ಬಹಳ ಕಂಡು ಬರುತ್ತದೆ. ಸು. 17ನೆಯ ಶತಮಾನಕ್ಕೆ ಸತಿಪದ್ಧತಿ ಅಪರೂಪಕ್ಕೆ ಬಂದಿತ್ತೆಂದು ನಾವು ಊಹಿಸಬಹುದು.

ಮಾಸ್ತಿಯ ಬಗ್ಗೆ ಹೇಳುವಾಗ ಇನ್ನೊಂದು ರೀತಿಯನ್ನು ನಾವು ನೆನೆಯಬೇಕು. ಅದನ್ನು ಮಾಸ್ತಿಯೆಂದು ಕರೆಯಬೇಕೋ ಬೇಡವೋ ಗೊತ್ತಿಲ್ಲ. ಆದರೆ ಅದನ್ನು ಒಂದು ರೀತಿಯ ಮಾಸ್ತಿಯೆಂದು ಕರೆಯುವುದೇ ಉತ್ತಮ. ಮೇಲೆ ನೋಡಿದ ಮಾಸ್ತಿಯವರೆಲ್ಲ ಶಾಸನದಲ್ಲಿ ಉಕ್ತರಾಗಿದ್ದರೆ ಇವರು ಜನಪದ ಕಾವ್ಯಗಳಲ್ಲಿ ಉಕ್ತ ರಾಗಿದ್ದಾರೆ. ಜನಪದ ಕಾವ್ಯಗಳು ಆಧಾರಿತ ಕಾವ್ಯಗಳಲ್ಲದಿದ್ದರೂ ಇಲ್ಲಿ ಬಂದಿರುವ ಬಲಿಯನ್ನು ಕಡೆಗಣಿಸುವ ಹಾಗಿಲ್ಲ. ಗೌಡರು ಬಾವಿಯನ್ನು ತೋಡಿಸಿ ಅಲ್ಲಿ ನೀರು ಕಾಣದಿದ್ದಾಗ, ಕೋಟೆ ಕಟ್ಟಿಸಿ ಅದು ಸರಿಯಾಗಿ ನಿಲ್ಲದಾಗ ತಮ್ಮ ನೆಚ್ಚಿನ ಸೊಸೆ ಯನ್ನು ಬಲಿಕೊಟ್ಟವರಿದ್ದಾರೆ. ಬಲಿಯಾದವರು ತಮ್ಮ ಸ್ವಇಚ್ಛೆಯಿಂದ ಬಲಿಯಾ ದವರು ಇಂತಹ ಕಡೆ ಗಂಡ ಬದುಕಿರುವುದನ್ನು ಕಾಣುತ್ತೇವೆ. ಇನ್ನೊಂದು ಕಥೆಯಲ್ಲಿ ಹೆಂಡತಿ ಕೆರೆಗೆ ಹಾರವಾದಾಗ ವಿಷಯ ತಿಳಿದ ಗಂಡನೂ ಕೆರೆಗೆ ಹಾರವಾಗುತ್ತಾನೆ. ಇದೂ ಒಂದು ಬಗೆಯ ಮಾಸ್ತಿಯೆ. ಇದನ್ನು ಪೋಷಿಸುವಂತೆ ಅಪರೂಪದ ಶಾಸನ ವೊಂದು ಸಿಕ್ಕಿದೆ. 'ಹೆಗೋಡೆಯ ಬಯಿರ ಗವುಡರು ಅವನ ಸತಿ ಸಂಗಡ ವಯಿಕುಂಠ

ಪ್ರಾಪಿತರಾದರು.'[36] ವಿಜಯನಗರದ ದೇವರಾಯನ ಕಾಲದ ಶಾಸನವಿದು. ಇದೇ ಅಲ್ಲದೆ ಅನಂತನಾಥ ಪುರಾಣದಲ್ಲಿ ಬರುವ ಚಂಡ ಶಾಸನನ ಪ್ರಕರಣವನ್ನು ನೋಡಿ ವಸುಷೇಣನ ಪತ್ನಿ ಸುನಂದೆಯನ್ನು ವಸುಷೇಣನ ಮಿತ್ರ ಚಂಡಶಾಸನ ಕಾಮಿಸಿ ಅಪಹರಿಸುತ್ತಾನೆ. ಆಕೆಯನ್ನು ಒಲಿಸಿಕೊಳ್ಳಲು ನಾನಾ ಉಪಾಯಗಳನ್ನು ಹೂಡು ತ್ತಾನೆ. ಕೊನೆಗೆ ವಸುಷೇಣನ ಕೃತಕ ರುಂಡವನ್ನು ಸುನಂದೆಗೆ ತೋರಿಸಿದಾಗ, ಆಕೆ ಹಾಗೆಯೇ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾಳೆ. ಅನಂತರ ಚಂಡಶಾಸನ ಆಕೆಯ ಸಂಗಡ ಚಿತೆಯೇರುತ್ತಾನೆ. ತಮ್ಮ ಪತಿ ಸತ್ತನೆಂದು ಅವನ ರಾಣಿಯರೂ ಚಿತೆ ಯೇರುತ್ತಾರೆ.[37] ಹೀಗೆ ಗಂಡಸರೂ ಅಪರೂಪವಾಗಿ ತಮ್ಮ ಪತ್ನಿ ಸತ್ತನಂತರ ಚಿತೆಯೇರುತ್ತಿದ್ದ ಅಥವಾ ಸಾಯುತ್ತಿದ್ದ ಅಪರೂಪ ನಿದರ್ಶನಗಳಿವೆ.

ಟಿಪ್ಪಣಿ: ಬೆಳತೂರು ದೇಕಬ್ಬೆ ಶಾಸನದಲ್ಲಿ ಬರುವ ಸ್ಥಳಗಳ ಪರಿಚಯ :-

1. (EC IV HD 18) ಪೆರ್ವಯಲು: ಮೈಸೂರು ಜಿಲ್ಲೆ ಹೆಗ್ಗಡೆ ದೇವನಕೋಟೆ ತಾಲೂಕಿನ ಹೆಬ್ಬಲಗುಪ್ಪೆ ವಚನಸ್ಥಳ
2. ನವಿಲೆನಾಡು: ಅದೇ ತಾಲೂಕಿನ ಹೆಬ್ಬಲುಗುಪ್ಪೆ. ಕೊಳ್ಳೇಗಾಲ, ಮಣಿಗೆಪಳ್ಳಿ ಈ ಊರುಗಳ ಸುತ್ತಮುತ್ತಲ ಪ್ರದೇಶ
3. ನುಗುನಾಡು: ನುಗು ನದಿಯ ಸುತ್ತಮುತ್ತಲ ಪ್ರದೇಶ ಅಂದರೆ ಬೆಳತೂರ ಸುತ್ತ ಮುತ್ತಲ ಪ್ರದೇಶ

ಆಧಾರ ಗ್ರಂಥಗಳು

1. ಎಪಿಗ್ರಾಫಿಯ ಕರ್ನಾಟಕ
2. Karnataka Inscriptions vol. i & ii
3. Inscription in Northern Karnataka & Kolhapur State by Kundanagar, K. G.
4. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ—ಡಾ॥ ಎಂ. ಚಿದಾನಂದಮೂರ್ತಿ
5. ಯುಗಯಾತ್ರಿ ಭಾರತೀಯ ಸಂಸ್ಕೃತಿ—ಪುಟ 454
6. ಸಂಭಾವನೆ—ತಿ. ತಾ. ಶರ್ಮರ ಲೇಖನ ಮಾಸ್ತಿಕಲ್ಲುಗಳು

---

[36] EC VIII Sb 565

[37] ಅನಂಥನಾಥ ಪುರಾಣ ಜನ್ನ

ಸಾಹಿತ್ಯ ಚರಿತ್ರೆಗಳು* (ಕೆಲವು ಟಿಪ್ಪಣಿಗಳು)

ವಿ. ಕೃ. ಗೋಕಾಕ್

ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯು ಒಂದು ಹಿರಿಯ ಸಾಹಸ ಹಾಗೂ ಸಿದ್ಧಿಯಾಗಿದೆ. ಸಾಹಿತ್ಯ ವಿಮರ್ಶೆ, ಜೀವನ ಚರಿತ್ರೆ, ರಾಜಕೀಯ ಇತಿಹಾಸ, ಧಾರ್ಮಿಕ ಹಾಗೂ ಸಾಮಾಜಿಕ ಜೀವನ, ಭಾರತೀಯ ಹಾಗೂ ಜಾಗತಿಕ ಸಾಹಿತ್ಯ ಚರಿತ್ರೆ, ಕನ್ನಡ ಭಾಷೆಯ ಇತಿಹಾಸ,- ಇಷ್ಟೆಲ್ಲ ಅನೇಕ ಮುಖ್ಯ ಸಮಾಲೋಚನೆಯನ್ನೊಳಗೊಂಡಿದೆ. ಮೇಲಾಗಿ ನಾಡಿನ ತಜ್ಞರನೇಕರು ಇದಕ್ಕಾಗಿ ದುಡಿದಿದ್ದಾರೆ. ಅಂತೇ ಈ ಸಾಹಿತ್ಯ ಚರಿತ್ರೆಯು ಕನ್ನಡ ನಾಡು ತನ್ನ ಸಾಹಿತ್ಯ ಚರಿತ್ರೆಯನ್ನು ತಾನೇ ಬರೆದುಕೊಂಡಂತಿದೆ. ಯೋಜಕರಾದ ವಿಶ್ವವಿದ್ಯಾಲಯದ ಅಧಿಕಾರಿಗಳೂ, ಡಾ॥ ಶಿವರುದ್ರಪ್ಪನವರು, ಡಾ॥ ಮುಗಳಿಯವರು, ಸಮಿತಿಯ ಸದಸ್ಯರು ಹಾಗೂ ಲೇಖಕ - ವಿದ್ವಾಂಸರು ಇದಕ್ಕಾಗಿ ತುಂಬ ಅಭಿನಂದನಾರ್ಹರಾಗಿದ್ದಾರೆ.

ಇಂಗ್ಲಿಷಿನಲ್ಲಿ ಸಾಹಿತ್ಯೇತಿಹಾಸಗಳ ಇತಿಹಾಸ ಹೀಗಿದೆ. 17ನೇ ಶತಮಾನದ ಡ್ರ್ಯಾಯ್‌ಡನ್ ತನ್ನ ಹಿಂದಿನ ಸಾಹಿತ್ಯ ಯುಗದ ಲಕ್ಷಣಗಳನ್ನು ಕಂಡು ಹಿಡಿಯಲು ಯತ್ನಿಸಿದ. 'ಕವಿ ಚರಿತ್ರೆಗಳು' ಎಂಬ ಮಾಲಿಕೆಯನ್ನು 18ನೇ ಶತಮಾನದಲ್ಲಿ ಡಾ॥ ಜಾನ್‌ಸನ್ ಪ್ರಕಟಿಸಿದ. ವಾರ್ಟನ್ ಮೊದಲಾದವರೂ ಹೀಗೆ ಮಾಡಿದರು. ಚಾರ್ಲ್ಸ್‌ಲ್ಯಾಮ್ ಹಿಂದಿನ ಕವಿ ನಾಟಕಕಾರರಿಂದ ಉತ್ತಮ ಉದಾಹರಣೆಗಳನ್ನು ಸಂಗ್ರಹಿಸಿದ. ಹೇಲಮ್ ಸಾಹಿತ್ಯ ಚರಿತ್ರೆಯ ರೂಪರೇಷೆಗಳನ್ನು ಹಾಕಲು ಹವಣಿಸಿದ. ಇತಿಹಾಸಕಾರರನ್ನು ಜನಸಾಮಾನ್ಯರ ಸಾಮಾಜಿಕ ಜೀವನವು ಆಕರ್ಷಿಸಿದ್ದರಿಂದ ಸಾಹಿತ್ಯೇತಿಹಾಸದಮೇಲೂ ಇದರ ಪ್ರಭಾವ ಬಿದ್ದಿತು. ಸಾಹಿತ್ಯದ ಇತಿಹಾಸವನ್ನು ಟೇನ್ ಹಾಗೂ ಜಸೆರಾಂ (Jusserand) ಅವರೂ ಕಾವ್ಯೇತಿಹಾಸವನ್ನು ಕೂರ್ಥ್ ಹೋಪ್ ಅವರು ಬರೆದರು. ಮುಂದೆ ಇಲ್ಲಿಯ ಎರಡನೆಯ ವಾಕ್ಯಮಾಲಿಕೆಯಲ್ಲಿ ಹೇಳಿದ ಅನೇಕ ಲಕ್ಷಣಗಳನ್ನೊಳಗೊಂಡು Stopford Brooke, Saintsburry ಮೊದಲಾದವರು ಬರೆದರು. ಕೇಂಬ್ರಿಜ್

---

* ತಾ॥ 10-4-1975 ರಂದು ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಎರಡನೆಯ ಸಂಪುಟದ ಬಿಡುಗಡೆಯ ಸಮಾರಂಭದಲ್ಲಿ ಮಾಡಿದ ಉಪನ್ಯಾಸದ ಸಾರಾಂಶ.

ಹಾಗೂ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯಗಳು ಹೆಚ್ಚು ಕಡಿಮೆ ಇದೇ ಮಾದರಿಯ ಸಾಹಿತ್ಯ ಚರಿತ್ರಗಳನ್ನು ಅನೇಕ ಸಂಪುಟಗಳಲ್ಲಿ ಪ್ರಕಟಿಸಿದವು.

ಮಾರ್ಕ್ಸ್‌ವಾದ, ಅನುಭಾವ (ಕಾವ್ಯದ ಇತಿಹಾಸವನ್ನು ಕುರಿತು), ಹೀಗೆ ಒಂದೊಂದು ದರ್ಶನದ ದೃಷ್ಟಿಯಿಂದ ಬರೆದ ಸಾಹಿತ್ಯ ಚರಿತ್ರೆಗಳೂ ಇವೆ. ಶ್ರೀ ಅರವಿಂದರ The Future Poetry ಎಂಬ ಆಂಗ್ಲ ಕಾವ್ಯ ಚರಿತ್ರೆಯಲ್ಲಿ ಇಡೀ ಚರಿತ್ರ ಒಂದು ಪ್ರಮೇಯವನ್ನು ಉದಾಹರಿಸುತ್ತದೆ. ಆ್ಯಂಗ್ಲೊ-ಸ್ಯಾಕ್ಸನ್ ಹಾಗೂ ಕೆಲ್ಟಿಕ್ ಎಂಬ ಎರಡು ಜನಾಂಗದ ಮಿಶ್ರರಕ್ತವಿರುವ ಆಂಗ್ಲರ ಕಾವ್ಯೇತಿಹಾಸದಲ್ಲಿ ಒಮ್ಮೆ ಒಂದು, ಒಮ್ಮೆ ಇನ್ನೊಂದು ಕುಲದ ವೈಶಿಷ್ಟ್ಯ ಪ್ರಭಾವೀಯಾಗುತ್ತದೆ.

ಒಂದೊಂದು ಪ್ರಕಾರ ಇಲ್ಲವೆ ಒಂದೊಂದು ಸಾಹಿತ್ಯಾಂಗವನ್ನು ಕುರಿತು ಸಹಾ ಚರಿತ್ರೆಗಳಿವೆ : Channels of English Literature Series ; History of Prosody, Prose Style ಮುಂತಾದ ಇದೇ ಪ್ರಕಾರ ವಿವಿಧ ಕಾವ್ಯವಸ್ತುಗಳ ಚರಿತ್ರೆಗಳೂ ದೊರೆಯುತ್ತವೆ : Nature in English Poetry ಇತ್ಯಾದಿ.

ಆದರ್ಶ ಸಾಹಿತ್ಯ ಚರಿತ್ರೆಯ ಲಕ್ಷಣಗಳಿರಬಹುದು. ಇದನ್ನು ಹೇಳುವುದು ಕಠಿಣ, ಸಾಧಿಸುವದು ಕಠಿಣತರ. ಎರಡನೆಯ ವಾಕ್ಯಮಾಲೆಯಲ್ಲಿ ಒಂದು ಸಾಹಿತ್ಯ ಚರಿತ್ರೆಗೆ ಎಂಟು ದೃಷ್ಟಿ ಕೋನಗಳನ್ನು ಸೂಚಿಸಿದೆ. ಇವತ್ತೆ ಇನ್ನೂ ಹಲವಾರನ್ನು ಜೋಡಿಸಬಹುದು. ಉದಾ : (1) Anthro-pological ಇಲ್ಲಿ culture ದ ವ್ಯಾಖೆಯೇ ವಿಶ್ವವ್ಯಾಪಕವಾಗಿದೆ. Basic culture (ಯಂತ್ರಶಿಲ್ಪ, ವೇಷ-ಭೂಷಣ, ಆಹಾರ-ವಿಹಾರ, ಮು.) ; social culture (ಕಾನೂನು ಶಾಸ್ತ್ರ ; ಅರ್ಥಶಾಸ್ತ್ರ ; ecology ಇಲ್ಲವೆ ಪರಿಸರ-ಶಾಸ್ತ್ರ, ಮು.) ; value culture : ತತ್ವಜ್ಞಾನ, ಸಪ್ತಲಲಿತಕಲೆಗಳು, ಸಿನೆಮಾ, ಟಿ. ವಿ. ಮು. (2) Psychological, psychoanalytical : ಸಾಹಿತ್ತಿಕ ಆಂದೋಲನಗಳ ಮೇಲೂ ಸಾಹಿತಿಗಳ ಚರಿತ್ರೆಗಳ ಮೇಲೂ ಈ ದೃಷ್ಟಿ 'ಕ್ಷ' ಕಿರಣವನ್ನು ಕೆಡವಿ ಹೊಸ ಸಾಮಗ್ರಿಯನ್ನು ಕೊಡುತ್ತದೆ. Legouis ಹಾಗುLazamia ಬರೆದ ಆಂಗ್ಲ ಸಾಹಿತ್ಯ ಚರಿತೆಯು ಇದಕ್ಕೆ ಉದಾಹರಣೆ. ; (3) Comparative : ತೌಲನಿಕ ದೃಷ್ಟಿ. ವಿವಿಧ ದೇಶ ಕಾಲದ ಸಾಹಿತಿಗಳನ್ನೂ ಸಾಹಿತ್ಯಯುಗಗಳನ್ನೂ ಹೋಲಿಸಿ ಹೊಸ ಮಾತುಗಳನ್ನು ತಿಳಿಸಲು ಬರುತ್ತದೆ. (4) ಸಾಹಿತ್ಯ ಕೃತಿಗಳಿಂದ ಪ್ರಾತಿನಿಧಿಕ ಉದಾಹರಣೆಗಳನ್ನು ಆಯ್ದುಕೊಡುವದು: ಉದಾ : Compton-Rickett.

ಮುಖ್ಯತಃ ಕೇಳಬೇಕಾದ ಪ್ರಶ್ನೆ ಇದು. ಸಾಹಿತ್ಯ ಚರಿತ್ರೆ ಏತಕ್ಕಾಗಿ ? ಪರೀಕ್ಷೆಗಳು ನಡೆಯಬೇಕೆಂದೆ? ಜನಸಾಮಾನ್ಯರಿಗೆಂದೆ ? ಉಚ್ಚವಿದ್ಯಾಭ್ಯಾಸಿಗಳಿ

ಗೆಂವೆ ? ಅದರ ವಿದ್ವತ್ತು - ಓದುಗರು ಯಾವ ಮಟ್ಟದ ಪರಿಣತಿಯನ್ನು ನಿರೀಕ್ಷಿಸು ತ್ತಾರೆಂಬುದರ ಮೇಲೂ ಅಂಶತಃ ಅವಲಂಬಿಸಿರುತ್ತದೆ. ಸ್ಥೂಲವಾಗಿಯೇ ಆಗಲಿ, ಸೂಕ್ಷ್ಮವಾಗಿಯೇ ಆಗಲಿ, ಒಂದು ಸಾಹಿತ್ಯಚರಿತ್ರೆಯು ನಾಲ್ಕು ನಿರೀಕ್ಷೆಗಳನ್ನು ತೃಪ್ತಿ ಪಡಿಸಬೇಕು : (6) Spengler, Yeats, Sri Aurobindo, ತಾತ್ವಿಕ ನಿಲುವು ಏನೇ ಇರಲಿ, ಒಂದು ಯುಗದಿಂದ ಇನ್ನೊಂದು ಯುಗಕ್ಕೆ ಜನಜೀವನದಲ್ಲಿ ಅನೇಕ ಬದಲಾವಣೆಗಳಾಗುತ್ತವೆ–ಆಂತರಿಕ ಹಾಗೂ ಸಾಮಾಜಿಕ ದೃಷ್ಟಿಗಳಿಂದ. ಜೀವನದ ಮೌಲ್ಯಗಳ ದೃಷ್ಟಿಯಿಂದ ಇದರ ಕಥನ ಉದ್ದೀಪಕವಾಗುತ್ತದೆ. (2) ಅದರಂತೆ ಸಾಹಿತ್ಯದ ತಂತ್ರ-ಶೈಲಿ-ವಿಧಾನಗಳಲ್ಲಿ ಬದಲಾವಣೆಗಳಾಗುತ್ತವೆ. ಕಲಾಪರಿಣತಿಯ ದೃಷ್ಟಿಯಿಂದ ಇದರ ಕಥನ ಬೇಕು. (3) ಮನುಕುಲಕ್ಕೆ ಉದ್ದೀಪಕವಾಗುವ ಚಿತ್ರಣ-ದರ್ಶನಾಂಶಗಳು ಆ ಸಾಹಿತ್ಯದಲ್ಲಿ–ಮಹೋನ್ನತರಲ್ಲಿ ಇಲ್ಲವೆ ಸರ್ವಸಾಧಾರಣ ಸಾಹಿತಿಗಳ ಕೆಲವು ಕೃತಿಗಳಲ್ಲಿ ಎಷ್ಟರಮಟ್ಟಿಗೆ ಬಂದಿವೆ ? ಇವುಗಳನ್ನು ಎತ್ತಿ ತೋರಿಸಬೇಕು. (4) ವಿಶ್ವಸಾಹಿತ್ಯದ ಶ್ರೇಷ್ಠ ಸಾಹಿತಿಗಳ ಪಙ್ಕ್ತಿಗೆ ನಿಲ್ಲಬಲ್ಲ ಸಾಹಿತಿಗಳ ಪ್ರತಿಭೆಯನ್ನು ಅರಳಿಸಿ ತೋರಿಸಬೇಕು.

1. 'ಪಂಪಭಾರತದ ಆಶೀಪದ್ಯ—ಒಂದು ಮರುವಿಚಾರ'ಕ್ಕೆ ಒಂದು ಉತ್ತರ

'ಸಾಧನೆ'ಯ ಸಂಪುಟ-3, ಸಂಚಿಕೆ-3 ರಲ್ಲಿ[1] ನನ್ನ ಲೇಖನ "ವಿಕ್ರಮಾರ್ಜುನ ವಿಜಯದ ಆಶೀಪದ್ಯ"[2] ಇದಕ್ಕೆ ಒಂದು ಉತ್ತರ ಬಂದಿದೆ. ವಿಚಾರಗಳು ಮರು ವಿಚಾರಗಳು ನಡೆಯಬೇಕಾದದ್ದೇ. ಅದು ಸಂತೋಷದ ಸಂಗತಿ. "ಮರುವಿಚಾರ" ಲೇಖನದ ಲೇಖಿಕಿ ಹೇಮಲತಾ ಪದಕಿ ಅವರು ನನ್ನ ಲೇಖನವನ್ನು 'ಎರಡು ಸ್ತರ ದಲ್ಲಿ' ನಿಂತು ನೋಡಿದ್ದಾರೆ :

1 ನಾನು ಡಾ. ಎಂ. ಎಂ. ಕಲ್ಬುರ್ಗಿ ಇವರ ಲೇಖನ 'ಪಂಪ ಭಾರತದ ಮಂಗಲಪದ್ಯ' ಇದನ್ನು ತಪ್ಪಾಗಿ ಗ್ರಹಿಸಿದ್ದೇನೆ ; ಮತ್ತು

2 ನಾನು ಹೊಸ ತಪ್ಪುಗಳನ್ನು ಮಾಡಿದ್ದೇನೆ[3] ಅಷ್ಟೇ ಅಲ್ಲ ಅನಾವಶ್ಯಕ ಆರೋಪಗಳನ್ನೂ[4] ಮಾಡಿದ್ದೇನೆ.

ನಾನು 'ಮೇಸ್ತ್ರಿ' ಅಲ್ಲವಾದುದರಿಂದ ಹೇಮಲತಾ ಅವರ ಹಾಗೆ ಸ್ತರಗಳಲ್ಲಿ ನಿಂತು ಉತ್ತರಗಳನ್ನು ಕೊಡಲಾರೆ! ಮೇಲಾಗಿ ನನಗೆ ಎರಡೇ ಸ್ತರಗಳೂ ಸಾಲವು!! ಹೇಮಲತಾ ಅವರು ಹೇಳುವ ಹಾಗೆ ನನ್ನ ಗ್ರಹಿಕೆಗಳು ತಪ್ಪಿರಬಹುದು ? ಸುಮತಿ ಗಳು ನನ್ನ ಬರೆಹಗಳನ್ನೂ ಅವರ ಬರೆಹಗಳನ್ನೂ ಓರೆಗಲ್ಲಿಗೆ ಹಚ್ಚಿ ಇಲ್ಲವೇ ಮಂಥನ ಗೈದು ಸರಿಯಾದುದನ್ನು ಸ್ವೀಕರಿಸಬೇಕೆಂದು ನನ್ನ ನಮ್ರ ಬಿನ್ನಹ. ಬದುಕಿದ ಬರೆಹಗಾರ ಹಾಕಿದ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದುದು, ತಪ್ಪನ್ನು ಇದ್ದರೆ ಒಪ್ಪಿಕೊಳ್ಳಬೇಕಾದುದು ಕರ್ತವ್ಯವೇ ಆದುದರಿಂದ ಕೆಳಗಿನ ಕೆಲವಿಷಯಗಳನ್ನು ಬರೆಯುತ್ತಿರುವೆ.

1 ಹೇಮಲತಾ ಇವರ ಪ್ರಕಾರ ಡಾ॥ ಎಂ. ಎಂ. ಕಲ್ಬುರ್ಗಿ ಇವರ ಮೇಲೆ ನಾನು ಅನಾವಶ್ಯಕ ಆರೋಪಗಳನ್ನು ಹೊರಿಸಿದ್ದೇನೆ. ನಾನು ಯಾವುದೇ ವಿಷಯ

---

1 ಸಾಧನೆ, ಸಂ-3, ಸಂ-3, ಪು. 174-9

2 ಅದೇ ಸಂ-3, ಸಂಚಿಕೆ-3. ಪು. 175-86. ಹೇಮಲತಾ ಪದಕಿ ಇವರು ನನ್ನ ಲೇಖನದ ಶೀರ್ಷಿಕೆಯನ್ನು ಬದಲಿಸಿ ಒಂದು 'ಹೈಬ್ರಿಡ್' ಸೃಷ್ಟಿಯನ್ನು ಏಕೆ ಮಾಡಿರುವರೊ ನನಗೆ ಅರ್ಥವಾಗದು. 'ಪಂಪ ಭಾರತ' ಎಂಬ ಪದವನ್ನು ನಾನು ಬಳಸಿಲ್ಲ. ಒಂದು ಲೇಖನವನ್ನು ಉಲ್ಲೇಖಿಸುವಾಗ ಇದ್ದುದನ್ನು ಇದ್ದಂತೆ ಹೇಳಬೇಕಷ್ಟೆ ?

3 ಹೇಮಲತಾ ಪದಕಿ, ಸಾಧನೆ, ಸಂ-3, ಸಂ-3, ಪು. 174

4 ಅದೇ ಪತ್ರಿಕೆ : ಪು. 177

ವನ್ನು ಬರೆಯುವಾಗ ಒಬ್ಬ ವ್ಯಕ್ತಿಗೆ ಸಂಬಂಧಿಸಿದಾಗ ಆಯಾ ಲೇಖಕರ ಕೃತಿ ಇಲ್ಲವೆ ಲೇಖನ ಇವುಗಳನ್ನು ಉಲ್ಲೇಖಿಸಿ ಪುಟಗಳನ್ನು ಅಲ್ಲಲ್ಲಿ ನಮೂದಿಸಿದ್ದೇನೆ. ಉದ್ಧರಿಸಿದ ಉಲ್ಲೇಖಗಳು ಅಸತ್ಯವಾದರೆ ನಿಜವಾಗಿಯೂ ನನ್ನದು 'ಅನಾವಶ್ಯಕ ಆರೋಪ' ಇಲ್ಲದಿದ್ದಲ್ಲಿ ಎಂದರೆ ನಾನು ಉಲ್ಲೇಖಿಸಿದ ವಿಷಯಗಳು ಆಯಾ ಎಡೆಗಳಲ್ಲಿ ಇದ್ದುದು ದಿಟವಾದರೆ, ನನ್ನದು ಅನಾವಶ್ಯಕ ಆರೋಪವಲ್ಲ. ಇದ್ದುದನ್ನು ಇದ್ದಂತೆ ನಿರೂಪಿಸಿರುವ 'ಸತ್ಯಸ್ಯಸತ್ಯ ಕಥನ' ಅರ್ಥಾತ್ ನಿರೂಪಣ.

ಹೇಮಲತಾ ಇವರು ಹೇಳುವಂತೆ 'ಅನಾವಶ್ಯಕ ಆರೋಪಗಳಿದ್ದರೆ' ನನ್ನ ಲೇಖನಕ್ಕೆ ಸಂಬಂಧಪಟ್ಟ ಲೇಖಕರು ಬದುಕಿರುವಾಗ ಅವರು ಉತ್ತರ ಹೇಳಬೇಕು ; ಪ್ರಶ್ನೆ ಹಾಕಬೇಕು. ಬೇರೆಯವರು ತಮ್ಮ ವಿಚಾರಗಳನ್ನು ಮಂಡಿಸಬಹುದು– ಸಮರ್ಥಿಸಬಹುದು. ಆದರೆ ಉತ್ತರ ಕೊಡುವ ಅಧಿಕಾರವನ್ನು ಪಡೆಯಲಾರರು. ಹೇಮಲತಾ ವದಕಿ ಇವರಿಗೆ ಎರಡು ಸ್ತರಗಳಲ್ಲಿ ನಿಂತು ಉತ್ತರ ಕೊಡುವುದಕ್ಕೆ ಏನು ಅಧಿಕಾರ ? ಬಳಸುವ ಶಬ್ದಕ್ಕೆ ಬೆಲೆಯಿದೆಯಷ್ಟೆ ?

2 "ಮರು ವಿಚಾರ" ಬರೆದವಲ್ಲಿ ಹೇಮಲತಾ ಇವರು, ಪಂಪನು 'ಬಳಸಿದ ಉದಾತ್ತ' ಎಂಬ ಪದಕ್ಕೆ ಸ್ಪಷ್ಟವಾದ ಅರ್ಥವನ್ನು ಬರೆದಿಲ್ಲ. ನಾನು ಏನಾದರೂ ತಪ್ಪು ವಿವರಿಸಬಹುದು. ಏಕೆಂದರೆ ಅವರ ಪ್ರಕಾರ ನಾನು ತಪ್ಪು ಗ್ರಹಿಕೆಯ ವ್ಯಕ್ತಿ. ಅರಿಕೇಸರಿ ಧರಿಸಿದುದು ಯಾವ ಪಟ್ಟ ? ಅವರೇ ವಿವರಿಸಲಿ.

3 ನಾನು 'ಪ್ರಬುದ್ಧ ಕರ್ಣಾಟಕ' 'ಸಾಹಿತ್ಯ ಪರಿಷತ್ ಪತ್ರಿಕೆ' 'ಕರ್ನಾಟಕ ಭಾರತಿ' 'ಸಾಧನೆ' ಮೊದಲಾದ ಕೆಲ ಪತ್ರಿಕೆಗಳು ಉನ್ನತ ಬರೆವಣಿಗೆಗೆ ಮೀಸಲಾದುದರಿಂದ ಅವುಗಳಲ್ಲಿನ ಬರೆವಣಿಗೆಯಲ್ಲಿ ಪ್ರತಿಯೊಂದು ಪದಕ್ಕೆ ವಿಶಿಷ್ಟ ಬೆಲೆ ಇದೆಯೆಂದು ಭಾವಿಸಿದ್ದೆ–ಭಾವಿಸಿರುವೆ. ಏಕೆಂದರೆ ಅವುಗಳಲ್ಲಿ ಬರೆಯುವವರು ಉನ್ನತಮಟ್ಟದ ವರ್ಗಕ್ಕೆ ಪಾಠ ಹೇಳುವವರು, ಉತ್ತಮ ಬರೆಹಗಾರರೆಂದು (ತಮ್ಮ ಬರವಣಿಗೆಯಿಂದ) ಪ್ರಸಿದ್ಧರಾದವರು. ಈಗ ಹೇಮಲತಾ ವದಕಿ ಇವರ ಪ್ರಸ್ತುತ 'ಮರು ವಿಚಾರ' ದಿಂದ ನನ್ನ ಗ್ರಹಿಕೆ ತಪ್ಪಾಗಿದೆ. ಏಕೆಂದರೆ ನಾನು ಡಾ॥ ಕಲ್ಬುರ್ಗಿ ಅವರ ಲೇಖನದ ಪ್ರತಿಯೊಂದು ಶಬ್ದಕ್ಕೆ ಬೆಲೆ ಕೊಟ್ಟಿದ್ದೆ- ಈಗಲೂ ಕೊಟ್ಟಿರುವೆ. ಹೇಮಲತಾ ಇವರ ಪ್ರಕಾರ ಡಾ॥ ಕಲ್ಬುರ್ಗಿ ಇವರ ಲೇಖನ 'ಪಂಪ ಭಾರತದ ಮಂಗಲಪದ್ಯ'[5] ಇದು ಅಶಾಸ್ತ್ರೀಯ ಬರೆಹ. ಎಂದರೆ ಅಲ್ಲಿನ 'ವಾಚ್ಯ 'ಧ್ವನಿ' ಇತ್ಯಾದಿಗಳು ಪಾರಿಭಾಷಿಕ ಶಬ್ದಗಳಲ್ಲ. ಡಾ॥ ಕಲ್ಬುರ್ಗಿಯವರೆ ಹೀಗೆಂದು ಹೇಳುವವರೆಗೆ ಹೇಮಲತಾ ಇವರ ಬರೆವಣಿಗೆಗೆ ಬೆಲೆ ಇಲ್ಲ. ಇವರ ಅರಿವು ಹೇಮ

5 'ಕರ್ನಾಟಕ ಭಾರತಿ' ಸಂ–3, ಸಂ–2 ; ಪು. 68-71

ಲತಾ ಇವರಿಗಿಲ್ಲ ! ಡಾ॥ ಕಲ್ಬುರ್ಗಿ ಇವರ ಬರೆವಣಿಗೆಗೆ ನಾಡಿನಲ್ಲಿ ಒಂದು ಬೆಲೆ ಯಿದೆ. ಕನಿಷ್ಠ ಪಕ್ಷ ನನ್ನಮಟ್ಟಿಗಾದರೂ ಇದೆ. ಈ ಗ್ರಹಿಕೆ ತಪ್ಪೆ ? ನನ್ನ ಗ್ರಹಿಕೆ ಸರಿಯಾದರೆ ನಾನು ಆರೋಪಿಸಿರುವೆನೆನ್ನುವ ಹೇಳಿಕೆ ಅರ್ಥಹೀನ.

4. “ಮರುವಿಚಾರ”ದ ಹೇಮಲತಾ ಇವರ ಪ್ರಕಾರ ‘ಪುಷ್ಪ’ ಇದು ನಾಣ್ಯ ವಲ್ಲ. ಹೂವಾಗಿರಬೇಕು. “ಸಾಲೊಟಗಿ ಶಾಸನದ ‘ಪುಷ್ಪ’ ಜಾಗೀರದಾರರು ವಿವರಿಸಿ ದಂತೆ ನಾಣ್ಯ ಎಂಬ ಖಚಿತ ಅರ್ಥವನ್ನು ಕೊಡದೆ, ಬಂಗಾರದಿಂದ ತಯಾರಿಸಿದ ಹೂಗಳೆಂಬ ಅರ್ಥವನ್ನು ಕೊಡಬಹುದೆನಿಸುತ್ತದೆ...ಇತ್ಯಾದಿ. ಈ ಹೇಳಿಕೆಯಲ್ಲದೆ “ಅರಿಕೇಸರಿಯ ರಾಜ್ಯದಲ್ಲಿ ‘ಸುವರ್ಣ’ [ಪುಷ್ಪ ಅಥವಾ ಸುಪುಷ್ಪ ?] ನಾಣ್ಯ ಚಲಾವಣೆಯಲ್ಲಿದ್ದಿತೆ? ಎಂಬ ಪ್ರಶ್ನೆಗೆ ಏನು ಉತ್ತರ? ಹೀಗಿರುವಾಗ ಜಾಗೀರದಾರರ ಅಭಿಪ್ರಾಯವನ್ನು ಒಪ್ಪುವುದು ತೀರಕಷ್ಟ – ಎಂದೂ ಹೇಳಿದ್ದಾರೆ.”[6]

ಈ ಹೇಳಿಕೆಗಳಿಗೆ, ಪ್ರಶ್ನೆಗಳಿಗೆ ಇಷ್ಟು ಉತ್ತರವನ್ನು ನಾನು ಕೊಡಬಹುದು :

a) ಸಾಲೊಟಗಿ, ರಾಷ್ಟ್ರಕೂಟ ಚಕ್ರವರ್ತಿಗಳ ನಾಡಿನಲ್ಲಿ ಇದ್ದುದರಿಂದ ಆ ಚಕ್ರವರ್ತಿಗಳ ನಾಡಿನಲ್ಲಿ ಒಂದೆಡೆ ಬಳಕೆ ಇದ್ದ ನಾಣ್ಯ ಇನ್ನೊಂದೆಡೆ, ಮತ್ತೆ ಅವರ ಮಾಂಡಲಿಕರ ನಾಡಿನಲ್ಲಿ ಕೂಡ ಬಳಕೆಯಲ್ಲಿ ಇದ್ದಿತು ಎಂದರೆ ತಪ್ಪಾಗಲಾರದು. ಬ್ರಿಟೀಷ್ ಚಕ್ರವರ್ತಿಗಳ ನಾಣ್ಯ B.G. Currency ಮಾಂಡಲಿಕರಾದ ಭಾರತದ ನೂರಾರು ಸಂಸ್ಥಾನಗಳಲ್ಲಿ ಬಳಕೆ ಇದ್ದುದನ್ನು ಇಲ್ಲಿ ಗಮನಕ್ಕೆ ತಂದುಕೊಳ್ಳಬಹುದು. ನೈಜಾಮ್, ಗ್ವಾಲೇರ್ ಮೊದಲಾದ ಸಂಸ್ಥಾನಗಳಲ್ಲಿ ಬ್ರಿಟಿಷರ ನಾಣ್ಯಗಳ ಜೊತೆಗೆ ಸಂಸ್ಥಾನಿಕರ ನಾಣ್ಯಗಳೂ ಚಲಾವಣೆಯಲ್ಲಿದ್ದ ವಿಷಯಗಳನ್ನು ಲಕ್ಷ್ಯಕ್ಕೆ ತಂದು ಕೊಳ್ಳಬೇಕು. ಈ ದೃಷ್ಟಿಯಿಂದ ಮಾಂಡಲಿಕನಾದ ಅರಿಕೇಸರಿ ದೊರೆಯ ರಾಜ್ಯ ದಲ್ಲೂ ಚಕ್ರವರ್ತಿಗಳ ನಾಡಿನಲ್ಲಿ ಬಳಕೆಯಲ್ಲಿದ್ದ ನಾಣ್ಯ ಬಳಕೆಯಲ್ಲಿತ್ತೆಂದರೆ ತಪ್ಪೆ ? ಅರಿಕೇಸರಿಯೂ ಮಾಂಡಲಿಕನಲ್ಲವೇ ?

b) ‘ಪುಷ್ಪ’ ಎಂಬುದಕ್ಕೆ ‘ನಾಣ್ಯ’ ಎಂಬ ಅರ್ಥವೂ ಇದ್ದಿತು, ಇತರ ಅರ್ಥಗಳೊಂದಿಗೆ - ಇದು ನನ್ನ ದೃಢವಾದ ನಿಲುವು. ಪಂಪನ ಕಾಲದಿಂದ ಬ್ರಹ್ಮ ಶಿವನ ಕಾಲದವರೆಗೆ ಅಂದಿನ ಆ ಕರ್ನಾಟಕದಲ್ಲಿ ‘ಪುಷ್ಪ’ ಇದಕ್ಕೆ ‘ನಾಣ್ಯ’ ಎಂಬ ಅರ್ಥ ಇದ್ದಿತು. ಹೇಮಲತಾ ಅವರು ಕರ್ನಾಟಕದ ನಾಣ್ಯಗಳನ್ನು ವಿವರಿಸುತ್ತ

---

6 ಸಾಧನೆ, ಸಂ-3, ಸಂ-3, ಪು. 178. ಕನ್ನಡ ನಾಡಿನಲ್ಲಿ - ಭಾರತದಲ್ಲಿ ಪ್ರಾಚೀನ ಕಾಲದಲ್ಲಿ ನಾಣ್ಯಗಳಲ್ಲಿ ಕೆಲವಾದರೂ ಸುವರ್ಣದ್ದೆ ಆಗಿರುತ್ತಿದ್ದವು. ‘ಸುವರ್ಣ’ ಇದು ಕನ್ನಡ ದೇಶೀಯ ರೂಪು ‘ಪೊನ್’ ಅರ್ಥವನ್ನು ಹೊಂದಿದೆ ಬಳಕೆಯಲ್ಲೂ ಇದ್ದಿತು. ಆಗಾಗ ಇವರ ತೂಕದಲ್ಲಿ ಏರುಪೇರುಗಳು ಇದ್ದುದರ ಅರಿವು ಈ ಅಲ್ಪಮತಿಗಿದೆ. ಕಾರಣ ಹೇಮ ಲತಾ ಪವಕೆಯವರ ಪ್ರಶ್ನೆ ಅನಾವಶ್ಯಕ. ನನ್ನ ಮೂಲ ಲೇಖನದಲ್ಲೂ ಇದಕ್ಕೆ ಸಾಕಷ್ಟು ಉತ್ತರವಿದೆ. ಪು. 186

'ವೀಸ' ಎಂಬುದನ್ನು ನಾಣ್ಯ ಎಂದು ಒಪ್ಪಿಕೊಂಡಿರುವುದು[7] ಸ್ಫಟಿಕ ಶಲಾಕೆಯಷ್ಟು ಸ್ಪಷ್ಟ ಹಾಗೂ ಖಚಿತ ವಿಷಯ. ಆಗ 'ವೀಸಪುಷ್ಪ' ಎಂಬುದಕ್ಕೆ 'ವೀಸ' ಎಂಬ 'ನಾಣ್ಯ ಎಂದು ಹೇಳದೆ ಬೇರೆ ಗತ್ಯಂತರವಿಲ್ಲ. ಈಗ ಬ್ರಹ್ಮ ಶಿವನ ಪ್ರಯೋಗವೊಂದನ್ನು ಒಮ್ಮೆ ಸ್ವಲ್ಪ ಪರಿಶೀಲಿಸೋಣ :

ಕೂಸಿಂಗೆ ಕುತ್ತವಾದೊಡೆ ।
ದೇಶದ ಬಳರಿಯರ್ಗೆ ಕುಡುವರೊಳ್ಳರ್ಚನೆಯಂ॥
ಶಾಸನದೇವತೆಗೆಂದೊಡೆ ।
ವೀಸದಪುಷ್ಪಮುಮನೀಯರಱಿಗುಲಿವೆಂಡಿರ್ ॥

—ಸಮಯ ಪರೀಕ್ಷೆ, 5-100

—ಇಲ್ಲಿನ 'ವೀಸವ ಪುಷ್ಪ' ಇದನ್ನು ನಾಣ್ಯವೆಂದೇ ಭಾವಿಸಿ ಮಾನನೀಯ ವಿದ್ವಾಂಸರಾದ ಡಾ॥ ಚಿದಾನಂದ ಮೂರ್ತಿಗಳು ತಮ್ಮ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ[8]. ಅವರ ಗ್ರಹಿಕೆ ಸರಿಯೆಂದು ನನ್ನ ಭಾವನೆ. ಅಲ್ಪಮತಿಯಾದ ನನ್ನ ಗ್ರಹಿಕೆ ತಪ್ಪಾಗಿರಬಹುದು. ನನ್ನ ಗ್ರಹಿಕೆಗಳನ್ನು ಪರಿಶೀಲಿಸಿ ಧಿಡೀರೆಂದು ನಿರ್ಣಯವನ್ನೀಯುವ ಘನ ವಿದ್ವಾಂಸರಾದ ಹೇಮಲತಾ ಪದಕಿ ಅಂತಹ ವ್ಯಕ್ತಿಗಳು ಇಂತಹ ಕೃತಿಗಳನ್ನು ಒಮ್ಮೆಯಾದರೂ ನೋಡಬೇಕಷ್ಟೆ? ನೋಡಬೇಕೆಂಬ ನನ್ನ ಗ್ರಹಿಕೆ ಅವರ ಪ್ರಕಾರ ತಪ್ಪೇ ಆಗಿರಬಹುದು ! ಈ ಗ್ರಂಥವನ್ನು ಹೇಮಲತಾ ಇವರು ಒಮ್ಮೆಯಾದರೂ ನೋಡಿರುವರೆ ? ತಮ್ಮ 'ಮರುವಿಚಾರ'ವನ್ನು ಬರೆಯುವಲ್ಲಿ ಬಳಸಿಕೊಂಡಿರುವರೆ ? ಬಳಸಿಕೊಂಡಿದ್ದರೆ ಆ ಋಣವನ್ನು ಒಂದೆಡೆಯಾದರೂ ಸೂಚಿಸಿರುವರೆ ? ಸೂಚಿಸದಿದ್ದರೆ ತಪ್ಪಲ್ಲವೆ? ಓದದಿದ್ದರೆ ಆ ಓದು ಅರೆ ಅಲ್ಲವೆ ?

c) ಹೇಮಲತಾ ಪದಕಿ ಅವರು ನನ್ನ ಲೇಖನವನ್ನು ಖಂಡಿಸುವದಕ್ಕಾಗಿ ಡಾ. ಡಿ. ಸಿ. ಸರ್ಕಾರರ 'Indian Epigraphy' ಗ್ರಂಥದ ಪುಟ 433 ದಿಂದ "The Brahmanas of Salotgi (Bijapur District) were asked to pay to the local school, for the maintenance of its students, 5 pushpas (literally 'flowers') of glod metal on the occasion of a marriage...ಎಂದು ಹೇಳಿದ್ದಾರೆ. ಇದಲ್ಲದೆ The fact that the offering of

---

* 7 ಅದೇ. ಪು 1777

8 ಡಾ॥ ಎಂ. ಚಿದಾನಂದಮೂರ್ತಿ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಪು 391 —ಕೂಸಿಗೆ ರೋಗವಾದರೆ ಯಾವ ಯಾವುದೋ ದೇವತೆಗಳಿಗೆ ಬೇಕಾದಷ್ಟು ಹಣ ಕೊಟ್ಟು ಅರ್ಚನೆ ಮಾಡಿಸುತ್ತಾರೆ. ಆದರೆ ಶಾಸನ ದೇವತೆಯ ಪೂಜೆಗೆಂದರೆ (ಜೈನ ಶಾಸನ ದೇವತೆಗೆ) ಒಂದು ದಮಡಿ ನಾಣ್ಯ ಕೊಡುವುದಿಲ್ಲ ಎಂಬುದು ಬ್ರಹ್ಮಶಿವನ ಆರೋಪ - ಧರ್ಮ ವಂತಕ ಸ್ತ್ರೀಯರಮೇಲೆ

a lotus in favour of a diety..., appears to suggest that flower was not an ordinary one. It was probably made of gold or silver" ಇತ್ಯಾದಿಗಳನ್ನು ಉಲ್ಲೇಖಿಸಿ 'ಪುಷ್ಪ' ಎಂದರೆ ನಾಣ್ಯವಲ್ಲವೆಂಬ ಹೇಳಿಕೆಯನ್ನಿತ್ತು ಅವರ ಮಾತಿನಲ್ಲಿಯೆ ಹೇಳುವುದಾದರೆ 'ಸಮಾಧಾನ'[9] ಪಟ್ಟುಕೊಂಡಿದ್ದಾರೆ. ನನಗಾದರೊ ಇಂತಹ ಮಾತುಗಳಿಂದ ಅರ್ಥವಾಗದು. ಡಾ. ಸರ್ಕಾರರ ಸಿಲುವು ಎರಡೂ ಗ್ರಂಥಗಳಲ್ಲಿ 'ಪುಷ್ಪ' ಇದರ ಅರ್ಥದ ಬಗೆಗೆ ಏನಿದೆಯೆಂಬುದನ್ನು ತಿಳಿದುಕೊಳ್ಳುವುದು ಈಗ ಅವಶ್ಯವಾದದು. ಹೇಮಲತಾ ಅವರು ಉದ್ಧರಿಸಿದ ವಾಕ್ಯ 'The Brāhmanas...marriage' ಇದರ ಮುಂದೆಯೇ ಡಾ. ಸರ್ಕಾರರು ಈ ಮಾತನ್ನೂ ಬರೆದಿದ್ದಾರೆ :

Although the custom of offering gold and silver flowers to dieties is known, the puṣpa in the Salotgi records appears to mean a coin probably bearing the representation of a flower (cf. the padma ṭarika)[10]. ಇದನ್ನು ಹೇಮಲತಾ ಅವರು ಗಮನಿಸಿರುವರೆ ? ಮತ್ತೆ 'ಇಂಡಿಯನ್ ಎಪಿಗ್ರಫಿ' ಗ್ರಂಥದ ತರುವಾಯವೇ 'ಇಂಡಿಯನ್ ಎಪಿಗ್ರಫಿ ಕಲ್‌ಗ್ಲಾಸರಿ' ಅಚ್ಚಾದುದು ಸ್ಪಷ್ಟವೇ ಇರುವದರಿಂದ ಡಾ. ಸರ್ಕಾರ ಇವರಿಗೆ 'ಪುಷ್ಪ' ಇದಕ್ಕೆ ಹಲವು ಅರ್ಥಗಳ ಜೊತೆಗೆ 'ನಾಣ್ಯ' ಎಂಬ ಅರ್ಥದ ಖಚಿತ ಅರಿವೂ ಇದೆಯೆಂದು ನಮಗೆ ತೋರುತ್ತದೆ. ಹಾಗೆ ಇಲ್ಲದಿದ್ದರೆ Indian Epigraphical Glossary ಗ್ರಂಥದಲ್ಲಿ "Puṣhpa = a coin having the shape or sign of a flower"[11] ಎಂದು ಅವರು ಎಂದೂ ಬರೆಯುತ್ತಿದ್ದಿಲ್ಲ. ಡಾ. ಸರ್ಕಾರರ ಈ ಹೇಳಿಕೆ ಸಾಧುವೆಂದೂ ಕರ್ನಾಟಕದಲ್ಲಿ ಪುಷ್ಪ ಇದಕ್ಕೆ 'ನಾಣ್ಯ' ಎಂಬ ಅರ್ಥ ಇದ್ದಿತೆಂಬುದು ಮೇಲೆ ವಿವರಿಸಿದಂತೆ ಸ್ಪಷ್ಟವೇ ಇರುವುದರಿಂದ ನನ್ನ ಗ್ರಹಿಕೆಗೆ ಸರ್ಕಾರರ ಹೇಳಿಕೆಗಳು ವಿರುದ್ಧವಾಗಿಲ್ಲವೆಂದು ನಮ್ರನಾಗಿ ತಿಳಿಸುವೆ. ಹೇಮಲತಾ ಇವರ ನಿರೂಪಣೆಯ ಪದ್ಧತಿ ಡಾ. ಸರ್ಕಾರರ ಸಂಪೂರ್ಣ ಬರಹವನ್ನು ಗ್ರಹಿಸದೆ ತಪ್ಪುದಾರಿಗೆ ಎಳೆಯುವಂತಹದ್ದಾಗಿದೆ. ಅಭ್ಯಾಸಿಗಳು ಒಮ್ಮೆ ಡಾ. ಸರ್ಕಾರರ ಗ್ರಂಥಗಳನ್ನು ಪರಿಶೀಲಿಸಿ ನೋಡಲಿ. ಎರಡೂ ಗ್ರಂಥಗಳ ವಿಷಯಗಳ ಅರಿವು ಈ ಅಲ್ಪಮತಿಗೆ ಇದೆಯೆಂದು ನಮ್ರನಾಗಿ ತಿಳಿಸುವೆ ಅಷ್ಟೆ !

---

9 ಸಾಧನೆ, ಸಂ-3, ಸಂ-3, ಪು. 177. ಹೇಮಲತಾ ಇವರು, ನಾನು ಸಮಾಧಾನಪಟ್ಟುಕೊಂಡುದನ್ನು ಯಾವ ಸಮದಲ್ಲಿ ಕಂಡರೊ ನಾನರಿಯೆ ?

10 Dr. D. C. Sircar, Indian Epigraphy, p 433 ಡಾ. ಸರ್ಕಾರರ ಮಾತುಗಳಲ್ಲಿ ಪ್ರತಿಯೊಂದನ್ನು ಪರೀಕ್ಷಿಸಿದರೆ ನನ್ನ ಹೇಳಿಕೆಗೆ ಇನಿತು ಸಾಕ್ಷಿಗಳು ಅಲ್ಲಿವೆ ಎಂಬುದು ಸ್ಪಷ್ಟ

11 Dr. D. C. Sircar, Indian Ephical Glossary, p 267

5. ಇನ್ನು ನಾನು ಮುಳಿಯ ತಿಮ್ಮಪ್ಪಯ್ಯನವರಿಗೆ ಅಪಚಾರ ಎಸಗಿದ್ದೇನೆ ಎಂಬ ಹೇಳಿಕೆ.[12] ನಾನು ಮುಳಿಯ ತಿಮ್ಮಪ್ಪಯ್ಯನವರ ಬಗೆಗೆ ಕಿಂಚಿತ್ತೂ ಅಪಚಾರವೆಸಗಿಲ್ಲ. ಶ್ರೀಯುತರ ಪಾಠ 'ಸುಪುಷ್ಪ ವೃಷ್ಟಿ' ಇದನ್ನು ಸ್ವೀಕರಿಸಿ ಅವರಿಗೆ ಸಲ್ಲಬೇಕಾದ ಮರ್ಯಾದೆಯನ್ನು ಕೊಟ್ಟಿದ್ದೇನೆ. ನಿಜವಾಗಿ ಹೇಳುವುದಾದರೆ ಪಂಪಕವಿಗೂ ಮುಳಿಯ ತಿಮ್ಮಪ್ಪಯ್ಯನವರಿಗೂ ಅಪಚಾರವೆಸಗಿದವರು ಗ್ರಂಥದಲ್ಲಿ ಅವಶ್ಯವಿಲ್ಲದ ಊಹಿತ ಪಾಠಗಳನ್ನು ಸೃಷ್ಟಿಸಿದವರು, ಸ್ವೀಕರಿಸಿದವರು. ಪೂಜ್ಯ ಮುಳಿಯ ತಿಮ್ಮಪ್ಪಯ್ಯ ಹಾಗೂ ನನ್ನ ಪಂಪಕವಿಯ ಪದ್ಯದ ಪಾಠ ಸ್ವೀಕರಣೆಯಲ್ಲಿ ಏಕಾಭಿಪ್ರಾಯವಿದೆ. ಅದೆಂದರೆ 'ಸುಪುಷ್ಪ ವೃಷ್ಟಿ' ಹೇಮಲತಾ ಪದಕಿ ಅವರು ಸ್ವೀಕರಿಸಿದ ಪಾಠ ಯಾವುದು ? ಅದಕ್ಕೆ ಆಧಾರ ಏನು ? ಇನ್ನು ಗ್ರಂಥದಲ್ಲಿನ ಪಾಠ, ಹಸ್ತಪ್ರತಿಗಳಲ್ಲಿ ಸ್ಖಾಲಿತ್ಯ, ವ್ಯತ್ಯಾಸ, ಹುಳಕ್ಕಾಹಾರ ಇತ್ಯಾದಿಗಳು ಇದ್ದಾಗ ಮಾತ್ರ ಹೊಸಪಾಠ ಯೋಜನೆಯ ಅವಶ್ಯಕತೆಯು ಉಂಟಾಗುತ್ತದೆ. ನನ್ನ ಲೇಖನದ ಉದ್ದೇಶ, ಮೂಲಪ್ರಶ್ನೆ—ಎಂದರೆ ಹೊಸಪಾಠ ಯೋಜನೆಯ ಆವಶ್ಯಕತೆ ಇದೆಯೆ? ಉಪಲಬ್ಧವಿರುವ ವಿಕ್ರಮಾರ್ಜುನ ವಿಜಯದ ಎಲ್ಲ ಹಸ್ತಪ್ರತಿಗಳಲ್ಲೂ ಸ್ಪಷ್ಟವಾದ ಏಕಪಾಠವೇ ಇರುವಾಗ ಊಹಿತ ಪಾಠದ ಸೃಷ್ಟಿ ಏಕೆ? ಹೇಮಲತಾ ಪದಕಿಯವರು ದಿ. ಮುಳಿಯ ತಿಮ್ಮಪ್ಪಯ್ಯನವರ ಸರಿಯಾದ ಪಾಠ ಸ್ವೀಕರಣೆ 'ಸುಪುಷ್ಪ ವೃಷ್ಟಿ' ಇದನ್ನು ತಮ್ಮ ಲೇಖನಮಾಲೆ 'ಪಂಪಭಾರತದ ಪಾಠಾಂತರಗಳು[13] ಇದರಲ್ಲಿ ಸ್ವೀಕರಿಸದೆ ಇದರ ಬಗೆಗೆ ಒಂದು ಅಕ್ಷರವೂ ಬರೆಯದೆ ಇದ್ದುದು ಇಂತಹ ಲೇಖನಗಳೂ ಬರೆಹಗಳೂ ಅಕ್ಷಮ್ಯ ಅಪರಾಧಗಳಲ್ಲವೆ. ನಾನಂತು ಇರುವ ವಿಷಯಗಳನ್ನು ಇದ್ದಂತೆ ಇಟ್ಟಿದ್ದೇನೆ; ಸರಿಕಂಡಲ್ಲಿ ಸ್ವೀಕರಿಸಿದ್ದೇನೆ, ಸರಿಕಾಣದಲ್ಲಿ ಕಾರಣಗಳನ್ನು ಕೊಟ್ಟು ಅಲ್ಲಗಳೆದಿದ್ದೇನೆ. ಹೇಮಲತಾ ಇವರು ಮುಳಿಯ ತಿಮ್ಮಪ್ಪಯ್ಯನವರ ಪಾಠಸ್ವೀಕರಣೆ "ಸುಪುಷ್ಪ ವೃಷ್ಟಿ" ಇದನ್ನು ಸರಿಯೊ ತಪ್ಪೊ ಎಂಬುದನ್ನು ಈಗ ತಿಳಿಸಲಿ ಎಂದು ಪ್ರಶ್ನಿಸುವೆ. ಮುಳಿಯ ತಿಮ್ಮಪ್ಪಯ್ಯ ಹಾಗೂ ನನ್ನ ಪ್ರಕಾರ ಪಂಪ ಕವಿಯ ಪದ್ಯದಲ್ಲಿ ಊಹಿತ ಪಾಠದ ಆವಶ್ಯಕತೆ ಇಲ್ಲ. ಕಾರಣ ಸುಪುಷ್ಪ ವೃಷ್ಟಿ' ಇದನ್ನು ಹೇಮಲತಾ ಇವರು ಸರಿಯೆನ್ನುವುದಾದರೆ ತಮ್ಮ ಲೇಖನಮಾಲೆಯ ಒಂದನೆಯ ಲೇಖನವನ್ನು ಈಗಾದರೂ ತಿದ್ದಿಕೊಳ್ಳಲಿ. ಅವರೇ ಹೇಳುವಂತೆ ಮುಳಿಯ ತಿಮ್ಮಪ್ಪಯ್ಯನವರು ತಪ್ಪು ಮಾಡಿಲ್ಲ.[14]

---

12 ಸಾಧನೆ, ಸಂ-3, ಸಂ-3, ಪು. 176

13 ಕರ್ನಾಟಕ ಭಾರತಿಯ ಸಂಪುಟಗಳು (1973-74 ಇತ್ಯಾದಿ)

14 ಸಾಧನೆ, ಸಂ-3, ಸಂ-3, ಪು. 176 ರಲ್ಲಿ ಹೇಮಲತಾ ಇವರು ಪಂಪನ ಬಗ್ಗೆ ಜೀವನ ಮುಡಿಪು ಇಟ್ಟು 'ನಾಡೋಜ ಪಂಪ' ಬರೆದವರು ಮುಳಿಯ ತಿಮ್ಮಪ್ಪಯ್ಯನವರು...ಇತ್ಯಾದಿ ಎಂಬ ಹೇಳಿಕೆಯನ್ನು ಲಕ್ಷ್ಯದಲ್ಲಿಟ್ಟುಕೊಡಿದ್ದೇನೆ

6. ನನ್ನ ಲೇಖನದಲ್ಲಿ "ಜೀಯಿಸೆ" ಇದು ಉದ್ಧಕ್ಕೂ ತಪ್ಪಾಗಿ ಅಚ್ಚಾಗಿದೆ. ಈ ತಪ್ಪನ್ನು ನಾನು ಶಿರಸಾ ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಕಾರಣ ಕಿಂಚಿತ್ ಅಚ್ಚಿನ ದೋಷವೂ ಇರಬಹುದು. ಹೇಮಲತಾ ಇವರ ಲೇಖನದಲ್ಲೂ ಈ ದೋಷ ನುಸುಳಿಕೊಂಡಿದೆ.[15] ಇದನ್ನು ಅವರು ಒಪ್ಪಿ ಗಮನಿಸಲಿ. ಓದುಗರಲ್ಲಿ ಈ ತಪ್ಪನ್ನು ತಿದ್ದಿಕೊಳ್ಳಲು ವಿನಂತಿಸಿಕೊಳ್ಳುವೆ.

7. ಹೇಮಲತಾ ಇವರ ಪ್ರಕಾರ "ಡಾ॥ ಕಲ್ಬುರ್ಗಿಯವರು ಮೈಸೂರು ವಿಶ್ವವಿದ್ಯಾನಿಲಯದ ಮುದ್ರಿತ ಪ್ರತಿಯ ಆದಿಯಲ್ಲಿ ಕೊಟ್ಟಿರುವ ಪರಿಷತ್ತಿನ ಊಹಿತ ಪಾಠವನ್ನು ಓದುಗರ ಗಮನಕ್ಕೆ ತಂದಿದ್ದಾರೆ ಅಷ್ಟೇ". ಇಷ್ಟೇ ಆಗಿದ್ದರೆ ಕೇವಲ "ಪ" ಎಂಬ ಸಂಕೇತ ಸಾಕಾಗುತ್ತಿತ್ತು. "ಪ್ರತಿ" ಎಂಬ ಮಾತು ಅನಾವಶ್ಯಕ ವಲ್ಲವೆ? ಈ ವಿಷಯವನ್ನು ವಿವರಿಸುವಲ್ಲಿ ಹೇಮಲತಾ ಹೊಸ ತಪ್ಪನ್ನು ಮಾಡಿದ್ದಾರೆ. ಅದೆಂದರೆ "ಮೈಸೂರು ವಿಶ್ವವಿದ್ಯಾನಿಲಯದ ಮುದ್ರಿತ ಪ್ರತಿಯ ಆದಿಯಲ್ಲಿ ಕೊಟ್ಟಿರುವ ಪರಿಷತ್ತಿನ ಊಹಿತ ಪಾಠ" ಎಂಬುದು.[16]

ಹೇಮಲತಾ ಇವರು ಏನನ್ನೂ ಸರಿಯಾಗಿ ಗ್ರಹಿಸಲಾರರು ಎಂಬುದಕ್ಕೆ ಇದೂ ಒಂದು ಸಾಕ್ಷಿ. ಏಕೆಂದರೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ 'ವಿಕ್ರಮಾರ್ಜುನ ವಿಜಯ' ಗ್ರಂಥವನ್ನು ಪುನಃ ಪ್ರಕಟಿಸಿದೆ; ಅಷ್ಟೇ. ಎಂದರೆ ಅದು ಹೊಸದಾಗಿ ಸಂಪಾದಿಸಿ "ಪ" ಪ್ರತಿ ಎಂದು ಪರಿಷತ್ತಿನ ಪಾಠವನ್ನು ಬೇರೆಯಾಗಿ ಸೂಚಿಸಿಲ್ಲ. ವಸ್ತುಸ್ಥಿತಿ ಹೀಗಿರುವಾಗ ಹೇಮಲತಾ ಇವರ ಹೇಳಿಕೆಗಳಲ್ಲಿ ಸತ್ಯಾಂಶಗಳು ಎಷ್ಟು?

8. ಹೇಮಲತಾ ಇವರ ಪ್ರಕಾರ ನಾನು ಆತುರದ ವ್ಯಕ್ತಿ. ನನ್ನ ಲೇಖನ ವನ್ನು ನೋಡಿದರೆ ಯಾರಿಗೂ ಸ್ಪಷ್ಟವಾಗುವ ಸಂಗತಿ – ಇದೂ ತಪ್ಪೆಂದು. ನನ್ನ ಈ ಹೇಳಿಕೆಗೆ, ನನ್ನ ಲೇಖನದಲ್ಲಿನ ಶ್ರೀ ಎನ್. ಬಸವಾರಾಧ್ಯರ ಪತ್ರವೇ ಸಾಕ್ಷಿ.[17] ಅದನ್ನು ಶ್ರೀಯುತರು ದಿನಾಂಕ 10–6–1971 ರಂದು ಬರೆದಿದ್ದಾರೆ. ನನ್ನ "ವಿಕ್ರಮಾರ್ಜುನ ವಿಜಯದ ಆಶೀಪದ್ಯ" ಎಂಬ ಲೇಖನ 1974 ರಲ್ಲಿ ಅಚ್ಚಾಗಿದೆ. ನೋಡಬೇಕೆಂದು ಬಯಸುವವರು ಆ ಪತ್ರವನ್ನು ನನ್ನಲ್ಲಿಗೆ ಬಂದು ನೋಡಬಹುದು.

---

15 ಅದೇ ಪುಟ 174

16 ಅದೇ ಪು. 176 ರ ಹೇಳಿಕೆಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ

17 ಸಾಧನೆ, ಸಂ. 3 ಸಂ. 1, ಪು. 184, ಅ. ಟಿ. 23. ಪತ್ತು ಪುಟದ ಕೇವಲ ಸಣ್ಣ ಲೇಖನ ವನ್ನು ಬರೆದು ಪ್ರಕಟಿಸಿದನು ಸುಮಾರು ಮೂರು ವರುಷದ ಅವಧಿಯಲ್ಲಿ ಇದು ಆತುರದ ಪ್ರಕಟಣೆಯೇ? 'ಧೀರ' ಬರವಣಿಗೆಯೆ? - ಆ ಪ್ರವೃತ್ತಿ ಹೇಮಲತಾ ಸಂಪ್ರದಾಯಕ್ಕಿರ ಬಹುದು, ನನಗಲ್ಲ

ಈ ಮಂಥನದಿಂದ ನನ್ನ ಪ್ರಕಾರ, ವಸ್ತು ಸ್ಥಿತಿಯು ಸತ್ಯತೆಯನ್ನು ಕಾಣುವುದು, ಕವಿಗೆ ಅಪಚಾರ ಎಸಗದೆ ಇರುವುದು, ಇದ್ದುದನ್ನು ಇದ್ದಂತೆ ಇಟ್ಟು ಅರ್ಥೈಸಲು ಪ್ರಯತ್ನಿಸುವುದು. ಸಂಪಾದಿಸಲು ಬಲ್ಲೆವು ಎಂಬ ನೆಪದಲ್ಲಿ ಏನು ಬೇಕೋ ಅದನ್ನು ಸೃಷ್ಟಿಸಬಾರದು ಎಂಬುದು – ಎಂದರೆ ಮನಬಂದಂತೆ ಊಹಿತ ಪಾಠಗಳ ಯೋಜನೆ – ಕವಿಗೆ ಅಪಚಾರದ ಕಾರ್ಯ. ಆದುದರಿಂದ ವಿಕ್ರಮಾರ್ಜುನ ವಿಜಯದ ಆದಿಪದ್ಯ ಈಗ ಹಸ್ತಪ್ರತಿಗಳಲ್ಲಿ ಇದ್ದಂತೆ:

ಶ್ರೀಯುನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ ಧರಿತ್ರಿಯುಂ ।
ಜೀಯೆನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡು ಮಾ ।
ತ್ಮೀಯು ಸುಪುಷ್ಪವೃಷ್ಟಿಯ ನೊಡಂಬಡೆ ತಾಳ್ದಿಯುಮಿಂತುದಾ [ತ್ತನಾ]
ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯ ಕೋಟಿಯಂ ॥[18]

ಇದು ಸರಿಯಾಗಿದೆ. ಪಂಪನು ಅರಿಕೇಸರಿಯ ಉದಾರತೆಯನ್ನು ಅಲ್ಲಲ್ಲಿ ಆತ್ಮೀಯತೆಯಿಂದ ಕಾವ್ಯದ ತುಂಬ ಹೇಳಿರುವದರಿಂದ ನಾನು ಪರಿಗ್ರಹಿಸಿದ ಅರ್ಥ, ಗ್ರಂಥದ ಪಾಠ – ಎಲ್ಲವೂ ಸಾಧುವಾಗಿದೆಯೆಂದು ನಿರೂಪಿಸಿ, ನನ್ನ ಲೇಖನ ರಚನೆ "ವ್ಯರ್ಥ ಶ್ರಮವೋ"[19] "ಸಾರ್ಥಕ – ಶ್ರಮವೋ" ಇದನ್ನು ಕಾಲ ನಿರ್ಧರಿಸುತ್ತದೆಂದು ಹೇಳಿ, ನಾಡು ಕುರುಡಾಗಿಲ್ಲವೆಂದು ಬಿನ್ನೈಸಿ ಈ ಲೇಖನವನ್ನು ಸಮಾಪ್ತಿಗೊಳಿಸುವೆ.

ಸೀತಾರಾಮ ಜಾಗೀರ್‌ದಾರ್

2. 'ಡೊಕ್ಕರಿ'— ಪುನರ್ ಪರಿಶೀಲನೆ

ದೇವಕವಿಯ ಕುಸುಮಾವಳೀ ಕಾವ್ಯದ ಅಯ್ದನೆಯ ಆಶ್ವಾಸದಲ್ಲಿ ಬರುವ ಕೆಳಗಿನ ಮೂರು ಪದ್ಯಗಳನ್ನು ಗಮನಿಸಿ :

ಇದು ಮದನಾಸ್ತ್ರ ಪುಂಜಮೆನಿಪಂತಲರ್ವಜ್ಜದಿನಾದ ಮೊಪ್ಪುವಾ
ಸುವತಿಯುರಂ ಸಮುಂತು ಪೆಸರ್ಗೊಂಡೆನಿತುಂ ಕರೆದಾಗಳಂತೆ ನೀ
ಲದ ನವರೂಪ್ಯದುಜ್ಜಳಿಪ ಶಂಖದ ಪಚ್ಚೆಯ ಪದ್ಮರಾಗ ರ
ತ್ನದ ಪೊಸಪೊನ್ನ ಡೊಕ್ಕರಿಗಳಂ ನೆಱೆಕೊಟ್ಟನಿಳೇಶ ಕೇಶವಂ ॥131॥

ಜಳರೂಪಮಲ್ಲದಾ ಕೃತ
ಕಳಂಕಮಲ್ಲದ ಸುಧಾಂಶು ಕಳೆಗಳಿವೆನೆ ಪ।
ಜ್ಜಳಿಪಿಂದು ಶಿಲೆಯ ಡೊಕ್ಕರಿ
ಗಳ ನಾಗಳೆ ಕೊಂಡರಾಗಳಾ ಮಾನಿನಿಯರ್ ॥132॥

---

18 ವಿಕ್ರಮಾರ್ಜುನ ವಿಜಯ. ಆಶ್ವಾಸ 1. ಪದ್ಯ 1. ಕ.ಸಾ.ಪ. ಮುದ್ರಣ. ಅಲ್ಲಿನ ಪ್ರಶ್ನಾರ್ಥಕ ಚಿಹ್ನೆ ಅನಾವಶ್ಯಕ. ಇದು ನಮ್ಮ ನಿಲುವು

19 ಹೇಮಲತಾ ವದಕಿ, ಸಾಧನೆ, ಸಂಪುಟ - 3. ಸಂಚಿಕೆ - 3. ಪು. 175

ಸರಭಸದಿಂದಮಭ್ರಮುಮುಮರ್ತ್ಯಕರೀಂದ್ರಮುಮಾ ಸುರಾಪಗಾಂ
ತರದೊಳುದಗ್ರ ಪುಷ್ಕರ ಪುಟಂಗಳ ಮಾಡಿ ನವಾಂಬು ಕೇಳಿಯಂ
ವಿರಚಿಸುವಂತೆ **ಡೊಕ್ಕರಿಗಳಿಂ** ಮೊಗೆದೊರ್ಬರೊರ್ಬರಾಗಳ
ಚ್ಚರಿ ನೆಲೆವೆರ್ಚೆ ಪೊಯ್ದರೊಲವಿಂ ವಿಜಯಾವತಿಯುಂ ನರೇಂದ್ರನುಂ ॥135॥

ಇವು ಮಹಾ ಕಾವ್ಯದ ಅಂಗಗಳಾದ ಅಷ್ಟಾದಶ ವರ್ಣನೆಗಳಲ್ಲಿ ಒಂದಾದ ಜಲಕೇಳೀ (ಜಲಕ್ರೀಡಾ) ವರ್ಣನೆಯ ಸಂದರ್ಭವನ್ನು ವಿವರಿಸುವ ಸನ್ನಿವೇಶದಲ್ಲಿನ ಪದ್ಯಗಳು. ಇಳೇಶನಾದ ಕೇಶವನು, ಇದು ಮದನನ ಕೈದುಗಳ ರಾಶಿಯೆಂಬಂತೆ ಪುಷ್ಪ ಬಾಣಗಳಿಂದ ವಿಶೇಷವಾಗಿ ಶೋಭಿಸುತ್ತಿರುವ ಸುಂದರಾಂಗಿಯರು, ಚೆನ್ನಾಗಿ ಹೆಸರು ಹಿಡಿದು ಕರೆದಾಗ ಅವರಿಗೆ ನೀಲದ, ಹೊಸ ಬೆಳ್ಳಿಯ, ಹೊಳೆಯುವ ಶಂಖದ, ಪಚ್ಚೆಯ, ಪದ್ಮರಾಗದ, ರತ್ನದ ಮತ್ತು ಹೊಸ ಚಿನ್ನದ **ಡೊಕ್ಕರಿಗಳನ್ನು** ಕೊಟ್ಟನಂತೆ-ಎಂಬುದು ಮೊದಲನೆಯ ಪದ್ಯದ ಅರ್ಥ. ಜಲರೂಪವಲ್ಲದೆ ಕಳಂಕಿತವಲ್ಲದ, ಚಂದ್ರಿಕೆಯ ಕಳೆಗಳಿವು ಎಂಬಂತೆ ಪ್ರಜ್ವಲಿಸುವ ಚಂದ್ರಕಾಂತ ಶಿಲೆಯ **ಡೊಕ್ಕರಿ**ಗಳನ್ನು ಸ್ತ್ರೀಯರು ಒಡನೆಯೇ ಕೈಗೆ ತೆಗೆದುಕೊಂಡರೆಂಬುದು ಎರಡನೆಯ ಪದ್ಯದ ಭಾವ. ಹಾಗೆಯೇ **ಡೊಕ್ಕರಿ**ಗಳಲ್ಲಿ ತುಂಬಿ ತುಂಬಿ ವಿಜಯಾವತಿ–ನರೇಂದ್ರರು ಒಬ್ಬರು ಮತ್ತೊಬ್ಬರ ಮೇಲೆ ವೇಗದಿಂದ ಮೋಡ ಐರಾವತಗಳು ದೇವನದಿಯ ಸಮೀಪದಲ್ಲಿ ಹಿರಿದಾದ ತಾವರೆಯ ಎಲೆಗಳಲ್ಲಿ ಹೊಸ ನೀರಿನಾಟವನ್ನು ರಚಿಸಿದಂತೆ, ಆಶ್ಚರ್ಯ ಹೆಚ್ಚುವಂತೆ ನೀರಾಟವಾಡಿದರು–ಎಂದು ವೃತ್ತಪದ್ಯ ತಿಳಿಸುತ್ತದೆ.

ಇಲ್ಲಿ ಮೇಲಿನ ಮೂರೂ ಪದ್ಯಗಳಲ್ಲಿ ಬಂದಿರುವ **ಡೊಕ್ಕರಿಗಳು** ಎಂದರೆ ಏನು ಎಂಬ ಪ್ರಶ್ನೆ ಬರುತ್ತದೆ. ಈ ಶಬ್ದ ಕನ್ನಡದ ಇದುವರೆಗಿನ ಯಾವ ನಿಘಂಟಿನಲ್ಲೂ ಇಲ್ಲ ಕಿಟೆಲ್ ಕೋಶದಲ್ಲಿ ಪುಟ 674ರಲ್ಲಿ ಬರುವ ಡೊಕ್ಕರ, ಡೊಕ್ಕಳು, ಡೊಕ್ಕರಿಸು ಮುಂತಾದ ಶಬ್ದಗಳಿಗೂ ಈ 'ಡೊಕ್ಕರಿ' ಶಬ್ದಕ್ಕೂ ಸಂಬಂಧವಿಲ್ಲ. ಅವು ಯಾವುವೂ ಇಲ್ಲಿನ ಶಬ್ದಾರ್ಥಕ್ಕೆ ಹೊಂದಿಕೊಳ್ಳುವುದಿಲ್ಲ. ಡೊಕ್ಕರಿ ಶಬ್ದ ಹೆಚ್ಚಿನ ಸಂಶೋಧನೆ ಬಯಸುವ ಒಂದು ಅಪರೂಪ ಶಬ್ದ.

ಪಂಪ ಭಾರತದಲ್ಲಿಂದ ಒಂದು ನಿದರ್ಶನ : ಭೀಮನಿಗೂ ಸುಪ್ರತೀಕವೆಂಬ ಆನೆಗೂ ನಡೆದ ದೊಡ್ಡ ಯುದ್ಧದ ವರ್ಣನೆಯ ಸಂದರ್ಭದಲ್ಲಿ ಭೀಮನು ಸುಪ್ರತೀಕ ಗಜವನ್ನು "ಕೋಡಕೆಯ್ಯ ಕಾಲೆಡೆಗಳೊಳ್ ಬಿಬ್ಬಮುಮಂ ಪಣೆವಂದದಿಂದೆದುರ್ **ಡೊಕ್ಕರಂ**ಗೊಂಡು ಕುರುಕ್ಷೇತ್ರದಿಂದತ್ತ ಪನ್ನೆರಡು ಯೋಜನಂಬರ ನೂತ್ತಿ"ದನಂತೆ (11–74), ಇಲ್ಲಿನ ಡೊಕ್ಕರಗೊಳ್ ಎಂಬ ಶಬ್ದಕ್ಕೆ ಪಂಪಭಾರತ ನಿಘಂಟಿನಲ್ಲಿ "ಗುದ್ದು (?)" ಎಂಬ ಅರ್ಥ ಹೇಳಿ ಪ್ರಶ್ನಾರ್ಥಕ ಚಿಹ್ನೆಯನ್ನೂ ಹಾಕಿ ಆ ಅರ್ಥವನ್ನು ಅನುಮಾನಿಸಿದ್ದಾರೆ. ಆದರೆ ಪ್ರಶ್ನಾರ್ಥಕ ಚಿಹ್ನೆ ಅನಾವಶ್ಯಕವೆಂದು ತೋರುತ್ತದೆ. ಇಲ್ಲಿನ ಡೊಕ್ಕರ ಎಂಬುದು ಕುಸ್ತಿಯ ಒಂದು ಪಟ್ಟು, ಗುದ್ದು,

ಮುಷ್ಟಿ ಪ್ರಹಾರ–ಎಂಬುದು ಸರಿಯಾದ ಅರ್ಥ ಇರಬೇಕು. ಈ ಶಬ್ದದ ಹಲವಾರು ಪ್ರಯೋಗಗಳಿವೆ.

ರುದ್ರಭಟ್ಟನ ಜಗನ್ನಾಥ ವಿಜಯದಲ್ಲಿನ ಈ ಪದ್ಯ ನೋಡಿ :

ತವದ ನಿಜಕೋಪದಿಂ ಚಳ
ಕ ವಿನ್ನಣಂಗೊಂಡು ತಕ್ಕಿನೊಳ್ ಬಲವಂದಾ।
ರ್ದವನ ನವರಂಧ್ರದಿಂ ರ
ಕ್ತಪ್ರೂಗೆಯೆ ಡೊಕ್ಕರಿಸಿ ಕೊಂದನಾ ಮುಷ್ಟಿಕನಂ ॥6-68॥

ಬಲರಾಮನು ಮುಷ್ಟಿಕನೆಂಬ ಜಟ್ಟಿಯನ್ನು ಡೊಕ್ಕರಿಸಿ ಕೊಂದನಂತೆ, ಡೊಕ್ಕರ ಎಂಬುದೇ ಇಲ್ಲಿಯೂ ಮೂಲಶಬ್ದ. ಅದಕ್ಕೆ–ಇಸು ಎಂಬ ಅಂತ್ಯ ಪ್ರತ್ಯಯ ಕೂಡಿ ಡೊಕ್ಕರಿಸು (ಸಿ) ಎಂದಾಗಿದೆ. ಜಗನ್ನಾಥ ವಿಜಯದಲ್ಲೇ ಈ ಶಬ್ದ ಮತ್ತೆ 6-64, 7-29ವ-ಗಳಲ್ಲಿ ಪ್ರಯೋಗವಾಗಿದೆ. ಪಂಪನಿಗಿಂತ ಮೂರು ನಾಲ್ಕು ದಶಕಗಳ ಅಂತರದಲ್ಲಿದ್ದ ರನ್ನ ತನ್ನ ಸಾಹಸ ಭೀಮ ವಿಜಯದಲ್ಲಿ ಈ ಶಬ್ದವನ್ನು ಬಳಸಿದ್ದಾನೆ:

ಅನುಂ ವಿಧೇಯನಲ್ಲಂ
ನೀನುಂ ಗುರುವಲ್ಲಮಿಂದಿನೊಂದೆವಸಂ ಧಾ।
ತ್ರೀನಾಥ ಪರಿಯ ಬಿಡ ಕುರು
ಸೂನುವ ನಾನಿಕ್ಕಿ ಮೆಟ್ಟಿ ಡೊಕ್ಕರಿಸಿದಪೆಂ ॥6-25॥

ಭಟ್ಟನಾರಾಯಣನ ವೇಣೀ ಸಂಹಾರದ ಛಾಯೆಯಾಗಿ ಕಾಣಿಸಿಕೊಂಡಿರುವ ರನ್ನನ ಈ ಪದ್ಯದಲ್ಲಿ ಬರುವ ಡೊಕ್ಕರಿಸು ಶಬ್ದ ಅಲ್ಲಿಂದ, ಸಂಸ್ಕೃತದಿಂದ ಬಂದುದಲ್ಲ. ಚೆನ್ನಬಸವ ಪುರಾಣದಲ್ಲೂ (16-39) ಇನ್ನಿತರ ಕೆಲವು ಕೃತಿಗಳಲ್ಲೂ ಇದರ ಪ್ರಯೋಗವಿವೆ. ಈ ಶಬ್ದವನ್ನು ಮರಾಠಿ ಭಾಷೆಯ **ಠೋಕರ** ಎಂಬ ಶಬ್ದದೊಡನೆ ಹೋಲಿಸಬಹುದು. ಇವೆರಡೂ ಜ್ಞಾತಿರೂಪಗಳೆಂದು ತೋರುತ್ತದೆ. ಆದರೆ ಕುಸುಮಾವಳಿ ಕಾವ್ಯದ **ಡೊಕ್ಕರಿಗೂ** ಈ ಡೊಕ್ಕರ ಶಬ್ದಕ್ಕೂ ಯಾವ ಸಂಬಂಧವೂ ಇದ್ದಂತೆ ತೋರುವುದಿಲ್ಲ. ರೂಪಸಾದೃಶ್ಯದ ಹೊರತು ಅರ್ಥಸಾದೃಶ್ಯ ವಿನೇನೂ ಇಲ್ಲವೆಂದೇ ನನ್ನ ಖಚಿತವಾದ ಅಭಿಪ್ರಾಯ.

ದೇವಕವಿಯ ಮೂರು ಪದ್ಯಗಳು ಜಲಕ್ರೀಡೆಯ ಸಂಬಂಧದಲ್ಲಿ ಬಂದಿವೆಯಲ್ಲದೆ **ಡೊಕ್ಕರಿ** (+ಗಳ್) ಶಬ್ದ ಅಪೂರ್ವವಾಗಿದ್ದು ಸ್ವಾರಸ್ಯವಾಗಿದೆ. ಕನ್ನಡದ ಇತರ ಪ್ರಾಚೀನ ಕಾವ್ಯಗಳಲ್ಲಿ ಬರುವ ಜಲಕ್ರೀಡೆಗೆ ಸಂಬಂಧಪಟ್ಟ ಪದ್ಯಗಳನ್ನು ಈ ಸಂದರ್ಭದಲ್ಲಿ ಸಮಾಕ್ಷಿಸುವುದು ಸಮಂಜಸವಾಗಿ ಕಾಣುತ್ತದೆ. ಕಾವ್ಯದ (ಕಥಾ) ನಾಯಕ – ನಾಯಕಿಯರು ವನವಿಹಾರ ಹೊರಟ ಸಮಯದಲ್ಲಿ ಹಾಗೆಯೇ ನೀರಾಟದ ಸಂತೋಷ ಸುಖವನ್ನೂ ಅನುಭವಿಸುತ್ತಿದ್ದರೆಂದು ವರ್ಣಿಸುವುದು ಕವಿ ಸಂಪ್ರದಾಯ.

ಹಾಗೆ ಅವರು ಜಲಕ್ರೀಡೆಯಲ್ಲಿ ನಿರತರಾಗಲು ನೀರಿಗಿಳಿದಾಗ ಆ ನೀರ-ನೀರೆಯರು ಚೆಲ್ಲಾಟವಲ್ಲೂ ತೊಡಗುತ್ತಿದ್ದರು. ಹೀಗೆ ತೊಡಗಿದಾಗ ಒಬ್ಬರ ಮೇಲೊಬ್ಬರು ನೀರು ಚಿಮ್ಮಲು ಜೀರ್ಕೊಳವೆ(ವಿ) ಬಳಸುತ್ತಿದ್ದರು. ಉದಾಹರಣೆಗೆ ವಡ್ಡಾರಾಧನೆಯಲ್ಲಿ (ಪು. 137) 'ಜೀರ್ಕೋಟಿವಿ' ಶಬ್ದದ ಪ್ರಾಚೀನ ಪ್ರಯೋಗ ವಿದೆ: "ನಾಲ್ವರುಂ ಮಹಾದೇವಿಯರ್ ಪೆರಸೊಂದೊರ್ವರಂ ನಾನಾ ಪ್ರಕಾರದ ಯಂತ್ರಂಗಳಿಂದಂ ಜೀರ್ಕೊಟಿವಿಗಳಿಂದಂ ತಳಿಯುತ್ತುಂ ನೀರ್ಗಳಂ ಸೂಸುತ್ತುಂ ಜಲಕ್ರೀಡೆಯುಂ ಮನಕ್ಕೆವಂದರಸಿಯರ್ಕಳೊಡನೆ ನೀಡುಂ ಬೇಗ ಮಾಡುತ್ತಿರ್ಪನ್ನೆಗಂ..." ಇಲ್ಲಿನ ಅರ್ಥ ಸ್ವಯಂ ಸ್ಪಷ್ಟ, ಕುಸುಮಾವಳಿಯ 5-135 ನೆಯ ಪದ್ಯವನ್ನು ನೆನಪಿಸುತ್ತದೆ.

ಜನ್ನನ ಅನಂತನಾಥ ಪುರಾಣದಲ್ಲಿ ಬರುವ ಪದ್ಯವೊಂದು ಇಂತಿದೆ :

ಪರಿದೊಳಪೊಕ್ಕು ಜೀರ್ಕೊಟಿವೆಯಂ ತೆಗೆದೆತ್ತಿದ ಕಯ್ಯೊಳೊರ್ವರೊ
ರ್ವರನಿರದೊತ್ತೆ ಪಂಜರಿಸೆ ಮೇಲೆ ಮುಸುಂಕುವ ಕುಂಕುಮಾಂಬು ಸಂ।
ಕರದೊಳದೊಂದು ಕೆಮ್ಮುಗಿಲ ಕಾವಣದೊಳ್ ಕುಡುಮಿಂಚುಗಳ್ ತಡಂ
ಬರಿದವೊಲೇಂ ಬೆಡಂಗಮರ್ದುದೋ ರುಚಿಮದ್ವಿಚಳಲ್ಲತಾಂಗಿಯರ್ ॥ (7-28)

ಇಲ್ಲಿನ ಚೆಲುವಾದ ಚಿತ್ರದ ಜೊತೆಗೆ ಜೀರ್ಕೊಟಿವೆ ಶಬ್ದದ ಪ್ರಯೋಗವೂ ಗಮನ ಸೆಳೆಯುತ್ತದೆ. ಜನ್ನನ ಇದೇ ಕಾವ್ಯದಲ್ಲಿ 7-31, 7-42ನೆಯ ಪದ್ಯಗಳಲ್ಲೂ ಈ ಶಬ್ದವಿದೆ. ಅಗ್ಗಳನ ಚಂದ್ರಪ್ರಭಪುರಾಣದಲ್ಲಿ 7-129, 130, 133, 135, 140 ಮತ್ತು 141ನೆಯ ಪದ್ಯಗಳಲ್ಲೂ, ನೇಮಿಚಂದ್ರನ ಲೀಲಾವತೀ ಕಾವ್ಯದ 13-149ನೆಯ ಪದ್ಯದಲ್ಲೂ, ಜಗನ್ನಾಥ ವಿಜಯದ 11-38ನೆಯ ಪದ್ಯದಲ್ಲೂ, ಬಸವಪುರಾಣದ 44-15 ರಲ್ಲೂ, ಮೂರನೆಯ ಮಂಗರಸನ ಜಯನೃಪ ಕಾವ್ಯದ 11-48 ರಲ್ಲೂ, ಇನ್ನಿತರ ಕೆಲವು ಕಾವ್ಯಗಳಲ್ಲೂ ಈ ಪ್ರಯೋಗ ಕಂಡು ಬರುತ್ತದೆ. ಇವುಗಳ ಆಧಾರದಿಂದ ಸ್ಪಷ್ಟವಾಗುವ ಅಂಶ: ನೀರಾಟದ ವೇಳೆಯಲ್ಲಿ ನಲ್ಲನಲ್ಲೆಯರು ಸರಸದ ಸಾಧನವಾಗಿ ಒಬ್ಬರ ಮೇಲೊಬ್ಬರು ನೀರೆರಚಲು ಜೀರ್ಕೊಟಿವಿ(ವೆ) ಬಳಸುತ್ತಿದ್ದರು. ಇದು ಕನ್ನಡ ಶಬ್ದ. ಇದಕ್ಕೆ ಇತರ ದ್ರಾವಿಡ ಭಾಷೆಗಳಲ್ಲಿ ಜ್ಞಾತಿರೂಪಗಳನ್ನು ಹುಡುಕಬಹುದು. ಇಂದಿನ ಕನ್ನಡದಲ್ಲೂ ಅಲ್ಲಲ್ಲಿ ಈ ಶಬ್ದ ಉಳಿದುಕೊಂಡಿದೆ. ಜೀರ್ಕೊಟಿವಿ→ ಜೀಕೊಳವಿ→ ಜೀಕಳಿ ಎಂಬಂತೆ ಈ ಶಬ್ದ ವ್ಯತ್ಯಾಸ ಪಡೆದಿದೆ. ಉತ್ತರ ಕರ್ನಾಟಕದಲ್ಲಿ, ವಿಜಾಪುರದ ಕಡೆ ಜೀಕಳಿ ರೂಪ ಬಳಕೆಯಲ್ಲಿದೆ. ಜೀರು ಕೊಳವೆ (ವಿ), ನೀರು ಕೊಳವೆ, ನೀರ್ಕೊಳವೆ ಎಂದೂ ಕರೆಯುವರು. ಕುಮಾರವ್ಯಾಸ ಭಾರತದಲ್ಲೂ ಜೈಮಿನಿ ಭಾರತದಲ್ಲೂ ಈ ಶಬ್ದಗಳು ಸಿಗುತ್ತವೆ. ಕಂಠೀರವ ನರಸರಾಜ ವಿಜಯದಲ್ಲಿ (6-22) ವಿಷದ ಜೀಗೊರ್ಳವೆ ಎಂದಿರುವುದು ಗಮನಾರ್ಹ. ಇದು ಜೀಗೊರ್ಳವೆಯೇ ಎಂಬುದರಲ್ಲಿ ಅನುಮಾನವಿಲ್ಲ.

ಜೀಕೊರ್ಣಟವಿಯನ್ನು ಚಂದ್ರಸಾಗರವರ್ಣಿ ತನ್ನ ಜಿನಮುನಿ ಎಂಬ ಕಾವ್ಯದಲ್ಲಿ ಚಿಮ್ಮಲು ಎಂದು ಕನ್ನಡದ ಮಾತಿನಲ್ಲಿ ನಿರ್ದೇಶಿಸಿದ್ದಾನೆ; ಓಕುಳಿಯ ಮಾರೆಕ್ತಿ ಚಿಮ್ಮಲೊಳಿಟ್ಟು ಜಿಗಿದು ಕೊಳದೊಳು. ನೀರು ಚಿಮ್ಮುವ ಸಾಧನಗಳಿಗೆ ಸಾಮಾನ್ಯವಾದ ಶಬ್ದ ಜೀರೊಂದಿದೆ. ಸೂಕ್ತಿ ಸುಧಾರ್ಣವ ಸಂಲನದ ಈ ಪದ್ಯವನ್ನು ಗಮನಿಸಿ :

ತೊಟ್ಟನೆ ಮಂಗಳಾಸಕ ರವಂ ನೆಲೆವೆರ್ಚೆ ಸರಿತ್ತಟಂಗಳೊಳ್
ಕಟ್ಟಿದಿರಾಗಿ ಸಾರ್ಚೆ ನೃಪವಲ್ಲಭನಂ ಪೊಸಪೂವಿನಿಂದ ಮಾ ।
ಯ್ದಿಟ್ಟೊಡಸಾರ್ದು ಪಾರ ವಧುವರ್ ಜಳಯಂತ್ರದಿನೊತ್ತೆ ಚಿತ್ರಮಂ
ನಿಟ್ಟಿಸಿ ಬಂದು ಪತ್ತಿದುವು ಸಂಧಿಸಿ ಕುಂಕುಮವಾರಿಧಾರೆಗಳ್ ॥ (ಪು. 306)

ಇಲ್ಲಿನ ಜಳ (ಲ) ಯಂತ್ರ ಸಂಸ್ಕೃತ ಶಬ್ದ. ಇಂಗ್ಲೀಷಿನ syringe ಶಬ್ದಕ್ಕೆ ಸಮಾನಾರ್ಥಕವಾದುದು. ಜೀಕೊರ್ಣಟವಿ (ವೆ), ಚಿಮ್ಮಲು, ಈ ಲೇಖನದ ಕೇಂದ್ರ ಪರಿಶೀಲನಾರ್ಹ ಶಬ್ದವಾದ ಡೊಕ್ಕರಿ – ಇವೆಲ್ಲ ಜಲಯಂತ್ರಗಳೇ. ತಮಿಳಿನಲ್ಲಿ ಪೀರ್ಚ್ಚಾಂಗುಟಿರ್ ಎಂದೂ, ಮಲೆಯಾಳಂನಲ್ಲಿ ಪೀಚ್ಚಾಂಗುಟಿಲ್→ಪೀಚ್ಚಕ ಎಂದೂ ಹೇಳುವರು : ದ್ರಾವಿಡ ಭಾಷಾ ಜ್ಞಾತಿ ಶಬ್ದಕೋಶ, ಪದಸಂಖ್ಯೆ 3462. ಪೀಱಿಲ್ (=ಹೀರು, ಚಿಲ್ಲು) ಎಂಬ ಧಾತುವಿನಿಂದ ಬಂದ ಶಬ್ದವಾದ ಪೀರ್ಚ್ಚು/ಪೀರ್ಚ→ ಪೀಚ್ಚು (→ ಪೀಚು) ಎಂಬ ವಿಕಾಸಗಳನ್ನು ಪಡೆದಿದೆ. ಹಿಂದಿಯಲ್ಲಿ ಪಿಚಕಾರಿ ಎಂಬ ಶಬ್ದವಿದೆ. ಕನ್ನಡದಲ್ಲೂ ಇಂದು ವಿಶೇಷವಾಗಿ ಬಳಕೆಯಲ್ಲಿರುವ ಶಬ್ದ ಪಿಚಕಾರಿ ಎಂಬುದು. ಇದು ಹಿಂದಿಯಿಂದ ಕನ್ನಡಕ್ಕೆ ಬಂದಿರಬಹುದು; ಅಥವಾ ಪೀಚ್ಚುಗೊಟವಿಗೂ ಪಿಚಕಾರಿ ಶಬ್ದಕ್ಕೂ ರೂಪ ಸಾದೃಶ್ಯದ ಜೊತೆಗೆ ಜ್ಞಾತಿತ್ವವೂ ಉಂಟೊ ?

ದೇವಕವಿಯ ಕುಸುಮಾವಳೀ ಕಾವ್ಯದ ಪದ್ಯಗಳಲ್ಲಿ ಬರುವ ಡೊಕ್ಕರಿಗಳು ಎಂಬ ಶಬ್ದವೂ ಬಹುಶಃ ನೀರನ್ನು ತುಂಬಿಕೊಂಡು ಚಿಮ್ಮಿಸುವ ಪಿಚಕಾರಿಯಂಥ ಒಂದು ಸಾಧನ (ಜಲಯಂತ್ರ) ಇರಬೇಕು.

ಮೇಲಿನ ಪ್ರಯೋಗಗಳಿಂದ ಡೊಕ್ಕರಿಗಳು ಬೆಳ್ಳಿ, ಶಂಖ, ಪಚ್ಚೆ, ಪದ್ಮರಾಗ, ರತ್ನ, ಚಿನ್ನ, ಚಂದ್ರಕಾಂತ-ಮುಂತಾದ ವಸ್ತುಗಳಿಂದ ನಿರ್ಮಿತವಾಗುತ್ತಿದ್ದುವೆಂಬ ಅಂಶ ಸ್ಪಷ್ಟವಾಗಿದೆ. 'ಡೊಕ್ಕರಿಗಳಿಂ ಮೊಗೆದು'ಎಂಬ ಮಾತು ನೀರನ್ನು ಡೊಕ್ಕರಿಗಳಿಂದ ತುಂಬುತ್ತಿದ್ದರು ಎಂದಿರುವುದರಿಂದ ಅದು ನೀರನ್ನು ತುಂಬುವ ಪಾತ್ರವಿಶೇಷವೆಂಬುದೂ ಊಹ್ಯವಾಗಿದೆ. ಈಪಾತ್ರೆ ಬಹುಶಃ ಜೀಕೊರ್ಣಳವೆ ಇರಬೇಕೆಂಬುದು ಸರಿಯಾದ ಊಹೆಯಾಗುವ ಸಂಭವವಿದೆ. ಏಕೆಂದರೆ ಕುಸುಮಾವಳೀ ಕಾವ್ಯದಲ್ಲೇ ಕವಿ 'ಜೀಕೊರ್ಣಳವಿ' ಎಂಬ ಶಬ್ದವನ್ನೂ ಪ್ರಯೋಗಿಸಿರುವುದು ಗಮನಾರ್ಹವಾಗಿದೆ, ಡೊಕ್ಕರಿ ಶಬ್ದದ ಅರ್ಥನಿರ್ಣಯ ದೃಷ್ಟಿಯಿಂದ :

ಇರದಾಗಳೆ ದೇವಿಯ ನಿಜಾ
ಗುರುಳೋಳಿಗೆ ಮುತ್ತಿನೆಸೆವ ಮಂಜರಿಯಂ ಬಿ।
ತ್ತರಿಸುವ ತೆಱದಿಂದೊತ್ತಿದ
ನರಸಂ ಜೀರ್ಕೊಳವೆಯಿಂದೆ ಚಂದನ ಜಲಮಂ ॥ 5-137

ಮಳಯ ರುಹಸಲಿಲಮಂ ಜೀ
ರ್ಕೊಳವಿಗಳಿಂದೊತ್ತಿ ರಮಣಿಯರ್ ತಮತಮಗಾ।
ದಳವಿಂ ಸೂಸೆ ತುಷಾರಾ
ವಳಿ ಮುಸಗಿದ ತುಹಿನಗಿರಿಗೆ ಸೃಪನೆಣೆಯಾದಂ ॥ 5 140

ಈ ಎರಡೂ ಪದ್ಯಗಳಲ್ಲಿ ಬರುವ ಜೀರ್ಕೊಳ (ವಿ) ವೆ ಶಬ್ದ ಪ್ರಯೋಗದ ಅರ್ಥ ಪರಿಸರ ಡೊಕ್ಕರಿ ಶಬ್ದಪ್ರಯೋಗಕ್ಕೆ ಸದೃಶವಾಗಿದೆ. ಜೀರ್ಕೊಳವಿ (ವೆ) ಶಬ್ದದ ಅರ್ಥ ಗೊತ್ತಿದೆ. ಅದರ ಸಮಾನಾರ್ಥಕ ಶಬ್ದ ಡೊಕ್ಕರಿ ಎಂಬುದು ಸ್ಪಷ್ಟವಾಗುತ್ತದೆ. ಈ ಸಂದರ್ಭದಲ್ಲಿ ನೋಡಬೇಕಾದ ಒಂದೆರಡಂಶಗಳಿವೆ:

1. ಮಾಘ ಕವಿಯು 'ಶಿಶುಪಾಲವಧ' ದಲ್ಲಿ ಜಲಕ್ರೀಡಾ ಸಾಧನೆಗಳನ್ನು ಹೀಗೆ ಹೇಳಿದೆ. :

ಶೃಂಗಾಣಿ ದ್ರುತ ಕನಕೋಜ್ವಲಾನಿ ಗಂಧಾಃ
ಕೌಸುಂಭಂ ಪೃಥು ಕುಚ ಕುಂಭ ಸಂಗಿ ವಾಸಃ
ಮಾದ್ವೀಕಂ ಪ್ರಿಯತಮ ಸನ್ನಿಧಾನ ಮಾಸನ್
ನಾರೀಣಾಮಿತಿ ಜಲಕೇಲಿ ಸಾಧನಾನಿ ॥ 8-30

ಜಲಕೇಲಿ ಸಾಧನಗಳಲ್ಲಿ—

1. ಕನಕಲಿಪ್ತವಾದ ಶೃಂಗಗಳು ಎಂದರೆ ಕ್ರೀಡಾಂಬು ಯಂತ್ರಗಳು: "ಶೃಂಗಂ ಪ್ರಭುತ್ವೇ ಶಿಖರೇ ಚಿಹ್ನೇ ಕ್ರೀಡಾಂಬು ಯಂತ್ರಕೇ" (ವಿಶ್ವಕೋಶ).
2. ಚಂದನ ಕುಂಕುಮಾದಿ ಗಂಧ ದ್ರವ್ಯಗಳು,
3. ಎದೆಯಮೇಲೆ ಹೊದೆಯುವ ಕುಸುಂಭರಾಗದ ವಸ್ತ್ರಗಳು,
4. ದ್ರಾಕ್ಷಾಮದ್ಯ- ಇವು ಹೇಳಿವೆ. ಇಲ್ಲಿ ಶೃಂಗ ಎಂಬುದಕ್ಕೆ 'ಶಿಶುಪಾಲವಧೆ ಕಾವ್ಯದ ಹಿಂದಿ ಆವೃತ್ತಿಯಲ್ಲಿ 'ಪಿಚಕಾರಿ' ಎಂಬ ಅರ್ಥ ಹೇಳಿದೆ.

2. 'ಮಾನಸೋಲ್ಲಾಸ'ದಲ್ಲಿ ಸೇಚನ ಕ್ರೀಡಾ ಸಾಮಗ್ರಿಗಳು ಹೀಗಿವೆ :

ಸೌವರ್ಣ್ಯ ರೌಪ್ಯ ಶೃಂಗಾಣಿ ಶೃಂಗಾಣಿ ಗವಯಸ್ಯಚ
ವಿವಿಧಾನಿ ಚ ಯಂತ್ರಾಣಿ ತೋಯಧಾರಾವ ಹಾನಿ ಚ
ಸೌವರ್ಣ್ಯ ಗಂಡುಕಾಂ ಶ್ಚೈವ ದದ್ಯಾದ್ದಸ್ತೇನ ಯೋಷಿತಾಂ॥ 4-5-298

ಇಲ್ಲಿಯೂ ಶೃಂಗಗಳನ್ನು ಹೇಳಿದೆ. ಅಲ್ಲದೆ ಹಸುವಿನ ಕೊಂಬನ್ನು (ಶೃಂಗಾಣಿ ಗವಯಸ್ಯ ಚ) ಸೇರಿಸಿದೆ. ಜೊತೆಗೆ ಸೌವರ್ಣ್ಯ ಗಂಡುಕ– (ಎಂದರೆ ಕಲಶ, ಗಡಿಗೆ) ಗಳನ್ನೂ ಹೇಳಿದೆ. ಆದ್ದರಿಂದ ಶೃಂಗ ಗಂಡುಕ ಇದೆರಡೂ ಡೊಕ್ಕರಿ ಎಂಬ ಶಬ್ದದ ಪರ್ಯಾಯಗಳಾಗಬಹುದು. ಅಂತೂ ಈ ಶಬ್ದದ ಅರ್ಥದ ವಿಷಯವಾಗಿ ಸ್ವಲ್ಪ ಭಿನ್ನಾಭಿಪ್ರಾಯಕ್ಕೆ ಕಾರಣವಿದ್ದರೂ, ನೀರನ್ನು ತುಂಬಿ ಸುರಿಯುವ ಅಥವಾ ಚಿಮುಕಿಸುವ ಪಾತ್ರ ವಿಶೇಷವೆಂಬ ಸಾಧಾರಣಾರ್ಥದಲ್ಲಿ ಸಂದೇಹಕ್ಕೆಡೆಯಿಲ್ಲ. ಇನ್ನೂ ಈ ಶಬ್ದದ ನಿಷ್ಪತ್ತಿಯ ವಿಷಯವಾಗಿ ಹೆಚ್ಚು ಶೋಧನೆ ನಡೆಯಬೇಕಾಗಿದೆ. ಅದರ ಮೂಲವೇನೆಂಬುದನ್ನು ತಾತ್ಕಾಲಿಕವಾಗಿ ಊಹಿಸುವುದಕ್ಕೂ ಸಾಧ್ಯವಿಲ್ಲವಾಗಿದೆ. ಸಂಸ್ಕೃತ ದ್ರೋಣಿ (ಣ) - ದೊಡನೆ ಸಂಬಂಧ ಕಲ್ಪಿಸಬಹುದೆ ? ಕನ್ನಡದಲ್ಲಿ ಅದರಿಂದ ನಿಷ್ಪನ್ನವಾಗಿರುವ ದೋಣಿ, ದೊಣೆ, ಡೊಣೆ, ದೊನ್ನೆ ಎಂಬ ಶಬ್ದಗಳಿವೆ.

ಡೊಕ್ಕರಿ ಶಬ್ದ ಯಾವ ಭಾಷೆಗೆ ಸೇರಿದ್ದು, ಎಲ್ಲಿಂದ ಮತ್ತು ಹೇಗೆ ಕನ್ನಡಕ್ಕೆ ಬಂತು, ದೇವಕವಿಗಿಂತಲೂ ಪ್ರಾಚೀನ ಪ್ರಯೋಗ ಅನ್ಯತ್ರ ಉಂಟೆ-ಎಂಬ ಪ್ರಶ್ನೆಗಳು ಹಾಗೆಯೇ ಉಳಿಯುತ್ತವೆ. ಇವುಗಳ ಜೊತೆಗೆ ಇನ್ನೊಂದು ಸೂಚನೆಯನ್ನು ಸೇರಿಸಬಹುದು, ಪಂಪ ರನ್ನ ಪೊನ್ನ ಹಾಗೂ ವಡ್ಡಾರಾಧನೆಕಾರ-ಇವರಲ್ಲಿ ಇವರ ಕಾಲದಲ್ಲಿ ಡೊಕ್ಕರಿ ಎಂಬ ಈ ಅರ್ಥದ ಶಬ್ದಪ್ರಯೋಗ ಇರಲಿಲ್ಲವೆಂದು ತೋರುತ್ತೆ. ಲಭ್ಯ ಉಲ್ಲೇಖಗಳಾಧಾರದಿಂದ ಹೇಳುವುದಾದರೆ ಈ ಡೊಕ್ಕರಿ ಹದಿಮೂರನೆಯ ಶತಮಾನದಲ್ಲಿ ಕಾಣಿಸಿಕೊಂಡಿದೆ. ಆದರೆ ಅನಂತರದ ಶತಮಾನಗಳಲ್ಲಿ ಮತ್ತೆ ಬಳಕೆ ತಪ್ಪಿ ಮರೆಯಾಗಿದೆ. ಒಂದುವೇಳೆ ಇದು ಅನ್ಯಭಾಷೆಯ ಶಬ್ದವಿದ್ದರೂ ಇರಬಹುದು. ಆಗಲೂ ಅದರ ಜ್ಞಾತಿರೂಪಗಳನ್ನು ಗುರುತಿಸಬೇಕಾಗುತ್ತದೆ. ಕಿಟೆಲರ ಶಬ್ದಕೋಶದಲ್ಲಿ ಈ ಶಬ್ದ ದಾಖಲಾಗಿಲ್ಲ. ಅದರ ಪುನರ್ ಮುದ್ರಣದಲ್ಲಿ ಈ ಶಬ್ದವನ್ನು ಸೇರಿಸಬೇಕು. [ವಿ. ಸೂ :– ನಾನು ಈ ಲೇಖನವನ್ನು ಸಂಕ್ಷಿಪ್ತ ರೂಪದಲ್ಲಿ, ಕನ್ನಡ ನುಡಿ ಪತ್ರಿಕೆಯ 28-2 ರಲ್ಲಿ 1965 ನೆಯ ಇಸವಿಯಲ್ಲೇ ಈ ಸೂಚನೆ ಕೊಟ್ಟಿದ್ದೆ. ಈಗ ಪುನರ್ ಮುದ್ರಣವಾಗಿರುವ ಕೋಶದಲ್ಲೂ ಈ ಶಬ್ದ ಸೇರ್ಪಡೆಯಾಗಿಲ್ಲ.]

ಡೊಕ್ಕರಿ ಶಬ್ದದ ಇನ್ನಿತರ ಪ್ರಯೋಗಗಳನ್ನು ಹುಡುಕಿ, ಈ ರೂಪ ಸಾಧುವೆ. ಅಸಾಧುವೆ ಎಂಬುದನ್ನು ವಿದ್ವಾಂಸರು ಪರಿಶೀಲಿಸಬೇಕಾಗುತ್ತದೆ. ಕುಸುಮಾವಳೀ ಕಾವ್ಯವನ್ನು ಬಿಟ್ಟರೆ ನನಗೆ ತಿಳಿದಮಟ್ಟಿಗೆ ಕಮಲಭವನ ಶಾಂತೀಶ್ವರ ಪುರಾಣದಲ್ಲಿ ಡೊಕ್ಕರಿ ಶಬ್ದ ಬಳಕೆಯಾಗಿರುವುದು ಕಂಡುಬರುತ್ತದೆ. ಕಮಲಭವನ ಆ ಪದ್ಯ ಇದು :-

ಜಳರೂಪಮಲ್ಲದಾವೃತ
ಕಳಂಕ ಮಲ್ಲದ ಸುಧಾಂಶುಕಳೆಗಳಿವೆನೆ ಕ ।
ಣ್ಗೊಳಪಿಂದು ಶಿಲೆಯ ಡೊಕ್ಕರಿ
ಗಳನಾಗಳೆ ಕೊಂಡು ತಾನು ಮಾ ಮಾಸಿನಿಯಂ ॥ 10–160

ಕಮಲಭವ ಕವಿಯ ಈ ಪದ್ಯ ಕುಸುಮಾವಳೀ ಕಾವ್ಯದ 5–132ನೆಯ ಕಂದ ಪದ್ಯದ ನಕಲಿನಂತಿದೆ. ಈ ಎರಡೂ ಕಾವ್ಯಗಳಲ್ಲಿ ತಾಯಿ ಕರುವಿನ, ಕರುಳುಬಳ್ಳಿಯ ಸಂಬಧವಿದೆ. ನನ್ನ ಅಭಿಪ್ರಾಯದಲ್ಲಿ ಈ ಎರಡೂ ಕಾವ್ಯಗಳ ಕರ್ತೃ ಒಬ್ಬನೇ. ಇದಕ್ಕೆ ಹಲವು ಆಂತರಿಕ ಪ್ರಮಾಣಗಳಿವೆ. ಅದನ್ನು ವಿಸ್ತರಿಸುವುದು ಇಲ್ಲಿ ಅಪ್ರಕೃತ. ಸದ್ಯಕ್ಕೆ ನಾವು ಇಲ್ಲಿ ಗಮನಿಸಬೇಕಾದುದು ಡೊಕ್ಕರಿ ಶಬ್ದದ ಪ್ರಯೋಗ. ಈ ಅರ್ಥದಲ್ಲಿ ಡೊಕ್ಕರಿ ಶಬ್ದ ಕಮಲಭವನ ಹೊರತು ಇಡೀ ಹಳಗನ್ನಡ ಸಾಹಿತ್ಯದಲ್ಲಿ ಹಾಗೂ ನಾನು ನೋಡಿರುವ ಶಾಸನಗಳಲ್ಲಿ ಎಲ್ಲೂ ಪ್ರಯೋಗವಾಗಿಲ್ಲ.

ಡೊಕ್ಕರಿ ಶಬ್ದದ ಬಗ್ಗೆ ಇದಕ್ಕೂ ಹೆಚ್ಚಿನ ಮಾಹಿತಿಯನ್ನು ತಿಳಿದ ವಿದ್ವಾಂಸರು ದಯವಿಟ್ಟು ತಿಳಿಸಿ ಇದರ ನಿಷ್ಪತ್ತಿಜಾತಕದ ಮೇಲೆ ಬೆಳಕು ಬೀರಬೇಕು. ಇದರಿಂದ ಒಂದು ಅಪೂರ್ವ ಶಬ್ದದ ಪರಿಚಯ ಹೆಚ್ಚಲು ಅವಕಾಶವಾಗುತ್ತದೆ. ಡೊಕ್ಕರಿ ಮಿಥ್ಯಾಶಬ್ದ ಇರಲಾರದು. ಇದಕ್ಕೆ ಬೇರೆ ಪಾಠಾಂತರಗಳೂ ಇಲ್ಲ. ಇದೇ ಸಂದರ್ಭದಲ್ಲಿ ನೆನಪಿಗೆ ಬರುವ ಶಬ್ದವೆಂದರೆ 'ಡೊಗರು' ಎಂಬುದು (ಡೊಗಱು). ಇದಕ್ಕೆ ರಂಧ್ರಮಾಡು, ತೂತಾಗು, ಮರದಲ್ಲಿ ತೂತು ಮಾಡು ಎಂಬ ಅರ್ಥಗಳಿವೆ. ತೆಲುಗು ತಮಿಳಿನಲ್ಲೂ ಜ್ಞಾತಿರೂಪಗಳಿವೆ; ತೆಲುಗು ಡೊಗಱು, ದೊಗರು (ಕ. ದಲ್ಲೂ ಇದು ಉಂಟು), ತ. ಡೊಂಗು ಇದರೊಡನೆ ಡೊಗೆ (ತೆಲುಗು ದೋಕು) ಎಂಬ ಸಮಾನಾರ್ಥಕ ರೂಪವನ್ನೂ ಗಮನಿಸಬಹುದು. ಡೊಗರನ್ನು ಹೊಂದಿರುವುದು ಯಾವುದೋ ಅದು ಡೊಕ್ಕರಿ ಎಂಬಂತೆ ರೂಪ ಏರ್ಪಟ್ಟಿರಬಹುದೆ ಎಂಬ ಸಂಶಯಕ್ಕೆ ಅವಕಾಶವಿದೆ; ಹೀಗಿದ್ದಲ್ಲಿ ಡೊಕ್ಕರಿ ದೇಶ್ಯ ಶಬ್ದವಾಗುತ್ತದೆ.

ಹಂಪ ನಾಗರಾಜಯ್ಯ

3. ಮೈಸೂರು ಒಡೆಯರು ಮತ್ತು ಅಲಮೇಲಮ್ಮನ ಶಾಪ

ಮೈಸೂರು ಒಡೆಯರ ಮನೆತನ ಶ್ರೀ ಯದುರಾಯರಿಂದ ಆರಂಭವಾಯಿತು.. ಅವರನ್ನೇ ಶ್ರೀ ವಿಜಯರಾಯರೆಂತಲೂ ಕರೆಯುತ್ತಿದ್ದರು. ಅವರ ತಮ್ಮಂದಿರು ಶ್ರೀ ಕೃಷ್ಣರಾಯರು. ಈ ಯಾದವ ಕುಲದ ಸಹೋದರರು ಸೌರಾಷ್ಟ್ರದಿಂದ 1399ರಲ್ಲಿ ಬಂದರೆಂದು ಪ್ರತೀತಿ. ಮೈಸೂರಿನ ಹದಿನಾಡು (ಈಗಿನ ಹದಿನಾರು ಗ್ರಾಮ) ಪ್ರಾಂತದಲ್ಲಿ ಪಾಳೇಗಾರರಾಗಿದ್ದ ಚಾಮರಾಜ ಒಡೆಯರನ್ನು ಮಾರನಾಯಕ ಎಂಬವನು ಕೊಂದು ಪ್ರಾಬಲ್ಯಕ್ಕೆ ಬಂದಿದ್ದನು. ಅವನು ದುಷ್ಕಾರ್ಯಗಳಲ್ಲಿ

ತೊಡಗಿದ್ದರಿಂದ, ಚಾಮರಾಜನ ಕಡೆಯವರು ಕಾಲಾವಕಾಶಕ್ಕಾಗಿ ಎದುರು ನೋಡುತ್ತಿದ್ದರು. ಆ ಸಮಯದಲ್ಲಿ ಯಾದವ ಸಹೋದರರು ಪಡಿನಾಡಿಗೆ ಬಂದು ಚಾಮರಾಜನ ಬಂಧುಗಳ ಪರವಹಿಸಿ ಸೈನ್ಯವನ್ನು ಕಟ್ಟಿ ಮಾರನಾಯಕನನ್ನು ಕೊಂದರು. ನಂತರ ಪಡಿನಾಡಿನ ಪಾಳೇಗಾರಿಕೆ ಅವರಿಗೇ ಬಂದಿತು. ಚಾಮರಾಜನ ಮಗಳನ್ನು ಯದುರಾಯರಿಗೆ ಕೊಟ್ಟು ಮದುವೆಮಾಡಲಾಯಿತು. ತಮ್ಮಂದಿರಾದ ಕೃಷ್ಣರಾಯರು ಆಳಿಕೆಯಲ್ಲಿ ಸಹಾಯಕರಾದರು.

1399 ರಿಂದ 1513 ರವರೆಗೆ ಒಡೆಯರ ಆಳ್ವಿಕೆ ಸ್ವತಂತ್ರವಾಗಿತ್ತು. 1513 ರಲ್ಲಿ ಹುಟ್ಟಿದ ಚಾಮರಾಜ ಒಡೆಯರು ವಿಜಯನಗರದ ಶ್ರೀ ಕೃಷ್ಣದೇವರಾಯನ ಸಾಮಂತರಾದರು. ಅಂದಿನಿಂದ ವಿಜಯನಗರದ ಸಾಮಂತ ಪಾಳೇಗಾರನಾಗಿ ರಾಜವಡೆಯರ ಕಾಲದವರೆಗೆ ಮುಂದುವರೆದರು (1513-1610) ರಾಜವಡೆಯರು 1578 ಅಧಿಕಾರಕ್ಕೆ ಬಂದವರು ಸ್ವತಂತ್ರರಾಗಲು ಸರ್ವಪ್ರಯತ್ನಗಳನ್ನು ಮಾಡುತ್ತಿರುವಾಗ, ಶ್ರೀರಂಗಪಟ್ಟಣದಲ್ಲಿ ವಿಜಯನಗರದ ಪ್ರತಿನಿಧಿಯಾದ (ರಂಗರಾಯನು) ತಿರುಮಲರಾಯನು ರೋಗಪೀಡಿತನಾಗಿ ತಲಕಾಡಿನ ವೈದ್ಯೇಶ್ವರ ದೇವಾಲಯಕ್ಕೆ ಹೋಗಿದ್ದಾಗ ಅಲ್ಲಿಯೇ ಮರಣ ಹೊಂದಿದನು (1610). ಅವರ ಪತ್ನಿಯಾದ ಅಲಮೇಲಮ್ಮನು (ರಂಗಮ್ಮನು) ತಲಕಾಡಿಗೆ ಹೊರಟಳು. ಅವಳ ಬಳಿಯ ಅತ್ಯಂತ ಬೆಲೆಬಾಳುವ ವಜ್ರದ ಮೂಗುತಿಯನ್ನು ವಶಪಡಿಸಿಕೊಳ್ಳುವ ಆಸೆಯಿಂದ ರಾಜ ಒಡೆಯರು ಸೈನಿಕರೊಂದಿಗೆ ಹೊರಟರು. ಇದನ್ನು ತಿಳಿದ ಅಲಮೇಲಮ್ಮನು ಕಾವೇರಿ ಕಬಿನಿ ಸಂಗಮದಲ್ಲಿ ವಜ್ರದ ಮೂಗುತಿಯನ್ನು ಎಸೆದು

"ತಲಕಾಡು ಮರಳಾಗಲಿ
ಮಾಲಂಗಿ ಮಡುವಾಗಲಿ
ಮೈಸೂರು ದೊರೆಗಳಿಗೆ ಮಕ್ಕಳಾಗದೇ ಹೋಗಲಿ"

ಎಂದು ಶಪಿಸಿ ತಾನೂ ಮಾಲಂಗಿಯ ಕಾವೇರಿ - ಕಬಿನಿ ಸಂಗಮದಲ್ಲಿ ಹಾರಿ ಸತ್ತಳು.

ಶಾಪದಿಂದ ಭಯಗ್ರಸ್ತರಾದ ರಾಜಒಡೆಯರು ಅವಳ ಮೂರ್ತಿಯನ್ನು ಮಾಡಿಸಿ ಅವಳ ಆತ್ಮಶಾಂತಿಗಾಗಿ ಪೂಜೆಮಾಡಿಸುವ ವ್ಯವಸ್ಥೆ ಮಾಡಿಸಿದರು.

ರಾಜಒಡೆಯರವರಿಗೆ ಇಬ್ಬರು ಮಕ್ಕಳಿದ್ದರು. ಮೊದಲನೆಯವರು ಚಾಮರಾಜರು. ಎರಡನೆಯವರು ಇಮ್ಮಡಿ ರಾಜಒಡೆಯರು ಶಾಪದನಂತರ(1610ರನಂತರ) ತಂದೆಯ ಮರಣದ ಕಾಲದಲ್ಲಿ 1617ರಲ್ಲಿ ಜನಿಸಿದರು. ಇದರಿಂದ ಅಲಮೇಲಮ್ಮನ ಶಾಪ ರಾಜಒಡೆಯರಮೇಲೆ ಪ್ರಭಾವ ಬೀರಲಿಲ್ಲವೆಂದು ನಿರ್ಧಾರವಾಗುತ್ತದೆ.

ಕಾಲಕ್ರಮೇಣ ಅಲಮೇಲಮ್ಮನ ಶಾಪ ಭಾಗಶಃ ಫಲಿಸಿದಂತೆ ತೋರುತ್ತದೆ. ಮಾಲಂಗಿಯ ಬಳಿ ಕಾವೇರಿ–ಕಬಿನಿ ಸಂಗಮವು ಮಡುವಾಗಿದೆ ತಲಕಾಡು ಮರಳಾಗಿದೆ (ಮನೆಗಳು ದೇವಾಲಯಗಳು ಮರಳಲ್ಲಿ ಹೂತುಹೋಗಿವೆ).

ಶಾಪದ ನಂತರ ರಾಜಒಡೆಯರಿಂದ ಜಯಚಾಮರಾಜ ಒಡೆಯರವರೆಗೆ 17 ಒಡೆಯರು ರಾಜ್ಯವಾಳಿದರು. ಆ 17 ಒಡೆಯರಲ್ಲಿ 6 ಒಡೆಯರಿಗೆ ಮಾತ್ರ ಮಕ್ಕಳಾಗಲಿಲ್ಲವೆಂದು ತಿಳಿದುಬಂದಿದೆ. ರಾಜಒಡೆಯರನಂತರ ಸತತವಾಗಿ 3 ಒಡೆಯರಿಗೆ ಗಂಡುಮಕ್ಕಳಾಗಲಿಲ್ಲ ಅವರು :

(1) 6ನೇ ಚಾಮರಾಜ 1617–1637

(2) 2ನೇ ರಾಜಒಡೆಯರು 1637–1638

(3) ರಣಧೀರಕಂಠೀರವ 1638–1658

ಅನಂತರ ಮಕ್ಕಳಾಗದ 3 ಒಡೆಯರು :

(4) ನಂಜರಾಜ ಒಡೆಯರು 1766–1770

(5) 8ನೇ ಚಾಮರಾಜ ಒಡೆಯರು 1770–1796

(6) 4ನೇ ಕೃಷ್ಣರಾಜ 1902–1940

ಶಾಸನದ ಮುಂಚೆ ಒಡೆಯರ ವಂಶಾವಳಿಯನ್ನು ಗಮನಿಸಿದಾಗ 1552 ರಿಂದ 1571ರವರೆಗೆ ಆಳಿದ ತಿಮ್ಮರಾಜ ಒಡೆಯರಿಗೆ ಮಾತ್ರ ಗಂಡುಮಕ್ಕಳಾಗಿರಲಿಲ್ಲ.

ಹೈದರಾಲಿ ಕಾಲದಲ್ಲಿ ದತ್ತು ಸ್ವೀಕಾರ ಪದ್ಧತಿ ಆರಂಭವಾಯಿತು ಎನ್ನ ಬಹುದು. ಒಡೆಯರ ವಂಶದಲ್ಲಿ 5 ದತ್ತು ಪ್ರಕರಣಗಳು ಮಾತ್ರ ಇವೆ.

(1) ನಂಜರಾಜ (1766—1770)
(2) ಚಾಮರಾಜ (1770—1776)
(3) (ಖಾಸ) 9ನೇ ಚಾಮರಾಜ 1776—1796
(4) 10ನೇ ಚಾಮರಾಜ 1881—1894
(5) ಜಯಚಾಮರಾಜ 1940—1947

ಈ ಶಾಪ ಪ್ರಕರಣದ ಸಿಂಹಾವಲೋಕದಲ್ಲಿ ಮೊದಲ ಎರಡು ಶಾಪಗಳು—(1) ಮಾಲಂಗಿ ಮಡುವಾಗಿರುವುದರಲ್ಲಿ ಮತ್ತು (2) ತಲಕಾಡು ಮರಳಾಗಿರುವು ದರಲ್ಲಿ ಪೂರ್ಣವಾಗಿ ಫಲಿಸಿವೆ. 1399 ರಿಂದ 1947 ರವರೆಗೆ 25 ಒಡೆಯರು ಆಳಿದರು. 1610 ರಿಂದ 1947 ರವರೆಗೆ ಆಳಿದ 19 ಒಡೆಯರಲ್ಲಿ ಕೇವಲ 6 ಒಡೆಯರಿಗೆ ಮಾತ್ರ ಮಕ್ಕಳಾಗದೇ ಮಿಕ್ಕ 13 ಒಡೆಯರಿಗೆ ಮಕ್ಕಳಾಗಿರುವುದರಿಂದ ಕೊನೆಯ ಶಾಪವು ಅಷ್ಟೇನೂ ಪರಿಣಾಮಕಾರಿಯಾಗಲಿಲ್ಲವೆಂದು ಹೇಳಬಹುದು. ಮೈಸೂರು ಒಡೆಯರ ದೈವ ಚೆನ್ನಾಗಿದ್ದಿತೆಂದು ರಾಜಒಡೆಯರಿಂದ ಆರಂಭಿಸಲಾದ ಅಲಮೇಲಮ್ಮನ ಆತ್ಮ ಶಾಂತಿಗಾಗಿ ನಿರ್ಮಿಸಿದ ಪೂಜೆ ಬಹುಮಟ್ಟಿಗೆ ಫಲಿಸಿದೆ ಎಂದು ಹೇಳಬಹುದು.

ಪರಿಶಿಷ್ಟ ಮೈಸೂರು ಒಡೆಯರ ವಂಶಾವಳಿ 1399–1947

ಯದುರಾಯರು 1399–1423

ಚಾಮರಾಜ I 1423–1458 | (ಚಾಮರಾಜ)

*ತಿಮ್ಮರಾಜ 1458–1478

ಚಾಮರಾಜ II 1478–1513

ಚಾಮರಾಜ III 1513–1552

ತಿಮ್ಮರಾಜ II 1552–1571 | (ಕೃಷ್ಣರಾಜ I) | (ಬೋಳ) ಚಾಮರಾಜ IV 1571–1576

*ಚಾಮರಾಜ V 1576–78 | ರಾಜ ಒಡೆಯರು I 1558–1617 | (ದೇವರಾಜ) | (ಚನ್ನರಾಜ)

*ರಣಧೀರ ಕಂಠೀರವ 1638–1658 | ಚಾಮರಾಜ VI 1617–1637 | *ರಾಜಒಡೆಯರು II 1637–1638

ದೇವರಾಜ II 1656–1673 | (ದೇವರಾಜ III) | (ಕೆಂಪದೇವಯ್ಯ) | (ಮರಿದೇವಯ್ಯ)

ದೇವರಾಜ IV 1673–1704 | ಕಂಠೀರವಯ್ಯ

(ದೇವರಾಜ V)

(ಮೂಕ) ಕಂಠೀರವ ನರಸರಾಜ 1704–1713

ಕೃಷ್ಣರಾಜ I 1713–1731

ಚಾಮರಾಜ VII 1713–1734 | ಕೃಷ್ಣರಾಜ II 1734–1766

*(ದತ್ತು) ನಂಜರಾಜ 1766–1770

*(ದತ್ತು) ಚಾಮರಾಜ VIII 1770–1776

(ದತ್ತು) (ಖಾಸಾ) ಚಾಮರಾಜ IX 1776–1796[1]

*ಕೃಷ್ಣರಾಜ III 1799–1831[2]

(ದತ್ತು) ಚಾಮರಾಜ X 1881–1894

*ಕೃಷ್ಣರಾಜ IV 1894–1940 | ಕಂಠೀರವ ನರಸರಾಜ

(ದತ್ತು) ಜಯಚಾಮರಾಜ 1940–1947

---

*ಮಕ್ಕಳಾಗದ ಒಡೆಯರು

1 ಟೀಪುಸುಲ್ತಾನರು ಯಾರನ್ನೂ ಪಟ್ಟಕ್ಕೆ 1796–1799 ರಲ್ಲಿ ತರಲಿಲ್ಲ

2 1831–1881 ಅವಧಿಯಲ್ಲಿ ಬ್ರಿಟಿಷ್ ಕಮಿಷನರ ಆಳ್ವಿಕೆ ಇತ್ತು

ಗ್ರಂಥಋಣ ;

M. R. ಶ್ರೀನಿವಾಸಮೂರ್ತಿ, ಕೆ. ಕೃಷ್ಣಅಯ್ಯಂಗಾರ್, ವಾ. ಸೀತಾರಾಮಯ್ಯ : ಮೈಸೂರು ಕೈಪಿಡಿ (1937)

M. V. ಕೃಷ್ಣರಾವ್, M. ಕೇಶವಭಟ್ಟ : ಕರ್ನಾಟಕ ಇತಿಹಾಸ ದರ್ಶನ (1970)

Ed. R. R. Diwakar : Karnataka through the ages (1968)

Ed. C. Hayavadana Rao : Mysore Gazetteer

ಹೆಚ್. ರೇವಣಸಿದ್ದಪ್ಪ

4. ಪಂಪನ ತಮ್ಮ ಜಿನವಲ್ಲಭ

ಮಹಾಕವಿ ಪಂಪನಿಗೆ ಜಿನವಲ್ಲಭ ಹೆಸರಿನ ಒಬ್ಬ ತಮ್ಮನಿದ್ದನೆಂಬ ಸಂಗತಿ ಕೆಲವು ದಿನಗಳ ಹಿಂದೆ ಗಂಗಾಧರಂ ಶಾಸನದ ಮೂಲಕ ಬೆಳಕಿಗೆ ಬಂದಿತು. "ವಾಗ್ವಧೂವರವಲ್ಲಭ"ನಾದ ಈತನೂ ಅಣ್ಣನಂತೆ ಕವಿ. ಆದರೆ ಇತ್ತೀಚಿನ ಯಾರೂ ಈತನನ್ನು ಪೂರ್ವಕವಿಸ್ತುತಿ ಪ್ರಸಂಗದಲ್ಲಿ ಹೊಗಳದುದು ಆಶ್ಚರ್ಯವೇ ಸರಿ.

ಇಂಥ ಸಂದರ್ಭದಲ್ಲಿ ಬ್ರಹ್ಮಶಿವನ ಸಮಯ ಪರೀಕ್ಷೆ[1]ಯ ಒಂದು ಪದ್ಯ ನಮ್ಮ ಗಮನವನ್ನು ಸೆಳೆಯುತ್ತದೆ. ಅಲ್ಲಿ ಬಂಧುವರ್ಮನನ್ನು ಮೂರು ಪದ್ಯಗಳಲ್ಲಿ ಹೊಗಳಿ

ಜನವಲ್ಲಭನಮಳಯಶೋ ।
ಧನನುತ್ತಮ ರಾಜಪೂಜಿತಂ ಬುಧನಿಳಯಂ ।
ಜಿನಪದಾಂಬುಜ ಮಧುಕರ ।
ನೆನೆ ನೆಗಳ್ದಂ ಪಂಪರಾಜನೂರ್ಜಿತ ತೇಜಂ ॥ 32

ಶುಭಚರಿತನನಖಿಳ ಕವಿ ।
ಪ್ರಭುವಂ ಲೋಕೈಕಮಾನ್ಯನಂ ತ್ರೈಭುವನ ।
ಪ್ರಭುಚರಿತಮನತಿಭಕ್ತಿಯಿ ।
ನಭಿನುತಮೆನೆ ಪೇಳ್ದಂ ಪಂಪನಂ ಪೊಗಳದರಾರ್ ॥ 33

ಎಂದು ಹೇಳಿದ ತರುವಾಯ ಪೊನ್ನ–ರನ್ನ (34) ಅಗ್ಗಳ (35), ನಾಗಚಂದ್ರ (36)ರ ಸ್ತುತಿ ಬರುತ್ತದೆ. ಈ ಎರಡೂ ಪದ್ಯಗಳಲ್ಲಿ ಪಂಪನ ಸ್ತುತಿಯಿದೆಯೆಂದು ಮೇಲುನೋಟಕ್ಕೆ ತೋರುವುದು ಸಹಜ ; ಒಬ್ಬರಿಗಾಗಿ ಒಂದಕ್ಕಿಂತ ಹೆಚ್ಚು ಪದ್ಯ

---

1 ಸಮಯ ಪರೀಕ್ಷೆ–ಸಂ. ಬಿ. ಎಸ್. ಕುಲಕರ್ಣಿ (1958)

ಗಳನ್ನೂ ಬರೆದಿದ್ದಾನೆ, ಇರಬಹುದು ; ಆದರೆ ಇಲ್ಲಿಯ ಮೊದಲನೆಯ ಪದ್ಯ ಪಂಪನ ಪರವಾಗಿರುವ ಬಗ್ಗೆ ಸಂದೇಹ ಮೂಡುತ್ತದೆ. ಕಾರಣ :

1. ಪಂಪನು ರಾಜನಲ್ಲಿ ಆಶ್ರಯ ಪಡೆದುದು, ರಾಜನಿಂದ ಗೌರವ ಗಳಿಸಿದುದು ನಿಜ. ಈ ಸಂಗತಿಯನ್ನು "ರಾಜಪೂಜಿತಂ" ಪದದ ಮೂಲಕ ಸೂಚಿಸಲಾಗಿದೆ ಯೆನ್ನುವುದಾಗಲೀ, ರಾಜಪೂಜಿತನೇ ಆಗಿದ್ದನೆನ್ನುವುದಾಗಲೀ ಸಮ್ಮತವೆನಿಸದ ಮಾತು.

2. ಮೊದಲನೆಯ ಚರಣದವಾಕ್ಯವನ್ನು "ಜನವಲ್ಲಭಂ + ಅಮಳಯಶೋಧನಂ" ಎಂದು ಬಿಡಿಸಿದರೆ ಪಂಪನು 'ಜನವಲ್ಲಭಂ' ಹೇಗೆ? ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ಇದನ್ನು "ಜನವಲ್ಲಭನ + ಅಮಳಯಶೋಧನಂ" ಎಂದು ಬಿಡಿಸಿ, ಅರಸನ ಯಶಸ್ಸನ್ನೇ ಧನವನ್ನಾಗಿ ಮಾಡಿಕೊಂಡವನು ಎಂದು ಅರ್ಥ ಹೇಳುವು ದರಲ್ಲಿಯೂ ಅಂಥ ಔಚಿತ್ಯ ಕಾಣುವುದಿಲ್ಲ. ಕಾರಣ, ಈ ಪದ್ಯದಲ್ಲಿ ಸ್ತುತ್ಯನಾದವನು ಪಂಪನಲ್ಲ, ಅವನ ತಮ್ಮ ಜಿನವಲ್ಲಭನಾಗಿರಬಹುದು.

*　　　*　　　*　　　*

1. ಈ "ಜನವಲ್ಲಭಂ" ಎಂಬುದರ ಶುದ್ಧ ಪಾಠ "[ಜಿ] ನವಲ್ಲಭಂ" ಇರಬಹುದು. ಇಂಥ ಸ್ಖಾಲಿತ್ಯ ಕನ್ನಡ ಹಸ್ತಪ್ರತಿಗಳಲ್ಲಿ ಸರ್ವಸಾಮಾನ್ಯ. ಉದಾ : ಜಿನಪತಿ ಸಭೆಯೊಳ್ ಪೂಜ್ಯಂ > ಜನಪತಿ ಸಭೆಯೋಳ್ ಪೂಜ್ಯಂ.

2. ಈ ಪದ್ಯದಲ್ಲಿ ಎಲ್ಲವೂ ಪ್ರಥಮಾ ರೂಪಗಳೇ ಇವೆ. (2ನೆಯ ಪದ್ಯದಲ್ಲಿ ಎಲ್ಲವೂ ದ್ವಿತೀಯಾ ರೂಪಗಳೇ ಇವೆ.) ಕಾರಣ "(ಜಿ) ನವಲ್ಲಭಂ ಅಮಳ ಯಶೋಧನಂ, ಉತ್ತಮರಾಜಪೂಜಿತಂ, ಬುಧನಿಳಯಂ, ಜಿನಪಾದಾಂಬುಜಮಧು ಕರಂ, ಎನೆ ನೆಗಳ್ದ ಪಂಪರಾಜನ + ಊರ್ಜಿತ ತೇಜಂ" ಎಂದು ಈ ಪದ್ಯವನ್ನು ಪದಚ್ಛೇದಿಸಿಕೊಳ್ಳಬಹುದು.

ಇಲ್ಲಿಯ ವಿಶೇಷಣಗಳನ್ನು ಗಂಗಾಧರಂ ಶಾಸನದಲ್ಲಿ ಜಿನವಲ್ಲಭನಿಗಾಗಿ ಬಳಸಿದ ವಿಶೇಷಣಗಳ ಜೊತೆಯಿಟ್ಟು ನೋಡಿದರೆ ಈ ಪದ್ಯ ಜಿನವಲ್ಲಭ ಪರವಾಗಿರ ಬೇಕೆನಿಸುತ್ತದೆ. ಶಾಸನದಲ್ಲಿ ಜಿನವಲ್ಲಭನು "ರಾಜಪೂಜಿತಂ" ಎಂದು ವರ್ಣಿತ ನಾಗಿರದಿದ್ದರೂ ಪಂಪನಷ್ಟೇ "ಸಂಸಾರ ಸಾರೋದಯ" ನಾಗಿದ್ದ ಈತನು, ಪಂಪನಿ ಗಿಂತ ಹೆಚ್ಚು ದೈವೀತೇಜಸ್ಸಿನಿಂದ ಕೂಡಿದುದು ಸತ್ಯ. ಹೀಗಾಗಿ "ಸಕಳಕಳಾಳಾಪ ಪ್ರವೀಣಂ ಧರ್ಮ್ಯರತ್ನಾಕರ ಗುಣಪಕ್ಷಪಾತಿ" ಎನಿಸಿದ ಇವನು ರಾಜಪೂಜಿತನಾಗಿರುವ ಸಂಭವ ಹೆಚ್ಚು.

2 ಮಲ್ಲಿನಾಥ ಪುರಾಣ ಸಂಗ್ರಹ—ಎಂ. ಎಂ. ಕಲಬುರ್ಗಿ (ಪದ್ಯ ೪)

ಇನ್ನು ಈ ಪದ್ಯದ ಕೊನೆಗೆ ಬರುವ "ಪಂಪರಾಜನೂರ್ಜಿತ ತೇಜಂ" ಎಂಬುದಕ್ಕೆ ಮಹಾಕವಿ ಪಂಪನ ವಂಶಕೀರ್ತಿಯನ್ನು ಉದಿತೋದಿತಗೊಳಿಸಿದವ ಎಂದು ಅರ್ಥ ಹೇಳಬಹುದು. ಅಥವಾ ಧರ್ಮಪುರದಲ್ಲಿ (ಪಂಪನ ಮರಣಸ್ಮಾರಕಗಳಾಗಿ) ಜಿನಪ್ರತಿಮೆಗಳನ್ನೂ ಚಕ್ರೇಶ್ವರಿಯನ್ನೂ ತ್ರಿಭುವನತಿಲಕ ಹೆಸರಿನ ಜಿನಾಲಯವನ್ನೂ ಕವಿತಾಗುಣಾರ್ಣವ ಹೆಸರಿನ ಕೆರೆಯನ್ನೂ ಮದನವಿಳಾಸ ಹೆಸರಿನ ಬನವನ್ನೂ ಮಾಡಿಸುವುದರ ಮೂಲಕ ಪಂಪರಾಜನ ಕೀರ್ತಿತೇಜವನ್ನು ಊರ್ಜಿತಗೊಳಿಸಿದವನು ಎಂದೂ ಅರ್ಥಮಾಡಬಹುದು. ಈ ಎರಡೂ ಅರ್ಥಗಳು ಜಿನವಲ್ಲಭನ ವಿಷಯದಲ್ಲಿ ಸತ್ಯವಾದವುಗಳೇ.

ಕೊನೆಯದಾಗಿ ಮೊದಲನೆಯ ಪದ್ಯದಲ್ಲಿ ತಮ್ಮನ, ಎರಡನೆಯ ಪದ್ಯದಲ್ಲಿ ಅಣ್ಣನ ಸ್ತುತಿ ಬಂದುದು ವಿಪರ್ಯಾಸವಾಗಿ ಕಾಣಬಹುದು. ಆದರೆ ತಮ್ಮನದು ಯೋಗೀ(ಸದೃಶ) ವ್ಯಕ್ತಿತ್ವ; ಅಣ್ಣನದು ಹೀಗಲ್ಲ. ಈ ಕಾರಣಕ್ಕಾಗಿ ಕವಿ ಪದ್ಯಗಳನ್ನು ಮೇಲು ಕೆಳಗೆ ಮಾಡಿರಬಹುದು.

ಹೀಗೆ ಇಲ್ಲಿಯವರೆಗೆ ಈ ಲೇಖನ ಬರೆದುಕೊಂಡು ಬಂದ ನಾನು ಕುತೂಹಲದಿಂದ "ಬ್ರಹ್ಮಶಿವನ ಕಾಲವಿಚಾರ"[3] ಎಂಬ ಪ್ರೊ|| ಎಚ್. ದೇವೀರಪ್ಪ ಅವರ ಲೇಖನವನ್ನು ನೋಡಲಾಗಿ, ಅಲ್ಲಿ "ಜಿನವಲ್ಲಭನಮಳಯಶೋಧನಂ..." ಎಂಬ ಪಾಠವೇ ಕಂಡುಬಂದು, ನನ್ನ ಊಹೆ ಸತ್ಯವಾಗಿ ಪರಿಣಮಿಸಿತು. ಹೀಗಾಗಿ ಅವರು ನೋಡಿದ ಮೂಡಬಿದರೆ ಮಠದ ಹಸ್ತಪ್ರತಿಯಲ್ಲಿಯ "ಜಿನವಲ್ಲಭಂ" ಎಂಬುದೇ ಸತ್ಯಪಾಠವೆಂದೂ ಈ ಪದ್ಯ ಪಂಪನ ತಮ್ಮ ಜಿನವಲ್ಲಭನನ್ನು ಕುರಿತುದೆಂದೂ ಸ್ಪಷ್ಟವಾಗಿ ಹೇಳಬಹುದು.

ಎಂ. ಎಂ. ಕಲಬುರ್ಗಿ

3 ಪ್ರಬುದ್ಧ ಕರ್ಣಾಟಕ 24-4 (ಪು. 29)

ಈ ಸಂಚಿಕೆಯ ಲೇಖಕರು

ಜಯಸುದರ್ಶನ	769, 5ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು 560010
ಡಾ॥ ವಿ. ಕೃ. ಗೋಕಾಕ್	ಬೃಂದಾವನ್ ವೈಟ್‌ಫೀಲ್ಡ್, ಬೆಂಗಳೂರು
ಬಿ. ಶಶಿಧರ	ಸಹಾಯಕ ಸಂಶೋಧಕ, ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು
ಡಾ॥ ಪಿ. ಎಸ್. ವೆಂಕಟಸ್ವಾಮಿ ಶೆಟ್ಟಿ	ಉಪ-ಪ್ರಾಧ್ಯಾಪಕ, ಭೌತಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು
ಎಂ. ವಿ. ಸೀತಾರಾಮಯ್ಯ	54, ಅರವಿಂದ, 3ನೇ ಕ್ರಾಸ್ ಗವಿಪುರಂ ಬಡಾವಣೆ ಬೆಂಗಳೂರು 560019
ಬಿ. ಗೋ. ರಮೇಶ್	72/1, 6ನೇ ಕ್ರಾಸ್ ಮಲ್ಲೇಶ್ವರಂ, ಬೆಂಗಳೂರು 560003
ಎಸ್. ನಾರಾಯಣಮೂರ್ತಿ	ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಚಿತ್ರದುರ್ಗ
ಕೆ. ಶಿವರಾಮ ಐತಾಳ	ಕನ್ನಡ ಅಧ್ಯಾಪಕ ಶಾರದಾವಿಲಾಸ ಕಾಲೇಜ್, ಮೈಸೂರು

ಎಚ್. ಆರ್. ಕೃಷ್ಣಮೂರ್ತಿ	ಅಧ್ಯಾಪಕ, ಭೌತಶಾಸ್ತ್ರ ವಿಭಾಗ ನ್ಯಾಷನಲ್ ಕಾಲೇಜ್, ಜಯನಗರ ಬೆಂಗಳೂರು 560011
ಎಸ್. ಉಮಾಪತಿ	ಕನ್ನಡ ಅಧ್ಯಾಪಕ ಡಿ. ಆರ್. ಎಂ. ಕಾಲೇಜ್. ದಾವಣಗೆರೆ
ಎಸ್. ಶಿವಣ್ಣ	ಸಂಪಾದಕ, ಹಸ್ತಪ್ರತಿ ವಿಭಾಗ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು 560056
ನರವಳ್ಳಿ ಬಾಲಸುಬ್ರಹ್ಮಣ್ಯ	ದ್ವಿತೀಯ ಎಂ.ಎ. ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು 560056
ಕೆ. ಎಸ್. ಪ್ರತಾಪಕುಮಾರ್	
ಕ. ವೆಂ. ರಾಜಗೋಪಾಲ್	ಕನ್ನಡ ಪ್ರಾಧ್ಯಾಪಕ ಎಂ. ಇ. ಎಸ್. ಕಾಲೇಜ್ ಮಲ್ಲೇಶ್ವರಂ, ಬೆಂಗಳೂರು 560003
ಎಸ್. ವೆಂಕಟೇಶಮೂರ್ತಿ	75, ಮಾಡಲ್ ಹೌಸ್ ಬ್ಲಾಕ್ ಮೂರನೇ ರಸ್ತೆ, ಬಸವನಗುಡಿ ಬೆಂಗಳೂರು 560004
ಜಿ. ಎಸ್. ಕಾಪಸೆ	ಕನ್ನಡ ಅಧ್ಯಾಪಕ ಕರ್ನಾಟಕ ಕಾಲೇಜ್, ಧಾರವಾಡ 1
ದೇವರಕೊಂಡಾರೆಡ್ಡಿ	ಕನ್ನಡ ಅಧ್ಯಾಪಕ ಸರ್ಕಾರಿ ಜ್ಯೂನಿಯರ್ ಕಾಲೇಜ್ ಗುಂಡ್ಲುಪೇಟೆ
ಸೀತಾರಾಮ ಜಾಗೀರ್‌ದಾರ್	ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು

ಹಂಪ ನಾಗರಾಜಯ್ಯ	ಅಧ್ಯಾಪಕ, ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು 560056
ಹೆಚ್. ರೇವಣಸಿದ್ಧಪ್ಪ	ಅಧ್ಯಾಪಕ, ಇತಿಹಾಸ ವಿಭಾಗ ಶ್ರೀ ಸಿದ್ಧಗಂಗಾ ಕಾಲೇಜ್, ತುಮಕೂರು
ಡಾ॥ ಎಂ. ಎಂ. ಕಲಬುರ್ಗಿ	ರೀಡರ್, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಡಿ. ಬಿ. ಲಕ್ಷ್ಮಿನಾರಾಯಣ	ಸಾಲಿಗ್ರಾಮ
ಶೈಲಜಾ ಉಡುಚಣ	ರೀಡರ್, ಕನ್ನಡ ವಿಭಾಗ ಸರ್ಕಾರಿ ಕಾಲೇಜು, ಗುಲಬರ್ಗಾ
ಎಸ್. ಸತ್ಯೇಂದ್ರ	ದ್ವಿತೀಯ ಎಂ.ಎ. ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ ಬೆಂಗಳೂರು 560056
ಡಿ. ಎಸ್. ನಾಗಭೂಷಣ	
ಮೀರಾ ಚಕ್ರವರ್ತಿ	ಅಧ್ಯಾಪಕಿ, ಸಂಸ್ಕೃತ ವಿಭಾಗ ಜ್ಞಾನಭಾರತಿ, ಬೆಂಗಳೂರು–560056
ಬಿ. ವೈ. ಲಲಿತಾಂಬ	ಅಧ್ಯಾಪಕಿ, ಹಿಂದೀ ವಿಭಾಗ ಮಹಾರಾಣಿ ಕಾಲೇಜು ಬೆಂಗಳೂರು-56001
ಡಾ॥ ಜಿ. ಎಸ್. ಶಿವರುದ್ರಪ್ಪ	ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು-560056

ಪ್ರಚಾರೋಪನ್ಯಾಸ ಮಾಲೆ

1.	ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2.	ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3.	ಭಯ-ಸರಳವಿಶ್ಲೇಷಣೆ	ಎಂ. ಶಿವರಾಂ
4.	ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ದಲಿಂಗಯ್ಯ
5.	ಶಾಂತಿನಾಥಕವಿ	ಕಮಲಾ ಹಂಪನಾ
6.	ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
7.	ಬಯಲಾಟಗಳು	ಚಂದ್ರಶೇಖರ ಕಂಬಾರ
8.	ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
9.	ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
10.	ಉಪಭಾಷೆ	ಕೃಷ್ಣ ಪರಮೇಶ್ವರ ಭಟ್ಟ
11.	ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
12.	ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚನ್ನಬಸಪ್ಪ
13.	ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
14.	ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
15.	ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
16.	ವಿವಾಹ ಪದ್ಧತಿಗಳು	ಎಸ್. ಕೆ. ರಾಮಚಂದ್ರರಾವ್
17.	ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
18.	ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿಶೆಟ್ಟಿ
19.	ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
20.	ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
21.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
22.	ಕುರುಡು	ಎಸ್. ಟಿ. ಪುಟ್ಟಣ್ಣ
23.	ಕಣ್ಣಿನ ರೋಗಗಳು	ಎಸ್.ಟಿ. ಪುಟ್ಟಣ್ಣ
24.	ಕ್ಷಯ	ಎಂ. ಬಸವರಾಜೆ ಅರಸು
25.	ಮೂತ್ರಪಿಂಡದ ಕೆಲವು ರೋಗಗಳು	ಎಂ. ಬಸವರಾಜೆ ಅರಸು
26.	ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
27.	ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
28.	ಅಂತರ್ಜಲ	ಸಿ. ನಾಗಣ್ಣ
29.	ಪಂಪ	ತ. ಸು. ಶಾಮರಾಯ
30.	ದೇಹರಚನೆ ಹಾಗೂ ಮೂಳೆಗಳು	ಎಸ್. ಬಿ. ವಸಂತ ಕುಮಾರ್
31.	ಶ್ರೀನಿವಾಸ ರಾಮಾನುಜನ್	ಜಿ. ಟಿ. ನಾರಾಯಣರಾವ್
32.	ಮಹಾಕವಿ ಕುಮಾರನಾಶಾನ್	ಬಿ.ಕೆ. ತಿಮ್ಮಪ್ಪ, ಟಿ.ವೆಂಕಟಲಕ್ಷ್ಮಿ
33.	ತುಳ್ಳಲ್‌ಕವಿ ಕುಂಜನ್ ನಂಬಿಯಾರ್	ಬಿ.ಕೆ. ತಿಮ್ಮಪ್ಪ, ಟಿ.ವೆಂಕಟಲಕ್ಷ್ಮಿ
34.	ಪರಾಮಾನಸಶಾಸ್ತ್ರ	ಎಸ್. ಕೆ. ರಾಮಚಂದ್ರರಾವ್

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056